ಮಂಗಳವಾರ, ಆಗಸ್ಟ್ 1, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ನವದೆಹಲಿಯಲ್ಲಿ ಸೋಮವಾರ ವಸ್ತ್ರವಿನ್ಯಾಸಕಿ ಡಾಲಿ ಜೆ ಆಯೋಜಿಸಿದ್ದ ಫ್ಯಾಷನ್ ಷೋನಲ್ಲಿ ಪಾಲ್ಗೊಂಡಿದ್ದ ರೂಪದರ್ಶಿ

ನುಡಿದಂತೆ ನಡೆದಿದ್ದೇವೆ...

ಕರ್ನಾಟಕ ಸರ್ಕಾರ

ಇಂಧನ ಇಲಾಖೆ

ಮಾದರಿ ಬಿಲ್

BESCOM ಬೆಸ್ಕಾಂ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ವಿದ್ಯುತ್ ಬಿಲ್/ ELECTRICITY BILL
GSTN No.: 29AACCB1412G1Z5

O/o. AEE(Ele.) 815-KATHRIGUPPE

Account Details

ಆರ್.ಆರ್. ಸಂಖ್ಯೆ/ RR Nos	1EH4367
ಖಾತೆ ಸಂಖ್ಯೆ/Acc.ID	123456789
ಮಾ.ಓ. ಸಂಕೇತ/MR Code	140092032

ವೈಯಕ್ತಿಕ ವಿವರಗಳು/Personal Details
ಹೆಸರು ಮತ್ತು ವಿಳಾಸ/Name and Address
MAHESH, KATHRIGUPPE, BANGALORE

ಸಂಪರ್ಕದ ವಿವರಗಳು/Connection Details

ಜಕಾತಿ/Tariff	LT2A
ಮಂ. ಪ್ರಮಾಣ/Sanc Load	1KW
ಗೃಹ ಜ್ಯೋತಿ/GJS Reg Date	25-06-2023
ಸರಾಸರಿ/Average [FY22-23]	47
ಅರ್ಹ/Entitlement Units	52

ಬಿಲ್ ವಿವರ/Billing Details

ಬಿಲ್ಲಿಂಗ್ ಅವಧಿ/Billing Period	06/07/2023 to 06/08/2023
ರೀಡಿಂಗ್ ದಿನಾಂಕ/Rdng Date	06-08-2023
ಬಿಲ್ ಸಂಖ್ಯೆ/Bill No.	98765432222

ಬಳಕೆಯ ವಿವರ/Consumption Detail

ಇಂದಿನ ಮಾಪನ/Pres Rdg.	1050
ಹಿಂದಿನ ಮಾಪನ/Prev Rdg.	1000
ಮಾಪನ ಸ್ಥಿರಾಂಕ/Constant	1
ಬಳಕೆ/Consumption Units	50
ಸರಾಸರಿ/Average	0
ದಾಖಲಿತ ಬೇಡಿಕೆ/Recorded MD	1KW
ಪವರ್ ಫ್ಯಾಕ್ಟರ್/Power Factor	0
ಸಂ. ಪ್ರಮಾಣ/Connected Load	0.0KW
ಅರ್ಹ ಯೂನಿಟ್/Eligible for subsidy	50
ಪಾವತಿ ಯೂನಿಟ್/Units chargeable	0

ಬಳಸಿದ ಯೂನಿಟ್ ಬಿಲ್ ಮೊತ್ತ/Bill for Consumed Unit

ನಿಗದಿತ ಶುಲ್ಕ/Fixed Charges (Unit, Rate, Amount)		
1KW	110	110.00
ವಿದ್ಯುತ್ ಶುಲ್ಕ/Energy Charges (Unit, Rate, Amount)		
50	4.75	237.50
ಗ್ರಾಮೀಣ ರಿಯಾಯಿತಿ/RURAL Rebate (Unit, Rate, Amount)		
50	0.30	-15.00
ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt)		
50	0.59	29.50
ತೆರಿಗೆ/Tax @ 9%		21.38
ಉಪ ಮೊತ್ತ-1/Sub-Total-1		383.38

ಗೃಹ ಜ್ಯೋತಿ ಅನುದಾನ/Gruha Jyothi Subsidy by GoK

ನಿಗದಿತ ಶುಲ್ಕ/Fixed Charges (Unit, Rate, Amount)		
1KW	110	110.00
ವಿದ್ಯುತ್ ಶುಲ್ಕ/Energy Charges (Unit, Rate, Amount)		
50	4.75	237.50
ಗ್ರಾಮೀಣ ರಿಯಾಯಿತಿ/RURAL Rebate (Unit, Rate, Amount)		
50	0.30	-15.00
ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt)		
50	0.59	29.50
ತೆರಿಗೆ/Tax @ 9%		21.38
ಉಪ ಮೊತ್ತ-2/Sub-Total-2		383.38

ಬಿಲ್ ಮೊತ್ತ/Bill Amount (1-2)	₹ 0.0
Additional Charges	
ಪಿ.ಎಫ್. ದಂಡ/PF Penalty	0.00
ಹೆ.ಲೋ. ದಂಡ/MD Penalty	0.00
ಬಡ್ಡಿ/Interest	0.00
ಇತರೇ/Others	0.00
ಡೆಬಿಟ್ or ಕ್ರೆಡಿಟ್/Debit or Credit	0.00
ಪ್ರಸ್ತುತ ಬೇಡಿಕೆ/Cur. Demand Payable	₹0.00
ಬಾಕಿ/Arrears	0.00
ಪಾವತಿಯ ಮೊತ್ತ/Net Payable	₹ 0.00
ಪಾವತಿಗೆ ಕಡೇಯ ದಿನಾಂಕ/Due Date	21/08/2023

275304300/552 05/08/2023 13:58

For any billing related clarification
call 1912 / Call Subdivision

ಗ್ರಾಹಕರ ಆರ್.ಆರ್. ಸಂಖ್ಯೆ

ಗೃಹಜ್ಯೋತಿ ಅರ್ಹತೆಯ ವಿವರ

ಬಿಲ್ ಅವಧಿ & ವಿದ್ಯುತ್ ಬಳಕೆ ವಿವರ

ಸಹಾಯಧನಕ್ಕೆ ಅರ್ಹ ಯೂನಿಟ್‌ಗಳು

ವಿದ್ಯುತ್ ಬಳಕೆಯ ಬಿಲ್ ಮೊತ್ತ

ಗೃಹಜ್ಯೋತಿ ಸಹಾಯಧನದ ಮೊತ್ತ

ಪಾವತಿಸಬೇಕಾದ ನೈಜ ಬಿಲ್ ಮೊತ್ತ ₹ 0.00

ಬದಲಾವಣೆ ಬೆಳಕು ಬಂದಿದೆ ....

ಗೃಹ ಜ್ಯೋತಿ

ರಾಜ್ಯದ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ
200 ಯೂನಿಟ್ ವರೆಗೆ ಉಚಿತ ವಿದ್ಯುತ್ ಯೋಜನೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಅವರಿಂದ ಚಾಲನೆ

ದಿನಾಂಕ : 05-08-2023 ಸಮಯ: ಬೆಳಗ್ಗೆ 11-00 ಗಂಟೆ
ಸ್ಥಳ: ಎನ್ ವಿ ಮೈದಾನ, ಕಲಬುರಗಿ

ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರು ಇಂಧನ ಸಚಿವರಾದ ಮಾನ್ಯ ಶ್ರೀ ಕೆ.ಜೆ. ಜಾರ್ಜ್ ಅವರನ್ನು ಅಭಿನಂದಿಸಿದ ಸಂದರ್ಭ.

ಸರ್ವರನ್ನು ಒಳಗೊಂಡ ಆರ್ಥಿಕ ಮತ್ತು ಸಾಮಾಜಿಕ
ಪ್ರಗತಿಪರ ಅಭಿವೃದ್ಧಿ
ನಮ್ಮ ಸರ್ಕಾರದ ಧ್ಯೇಯ...

1.42 ಕೋಟಿಗೂ ಅಧಿಕ ಕುಟುಂಬಗಳು ಈಗಾಗಲೇ ನೋಂದಾಯಿಸಿವೆ

2023 ಜುಲೈ 27 ರೊಳಗೆ ನೋಂದಾಯಿಸಿರುವ ಅರ್ಹ ಫಲಾನುಭವಿಗಳಿಗೆ
ಆಗಸ್ಟ ತಿಂಗಳಿನಲ್ಲಿ ಶೂನ್ಯ ಬಿಲ್

ಅರ್ಜಿ ಸಲ್ಲಿಕೆಗೆ ಯಾವುದೇ ಗಡುವು ಇಲ್ಲ

ನೋಂದಣಿಗಾಗಿ ಸ್ಕ್ಯಾನ್ ಮಾಡಿ

ಗೃಹ ಜ್ಯೋತಿ

ಹೆಚ್ಚಿನ ಮಾಹಿತಿಗೆ: 24/7 ಸಹಾಯವಾಣಿ 1912 ಕ್ಕೆ ಕರೆ ಮಾಡಿ.

ಪ್ರಕಟಣೆ : ಇಂಧನ ಇಲಾಖೆ, ಬೆಂಗಳೂರು

ಟೊಮೆಟೊ ದರ ಏರಿಕೆ: ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ದಾಖಲೆ

ಜುಲೈನಲ್ಲಿ ₹1.24 ಕೋಟಿ ಸೆಸ್ ಸಂಗ್ರಹ

• ಕೆ.ಓಂಕಾರ ಮೂರ್ತಿ

ಕೋಲಾರ ಎಪಿಎಂಸಿಯಲ್ಲಿ ಟೊಮೆಟೊ ವಹಿವಾಟು

ಕೋಲಾರ: ಟೊಮೆಟೊ ದರ ಏರಿಕೆಯಿಂದಾಗಿ ಕೋಲಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ (ಎಪಿಎಂಸಿ) ಜುಲೈ ಒಂದೇ ತಿಂಗಳಲ್ಲಿ ₹1.24 ಕೋಟಿ ಸೆಸ್ ಸಂಗ್ರಹವಾಗಿದೆ.

ಈ ಎಪಿಎಂಸಿಯಲ್ಲಿ ತಿಂಗಳ ಅವಧಿಯಲ್ಲಿ ಸಂಗ್ರಹವಾದ ದಾಖಲೆ ಪ್ರಮಾಣದ ಬಳಕೆದಾರರ ಶುಲ್ಕ ಇದಾಗಿದೆ. ಪ್ರತಿ ₹100 ವಹಿವಾಟಿಗೆ 60 ಪೈಸೆ ಸೆಸ್ ಸಂಗ್ರಹ ಮಾಡಲಾಗುತ್ತಿದೆ. ಇದು ಏಷ್ಯಾದಲ್ಲೇ ಎರಡನೇ ಅತಿದೊಡ್ಡ ಟೊಮೆಟೊ ಮಾರುಕಟ್ಟೆ ಎನಿಸಿದ್ದು, ಜುಲೈ ತಿಂಗಳಿನಲ್ಲಿ 3.12ಲಕ್ಷ ಕ್ವಿಂಟಲ್ ಟೊಮೆಟೊ ಆವಕವಾಗಿದೆ. ಅಂದರೆ 15 ಕೆ.ಜಿ ತೂಕದ 20.83 ಲಕ್ಷ ಟೊಮೆಟೊ ಬಾಕ್ಸ್‌ಗಳು ಹರಾಜಿನಲ್ಲಿ ಮಾರಾಟವಾಗಿವೆ. ಪ್ರತಿ ಬಾಕ್ಸ್ ಸರಾಸರಿ ₹ 930ಕ್ಕೆ ಮಾರಾಟವಾಗಿದೆ. ಕೆಲವೊಂದು ಬಾಕ್ಸ್ ಗರಿಷ್ಠ ₹2,700ವರೆಗೆ ಹರಾಜಾಗಿದೆ.

2022ರ ಜುಲೈನಲ್ಲಿ ಇದಕ್ಕಿಂತ ಮೂರು ಪಟ್ಟು ಅಧಿಕ ಪ್ರಮಾಣದ ಟೊಮೆಟೊ ಎಪಿಎಂಸಿಗೆ ಪೂರೈಕೆ ಆಗಿದ್ದರೂ ಈ ಪ್ರಮಾಣದ ಸೆಸ್ ಸಂಗ್ರಹ ವಾಗಿರಲಿಲ್ಲ. ಕಾರಣ ಆಗ ಇಷ್ಟೊಂದು ದರ ಇರಲಿಲ್ಲ.

‘ರೈತರಿಂದ ಹಿಡಿದು ವರ್ತಕರು, ಕಮಿಷನ್ ಏಜೆಂಟರು ಹಾಗೂ ಎಪಿಎಂಸಿ ಪಾಲಿಗೆ ಒಳ್ಳೆಯ ಸುದ್ದಿ. ಟೊಮೆಟೊ ಬೆಲೆ ಏರಿಕೆ ಕಾರಣ ಒಂದು ತಿಂಗಳಿನಿಂದ ಎಲ್ಲರಿಗೂ ಲಾಭವಾಗಿದೆ. ಆಗಸ್ಟ್‌ನಲ್ಲೂ ಇದೇ ವಾತಾವರಣ ಮುಂದುವರಿಯುವ ನಿರೀಕ್ಷೆ ಇದೆ’ ಎಂದು ಕೋಲಾರ ಎಪಿಎಂಸಿ ಕಾರ್ಯದರ್ಶಿ ವಿಜಯಲಕ್ಷ್ಮಿ ‘ಪ್ರಜಾವಾಣಿ’ಗೆ ತಿಳಿಸಿದರು.

ಟೊಮೆಟೊ ವಹಿವಾಟು			
ಜುಲೈ 2022			
ಆವಕ (ಕ್ವಿಂಟಲ್)	ಶುಲ್ಕ	ಬಾಕ್ಸ್ (15 ಕೆ.ಜಿ)	ಬಾಕ್ಸ್‌ವೊಂದಕ್ಕೆ ಸರಾಸರಿ ದರ
10.51ಲಕ್ಷ	₹65.84ಲಕ್ಷ	70.06ಲಕ್ಷ	₹120
ಜುಲೈ 2023			
3.12ಲಕ್ಷ	₹1.24 ಕೋಟಿ	20.83ಲಕ್ಷ	₹930

ಮುಖ್ಯಾಂಶಗಳು

- ಪ್ರತಿ ₹100 ವಹಿವಾಟಿಗೆ 60 ಪೈಸೆ ಸೆಸ್
- ನಿತ್ಯ 15 ರಾಜ್ಯಗಳಿಗೆ ಟೊಮೆಟೊ ಸರಬರಾಜು
- ತಿಂಗಳೊಂದರಲ್ಲಿ ಸಂಗ್ರಹವಾದ ಅತಿ ಹೆಚ್ಚಿನ ಸೆಸ್

ನಮ್ಮ ಎಪಿಎಂಸಿ ಮಟ್ಟಿಗೆ ಇದೊಂದು ಸಕಾರಾತ್ಮಕ ಬೆಳವಣಿಗೆ. ನಮಗಂತೂ ಖುಷಿಯಾಗಿದೆ. ಒಂದು ತಿಂಗಳಿನಲ್ಲಿ ಯಾವತ್ತೂ ಇಷ್ಟು ಬಳಕೆದಾರರ ಶುಲ್ಕ ಸಂಗ್ರಹವಾಗಿರಲಿಲ್ಲ

ವಿಜಯಲಕ್ಷ್ಮಿ
ಕಾರ್ಯದರ್ಶಿ, ಕೋಲಾರ ಎಪಿಎಂಸಿ

ಟೊಮೆಟೊ ಮಾರಿ ಚಾಲಕ ಪರಾರಿ

ಕೋಲಾರ: ನಗರದಿಂದ ಲಾರಿಯಲ್ಲಿ ರಾಜಸ್ಥಾನದ ಜೈಪುರಕ್ಕೆ ಟೊಮೆಟೊ ಸಾಗಿಸುತ್ತಿದ್ದ ಚಾಲಕ ಗುಜರಾತ್‌ನ ಅಹಮದಾಬಾದ್‌ನಲ್ಲಿ ಅದನ್ನು ಮಾರಿ ಪರಾರಿಯಾಗಿರುವುದು ಗೊತ್ತಾಗಿದೆ.

‘ಚಾಲಕ ಅನ್ವರ್ ಭಾನುವಾರ ಬೆಳಿಗ್ಗೆ ಬೇರೆ ಲಾರಿಗೆ ಟೊಮೆಟೊ ತುಂಬಿಸಿ ಕಡಿಮೆ ಬೆಲೆಗೆ ಮಾರಾಟ ಮಾಡಿ ಲಾರಿಯನ್ನು ಅಹಮದಾಬಾದ್‌ನಲ್ಲೇ ಬಿಟ್ಟು ತಲೆಮರೆಸಿಕೊಂಡಿರುವ ಮಾಹಿತಿ ಸಿಕ್ಕಿದೆ. ಲಾರಿಗೆ ಅಳವಡಿಸಿದ್ದ ಜಿಪಿಎಸ್ ಕಿತ್ತೆಸೆಯಲಾಗಿದೆ’ ಎಂದು ಮಂಡಿ ಮಾಲೀಕರು ತಿಳಿಸಿದ್ದಾರೆ. ಈ ಲಾರಿಯು ಕೋಲಾರ ಎಪಿಎಂಸಿಯಲ್ಲಿ ಜುಲೈ 27ರಂದು ಸುಮಾರು ₹21ಲಕ್ಷ ಮೌಲ್ಯದ ಟೊಮೆಟೊ ತುಂಬಿಸಿಕೊಂಡು ರಾಜಸ್ಥಾನದ ಜೈಪುರಕ್ಕೆ ಹೊರಟಿತ್ತು. ಎ.ಜಿ.ಟ್ರೇಡರ್ಸ್‌ನ ಸಕ್ಲೇನ್ ಹಾಗೂ ಎಸ್‌ವಿಟಿ ಟ್ರೇಡರ್ಸ್‌ನ ಮುನಿರೆಡ್ಡಿ ಎಂಬುವರಿಗೆ ಸೇರಿದ ಟೊಮೆಟೊ ಇದಾಗಿದೆ.

ಜುಲೈ 29ರ ರಾತ್ರಿ 8.30ರವರೆಗೆ ಚಾಲಕ ಸಂಪರ್ಕದಲ್ಲಿದ್ದರು. ಆ ಸಂದರ್ಭದಲ್ಲಿ ಲಾರಿ ಭೋಪಾಲ್ ಟೋಲ್ ದಾಟಿತ್ತು. ಆ ಬಳಿಕ ಲಾರಿ ಚಾಲಕ ಮೊಬೈಲ್ ಸಂಪರ್ಕಕ್ಕೆ ಸಿಗದಿದ್ದರಿಂದ ಆತಂಕಕ್ಕೆ ಒಳಗಾದ ಮಂಡಿ ಮಾಲೀಕರು ಕೋಲಾರ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ‘ಮೆಹತ್ ಟ್ರಾನ್ಸ್‌ಪೋರ್ಟ್ ಸಂಸ್ಥೆ ಮೂಲಕ ಟೊಮೆಟೊ ಸಾಗಿಸಲಾಗಿತ್ತು. ಲಾರಿ ರಾಜಸ್ಥಾನಕ್ಕೆ ಸೇರಿದ್ದಾಗಿದ್ದು, ಅನ್ವರ್ ಚಲಾಯಿಸುತ್ತಿದ್ದ. ಟ್ರಾನ್ಸ್‌ಪೋರ್ಟ್‌ನವರು ಚಾಲಕನ ವಿರುದ್ಧ ಅಹಮದಾಬಾದ್‌ನಲ್ಲಿ ದೂರು ನೀಡಿದ್ದಾರೆ’ ಎಂದು ಮಂಡಿ ಮಾಲೀಕರು ತಿಳಿಸಿದ್ದಾರೆ.

ಈ ನಡುವೆ, ಸೋಮವಾರ ಜಿಲ್ಲಾಧಿಕಾರಿ ಅಕ್ರಂ ಪಾಷ ನೇತೃತ್ವದಲ್ಲಿ ಎಂಪಿಎಂಸಿಯಲ್ಲಿ ಸಭೆ ನಡೆದಿದ್ದು, ಮಂಡಿ ಮಾಲೀಕರು, ವರ್ತಕರು ಹೆಚ್ಚಿನ ರಕ್ಷಣೆ ಕೋರಿದ್ದಾರೆ.

15 ಕೆ.ಜಿ ಬಾಕ್ಸ್ ಟೊಮೆಟೊ ₹ 2,700ವರೆಗೆ ಮಾರಾಟ

15 ಕೆ.ಜಿ ಟೊಮೆಟೊ ಬಾಕ್ಸ್ ₹ 2,700ವರೆಗೆ ಹರಾಜಾಗಿದೆ. 77 ಬಾಕ್ಸ್ ಟೊಮೆಟೊವನ್ನು ಸಿಎಂಆರ್ ಮಂಡಿ ಮಾಲೀಕರು ಖರೀದಿಸಿದ್ದಾರೆ. ರೈತನಿಗೆ ಕೆ.ಜಿಗೆ ಸರಾಸರಿ ₹ 180 ದರ ಲಭಿಸಿದೆ.

‘15 ಕೆ.ಜಿ ಟೊಮೆಟೊ ಬಾಕ್ಸ್ ಸರಾಸರಿ ₹2,000ರಿಂದ ₹2,500ವರೆಗೆ ಮಾರಾಟವಾಗಿದೆ. ನಮ್ಮ ಮಂಡಿಯಲ್ಲಿ 77ಬಾಕ್ಸ್ ಟೊಮೆಟೊ ತಲಾ ₹2,700ರಂತೆ ಹರಾಜಾಗಿದೆ. ಈ ದರ ಸಾರ್ವಕಾಲಿಕ ದಾಖಲೆ’ ಎಂದು ಸಿಎಂಆರ್ ಮಂಡಿ ಮಾಲೀಕ ಸಿಎಂಆರ್ ಶ್ರೀನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

ಜೆ.ಕೆ.ಮಂಡಿಯಲ್ಲಿ 145 ಬಾಕ್ಸ್ ಟೊಮೆಟೊ ತಲಾ ₹2,400ರಂತೆ ಹರಾಜಾಗಿದೆ. ಕೆಎನ್‌ಎಸ್ ಮಂಡಿಯಲ್ಲಿ 120 ಬಾಕ್ಸ್ ಹಾಗೂ ಕೆಎನ್‌ಎನ್ ಮಂಡಿಯಲ್ಲಿ 74 ಬಾಕ್ಸ್ ಟೊಮೆಟೊ ತಲಾ ₹2,320ರಂತೆ ಮಾರಾಟವಾಗಿದೆ. ಭಾನುವಾರಷ್ಟೇ ₹ 2,200ಕ್ಕೆ ಮಾರಾಟವಾಗಿತ್ತು. ಇದು ಈ ವರೆಗಿನ ದಾಖಲೆಯಾಗಿತ್ತು.

ಮೋಜು-ಮಸ್ತಿ: ವೈದ್ಯರು ಸೇರಿ ನಾಲ್ವರ ವಿರುದ್ಧ ಪ್ರಕರಣ

ಖಾನಾಪುರ (ಬೆಳಗಾವಿ ಜಿಲ್ಲೆ): ನಿರ್ಬಂಧವಿದ್ದರೂ ತಾಲ್ಲೂಕಿನ ಜಾಂಬೋಟಿ ಸಂರಕ್ಷಿತ ಅಭಯಾರಣ್ಯದಲ್ಲಿ ಭಟವಾಡಾ ಜಲಪಾತಕ್ಕೆ ಅಕ್ರಮವಾಗಿ ತೆರಳಿ, ಮೋಜು-ಮಸ್ತಿ ಮಾಡಿದ ಆರೋಪದಡಿ ಬೆಳಗಾವಿಯ ಮೂವರು ವೈದ್ಯರು ಸೇರಿ ನಾಲ್ವರ ವಿರುದ್ಧ ಅರಣ್ಯ ಇಲಾಖೆ ದೂರು ದಾಖಲಿಸಿದೆ.

ಬೆಳಗಾವಿಯ ಡಾ.ಶಿವಕುಮಾರ ಪುರಾಣಿಕಮಠ, ಡಾ.ಸಂತೋಷ ರೇವಣ್ಣವರ, ಡಾ.ಸಂತೋಷ ಏಣಗಿಮಠ ಮತ್ತು ವಾಹನ ಚಾಲಕ ಪ್ರವೀಣ ಕಲಗುಡಿ ಅವರು ಹೆಸ್ಕಾಂಗೆ ಸೇರಿದ ವಾಹನದಲ್ಲಿ ಜುಲೈ 30ರಂದು ಜಲಪಾತಕ್ಕೆ ಹೋಗಿದ್ದರು. ಅವರೊಂದಿಗೆ ಹೆಸ್ಕಾಂನಲ್ಲಿ ಕೆಲಸ ಮಾಡುವ ನಾಲ್ವರು ಸ್ನೇಹಿತರಿದ್ದರು.

ಮುಖ್ಯ ರಸ್ತೆಯಿಂದ ಒಂದೂವರೆ ಕಿ.ಮೀ ಒಳಗೆ ದಟ್ಟ ಅರಣ್ಯದಲ್ಲಿರುವ ಜಲಪಾತದ ಬಳಿ ಮಾಂಸದ ಅಡುಗೆ ತಯಾರಿಸಿ, ಮದ್ಯ ಸೇವಿಸಿದ್ದರು. ಸ್ಥಳೀಯರು ಇದರ ಬಗ್ಗೆ ಮಾಹಿತಿ ನೀಡಿದ್ದರು’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

‘ಈ ಸಂಬಂಧ ದೂರು ದಾಖಲಿಸಲಾಗಿದೆ. ವಾಹನ ಸಮೇತ ಪರಾರಿಯಾದ ನಾಲ್ವರ ಪತ್ತೆಗೆ ಶೋಧ ನಡೆದಿದೆ. ಅಡುಗೆ ತಯಾರಿಕೆಗೆ ಬಳಸಿದ ಪಾತ್ರೆಗಳು, ಮದ್ಯದ ಬಾಟಲಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಸೆರೆ ಸಿಕ್ಕ ನಾಲ್ವರು ಆರೋಪಿಗಳಿಗೆ ತಲಾ ₹1 ಸಾವಿರ ದಂಡ ವಿಧಿಸಲಾಗಿದೆ’ ಎಂದು ವಲಯ ಅರಣ್ಯಾಧಿಕಾರಿ ಕವಿತಾ ಈರನಟ್ಟಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈಗಾಗಲೇ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಹೆಸ್ಕಾಂನ ನಾಲ್ವರು ಸಿಬ್ಬಂದಿಗಳ ವಿರುದ್ಧವೂ ದೂರು ದಾಖಲಿಸಬೇಕು’ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರು ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚಿಸಿದ್ದಾರೆ.

ಮುಳ್ಳಯ್ಯನಗಿರಿ; ನಿರ್ಬಂಧ ತೆರವು

ಚಿಕ್ಕಮಗಳೂರು: ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಶ್ರೇಣಿಗೆ ಪ್ರವಾಸಿಗರಿಗೆ ವಿಧಿಸಲಾಗಿದ್ದ ನಿರ್ಬಂಧವನ್ನು ಜಿಲ್ಲಾಡಳಿತ ಸೋಮವಾರ ತೆರವುಗೊಳಿಸಿದೆ.

ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರಿಂದ ಜಲಪಾತಗಳಲ್ಲಿ ನೀರು ಭೋರ್ಗರೆಯುತ್ತಿತ್ತು. ಗುಡ್ಡ ಕುಸಿಯುವ ಆತಂಕವೂ ಇತ್ತು. ಆದ್ದರಿಂದ ಪರ್ವತ ಶ್ರೇಣಿಗೆ ಪ್ರವಾಸಿಗರು ಬರದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮನವಿ ಮಾಡಿದ್ದರು. ವಾರಾಂತ್ಯದಲ್ಲಿ ಗಿರಿಯ ಮೇಲ್ಭಾಗಕ್ಕೆ ಪ್ರವಾಸಿಗರು ಹೋಗದಂತೆ ಬ್ಯಾರಿಕೇಡ್‌ಗಳನ್ನೂ ಹಾಕಲಾಗಿತ್ತು.

ಎರಡು–ಮೂರು ದಿನಗಳಿಂದ ಮಳೆ ಕಡಿಮೆ ಆಗಿರುವುದರಿಂದ ಸೋಮವಾರದಿಂದ ಪ್ರವಾಸಿಗರು ತೆರಳಲು ಅನುವು ಮಾಡಲಾಯಿತು.

ತಗ್ಗಿದ ಮಳೆ: ಇಳಿದ ನದಿಗಳ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರ ಮತ್ತು ಕೃಷ್ಣಾ ನದಿಯ ಜಲಾನಯನ ಪ್ರದೇಶದಲ್ಲಿ ಮಳೆ ಅಬ್ಬರ ತಗ್ಗಿದ್ದು, ಒಳಹರಿವಿನ ಪ್ರಮಾಣ ಇಳಿಕೆಯಾಗಿದೆ. ಜಿಲ್ಲೆಯ ಹಲವೆಡೆ ಜಿಟಿಜಿಟಿ ಮಳೆಯಾಗಿದೆ.

ಜಿಲ್ಲೆಯ ಏಳು ನದಿಗಳು ಉಕ್ಕಿ ಹರಿದಿದ್ದರಿಂದ 30 ಸೇತುವೆಗಳು ಮುಳುಗಡೆಯಾಗಿದ್ದವು. ಸದ್ಯ 8 ಸೇತುವೆಗಳಷ್ಟೇ ಮುಳುಗಡೆ ಸ್ಥಿತಿಯಲ್ಲಿದ್ದು, ಉಳಿದವು ಸಂಚಾರಕ್ಕೆ ಮುಕ್ತವಾಗಿವೆ.

ರಾಜಾಪುರ ಬ್ಯಾರೇಜ್‌ನಿಂದ 94,833 ಕ್ಯುಸೆಕ್, ಧೂದ್‌ಗಂಗಾ ನದಿಯಿಂದ 21,120 ಕ್ಯುಸೆಕ್ ಸೇರಿ 1.15 ಲಕ್ಷ ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಸೇತುವೆ ಬಳಿ ಕೃಷ್ಣಾ ನದಿಗೆ ಸೇರುತ್ತಿದೆ.

ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶದಲ್ಲಿ ಮಳೆ ತಗ್ಗಿದ್ದರಿಂದ ಘಟಪ್ರಭಾ ನದಿಯಲ್ಲೂ ನೀರಿನ ಹರಿವು ಕಡಿಮೆ ಆಗಿದೆ.

ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ 10,823 ಕ್ಯುಸೆಕ್‌ಗೆ ಇಳಿಕೆ ಆಗಿದೆ. ಖಾನಾಪುರ, ಚನ್ನಮ್ಮನ ಕಿತ್ತೂರು ತಾಲ್ಲೂಕಿನಲ್ಲಿ ಮಳೆ ಕಡಿಮೆಯಾಗಿದ್ದು ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯಕ್ಕೆ ಹರಿದುಬರುವ ನೀರಿನ ಪ್ರಮಾಣವೂ 4,314 ಕ್ಯುಸೆಕ್‌ಗೆ ಇಳಿದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.18	7,464	3,193
ಹಾರಂಗಿ	2,859	2,857.18	3,000	3,000
ಕಬಿನಿ	2,284	2,283.35	4,252	3,500
ಹೇಮಾವತಿ	2,922	2,912.38	4,001	200
ಲಿಂಗನಮಕ್ಕಿ	1,819	1,787.50	12,883	3,146.20
ಸೂಪಾ (ಮೀ)	564	544.75	15309.53	-
ಮಾಣಿ	595	580.46	1,921	-
ತುಂಗಭದ್ರಾ	1,633	1,624.91	38,024	2,099
ಮಲಪ್ರಭಾ	2079.50	2,063.60	4,314	194
ಘಟಪ್ರಭಾ	2175	2,153.70	10,823	1,733
ಭದ್ರಾ	186	162.20	7,550	189
ಆಲಮಟ್ಟಿ (ಮೀ)	519.60	518.31	1,36,986	60,031
ನಾರಾಯಣಪುರ (ಮೀ)	492.25	491.76	52,500	48,825

* ನೆಲಮಟ್ಟದಿಂದ

ಕೇರಳ ಫೈಲ್ಸ್ ಸಿನಿಮಾ ಮಾದರಿ ಕೃತ್ಯ: ನಳಿನ್

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಉಡುಪಿಯ ಕಾಲೇಜಿನಲ್ಲಿ ಶೌಚಾಲಯಕ್ಕೆ ಹೋಗುವ ತರುಣಿಯರ ವಿಡಿಯೊ ತೆಗೆದದ್ದು ಸಣ್ಣ ಘಟನೆ ಅಲ್ಲ. ‘ಕೇರಳ ಫೈಲ್ಸ್’ ಸಿನಿಮಾದ ತರಹದ ಘಟನೆ ನಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಪರಮೇಶ್ವರ ಅವರು ಒಮ್ಮೆ ಕೇರಳ ಫೈಲ್ಸ್ ಸಿನಿಮಾ ನೋಡಲಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಉಡುಪಿ ವಿಡಿಯೊ ಪ್ರಕರಣದ ಸಮಗ್ರ ತನಿಖೆಗೆ ಒತ್ತಾಯಿಸಿ ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಇಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ಇಂತಹ ಘಟನೆಗಳು ಆರೇಳು ಬಾರಿ ನಡೆದಿವೆ. ಶೌಚಾಲಯಕ್ಕೆ ಹೋಗುವವರ ವಿಡಿಯೊ ಚಿತ್ರೀಕರಿಸಲಾಗಿದೆ ಎಂದು ಅದೇ ಕಾಲೇಜಿನ ವಿದ್ಯಾರ್ಥಿನಿ ಹೇಳಿದ್ದಾರೆ. ವಿಡಿಯೊ ತೆಗೆದದ್ದು ಕೇರಳದ ತರುಣಿಯರು. ಅದನ್ನು ಮತಾಂಧ ವ್ಯಕ್ತಿಗಳಿಗೆ ಕಳುಹಿಸಿದ ಉದಾಹರಣೆಗಳಿವೆ. ಈ ಘಟನೆ ಬಗ್ಗೆ ಪೊಲೀಸ್ ಇಲಾಖೆ ಗಮನ ಸೆಳೆದರೂ ಪ್ರಕರಣದ ತನಿಖೆಯನ್ನೇ ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ’ ಎಂದು ಟೀಕಿಸಿದರು.

‘ಕೇರಳದ ನಂಟು ಇದೆಯೇ ಎಂಬ ಬಗ್ಗೆಯೂ ತನಿಖೆಯಾಗಬೇಕು. ಎಸ್‌ಐಟಿ ರಚಿಸಬೇಕು’ ಎಂದು ಅವರು ಒತ್ತಾಯಿಸಿದರು.

ಉಡುಪಿ ವಿಡಿಯೊ ಪ್ರಕರಣದ ತನಿಖೆಗೆ ಆಗ್ರಹಿಸಿ ಮಂಗಳೂರಿನಲ್ಲಿ ಬಿಜೆಪಿ ಪ್ರತಿಭಟನೆ ನಡೆಸಿತು –ಪ್ರಜಾವಾಣಿ ಚಿತ್ರ

ತನಿಖೆ ಚುರುಕು

ಉಡುಪಿ: ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ಮೊಬೈಲ್ ಚಿತ್ರೀಕರಣ ಪ್ರಕರಣದ ತನಿಖೆ ಚುರುಕುಗೊಂಡಿದೆ.

ತನಿಖಾಧಿಕಾರಿಯಾಗಿರುವ ಡಿವೈಎಸ್‌ಪಿ ಬೆಳ್ಳಿಯಪ್ಪ ನೇತೃತ್ವದ ತಂಡ ಸೋಮವಾರ ಕಾಲೇಜಿಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿತು. ಸಂತ್ರಸ್ತೆ ಹಾಗೂ ಆರೋಪಿತ ವಿದ್ಯಾರ್ಥಿನಿಯರನ್ನು ಭೇಟಿಯಾಗಿ ತಂಡ ವಿಚಾರಣೆ ನಡೆಸಲಿದೆ.

‘ಮಾತನಾಡಲು ಆಗುತ್ತಿಲ್ಲ’

ಮಂಗಳೂರು: ‘ಉಡುಪಿ ಮತ್ತು ಮಣಿಪುರ ವಿಷಯಕ್ಕೆ ಸಂಬಂಧಿಸಿ ಹೇಳಿಕೆ ನೀಡಬೇಕೆಂಬ ತುಡಿತ ಇದೆ. ಆದರೆ, ನಾನು ವಿಧಾನಸಭೆ ಅಧ್ಯಕ್ಷ ಆಗಿರುವುದರಿಂದ ಮಾತನಾಡಲು ಆಗುತ್ತಿಲ್ಲ’ ಎಂದು ಯು.ಟಿ.ಖಾದರ್ ಹೇಳಿದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಸೋಮವಾರ ಆಯೋಜಿಸಿದ್ದ ಸಂವಾದದಲ್ಲಿ, ‘ಕೆಲವರು ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ಮಾಡುವುದಿಲ್ಲ. ಸಮಸ್ಯೆಯನ್ನು ಬಳಸಿಕೊಂಡು ಮತ್ತಷ್ಟು ತೊಂದರೆ ಉಂಟುಮಾಡಲು ಶ್ರಮಿಸುತ್ತಾರೆ. ಶಾಂತಿಯುತ ಮಾತುಕತೆಯಿಂದ ಎಲ್ಲವನ್ನೂ ಬಗೆಹರಿಸಬಹುದಾಗಿದೆ’ ಎಂದರು.

ಸ್ಯಾಂಟ್ರೊ ರವಿ ಸ್ಥಳಾಂತರಕ್ಕೆ ಒಪ್ಪದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಕಾರಾಗೃಹದ ಸಿಬ್ಬಂದಿ, ಅಧಿಕಾರಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ನಿಯಮ ಉಲ್ಲಂಘಿಸುತ್ತಿರುವ ವಿಚಾರಣಾಧೀನ ಕೈದಿ ಸ್ಯಾಂಟ್ರೊ ರವಿಯನ್ನು ಬೇರೆ ಜೈಲಿಗೆ ಸ್ಥಳಾಂತರಿಸಬೇಕು ಎಂಬ ಜಿಲ್ಲಾ ಕೇಂದ್ರ ಕಾರಾಗೃಹದ ಮನವಿಯನ್ನು ಜಿಲ್ಲಾ ನ್ಯಾಯಾಲಯ ತಿರಸ್ಕರಿಸಿದ್ದು, ಮೈಸೂರಿನಲ್ಲೇ ಇರಿಸುವಂತೆ ಆದೇಶಿಸಿದೆ’ ಎಂದು ಮೂಲಗಳು ತಿಳಿಸಿವೆ.

‘ಆಡಳಿತದ ಹಿತದೃಷ್ಟಿಯಿಂದ ಬೇರೆ ಜೈಲಿಗೆ ವರ್ಗಾಯಿಸಬೇಕು’ ಎಂದು ಕಾರಾಗೃಹದ ಮುಖ್ಯ ಅಧೀಕ್ಷಕರು ವಿಸ್ತೃತ ವರದಿಯೊಂದಿಗೆ ಮನವಿ ಸಲ್ಲಿಸಿದ್ದರು.

ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಅಕ್ರಮ

ಕಾರ್ಯದರ್ಶಿ ಸೇರಿ ಮೂವರು ಅಮಾನತು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಸರ್ಕಾರದ ಅನುಮತಿ ಪಡೆಯದೇ ₹ 406 ಕೋಟಿ ಮೊತ್ತದ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿದ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯದರ್ಶಿ, ಉಪ ಕಾರ್ಯದರ್ಶಿ ಸೇರಿ ಮೂವರನ್ನು ಸರ್ಕಾರ ಅಮಾನತುಗೊಳಿಸಿದೆ.

14 ಜಿಲ್ಲೆ ಹಾಗೂ 70 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯನ್ನು ಒಳಗೊಂಡಿರುವ ಬಯಲುಸೀಮೆ ಅಭಿವೃದ್ಧಿ ಮಂಡಳಿ ಚಿತ್ರದುರ್ಗದಲ್ಲಿ ಕೇಂದ್ರ ಕಚೇರಿ ಹೊಂದಿದೆ. 2022– 23ನೇ ಸಾಲಿನಲ್ಲಿ ಸರ್ಕಾರವು ಅನುಮೋದಿಸಿ ಬಿಡುಗಡೆಗೊಳಿಸಿದ ಅನುದಾನಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗೆ ನಿಯಮಬಾಹಿರವಾಗಿ ಆಡಳಿತಾತ್ಮಕ ಅನುಮೋದನೆ ನೀಡಿ ಕಡತಗಳಲ್ಲಿ ತಿದ್ದುಪಡಿ ಮಾಡಿರುವುದು ಪ್ರಾಥಮಿಕ ತನಿಖಾ ವರದಿಯಿಂದ ತಿಳಿದುಬಂದಿದೆ. ಇದರ ಆಧಾರದ ಮೇಲೆ ಕಾರ್ಯದರ್ಶಿ ಶ್ರೀಧರ ಬಿ.ಭಜಂತ್ರಿ, ಉಪ ಕಾರ್ಯದರ್ಶಿ ಎಚ್. ಕೃಷ್ಣನಾಯ್ಕ, ದ್ವಿತೀಯ ದರ್ಜೆ ಸಹಾಯಕ ಪಾಪಯ್ಯ ಅವರನ್ನು ಜುಲೈ 27ರಂದು ಅಮಾನತುಗೊಳಿಸಲಾಗಿದೆ.

ಬಯಲುಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷರು ಹಾಗೂ ಸರ್ಕಾರದ ಗಮನಕ್ಕೆ ತರದೇ ಅಂದಾಜು ₹ 406 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ವೈಯಕ್ತಿಕ ಹಿತಾಸಕ್ತಿ ಮೇರೆಗೆ ಕಾರ್ಯಾದೇಶ ನೀಡಿರುವುದು ಗೊತ್ತಾಗಿದೆ. ರಾಜ್ಯ ಸರ್ಕಾರ ಜುಲೈ 20ರಂದು ಐವರು ತನಿಖಾಧಿಕಾರಿಗಳ ತಂಡ ಪರಿಶೀಲನೆ ನಡೆಸಿದಾಗ ಅವ್ಯವಹಾರ ಬಯಲಿಗೆ ಬಂದಿತ್ತು.

ಮಂಡಳಿಗೆ ವಾರ್ಷಿಕ ಬಜೆಟ್‌ನಲ್ಲಿ ₹ 40 ಕೋಟಿಯಿಂದ ₹ 50 ಕೋಟಿ ಅನುದಾನ ಕಾಯ್ದಿರಿಸಲಾಗುತ್ತದೆ. ಇದಕ್ಕೆ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಿ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದ ಬಳಿಕ ಸರ್ಕಾರದ ಗಮನಕ್ಕೆ ತಂದು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು. ಸರ್ಕಾರ ಕಳೆದ ವರ್ಷ ₹ 150 ಕೋಟಿ ಅನುದಾನ ನೀಡಿತ್ತು. ಈ ಬಾರಿ ₹ 38 ಕೋಟಿ ಅನುದಾನ ನೀಡಿದೆ. ಇಷ್ಟು ಮೊತ್ತಕ್ಕೆ ಮಾತ್ರ ಕ್ರಿಯಾ ಯೋಜನೆ ತಯಾರಿಸಬೇಕಿತ್ತು. ಈ ವರ್ಷದ ಅನುದಾನ ಕಾಯ್ದಿರಿಸುವ ಮುನ್ನವೇ ಮಂಡಳಿ ಕಾರ್ಯದರ್ಶಿ ₹ 406 ಕೋಟಿ ಕಾಮಗಾರಿಗೆ ಕಾರ್ಯಾದೇಶ ನೀಡಿದ್ದರು.

ಮಗಳ ಮೇಲೆ ಅತ್ಯಾಚಾರ: ತಂದೆ ಸೆರೆ

ಬೀದರ್: 12 ವರ್ಷದ ಮಗಳ ಮೇಲೆ ಅತ್ಯಾಚಾರ ನಡೆಸಿದ ಆರೋಪದಡಿ ತಂದೆಯನ್ನು ಬಸವಕಲ್ಯಾಣ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

‘ಲಾಕ್‌ಡೌನ್ ವೇಳೆ ಶಾಲೆಗೆ ರಜೆ ಘೋಷಿಸಿದ ನಂತರ ಮನೆಯಲ್ಲಿ ತಂದೆಯೇ ಮಗಳ ಮೇಲೆ ಅತ್ಯಾಚಾರ ನಡೆಸಿ, ಯಾರಿಗೂ ವಿಷಯ ಹೇಳದಂತೆ ಬೆದರಿಕೆಯೊಡ್ಡಿದ್ದನು. ನಂತರ ಹಲವು ಸಲ ಅತ್ಯಾಚಾರ ಎಸಗಿದ್ದಾನೆ. ಇತ್ತೀಚೆಗೆ ಹಗಲಿನಲ್ಲೇ ಅತ್ಯಾಚಾರ ಮಾಡುವಾಗ ಬಾಲಕಿಯ ಅಜ್ಜಿಗೆ ವಿಷಯ ಗೊತ್ತಾಗಿ, ಪ್ರಕರಣ ಬಹಿರಂಗಗೊಂಡಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಅಕ್ಷಯ್ ದೇವಾಡಿಗ

ಕಮಲಾಕ್ಷ ಬೆಳ್ಚಡ

ಸುಕುಮಾರ್ ಬೆಳ್ಚಡ

ವಿಟ್ಲ (ದಕ್ಷಿಣ ಕನ್ನಡ): ಜಿಲ್ಲೆಯ ಪರಿಶಿಷ್ಟ ಪಂಗಡದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ವಿಟ್ಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

‘ಜಯಪ್ರಕಾಶ್ (38), ಅಕ್ಷಯ್ ದೇವಾಡಿಗ (24), ಕಮಲಾಕ್ಷ ಬೆಳ್ಚಾಡ (30), ಸುಕುಮಾರ ಬೆಳ್ಚಾಡ (28) ಬಂಧಿತರು. ಅಕ್ಷಯ್ ಪೇಂಟಿಂಗ್ ಕೆಲಸ ಹಾಗೂ ಕಮಲಾಕ್ಷ ಗಾರೆ ಕೆಲಸ ಮಾಡಿಕೊಂಡಿದ್ದು, ಸುಕುಮಾರ ವೃತ್ತಿಯಲ್ಲಿ ಚಾಲಕ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಒಟ್ಟು ಐವರು ಆರೋಪಿಗಳು ಬೇರೆ ಬೇರೆ ಸಂದರ್ಭದಲ್ಲಿ ಲೈಂಗಿಕ ಅಪರಾಧ ಎಸಗಿರುವ ಬಗ್ಗೆ ಸಂತ್ರಸ್ತ ಬಾಲಕಿ ಮಾಹಿತಿ ನೀಡಿದ್ದಾಳೆ. ಅವರಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ತಲೆಮರೆಸಿಕೊಂಡಿರುವ ಇನ್ನೊಬ್ಬ ಆರೋಪಿಗಾಗಿ ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಗಳಲ್ಲಿ ಸುಕುಮಾರ ಹಾಗೂ ಅಕ್ಷಯ್ ಬಜರಂಗ ದಳ ಸಂಘಟನೆಯಲ್ಲಿ ಸಕ್ರಿಯರಾಗಿದ್ದರು. ಅವರು ಕೇಸರಿ ಶಾಲು ಧರಿಸಿದ್ದ ಛಾಯಾ ಚಿತ್ರಗಳು ಇವೆ’ ಎಂದು ಮೂಲಗಳು ತಿಳಿಸಿವೆ. ಆದರೆ, ಪೊಲೀಸರು ಇದನ್ನು ಖಚಿತಪಡಿಸಿಲ್ಲ.

‘ಈ ಪ್ರಕರಣದ ಆರೋಪಿಗಳಲ್ಲಿ ಯಾರೂ ಬಜರಂಗದಳ ಸಂಘಟನೆಯವರಲ್ಲ. ಕೇಸರಿ ಶಾಲು ಧರಿಸಿಕೊಂಡು ಯಾರು ಬೇಕಾದರೂ ಓಡಾಡಬಹುದು. ಆ ಕಾರಣಕ್ಕೆ ಅವರು ಬಜರಂಗ ದಳ ಸಂಘಟನೆಗೆ ಸೇರಿದವರು ಎನ್ನಲಾಗದು’ ಎಂದು ಸಂಘಟನೆಯ ವಿಭಾಗ ಸಂಯೋಜಕ ಪುನೀತ್ ಅತ್ತಾವರ ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದರು.

30 ದೇಶಗಳ 250 ಪ್ರತಿನಿಧಿಗಳು ಭಾಗಿ; ಮೂರು ದಿನ ವಿವಿಧ ಕಾರ್ಯಕ್ರಮ

ಜಿ20 ಶೃಂಗ: ‘ಥಿಂಕ್ 20’ ಸಭೆ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಜಿ20 ಶೃಂಗಸಭೆಯ ಪೂರ್ವಭಾವಿಯಾಗಿ, ಮೂರು ದಿನಗಳ ‘ಥಿಂಕ್ 20’ ಸಭೆ ಇಲ್ಲಿ ಸೋಮವಾರ ಆರಂಭಗೊಂಡಿತು. ಸಾಂಸ್ಕೃತಿಕ ನಗರಿಗೆ ಬಂದ ಅತಿಥಿಗಳನ್ನು ಆರತಿ ಬೆಳಗಿ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ಸಭೆಯಲ್ಲಿ 30 ದೇಶಗಳ ಸುಮಾರು 250 ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ. ನಗರದ ರ್‍ಯಾಡಿಸನ್ ಬ್ಲೂ ಹಾಗೂ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡಿದ್ದು, ಅಲ್ಲಿಯೇ ಕಾರ್ಯಕ್ರಮಗಳು ನಡೆದಿವೆ. ಹೋಟೆಲ್‌ಗಳ ಸುತ್ತ ಬಿಗಿ ಪೊಲೀಸ್ ಭದ್ರತೆ ಇದ್ದು, ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ವಿದೇಶಿ ಪ್ರತಿನಿಧಿಗಳ ಭೇಟಿ ಹಿನ್ನೆಲೆಯಲ್ಲಿ ಮೈಸೂರು ನಗರದ ಪ್ರಮುಖ ವೃತ್ತಗಳು, ಕಟ್ಟಡಗಳಿಗೆ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿದೆ.

ವಿವಿಧ ಗೋಷ್ಠಿ: ಮೊದಲ ದಿನ, ಶಕ್ತಿಮೂಲಗಳ ಸದ್ಬಳಕೆ ಕುರಿತ ಗೋಷ್ಠಿಯಲ್ಲಿ ಜರ್ಮನಿ, ಬ್ರೆಜಿಲ್, ಇಂಗ್ಲೆಂಡ್, ಫ್ರಾನ್ಸ್ ದೇಶಗಳ ಪ್ರತಿನಿಧಿಗಳು ವಿಚಾರ ಮಂಡಿಸಿದರು. ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್‌ನ ಶಕ್ತಿ ನೀತಿಗಳ ವಿಭಾಗದ ಮುಖ್ಯಸ್ಥ ತೀರ್ಥಂಕರ್ ಮಂಡಲ್ ಅಧ್ಯಕ್ಷತೆ ವಹಿಸಿದ್ದರು.

ನಂತರ, ಜಾಗತಿಕ ಸಹಕಾರ ಪರಿಕಲ್ಪನೆಗಳು ಹಾಗೂ ಜಾಗತಿಕ ತಾಪಮಾನ ಬದಲಾವಣೆ, ಸುಸ್ಥಿರ ಅಭಿವೃದ್ಧಿ ಗುರಿಗಳ ನಡುವಿನ ಸಂಬಂಧಗಳ ಕುರಿತು ಗೋಷ್ಠಿಗಳು ನಡೆದವು. ರಾತ್ರಿ ಜಿ–20 ಭಾರತದ ಶೆರ್ಪಾ ಅಮಿತಾಬ್ ಕಾಂತ್ ಸಭೆ ಉದ್ದೇಶಿಸಿ ಮಾತನಾಡಿದರು.

ಪ್ರತಿನಿಧಿಗಳು ಮಂಗಳವಾರ ಮೈಸೂರು ಅರಮನೆಗೆ ಭೇಟಿ ನೀಡಲಿದ್ದು, ಆ ಅವಧಿಯಲ್ಲಿ ಅರಮನೆಗೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ.

ಬುಧವಾರ ಈ ತಂಡವು ಶ್ರೀರಂಗಪಟ್ಟಣ, ಸೋಮನಾಥಪುರ ಮೊದಲಾದ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಸಾಧ್ಯತೆ ಇದೆ. ಭಾರತ ಈ ಬಾರಿಯ ಜಿ–20 ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು, ಅದಕ್ಕೆ ಪೂರ್ವಭಾವಿಯಾಗಿ ಅಬ್ಸರ್ವರ್ ರಿಸರ್ಚ್ ಫೌಂಡೇಶನ್ ವತಿಯಿಂದ ದೇಶದಾದ್ಯಂತ ‘ಥಿಂಕ್ 20’ ಹೆಸರಿನಲ್ಲಿ ಸಭೆ ಆಯೋಜಿಸಲಾಗುತ್ತಿದೆ.

ನಾಲ್ಕು ಸಭೆಗಳ ಕೊನೆಯ ಆವೃತ್ತಿ ಇದು. ಜಿ 20ಗೆ ಸಂಬಂಧಿಸಿದ ನೀತಿ–ನಿರೂಪಣೆಗಳ ಕುರಿತು ಇಲ್ಲಿ ಚರ್ಚಿಸಲಾಗುತ್ತದೆ.

ಮೈಸೂರಿನಲ್ಲಿ ಸೋಮವಾರ ಆರಂಭಗೊಂಡ ‘ಥಿಂಕ್20’ ಶೃಂಗಸಭೆಗೆ ಆಗಮಿಸಿದ ವಿವಿಧ ದೇಶಗಳ ಪ್ರತಿನಿಧಿಗಳಿಗೆ ಆರತಿಯೊಂದಿಗೆ ಸಾಂಪ್ರದಾಯಿಕವಾಗಿ ಸ್ವಾಗತ ಕೋರಲಾಯಿತು

‘ಸುಳ್ಳು ದಾಖಲೆ ನೀಡಿದರೆ ನೋಂದಣಿ ರದ್ದು: ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಸುಳ್ಳು ಮಾಹಿತಿ ನೀಡಿ, ವಂಚಿಸಿ ಅಥವಾ ಖೊಟ್ಟಿ ದಾಖಲೆ ಸೃಷ್ಟಿಸಿ ಸರ್ಕಾರಿ ಮತ್ತು ಖಾಸಗಿ ಆಸ್ತಿಯನ್ನು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಿರುವುದು ಕಂಡು ಬಂದಲ್ಲಿ ಆ ದಸ್ತಾವೇಜನ್ನು ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾ ನೋಂದಣಾಧಿಕಾರಿಗೆ ಕೆಲವೇ ತಿಂಗಳಲ್ಲಿ ನೀಡಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಸೋಮವಾರ ಕಲಬುರಗಿ ಕಂದಾಯ ವಿಭಾಗ ಮಟ್ಟದ ಪ್ರಗತಿ ಪರಿಶೀಲನೆ ಮಾಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ‘ಕಳೆದ ಅಧಿವೇಶನದಲ್ಲಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಲಾಗಿದೆ. ಮುಂದಿನ 3–4 ತಿಂಗಳಲ್ಲಿ ಗೆಜೆಟ್ ರೂಪದಲ್ಲಿ ಆದೇಶ ಹೊರಬೀಳಲಿದೆ. ಇದರಿಂದ ಕಂಡವರ ಆಸ್ತಿ ಕಬಳಿಸುವ ದಲ್ಲಾಳಿಗಳಿಗೆ ಕಡಿವಾಣ ಬೀಳಲಿದೆ’ ಎಂದು ತಿಳಿಸಿದರು.

‘ಹಿಂದೆಲ್ಲ ಸುಳ್ಳು ದಾಖಲೆ ಸೃಷ್ಟಿಸಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಿಕೊಂಡು ಆಸ್ತಿ ಕಬಳಿಕೆದಾರರು ಸಾರ್ವಜನಿಕರಿಗೆ ಅನಗತ್ಯ ತೊಂದರೆ ನೀಡುತ್ತಿದ್ದರು. ವಿಜಯಪುರ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಹೆಚ್ಚಿವೆ. ಸುಳ್ಳು ದಾಖಲೆಗಳ ನೋಂದಣಿ ಗೊತ್ತಾದ ನಂತರ ಆಸ್ತಿ ಮಾಲೀಕರು ಸಿವಿಲ್ ನ್ಯಾಯಾಲಯ, ಹೈಕೋರ್ಟ್, ಸುಪ್ರೀಂ ಕೋರ್ಟ್ ಹೀಗೆ 5–6 ವರ್ಷ ನ್ಯಾಯಾಲಯಕ್ಕೆ ಅಲೆದಾಡಬೇಕಿತ್ತು. ಜಿಲ್ಲಾ ನೋಂದಣಾಧಿಕಾರಿಗೆ ಸುಳ್ಳು ದಸ್ತಾವೇಜು ರದ್ದುಪಡಿಸುವ ಅಧಿಕಾರ ನೀಡಿದ್ದರಿಂದ ಸಾರ್ವಜನಿಕರಿಗೆ ಮುಂದಿನ ದಿನದಲ್ಲಿ ತ್ವರಿತ ನ್ಯಾಯ ಸಿಗಲು ಅನುಕೂಲವಾಗಲಿದೆ’ ಎಂದರು.

‘ತಹಶೀಲ್ದಾರ್, ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಬಾಕಿ ಇರುವ ಆಸ್ತಿ, ಜಮೀನು ಪ್ರಕರಣಗಳು ವಿಚಾರಣೆ ಅಂತ್ಯವಾಗಿ ಪ್ರಕರಣ ವಿಲೇವಾರಿ ಮಾಡಿದ 15 ದಿನಗಳಲ್ಲಿ ಆದೇಶ ಹೊರಡಿಸಬೇಕು’ ಎಂದು ಸಚಿವರು ತಹಶೀಲ್ದಾರ್ ಮತ್ತು ಸಹಾಯಕ ಆಯುಕ್ತರಿಗೆ ಸೂಚನೆ ನೀಡಿದರು.

ಪ್ರಕರಣ ವಿಲೇವಾರಿಗೆ ಸೂಚನೆ: ‘ರಾಜ್ಯದಾದ್ಯಂತ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರ್‌ಗಳ ನ್ಯಾಯಾಲಯದಲ್ಲಿ 1.5 ಲಕ್ಷ ಪ್ರಕರಣಗಳು ಬಾಕಿ ಇವೆ. ಮುಂದಿನ ಮೂರು ತಿಂಗಳಲ್ಲಿ ಶೇ 75ರಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಲು ಸೂಚಿಸಲಾಗಿದೆ. ಈ ಕುರಿತು ಪ್ರತಿ ತಿಂಗಳು ಜಿಲ್ಲಾಧಿಕಾರಿಗಳು ನನಗೆ ಮಾಹಿತಿ ನೀಡಬೇಕು ಎಂದು ನಿರ್ದೇಶನ ನೀಡಿದ್ದೇನೆ’ ಎಂದು ಕೃಷ್ಣ ಬೈರೇಗೌಡ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಿಶ್ರಾಂತ ಕುಲಪತಿ ಪ್ರೊ.ಕೆ.ಬೈರಪ್ಪ ನಿಧನ



ಮುಡಿಪು (ದಕ್ಷಿಣ ಕನ್ನಡ): ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ. ಬೈರಪ್ಪ (69) ಸೋಮವಾರ ಬೆಳಿಗ್ಗೆ ಹೃದಯಾಘಾತದಿಂದ ಬೆಂಗಳೂರಿನಲ್ಲಿ ನಿಧನರಾದರು.

ಬೆಳಗಾವಿಗೆ ತೆರಳಲು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗಿದ್ದ ವೇಳೆ ಹೃದಯಾಘಾತವಾಗಿದೆ. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಪ್ರೊ.ಬೈರಪ್ಪ ಅವರು 2014ರ ಜೂನ್‌ನಿಂದ 2018ರ ಜೂನ್ ವರೆಗೆ ಮಂಗಳೂರು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದರು. ನಿವೃತ್ತಿಯ ಬಳಿಕ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಸಹ ಕುಲಪತಿಯಾಗಿದ್ದರು.

ಮೈಸೂರಿನವರಾದ ಪ್ರೊ.ಬೈರಪ್ಪ ಮೈಸೂರು ವಿ.ವಿಯಲ್ಲಿ ಎಂ.ಎಸ್ಸಿ ಹಾಗೂ ರಷ್ಯಾದ ಮಾಸ್ಕೋ ಸ್ಟೇಟ್ ಯುನಿವರ್ಸಿಟಿಯಿಂದ ಪಿಎಚ್.ಡಿ ಪಡೆದಿದ್ದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

ಮಂಗಳವಾರ, ಆಗಸ್ಟ್ 1, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 212 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಪೋಷಕರ ನಡೆ ನುಡಿಗಳೇ ಮಕ್ಕಳ ವ್ಯಕ್ತಿತ್ವಕ್ಕೆ ದೊಡ್ಡ ಪ್ರಭಾವ

ಆಳ-ಅಗಲ ಐಐಎಂ ಕಾಯ್ದೆಗೆ ತಿದ್ದುಪಡಿ ರಾಷ್ಟ್ರಪತಿಗೆ ಅಧಿಕಾರ

ಉಕ್ರೇನ್: ಕ್ಷಿಪಣಿ ದಾಳಿ, 5 ಸಾವು 8

₹ 4 ಕೋಟಿಗಾಗಿ ಸುಲಿಗೆ ನಾಟಕ 3A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,527 ▲	19,753 ▲	₹61,700 (ಬೆಂಗಳೂರು)	₹75,600 (ಬೆಂಗಳೂರು)	82.2 ▼

ಬೆತ್ತಲೆ ಮೆರವಣಿಗೆ ಪ್ರಕರಣ: ಮಣಿಪುರ ಸರ್ಕಾರಕ್ಕೂ ಚಳಿ ಬಿಡಿಸಿದ ಕೋರ್ಟ್

ಕೇಂದ್ರಕ್ಕೆ 'ಸುಪ್ರೀಂ' ಚಾಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಣಿಪುರದಲ್ಲಿ ಕುಕಿ ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ಮಣಿಪುರ ಸರ್ಕಾರಗಳು ತಳೆದಿರುವ ನಿರ್ಲಕ್ಷ್ಯದ ವಿರುದ್ಧ ಸೋಮವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಎರಡೂ ಸರ್ಕಾರಗಳ ಮೇಲೆ ಚಾಟಿ ಬೀಸಿದೆ.

ವಿಡಿಯೊದಲ್ಲಿರುವ ಸಂತ್ರಸ್ತೆಯರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, 'ಈ ಕೃತ್ಯವು ಅತ್ಯಂತ ಭಯಾನಕವಾದುದು' ಎಂದೂ ಹೇಳಿದೆ.

'ಮೇ 4ರಂದು ಈ ಹೇಯಕೃತ್ಯ ನಡೆದಿದೆ. ಆದರೆ, ಹದಿನಾಲ್ಕು ದಿನಗಳವರೆಗೆ (ಮೇ 18ರಂದು) ಎಫ್‌ಐಆರ್ ದಾಖಲಿಸಲು ಪೊಲೀಸರು ವಿಳಂಬ ಮಾಡಿದ್ದೇಕೆ' ಎಂದು ಪ್ರಶ್ನಿಸಿದ ಪೀಠವು, 'ಇದು ದೆಹಲಿಯಲ್ಲಿ ನಡೆದ ನಿರ್ಭಯಾ ಮಾದರಿಯ ಪ್ರಕರಣವಲ್ಲ. ವ್ಯವಸ್ಥಿತವಾಗಿ ನಡೆದಿರುವ ಘೋರ ಅಪರಾಧ' ಎಂದು ಅಭಿಪ್ರಾಯಪಟ್ಟಿತು.

9ನೇ ಪುಟ ನೋಡಿ

ಆರು ಪ್ರಶ್ನೆ ಮುಂದಿಟ್ಟ ಪೀಠ

ಕೇಂದ್ರ ಸರ್ಕಾರ ಮತ್ತು ಮಣಿಪುರ ರಾಜ್ಯ ಸರ್ಕಾರದ ಮುಂದೆ ಸುಪ್ರೀಂ ಕೋರ್ಟ್ ಆರು ಪ್ರಶ್ನೆಗಳನ್ನು ಮುಂದಿಟ್ಟಿದ್ದು, ಇವುಗಳಿಗೆ ಉತ್ತರಿಸಲು 24 ಗಂಟೆಗಳ (ಮಂಗಳವಾರ) ಗಡುವು ನೀಡಿದೆ.

ಸಂತ್ರಸ್ತೆಯರ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, 'ಎಷ್ಟು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಬಗ್ಗೆ ಸರ್ಕಾರದ ಬಳಿ ನಿಖರ ಮಾಹಿತಿ ಇಲ್ಲ' ಎಂದು ಪೀಠಕ್ಕೆ ಅರುಹಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ಪೊಲೀಸರು ದಾಖಲಿಸಿರುವ 6,000 ಎಫ್‌ಐಆರ್‌ಗಳಲ್ಲಿ ಎಷ್ಟು ಮಹಿಳಾ ದೌರ್ಜನ್ಯ ಪ್ರಕರಣಗಳಿವೆ' ಎಂದು ಪ್ರಶ್ನಿಸಿತು. ಇದಕ್ಕೆ ಉತ್ತರಿಸಿದ ಕೇಂದ್ರವು, ಇಂತಹ ಪ್ರಕರಣಗಳನ್ನು ಪ್ರತ್ಯೇಕಗೊಳಿಸಿಲ್ಲ ಎಂದು ಉತ್ತರಿಸಿತು.

'ಪ್ರತಿಯೊಂದು ಪ್ರಕರಣಗಳ ವಿವರವಾದ ಮಾಹಿತಿ ಕೊಡಬೇಕು, ದಾಖಲಾಗಿರುವ ಜೀರೊ ಎಫ್‌ಐಆರ್‌ಗಳು ಎಷ್ಟು, ಎಷ್ಟು ಜೀರೊ ಎಫ್‌ಐಆರ್‌ಗಳನ್ನು ಆಯಾ ಘಟನೆ ನಡೆದ ಪ್ರದೇಶದಲ್ಲಿರುವ ಠಾಣೆಗಳಿಗೆ ವರ್ಗಾಯಿಸಲಾಗಿದೆ, ಬಂಧಿತರ ಸಂಖ್ಯೆ ಎಷ್ಟು, ಎಷ್ಟು ಮಂದಿ ಬಂಧಿತರಿಗೆ ಕಾನೂನು ನೆರವು ಕಲ್ಪಿಸಲಾಗಿದೆ ಹಾಗೂ 164ರ ಅಡಿ ಎಷ್ಟು ಹೇಳಿಕೆಗಳನ್ನು ದಾಖಲಿಸಲಾಗಿದೆ ಎಂಬ ಬಗ್ಗೆ ಮಂಗಳವಾರ ಮಾಹಿತಿ ನೀಡಬೇಕು' ಎಂದು ಪೀಠವು ಸೂಚಿಸಿತು.

ಸಿಬಿಐ ತನಿಖೆಗೆ ಸಂತ್ರಸ್ತೆಯರ ಆಕ್ಷೇಪ

ಈಗಾಗಲೇ, ಕೇಂದ್ರ ಸರ್ಕಾರವು ಬೆತ್ತಲೆ ಮೆರವಣಿಗೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿದೆ. ಅಲ್ಲದೇ, ನೆರೆಯ ಅಸ್ಸಾಂ ರಾಜ್ಯಕ್ಕೆ ಪ್ರಕರಣದ ವಿಚಾರಣೆಯನ್ನು ವರ್ಗಾಯಿಸಲು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಸಿಬಿಐ ತನಿಖೆಗೆ ಸಂತ್ರಸ್ತ ಮಹಿಳೆಯರು ಆಕ್ಷೇಪ ವ್ಯಕ್ತಪಡಿಸಿದ್ದು, ಪಾರದರ್ಶಕ ಹಾಗೂ ನಿಷ್ಪಕ್ಷಪಾತ ತನಿಖೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಮಧ್ಯ ಪ್ರವೇಶಕ್ಕೆ ಅರ್ಜಿಯಲ್ಲಿ ಕೋರಿದ್ದಾರೆ.

ಎಲ್ಲಿಯೂ ನಮ್ಮ ಗುರುತು ಪತ್ತೆಯಾಗದಂತೆ ರಕ್ಷಿಸಬೇಕು. ನ್ಯಾಯಾಲಯದ ದಾಖಲೆಗಳಲ್ಲಿಯೂ ಹೆಸರು ನಮೂದಿಸಬಾರದು. 'ಎಕ್ಸ್' ಮತ್ತು 'ವೈ' ಎಂದು ಬರೆಯಬೇಕು. ಐಜಿಪಿ ದರ್ಜೆಯ ಪೊಲೀಸ್ ಅಧಿಕಾರಿ ನೇತೃತ್ವದ ಸ್ವತಂತ್ರ ವಿಶೇಷ ತನಿಖಾ ತಂಡದ ಮೂಲಕ ತನಿಖೆ ನಡೆಸಬೇಕು. ಪ್ರಕರಣದ ವಿಚಾರಣೆಯನ್ನು ಬೇರೆ ರಾಜ್ಯಕ್ಕೆ ವರ್ಗಾಯಿಸಬೇಕು ಎಂದು ಕೋರಿದ್ದಾರೆ.

ಮಣಿಪುರ ಪೊಲೀಸರ ತನಿಖೆಯ ಮೇಲೆ ನಮಗೆ ವಿಶ್ವಾಸವಿಲ್ಲ. ಭದ್ರತೆ ದೃಷ್ಟಿಯಿಂದ ಹತ್ತಿರದ ನ್ಯಾಯಾಲಯಗಳಲ್ಲಿ ಹೇಳಿಕೆ ದಾಖಲಿಸಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದ್ದಾರೆ.

'ಸಂತ್ರಸ್ತೆಯರು ಮಾನಸಿಕ ಆಘಾತಕ್ಕೆ ಒಳಗಾಗಿದ್ದು, ಭಯಭೀತರಾಗಿದ್ದಾರೆ. ಸಿಬಿಐ ಮುಂದೆ ಸತ್ಯ ಹೇಳುತ್ತಾರೆ ಎಂಬ ವಿಶ್ವಾಸವಿಲ್ಲ. ಹಾಗಾಗಿ, ಮಹಿಳೆಯರನ್ನು ಒಳಗೊಂಡ ಉನ್ನತಮಟ್ಟದ ಸಮಿತಿಯಿಂದ ತನಿಖೆ ನಡೆಸಬೇಕು. ಆಗಷ್ಟೇ ಅವರು ಸತ್ಯ ಹಂಚಿಕೊಳ್ಳಲು ಸಾಧ್ಯ' ಎಂದು ಹಿರಿಯ ವಕೀಲರಾದ ಇಂದಿರಾ ಜೈಸಿಂಗ್ ಒತ್ತಾಯಿಸಿದ್ದಾರೆ.

> ಈಗಾಗಲೇ ಸಮಯ ಮೀರಿ ಹೋಗಿದೆ. ಸಮಸ್ಯೆ ಪರಿಹರಿಸಲು ಕೇಂದ್ರವು ಮತ್ತಷ್ಟು ಸಮಯಾವಕಾಶ ಕೇಳುವುದರಲ್ಲಿ ಅರ್ಥ ಇದೆಯೇ?
> **ಡಿ.ವೈ. ಚಂದ್ರಚೂಡ್**
> ಸಿಜೆಐ, ಸುಪ್ರೀಂ ಕೋರ್ಟ್

> ಪೊಲೀಸರು ಮತ್ತು ದುಷ್ಕರ್ಮಿಗಳು ಒಟ್ಟಾಗಿ ಸೇರಿಯೇ ಈ ದುಷ್ಕೃತ್ಯ ಎಸಗಿದ್ದಾರೆ. ರಕ್ಷಣೆ ಕೇಳಿದ ಮಹಿಳೆಯರನ್ನು ಪೊಲೀಸರೇ ಗುಂಪಿಗೆ ಒಪ್ಪಿಸಿರುವುದು ಇದಕ್ಕೆ ಸಾಕ್ಷಿ
> **ಕಪಿಲ್ ಸಿಬಲ್**
> ಸಂತ್ರಸ್ತೆಯರ ಪರ ವಕೀಲ

ಸದನಗಳಲ್ಲಿ ಮತ್ತೆ ಪ್ರತಿಧ್ವನಿ

ನವದೆಹಲಿ: ಮಣಿಪುರ ಹಿಂಸಾಚಾರವು ಸಂಸತ್‌ನ ಉಭಯ ಸದನಗಳಲ್ಲಿ ಸೋಮವಾರವೂ ಪ್ರತಿಧ್ವನಿಸಿತು. ವಿರೋಧ ಪಕ್ಷಗಳು ಮತ್ತು ಬಿಜೆಪಿ ನಡುವಿನ ಗದ್ದಲ ನಿಯಂತ್ರಣಕ್ಕೆ ಬಾರದಿದ್ದರಿಂದ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು. ಶೀಘ್ರವೇ, ಹಿಂಸಾಚಾರದ ಬಗ್ಗೆ ಸುದೀರ್ಘ ಚರ್ಚೆ ಆರಂಭಿಸಬೇಕು ಎಂದು 'ಇಂಡಿಯಾ' ಸದಸ್ಯರು ಆಗ್ರಹಿಸಿದರು.

ಹರಿಯಾಣದ ನೂಹ್ ಪಟ್ಟಣದಲ್ಲಿ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆ ವೇಳೆ ಉದ್ರಿಕ್ತ ಗುಂಪಿನಿಂದ ಬೆಂಕಿಗಾಹುತಿಯಾದ ದ್ವಿಚಕ್ರ ವಾಹನ –ಪಿಟಿಐ ಚಿತ್ರ

ವಿಎಚ್‌ಪಿ ಮೆರವಣಿಗೆಯಲ್ಲಿ ಗುಂಪು ಘರ್ಷಣೆ, ಇಬ್ಬರ ಸಾವು

ಗುರುಗ್ರಾಮ/ಚಂಡೀಗಢ (ಪಿಟಿಐ): ಹರಿಯಾಣದ ನೂಹ್ ಪಟ್ಟಣದಲ್ಲಿ ಸೋಮವಾರ ವಿಶ್ವ ಹಿಂದೂ ಪರಿಷತ್ ಆಯೋಜಿಸಿದ್ದ ಮೆರವಣಿಗೆ ವೇಳೆ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಉದ್ರಿಕ್ತರು ಕಲ್ಲು ತೂರಾಟ ನಡೆಸಿ, ಕಾರುಗಳಿಗೆ ಬೆಂಕಿಯನ್ನೂ ಹಚ್ಚಿದ್ದಾರೆ.

ಘಟನೆಯಲ್ಲಿ ಗೃಹರಕ್ಷಕ ದಳದ ಇಬ್ಬರು ಸಿಬ್ಬಂದಿ ಮೃತಪಟ್ಟಿದ್ದಾರೆ. 20 ಮಂದಿ ಗಾಯಗೊಂಡಿದ್ದಾರೆ. ಪೊಲೀಸ್ ವಾಹನಗಳಿಗೂ ಹಾನಿಯಾಗಿದೆ. ಡಿಎಸ್‌ಪಿ ಸೇರಿದಂತೆ ಹಲವು ಪೊಲೀಸರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಜನರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸಿದ್ದಾರೆ ಮತ್ತು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಪುರುಷರು, ಮಹಿಳೆಯರು ಮತ್ತು ಮಕ್ಕಳು ಗುರುಗ್ರಾಮ ಬಳಿಯ ದೇವಾಲಯದಲ್ಲಿ ಆಶ್ರಯ ಪಡೆದಿದ್ದಾರೆ.

ಉದ್ವಿಗ್ನ ವಾತಾವರಣ ಶಮನ ಮಾಡಲು ಮೊಬೈಲ್ ಇಂಟರ್‌ನೆಟ್ ಸೇವೆಗಳನ್ನು ಬುಧವಾರದವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ಹರಿಯಾಣ ಸರ್ಕಾರ ತಿಳಿಸಿದೆ. ಪೊಲೀಸರ ಪ್ರಕಾರ, ವಿಶ್ವ ಹಿಂದೂ ಪರಿಷತ್‌ನ 'ಬ್ರಿಜ್ ಮಂಡಲ್ ಜಲಾಭಿಷೇಕ್ ಯಾತ್ರೆ'ಯನ್ನು ನೂಹ್‌ನ ಖೇಡ್ಲಾ ಮೋಡ್ ಬಳಿ ಯುವಕರ ಗುಂಪು ತಡೆದು, ಕಲ್ಲು ತೂರಾಟ ನಡೆಸಿತು. ನಾಲ್ಕು ಕಾರುಗಳಿಗೆ ಬೆಂಕಿ ಹಚ್ಚಲಾಯಿತು. ಯಾತ್ರೆ ತಡೆದ ಯುವಕರ ಗುಂಪಿನ ಮೇಲೆ ಜನರು ಪ್ರತಿಯಾಗಿ ಕಲ್ಲುಗಳನ್ನು ತೂರಿದರು.

ಇದಕ್ಕೂ ಮುನ್ನ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಗಾರ್ಗಿ ಕಕ್ಕರ್ ಗುರುಗ್ರಾಮದ ಸಿವಿಲ್ ಲೈನ್ಸ್‌ನಿಂದ ಯಾತ್ರೆಗೆ ಚಾಲನೆ ನೀಡಿದ್ದರು. ಮೆರವಣಿಗೆಯೊಂದಿಗೆ ಪೊಲೀಸ್ ತುಕಡಿಯನ್ನೂ ನಿಯೋಜಿಸಲಾಗಿತ್ತು.

ಕೆಲವರ ಹೇಳಿಕೆ ಪ್ರಕಾರ, ಬಜರಂಗ ದಳದ ಕಾರ್ಯಕರ್ತರೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ಆಕ್ಷೇಪಾರ್ಹ ವಿಡಿಯೊ ಘರ್ಷಣೆಗೆ ಪ್ರಚೋದನೆ ನೀಡಿದೆ. ರಾಜಸ್ಥಾನದಲ್ಲಿ ಇಬ್ಬರು ಮುಸ್ಲಿಮರ ಹತ್ಯೆ ಪ್ರಕರಣದಲ್ಲಿ ಬೇಕಾಗಿದ್ದ ಗೋರಕ್ಷಕ ಮೋನು ಮನೇಸರ್ ಸಹ ಮೆರವಣಿಗೆಯಲ್ಲಿ ಭಾಗವಹಿಸಬೇಕಿತ್ತು ಎನ್ನಲಾಗಿದೆ.

'ನೆರೆಯ ಜಿಲ್ಲೆಗಳಿಂದ ಹೆಚ್ಚುವರಿ ಪಡೆಗಳನ್ನು ಕಳುಹಿಸಲಾಗಿದೆ. ಪರಿಸ್ಥಿತಿ ನಿಯಂತ್ರಣಕ್ಕೆ ತರುವುದು ಮೊದಲ ಆದ್ಯತೆಯಾಗಿದೆ. ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದೇನೆ' ಎಂದು ಗೃಹ ಸಚಿವ ಅನಿಲ್ ವಿಜ್ ಸುದ್ದಿಸಂಸ್ಥೆಗೆ ತಿಳಿಸಿದರು.

ತಿಂಡಿ–ತಿನಿಸುಗಳ ಪರಿಷ್ಕೃತ ದರ ಇಂದಿನಿಂದ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್‌ಗಳ ತಿಂಡಿ–ತಿನಿಸುಗಳ ಶೇ 10ರಷ್ಟು ಪರಿಷ್ಕೃತ ದರ ಇಂದಿನಿಂದಲೇ ಜಾರಿಯಾಗಲಿದೆ.'ವಿದ್ಯುತ್, ದಿನಬಳಕೆ ವಸ್ತುಗಳ ಬೆಲೆ ಹೆಚ್ಚಳವಾಗಿವೆ. ಹೀಗಾಗಿ, ಆ. 1ರಿಂದ ಕಾಫಿ ಮತ್ತು ಚಹಾ ಬೆಲೆಯಲ್ಲಿ ₹2ರಿಂದ ₹3 ಹೆಚ್ಚಳವಾಗಲಿದೆ. ತಿಂಡಿ ದರದಲ್ಲಿ ₹5 ಹಾಗೂ ಊಟಕ್ಕೆ ₹10 ಹೆಚ್ಚಳವಾಗಲಿದೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ತಿಳಿಸಿದೆ.

ಕೆ.ಜಿ ಶುಂಠಿ ₹260, ಬೆಳ್ಳುಳ್ಳಿ ₹240!

ಬೆಂಗಳೂರು: ಸತತವಾಗಿ ಸುರಿದ ಮಳೆಯಿಂದ ಇಳುವರಿ ಕುಂಠಿತವಾಗಿ ತರಕಾರಿ ಮತ್ತು ಸೊಪ್ಪಿನ ದರಗಳಲ್ಲಿ ಏರಿಳಿತವಾಗಿದೆ. ಪ್ರತಿ ಕೆ.ಜಿ. ಶುಂಠಿ ₹ 260, ಗುಣಮಟ್ಟದ ಬೆಳ್ಳುಳ್ಳಿ ₹ 240, ಟೊಮೆಟೊ ₹ 120–150ರಂತೆ ಮಾರಾಟವಾಗುತ್ತಿವೆ. 3

ಎಕ್ಸ್‌ಪ್ರೆಸ್ ವೇ ಇಂದಿನಿಂದ ದ್ವಿಚಕ್ರ ವಾಹನ ನಿಷೇಧ

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ (ರಾಷ್ಟ್ರೀಯ ಹೆದ್ದಾರಿ– 275) ದ್ವಿಚಕ್ರ ವಾಹನ, ಆಟೊ, ಕೃಷಿ ವಾಹನಗಳು ಸೇರಿದಂತೆ ವಿವಿಧ ಬಗೆ ವಾಹನಗಳ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೇರಿರುವ ನಿಷೇಧ ಸೋಮವಾರದಿಂದ ಜಾರಿಗೆ ಬರಲಿದೆ. 3B

ಹಣ ಬಳಕೆಗೆ ಒಪ್ಪಿಕೊಂಡ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ

'ಗ್ಯಾರಂಟಿ'ಗೆ ಪರಿಶಿಷ್ಟರ ₹11,000 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗಾಗಿ ಇರುವ ವಿಶೇಷ ಅನುದಾನದಲ್ಲಿ (ಎಸ್‌ಸಿಎಸ್‌ಪಿ–ಟಿಎಸ್‌ಪಿ) ₹11 ಸಾವಿರ ಕೋಟಿಯನ್ನು ಐದು 'ಗ್ಯಾರಂಟಿ'ಗಳ ಜಾರಿಗಾಗಿ ಬಳಕೆ ಮಾಡಲಾಗುತ್ತಿದೆ ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ನಡೆದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ವೇಳೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಒಲ್ಲದ ಮನಸ್ಸಿನಿಂದಲೇ ಹಣ ಬಳಕೆ ಮಾಡಲು ಸಮ್ಮತಿ ಸೂಚಿಸಲಾಗಿದೆ ಎಂದು ಒಪ್ಪಿಕೊಂಡರು.

ಎಸ್‌ಸಿಎಸ್‌ಪಿಯಿಂದ ₹7,570 ಕೋಟಿ ಮತ್ತು ಟಿಎಸ್‌ಪಿಯಿಂದ ₹3,430 ಕೋಟಿಯನ್ನು ಬಳಕೆ ಮಾಡಲಾಗುವುದು. ಗ್ಯಾರಂಟಿ ಯೋಜನೆಗಳಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗಾಗಿ ಮಾತ್ರವೇ ಈ ಹಣವನ್ನು ಬಳಸಲಾಗುವುದು. ಬೇರೆಯವರಿಗೆ ಬಳಸುವ ಪ್ರಶ್ನೆಯೇ ಇಲ್ಲ ಎಂದು ಅವರು ಸಮಜಾಯಿಷಿ ನೀಡಿದರು.

'ಒಟ್ಟು ಎಷ್ಟು ಅನುದಾನ ಬೇಕಾಗಬಹುದು ಎಂದು ಈಗಲೇ ಹೇಳಲು ಆಗುವುದಿಲ್ಲ. ಕೆಲವು ಗ್ಯಾರಂಟಿಗಳಿಗೆ ಹೆಚ್ಚು ಹಣ ಬೇಕಾಗಬಹುದು. ಇನ್ನು ಕೆಲವು ಗ್ಯಾರಂಟಿಗಳಿಗೆ ಕಡಿಮೆ ಬೇಕಾಗಬಹುದು. ಉದಾಹರಣೆಗೆ 'ಶಕ್ತಿ' ಯೋಜನೆಯಡಿ ಒಬ್ಬ ಮಹಿಳೆ ಒಂದು ಬಾರಿ ಪ್ರಯಾಣ ಮಾಡಬಹುದು. ಬೇರೊಬ್ಬ ಮಹಿಳೆ 30 ಬಾರಿ ಪ್ರಯಾಣ ಮಾಡಬಹುದು. 30 ಬಾರಿ ಪ್ರಯಾಣ ಮಾಡಿದರೆ, ಅಷ್ಟಕ್ಕೂ ಹಣ ನೀಡ-ಬೇಕಾಗುತ್ತದೆ' ಎಂದು ಮಹದೇವಪ್ಪ ಹೇಳಿದರು.

23–24 ಸಾಲಿನ ಅನುದಾನ (ಕೋಟಿಗಳಲ್ಲಿ)

₹34,294 ಒಟ್ಟು ಅನುದಾನ

₹24,333 ಪರಿಶಿಷ್ಟ ಸಮುದಾಯದವರಿಗೆ

₹9,961 ಪರಿಶಿಷ್ಟ ಪಂಗಡದವರಿಗೆ

ಇಲಾಖಾವಾರು ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಂಚಿಕೆ (ಕೋಟಿಗಳಲ್ಲಿ)	
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	5,790.67
ಇಂಧನ ಇಲಾಖೆ	5,400.98
ಕಂದಾಯ ಇಲಾಖೆ	4,041.78
ಪರಿಶಿಷ್ಟ ಜಾತಿ ಕಲ್ಯಾಣ	3,787.29
ಪರಿಶಿಷ್ಟ ಪಂಗಡ ಕಲ್ಯಾಣ	1387.35
ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ	2,779.97
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	2,349.85
ವಸತಿ ಇಲಾಖೆ	1,431.5
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ	1,296.96
ಆರೋಗ್ಯ ಇಲಾಖೆ	1,122.25

5ನೇ ಪುಟ ನೋಡಿ

ಹಾಲಿನ ದರ ಹೆಚ್ಚಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದ (ಕೆಎಂಎಫ್) ನಂದಿನಿ ಹಾಲು ಮತ್ತು ಮೊಸರಿನ ಪರಿಷ್ಕೃತ ದರಗಳು ಆಗಸ್ಟ್ 1ರಿಂದ ಜಾರಿಯಾಗಲಿವೆ.

ನಂದಿನಿಯ ಎಲ್ಲ ಮಾದರಿಗಳ ಹಾಲು ಮತ್ತು ಮೊಸರು ಮಾರಾಟ ದರವನ್ನು ಪ್ರತಿ ಲೀಟರ್ ಅಥವಾ ಕೆ.ಜಿಗೆ ₹3ರಂತೆ ಹೆಚ್ಚಿಸಿ ಪರಿಷ್ಕರಿಸಲಾಗಿದೆ.

ನಂದಿನ ಹಾಲಿನ ಮಾರಾಟ ದರ ಹೆಚ್ಚಳದ ಮೊತ್ತವನ್ನು ರೈತರಿಗೆ ವರ್ಗಾ-ಯಿಸಲಾಗುವುದು. ₹3 ಹೆಚ್ಚಿಸಿದ ನಂತರವೂ ದೇಶದ ಇತರೆ ಪ್ರಮುಖ ರಾಜ್ಯಗಳಲ್ಲಿನ ಹಾಲಿನ ಬ್ರ್ಯಾಂಡ್‌ಗಳ ಮಾರಾಟ ದರಕ್ಕೆ ಹೋಲಿಸಿದಾಗ ನಂದಿನಿ ಟೋನ್ಡ್ ಹಾಲಿನ ಮಾರಾಟ ದರವೇ ಕಡಿಮೆ ಇದೆ ಎಂದು ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ತಿಳಿಸಿದ್ದಾರೆ.

ಪರಿಷ್ಕರಿಸಿದ ದರಗಳ ವಿವರಗಳು

ಹಾಲು ಮತ್ತು ಮೊಸರಿನ ಮಾದರಿಗಳು	ಪ್ರಸ್ತುತ ದರ (₹/ಲೀ/ಕೆ.ಜಿ.ಗೆ)	ಪರಿಷ್ಕೃತ ದರಗಳು
ಟೋನ್ಡ್ ಹಾಲು (ನೀಲಿ ಪೊಟ್ಟಣ)	39	42
ಹೋಮೋಜಿನೈಸ್ಡ್ ಟೋನ್ಡ್ ಹಾಲು	40	43
ಹಸುವಿನ ಹಾಲು (ಹಸಿರು ಪೊಟ್ಟಣ)	43	46
ಶುಭಂ (ಕೇಸರಿ ಪೊಟ್ಟಣ)/ವಿಶೇಷ ಹಾಲು	45	48
ಮೊಸರು (ಪ್ರತಿ ಕೆಜಿಗೆ)	47	50
ಮಜ್ಜಿಗೆ (ಪ್ರತಿ 200 ಮಿಲೀಗೆ)	8	9

ನಂದಿನಿ ಹಾಲು	ಕೇರಳ	ದೆಹಲಿ	ಗುಜರಾತ್	ಮಹಾರಾಷ್ಟ್ರ	ಆಂಧ್ರಪ್ರದೇಶ (ಲೀಟರ್‌ಗೆ)
42	50	54	54	54	56

5ನೇ ಪುಟ ನೋಡಿ

ದೋಣಿ ದುರಂತ ಬೈಂದೂರು ತಾಲ್ಲೂಕಿನ ಕರ್ಕಿಕಳಿ ಎಂಬಲ್ಲಿ ಸೋಮವಾರ ಸಂಜೆ ದೋಣಿ ದುರಂತ ಸಂಭವಿಸಿ ಒಬ್ಬರು ಮೃತಪಟ್ಟಿದ್ದು, ದುರಂತ ಸ್ಥಳದಲ್ಲಿ ಆತಂಕದಿಂದ ನೆರೆದಿದ್ದ ಜನ

ಚಲಿಸುತ್ತಿದ್ದ ರೈಲಿನಲ್ಲಿ ನಾಲ್ವರನ್ನು ಗುಂಡಿಟ್ಟು ಕೊಂದ ಕಾನ್‌ಸ್ಟೆಬಲ್

ಮುಂಬೈ (ಪಿಟಿಐ): ರೈಲ್ವೆ ಸುರಕ್ಷತಾ ಪಡೆಯ (ಆರ್‌ಪಿಎಫ್) ಕಾನ್‌ಸ್ಟೆಬಲ್ ಒಬ್ಬ ಚಲಿಸುತ್ತಿದ್ದ ರೈಲಿನಲ್ಲಿಯೇ ಗುಂಡಿಟ್ಟು ನಾಲ್ವರನ್ನು ಹತ್ಯೆ ಮಾಡಿದ ಘಟನೆ ಮಹಾರಾಷ್ಟ್ರದ ಪಾಲ್ಘರ್ ರೈಲು ನಿಲ್ದಾಣದ ಬಳಿ ಸೋಮವಾರ ನಡೆದಿದೆ.

ಚೇತನ್

ಜೈಪುರ–ಮುಂಬೈ ಸೆಂಟ್ರಲ್ ಎಕ್ಸ್‌ಪ್ರೆಸ್ ರೈಲಿನಲ್ಲಿ, ಕಾನ್‌ಸ್ಟೆಬಲ್ ಚೇತನ್ ಕುಮಾರ್ ಚೌಧರಿ ಎಂಬಾತ ತನ್ನ ಬಳಿಯಿದ್ದ ಸ್ವಯಂಚಾಲಿತ ಬಂದೂಕಿನಿಂದ ಗುಂಡು ಹಾರಿಸಿ ಆರ್‌ಪಿಎಫ್‌ನ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಟೀಕಾ ರಾಮ್ ಮೀನಾ ಅವರನ್ನಲ್ಲದೆ ಇತರ ಮೂವರು ಪ್ರಯಾಣಿಕರನ್ನು ಹತ್ಯೆ ಮಾಡಿದ್ದಾನೆ.

ಸೋಮವಾರ ಬೆಳಿಗ್ಗೆ 5 ಗಂಟೆಗೆ ಈ ಕೃತ್ಯ ನಡೆದಿದ್ದು, ಆರೋಪಿ ಕಾನ್‌ಸ್ಟೆಬಲ್‌ನ ಮಾನಸಿಕ ಸ್ಥಿತಿ ಸ್ಥಿರವಾಗಿರಲಿಲ್ಲ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಚೇತನ್, ಮೊದಲಿಗೆ ಟೀಕಾ ರಾಮ್ ಮೀನಾ ಅವರನ್ನು ಹತ್ಯೆ ಮಾಡಿದ್ದು, ಬಳಿಕ ಇನ್ನೊಂದು ಬೋಗಿಗೆ ತೆರಳಿ ಮೂವರು ಪ್ರಯಾಣಿಕರನ್ನು ಹತ್ಯೆ ಮಾಡಿದ್ದಾನೆ. ಮೀರಾ ರೋಡ್ ಮತ್ತು ದಹಿಸರ್ ನಡುವೆ ರೈಲಿನ ಚೈನ್ ಎಳೆಯಲಾಗಿದ್ದು, ಈ ವೇಳೆ ಆರೋಪಿ ಪರಾರಿಯಾಗಲು ಯತ್ನಿಸಿದ್ದ. ರೈಲ್ವೆ ಪೊಲೀಸರು ಆತನನ್ನು ಬಂಧಿಸಿ, ಬಂದೂಕನ್ನು ವಶಕ್ಕೆ ಪಡೆದಿದ್ದಾರೆ.

ಉತ್ತರ ಪ್ರದೇಶದ ಹತ್ರಾಸ್ ನಿವಾಸಿಯಾಗಿರುವ ಚೇತನ್ ಸೇರಿದಂತೆ ಆರ್‌ಪಿಎಫ್‌ನ ನಾಲ್ವರು ಸಿಬ್ಬಂದಿಯನ್ನು ರೈಲಿನ ಭದ್ರತೆಗಾಗಿ ಗುಜರಾತ್‌ನ ಸೂರತ್ ನಿಲ್ದಾಣದಿಂದ ಸೋಮವಾರ ನಿಯೋಜಿಸಲಾಗಿತ್ತು.

ಆರೋಪಿ ಕಾನ್‌ಸ್ಟೆಬಲ್ ಪರೇಲ್‌ನ ಆರ್‌ಪಿಎಫ್ ಠಾಣೆಯಲ್ಲಿ ಮತ್ತು ಮೃತ ಎಎಸ್‌ಐ ದಾದರ್‌ನ ಆರ್‌ಪಿಎಫ್ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು.

ಎಎಸ್‌ಐ ಟೀಕಾ ರಾಮ್ ಅವರ ಕುಟುಂಬಕ್ಕೆ ₹25 ಲಕ್ಷ ಪರಿಹಾರ ಘೋಷಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಆಡಳಿತ ಸುಧಾರಣೆ, ಉನ್ನತ ಶಿಕ್ಷಣ ಇಲಾಖೆ ನಡುವೆ ಆದೇಶಗಳ ಪೈಪೋಟಿ

ವಿ.ವಿ ಕುಲಸಚಿವ ಹುದ್ದೆ: 'ಮ್ಯೂಸಿಕಲ್ ಚೇರ್'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳ ಕುಲಸಚಿವ (ಆಡಳಿತ) ಹುದ್ದೆಗಳು ಕೆಎಎಸ್ ಅಧಿಕಾರಿಗಳು ಹಾಗೂ ಪ್ರೊಫೆಸರ್‌ಗಳ ಮಧ್ಯದ 'ಮ್ಯೂಸಿಕಲ್ ಚೇರ್'ಗಳಂತಾಗಿವೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕೆಲ ವಿಶ್ವವಿದ್ಯಾಲಯಗಳಿಗೆ ಕೆಎಎಸ್ ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ವರ್ಗಾಯಿಸಿದರೆ, ಮತ್ತೊಂದು ಕಡೆ ಉನ್ನತ ಶಿಕ್ಷಣ ಇಲಾಖೆ ವಿಶ್ವವಿದ್ಯಾಲಯಗಳಲ್ಲಿ ಸೇವಾ ಹಿರಿತನ ಹೊಂದಿರುವ ಪ್ರಾಧ್ಯಾಪಕರನ್ನು (ಪ್ರೊಫೆಸರ್) ನೇಮಿಸುತ್ತಿದೆ. ಎರಡೂ ಇಲಾಖೆಗಳು ಕುಲಸಚಿವ ಸ್ಥಾನಗಳ ಭರ್ತಿಗೆ ಪೈಪೋಟಿಗೆ ಬಿದ್ದವರಂತೆ ಆದೇಶ ಹೊರಡಿಸುತ್ತಿವೆ.

ಕಳೆದ ವರ್ಷ ಹೊಸದಾಗಿ ಆರಂಭವಾಗಿದ್ದ ಎಂಟು ವಿಶ್ವವಿದ್ಯಾಲಯಗಳಿಗೆ ಹಿಂದಿನ ಬಿಜೆಪಿ ಸರ್ಕಾರ ಕೆಎಎಸ್‌ಯೇತರ ಅಧಿಕಾರಿಗಳನ್ನು ನೇಮಿಸಿತ್ತು. ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರೇ ಆ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇದೇ ಜುಲೈನಲ್ಲಿ ನಡೆದ ಅಧಿಕಾರಿಗಳ ವರ್ಗಾವಣೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಒಂದೇ ದಿನ ಬೆಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ನೃಪತುಂಗ, ರಾಯಚೂರು, ಕೃಷ್ಣದೇವರಾಯ ಸೇರಿದಂತೆ 10 ವಿಶ್ವವಿದ್ಯಾಲಯಗಳಿಗೆ ಕೆಎಎಸ್ ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸಿತ್ತು. ಅತ್ತ ಕುವೆಂಪು ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡಿದ್ದ ಎಂ.ಪಿ.ಮಾರುತಿ ಆದೇಶ ಬದಲಾವಣೆ ಮಾಡಿಸಿಕೊಂಡು ಹಂಪಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೋಗುತ್ತಿದ್ದಂತೆ, ಉನ್ನತ ಶಿಕ್ಷಣ ಇಲಾಖೆ ಪ್ರತ್ಯೇಕ ಆದೇಶ ಹೊರಡಿಸಿ ಪ್ರೊ.ಕಣ್ಣನ್ ಅವರನ್ನು ಕುಲಸಚಿವ ಹುದ್ದೆಗೆ ನೇಮಿಸಿತ್ತು.

2000ದ ಇಸವಿವರೆಗೂ ರಾಜ್ಯದ ವಿಶ್ವವಿ-ದ್ಯಾಲಯಗಳ ಕುಲಸಚಿವ ಹುದ್ದೆಗಳಿಗೆ ಅನುಭವಿ ಪ್ರಾಧ್ಯಾಪಕರನ್ನು ನೇಮಕ ಮಾಡಲಾಗುತ್ತಿತ್ತು.

5ನೇ ಪುಟ ನೋಡಿ

ಸೋನಿಯಾ ಗಾಂಧಿ ಅವರಿಗೆ ಉನ್ನತ ಹುದ್ದೆ ತಪ್ಪಿದ ಸಭೆಯ ಮೆಲುಕು

ಅಮ್ಮಾ ಪ್ರಧಾನಿಯಾಗಬೇಡ ಎಂದಿದ್ದ ರಾಹುಲ್!

ಪ್ರಜಾವಾಣಿ ವಾರ್ತೆ

ನವದೆಹಲಿ: 'ನೀವು ಪ್ರಧಾನಿಯಾಗಲು ನಾನು ಬಿಡುವುದಿಲ್ಲ. ನನ್ನ ತಂದೆಯವರ ಹತ್ಯೆಯಾಯಿತು, 'ದಾದಿ'ಯನ್ನೂ (ಇಂದಿರಾ ಗಾಂಧಿ) ಕೊಲೆ ಮಾಡಿದರು. ಇನ್ನು ಆರು ತಿಂಗಳಲ್ಲಿ ನಿಮ್ಮನ್ನೂ ಸಾಯಿಸುತ್ತಾರೆ'

–ಅಂದು 2004ರ ಮೇ 17. ಸೋನಿಯಾ ಗಾಂಧಿ ಅವರು ಮನಮೋಹನ ಸಿಂಗ್ ಮತ್ತಿತರರೊಂದಿಗೆ ತಮ್ಮ ನಿವಾಸದಲ್ಲಿ ಬಹುಮುಖ್ಯ ಸಭೆಯನ್ನು ನಡೆಸುತ್ತಿದ್ದರು. ದಾಪುಗಾಲಿಡುತ್ತ ಬಂದ ರಾಹುಲ್ ಗಾಂಧಿ ಎಲ್ಲರೆದುರೇ ಕೋಪ, ಪ್ರೀತಿ, ಆತಂಕ ಬೆರೆತ ಧ್ವನಿಯಲ್ಲಿ ಎಚ್ಚರಿಕೆ ನೀಡಿದ ಪರಿ ಇದಾಗಿತ್ತು.

ಇದಾದ ಕೆಲವೇ ಗಂಟೆಗಳಲ್ಲಿ ಪ್ರಧಾನಿ ಹುದ್ದೆ ತ್ಯಜಿಸುವ ನಿರ್ಧಾರವನ್ನು ಸೋನಿಯಾ ಪ್ರಕಟಿಸಿದರು.

ಹಿರಿಯ ಪತ್ರಕರ್ತೆ ನೀರಜಾ ಚೌಧರಿ ಅವರು ಬರೆದಿರುವ 'ಹೌ ಪ್ರೈಮ್ ಮಿನಿಸ್ಟರ್ ಡಿಸೈಡ್' ಕೃತಿಯಲ್ಲಿ ಅಂದಿನ ಘಟನೆಯನ್ನು ಎಳೆ ಎಳೆಯಾಗಿ ವಿವರಿಸಿದ್ದಾರೆ.

ಅಂದು ಸೋನಿಯಾಗಾಂಧಿ ಅವರು ಪ್ರಿಯಾಂಕಾ ಗಾಂಧಿ, ಮನಮೋಹನ್ ಸಿಂಗ್, ನಟವರ್ ಸಿಂಗ್ ಅವರೊಡನೆ ಸಭೆ ನಡೆಸುತ್ತಿದ್ದರು. ಇದ್ದಕ್ಕಿದ್ದಂತೆ ಆ ಕೋಣೆಗೆ ನುಗ್ಗಿದ ರಾಹುಲ್, ಪ್ರಧಾನಿ ಹುದ್ದೆಯಿಂದ ಹಿಂದೆ ಸರಿಯದಿದ್ದಲ್ಲಿ ತಾವು ಎಂಥದ್ದೇ ಅತಿರೇಕದ ನಿರ್ಧಾರ ಕೈಗೊಳ್ಳಲೂ ಸಿದ್ಧ ಎಂದು ಬೆದರಿಕೆಯ ಧ್ವನಿಯಲ್ಲಿಯೇ ಮಾತನಾಡಿದ್ದರು ಎಂದು ಅಂದಿನ ಪ್ರಸಂಗವನ್ನು ನೆನಪಿಸಿಕೊಂಡಿದ್ದಾರೆ.

ಸಭೆಗೆ ಸಿಂಗ್ ಬಂದಿದ್ದೂ ಅಚ್ಚರಿ: ಆ ಮಹತ್ವದ ಸಭೆಯಲ್ಲಿ ಕುಟುಂಬಸ್ಥರು ಮತ್ತು ಸುಮನ್ ದುಬೆ ಹೊರತಾಗಿ ಮನಮೋಹನ್ ಸಿಂಗ್ ಭಾಗಿಯಾಗಿದ್ದು ಗಮನಾರ್ಹವಾಗಿತ್ತು. ಸಿಂಗ್ ಅವರನ್ನು ಅರಸುತ್ತಾ ನಟವರ್ ಸಿಂಗ್ ಅಚಾನಕ್ ಆಗಿ ಅಲ್ಲಿಗೆ ಬಂದಿದ್ದರು. ಸಭೆಯಲ್ಲಿ ಭಾಗಿಯಾದವರಿಗೆ ತಮ್ಮ ನಿರ್ಧಾರವನ್ನು ಸೋನಿಯಾ ತಿಳಿಸಬೇಕಿತ್ತು. ಪ್ರಧಾನಿ ಮಾಡಲೆಂದೇ ಮನಮೋಹನ್ ಸಿಂಗ್ ಅವರನ್ನು ಸಭೆಗೆ ಆಹ್ವಾನಿಸಿದಂತಿತ್ತು ಎಂದು ಪುಸ್ತಕದಲ್ಲಿ ಚೌಧರಿ ಆ ರಾತ್ರಿಯ ಸಭೆ ಕುರಿತು ವಿವರಿಸಿದ್ದಾರೆ.

'ಸೋನಿಯಾ ಗೊಂದಲದಲ್ಲಿ ಇದ್ದಂತೆ ಕಾಣುತ್ತಿತ್ತು. ರಾಹುಲ್ ಒಳಬಂದವರೇ ಉದ್ವಿಗ್ನ ಧ್ವನಿಯಲ್ಲಿ ಪ್ರಧಾನಿಯಾಗಬಾರದು ಎಂದು ಹೇಳಿದ್ದಲ್ಲದೆ, ನಿರ್ಧಾರ ಕೈಗೊಳ್ಳಲು 24 ಗಂಟೆ ಕಾಲಾವಕಾಶ ನೀಡಿದರು. ಸೋನಿಯಾ ಕಣ್ಣಲ್ಲಿ ನೀರು ತುಂಬಿತ್ತು. ಸಿಂಗ್ ಮೌನದ ಮೊರೆ ಹೋಗಿದ್ದರು. ಸಾಮಾನ್ಯವಾಗಿ ಸೋನಿಯಾ ಅವರ ವಿಷಯಗಳ ಬಗ್ಗೆ ರಾಹುಲ್ ನಿರ್ಧಾರ ಕೈಗೊಳ್ಳುತ್ತಾರೆ. ತಾಯಿಯಾಗಿ, ರಾಹುಲ್ ಮಾತನ್ನು ಮೀರುವುದು ಅವರಿಗೆ ಅಸಾಧ್ಯ' ಎಂದು ನಟವರ್ ತಿಳಿಸಿದ್ದರು ಎಂದು ಪುಸ್ತಕದಲ್ಲಿ ಹೇಳಿದ್ದಾರೆ.

ಬಳಿಕ, ಮಕ್ಕಳಿಂದಾಗಿ ಸೋನಿಯಾ ಪ್ರಧಾನಿ ಹುದ್ದೆಯಿಂದ ಹಿಂದೆ ಸರಿದಿದ್ದಾರೆ ಎಂದು ವಿ.ಪಿ.ಸಿಂಗ್ ಮತ್ತು ಸೋಮನಾಥ ಚಟರ್ಜಿ ಹೇಳಿದ್ದರು.

ಸೋನಿಯಾ, ಮೈತ್ರಿಕೂಟಕ್ಕೆ ತಮ್ಮ ನಿರ್ಧಾರ ತಿಳಿಸಿದಾಗ, ಆರ್‌ಜೆಡಿ ನಾಯಕ ಲಾಲು ಪ್ರಸಾದ್, 'ಮುಂಚೆ ಏಕೆ ಹೇಳಿರಲಿಲ್ಲ? ಈ ಬಗ್ಗೆ ಟಿ.ವಿ ವರದಿ ಮೂಲಕ ತಿಳಿದಿತ್ತು' ಎಂದು ಅಸಮಾಧಾನ ವ್ಯಕ್ತಪಡಿ-ಸಿದ್ದರು. ಮಾರ್ಕ್ಸ್‌ವಾದಿ ಹರ್‌ಕಿಶನ್ ಸಿಂಗ್ ಸುರ್ಜಿತ್ ಸೇರಿ ಅನೇಕರು ಸೋನಿಯಾ ಮನವೊಲಿಸಲು ಯತ್ನಿಸಿದ್ದರು. ಆದರೆ ಅವರೊಳಗಿನ 'ತಾಯ್ತನ' ರಾಜಕಾರಣಿಗಿಂತ ಪ್ರಬಲವಾಗಿತ್ತು ಎಂದು ಪುಸ್ತಕದಲ್ಲಿ ಚೌಧರಿ ವಿವರಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

नमो समाज
NAMO SAMAJ (R)
ನಮೋ ಸಮಾಜ್
ನಾವು ಮತ್ತು ನಮ್ಮ ಸಮಾಜ
ವತಿಯಿಂದ
ನಮ್ಮ ಪ್ರೀತಿಯ ಜನಾನುರಾಗಿ ಶಾಸಕರು ಹಾಗೂ ಸಚಿವರಾದ
ಶ್ರೀ ಬಿ.ಜೆಡ್. ಜಮೀರ್ ಅಹಮದ್ ಖಾನ್ ರವರಿಗೆ
ಜನ್ಮ ದಿನದ
ಹಾರ್ದಿಕ ಶುಭಾಶಯಗಳು
ಶುಭ ಕೋರುವವರು :
ADIABHINAVA
INFRA PVT. LTD.

ಸತತ ಮಳೆಯಿಂದ ಇಳುವರಿ ಕುಂಠಿತ • ₹150ರ ಗಡಿ ದಾಟಿದ ಟೊಮೆಟೊ

ಕೆ.ಜಿ ಶುಂಠಿ ₹260, ಬೆಳ್ಳುಳ್ಳಿ ₹240!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತತವಾಗಿ ಸುರಿದ ಮಳೆಯಿಂದ ಇಳುವರಿ ಕುಂಠಿತವಾಗಿ ತರಕಾರಿ ಮತ್ತು ಸೊಪ್ಪಿನ ದರಗಳಲ್ಲಿ ಏರಿಳಿತವಾಗಿದೆ. ಪ್ರತಿ ಕೆ.ಜಿ. ಶುಂಠಿ ₹ 260, ಗುಣಮಟ್ಟದ ಬೆಳ್ಳುಳ್ಳಿ ₹ 240, ಟೊಮೆಟೊ ₹ 120–150ರಂತೆ ಮಾರಾಟವಾಗುತ್ತಿವೆ.

ಕಳೆದ ವಾರ ಪ್ರತಿ ಕೆ.ಜಿಗೆ ₹20 ಕಡಿಮೆಯಾಗಿದ್ದ ಟೊಮೆಟೊ ದರ ಮತ್ತೆ ಏರಿಕೆಯಾಗಿದೆ. ಟೊಮೆಟೊ ಕೆ.ಜಿಗೆ ₹120ರಿಂದ ₹150ರವರೆಗೂ ದರವಿದೆ. ಗುಣಮಟ್ಟದ ಟೊಮೆಟೊಗೆ ಇನ್ನೂ ಹೆಚ್ಚಿನ ಬೆಲೆ ಇದೆ ಎನ್ನುತ್ತಾರೆ ವ್ಯಾಪಾರಿಗಳು.

ಕಳೆದ ವಾರ ಕೆ.ಜಿಗೆ ₹ 120ರಂತೆ ಮಾರಾಟವಾಗಿದ್ದ ಬೀನ್ಸ್ ಸದ್ಯ ₹ 80ರಂತೆ ಮಾರಾಟವಾಗುತ್ತಿದೆ. ಹಿಂದಿನ ವಾರ ಹಸಿರು-ಮೆಣಸಿನಕಾಯಿ ₹120ರಂತೆ ಮಾರಾಟವಾಗಿತ್ತು. ಈ ವಾರ ₹ 80ರಂತೆ ಮಾರಾಟವಾಗುತ್ತಿದೆ. ಬಟಾಣಿ ₹ 160ರಂತೆ ಮಾರಾಟವಾಗುತ್ತಿದೆ. ತುಂತುರು ಮಳೆ, ಚಳಿ ವಾತಾವರಣವಿದ್ದರೂ ಕೆಲ ತರಕಾರಿ ದುಬಾರಿಯಾಗಿವೆ. ಅದರ ನಡುವೆಯೂ ನುಗ್ಗೇಕಾಯಿ, ಸೌತೆಕಾಯಿ, ಸೋರೆಕಾಯಿ, ಸಿಹಿಗೆಣಸು, ಅವರೆಕಾಯಿ ಸಾಧಾರಣ ಬೆಲೆಗೆ ಮಾರಾಟವಾಗುತ್ತಿವೆ.

'ಮಳೆ ಸುರಿಯುತ್ತಿರುವ ಕಾರಣ ಟೊಮೆಟೊ ಬೆಲೆ ನಿಯಂತ್ರಣಕ್ಕೆ ಬರಲಿದೆ ಎಂದೇ ಹೇಳಲಾಗಿತ್ತು. ಆದರೆ ಮಳೆ ಆರಂಭವಾಗಿ ವಾರ ಕಳೆದರೂ ಟೊಮೆಟೊ ಬೆಲೆ ನಿಯಂತ್ರಣಕ್ಕೆ ಬಂದಿಲ್ಲ. ಟೊಮೆಟೊ ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಪೂರೈಕೆಯಾಗುವವರೆಗೂ ಬೆಲೆ ಕಡಿಮೆಯಾಗುವುದು ಕಷ್ಟ' ಎಂದು ವ್ಯಾಪಾರಿಗಳಾದ ಅಕ್ರಮ ಮತ್ತು ತಬ್ರೇಜ್ ತಿಳಿಸಿದರು.

ಹಸಿ ಶುಂಠಿ ಮಾರಾಟ ಮಾಡುತ್ತಿರುವ ವ್ಯಾಪಾರಿ ಪ್ರಜಾವಾಣಿ ಚಿತ್ರ

ಸೊಪ್ಪಿನ ದರ ಕಡಿಮೆ: ಕಳೆದ ವಾರ ಒಂದು ಕಟ್ಟಿಗೆ ಕೊತ್ತಂಬರಿ ಸದ್ಯ ₹20ರಂತೆ, ಮೆಂತೆ, ಸಬ್ಬಸ್ಸಿಗೆ ಪ್ರತಿ ಕಟ್ಟಿಗೆ ₹15ರಂತೆ ಮಾರಾಟವಾಗುತ್ತಿವೆ.

'ಬೆಂಗಳೂರಿನ ಬಿನ್ನಿಮಿಲ್ ಎಪಿಎಂಸಿ ಮಾರುಕಟ್ಟೆಗೆ ಸೋಮವಾರ 396 ಕ್ವಿಂಟಲ್ ಟೊಮೆಟೊ ಆವಕವಾಗಿದ್ದು, ಕ್ವಿಂಟಲ್‌ಗೆ ಗರಿಷ್ಠ ₹ 13 ಸಾವಿರವಿದ್ದರೆ, ಕನಿಷ್ಠ ₹ 10 ಸಾವಿರದಂತೆ ಮಾರಾಟವಾಗಿದೆ' ಎಂದು ಎಪಿಎಂಸಿ ಅಧಿಕಾರಿಗಳು ತಿಳಿಸಿದರು.

ಕೆ.ಆರ್. ಮಾರುಕಟ್ಟೆಯಲ್ಲಿ ದರ ₹ ಗಳಲ್ಲಿ (ಪ್ರತಿ ಕೆ.ಜಿಗೆ)

ತರಕಾರಿ	ಕಳೆದ ವಾರದ	ಈ ವಾರದ
ಶುಂಠಿ	280	260
ಬೆಳ್ಳುಳ್ಳಿ	180	240
ಬೀನ್ಸ್	120	80
ಬಟಾಣಿ	180	160
ಕ್ಯಾರೆಟ್	60	60
ಟೊಮೆಟೊ	100	120
ದೊಡ್ಡಮೆಣಸಿನಕಾಯಿ	80	80
ಮೆಣಸಿನಕಾಯಿ	120	80
ಹಿರೇಕಾಯಿ	60	60
ಬೆಂಡೇಕಾಯಿ	50	60
ಆಲೂಗಡ್ಡೆ	35	20
ಈರುಳ್ಳಿ	25	25
ಸೋರೆಕಾಯಿ	60	60
ಪಡವಲಕಾಯಿ	120	80
ನುಗ್ಗೆಕಾಯಿ	180	120
ಬದನೆಕಾಯಿ	60	60
ಹಾಗಲಕಾಯಿ	60	60
ತೊಂಡೆಕಾಯಿ	40	40
ಬೀಟ್‌ರೂಟ್	40	40
ಕುಂಬಳಕಾಯಿ	60	60
ಕೋಸು	30	40

ಸೊಪ್ಪುಗಳ ಮಧ್ಯಮ ಗಾತ್ರದ ಕಟ್ಟಿನ ದರಗಳು

ಕೊತ್ತಂಬರಿ	20	20
ಸಬ್ಬಕ್ಕಿ	10	15
ಮೆಂತೆ	15	15
ಪಾಲಕ್	10	10
ಪುದಿನಾ	10	10

ರೆಪ್ಕೊ ಬ್ಯಾಂಕ್‌ನಿಂದ ಹೆಚ್ಚು ಬಡ್ಡಿದರದ ಯೋಜನೆ

ಬೆಂಗಳೂರು: ಭಾರತ ಸರ್ಕಾರದ ಉದ್ಯಮವಾದ ರೆಪ್ಕೊ ಬ್ಯಾಂಕ್ ವತಿಯಿಂದ 'ರೆಪ್ಕೊ 400' ಹೊಸ ವಿಶೇಷ ಠೇವಣಿ ಯೋಜನೆಯನ್ನು ಪರಿಚಯಿಸಲಾಗಿದೆ.

'ರೆಪ್ಕೊ 400' ಯೋಜನೆಯಲ್ಲಿ ಸಾಮಾನ್ಯ ನಾಗರಿಕರಿಗೆ ಶೇ 7.75 ಹಾಗೂ ಹಿರಿಯ ನಾಗರಿಕರಿಗೆ ಶೇ 8.25ರಂತೆ ಬಡ್ಡಿದರ ಸಿಗಲಿದೆ.

ಈ ಯೋಜನೆಯ ಅವಧಿಯು 400 ದಿನಗಳಾಗಿದ್ದು, ಜುಲೈ 7ರಂದು ಜಾರಿಗೆ ಬಂದಿದೆ. ಆ. 31ರ ಒಳಗೆ ಠೇವಣಿ ಮಾಡಬೇಕು. ಗ್ರಾಹಕರು ವಾರ್ಷಿಕ, ಅರ್ಧವಾರ್ಷಿಕ, ತ್ರೈಮಾಸಿಕ ಅಥವಾ ಮೆಚ್ಯೂರಿಟಿ ಅವಧಿ ಮುಗಿದ ಬಳಿಕ ಹೀಗೆ ವಿವಿಧ ವಿಧಾನಗಳಲ್ಲಿ ಬಡ್ಡಿ ಪಡೆಯಲು ಅವಕಾಶ ನೀಡಲಾಗಿದೆ. ₹ 2 ಕೋಟಿ ವರೆಗೆ ಠೇವಣಿ ಮಾಡಬಹುದು .

ಬನಶಂಕರಿಯ ರೆಪ್ಕೊ ಬ್ಯಾಂಕ್ ಶಾಖೆಯಲ್ಲಿ ಈ ಸೌಲಭ್ಯ ದೊರೆಯಲಿದೆ. ಮಾಹಿತಿಗೆ 080 26710412, 9481703165 ಸಂಪರ್ಕಿಸಬಹುದು.

ಬಿಎಂಟಿಸಿ ಅಧಿಕಾರಿಗಳ ಸಹಿ ನಕಲು: ₹ 76.57 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ) ಅಧಿಕಾರಿಗಳ ಸಹಿ ನಕಲು ಮಾಡಿ ₹ 76.57 ಲಕ್ಷ ವಂಚನೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ಮುಖ್ಯ ಸಂಚಾರ ವ್ಯವಸ್ಥಾಪಕ ಸೇರಿ ಆರು ನೌಕರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

2020ರ ಮಾರ್ಚ್ 9ರಿಂದ 2023ರ ಜುಲೈ 27ರವರೆಗಿನ ಅವಧಿಯಲ್ಲಿ ನಡೆದಿರುವ ವಂಚನೆ ಸಂಬಂಧ ಬಿಎಂಟಿಸಿ ಸಹಾಯಕ ಭದ್ರತಾ ಜಾಗೃತಾಧಿಕಾರಿ ಸಿ.ಕೆ. ರಮ್ಯಾ ಅವರು ದೂರು ನೀಡಿದ್ದಾರೆ.

'ಮುಖ್ಯ ಸಂಚಾರ ವ್ಯವಸ್ಥಾಪಕ ಶ್ರೀರಾಮ್ ಮುಲ್ಕಾವಾನ್ (ಪ್ರಸ್ತುತ ಕೆಎಸ್‌ಆರ್‌ಟಿಸಿ ಮಂಡಳಿ ಕಾರ್ಯದರ್ಶಿ), ವಿಭಾಗೀಯ ಸಂಚಾರ ಅಧಿಕಾರಿ ಶ್ಯಾಮಲಾ ಎಸ್. ಮುದ್ದೋಡಿ, ಸಹಾಯಕ ಸಂಚಾರ ವ್ಯವಸ್ಥಾಪಕಿ ಬಿ.ಕೆ. ಮಮತಾ, ಸಹಾಯಕ ಸಂಚಾರ ಅಧೀಕ್ಷಕಿ ಟಿ. ಅನಿತಾ, ಸಂಚಾರ ನಿರೀಕ್ಷಕ ಸತೀಶ್ ಹಾಗೂ ಕಿರಿಯ ಸಹಾಯಕ ಪ್ರಕಾಶ್ ಕೊಪ್ಪಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಎಂಟಿಸಿ ಬಸ್ ನಿಲ್ದಾಣ ಹಾಗೂ ವಾಣಿಜ್ಯ ಸಂಕೀರ್ಣಗಳ ಸ್ವಚ್ಛತಾ ನಿರ್ವಹಣೆ ಗುತ್ತಿಗೆ ಹಣ ಬಿಡುಗಡೆಯಲ್ಲಿ ವಂಚನೆ ಆಗಿದೆ. ಜಾಹೀರಾತು ಪರವಾನಗಿ, ಎಟಿಎಂ ಘಟಕಗಳ ಪರವಾನಗಿ ವಿಸ್ತರಣೆ ಸೇರಿದಂತೆ ಹಲವು ಕೆಲಸಗಳ ಹೆಸರಿನಲ್ಲಿ ವಂಚನೆ ನಡೆದಿದೆ.'

'ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್, ಮಾಹಿತಿ ತಂತ್ರಜ್ಞಾನ ವಿಭಾಗದ ನಿರ್ದೇಶಕರಾಗಿದ್ದ ಸೂರ್ಯಸೇನ್, ವ್ಯವಸ್ಥಾಪಕ ನಿರ್ದೇಶಕರಾಗಿದ್ದ ರೇಜು, ಸಿ. ಶಿಖಾ ಅವರ ಸಹಿ ನಕಲು ಮಾಡಲಾಗಿದೆ. ಗುತ್ತಿಗೆ ಅವಧಿ ವಿಸ್ತರಣೆ ಮಾಡಿ ಆದೇಶಗಳನ್ನು ಹೊರಡಿಸಲಾಗಿದೆ.

ಇದಕ್ಕೆ ಪರ್ಯಾಯವಾಗಿ ಆರೋಪಿಗಳು, ಗುತ್ತಿಗೆದಾರರಿಂದ ಹಣ ಪಡೆದು ನಿಗಮಕ್ಕೆ ವಂಚನೆ ಮಾಡಿರುವುದು ಆಂತರಿಕ ತನಿಖೆಯಿಂದ ಗೊತ್ತಾಗಿದೆ. ಕೃತ್ಯದಲ್ಲಿ ಗುತ್ತಿಗೆದಾರರೂ ಭಾಗಿಯಾಗಿರುವ ಅನುಮಾನವಿದೆ' ಎಂದು ಪೊಲೀಸರು ತಿಳಿಸಿದರು.

'ಮಾನವ ಅಂಗಗಳು, ಅಂಗಾಂಶಗಳ ಕೊರತೆ'

ಬೆಂಗಳೂರು: ಮಾನವ ಅಂಗಗಳು, ಅಂಗಾಂಶಗಳ ಕಸಿಗೆ ತೀವ್ರ ಕೊರತೆ ಎದುರಾಗಿದೆ ಎಂದು ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ತಿಳಿಸಿದೆ.

ಕಾರ್ನಿಯಾ, ಹೃದಯ ಕವಾಟ, ಚರ್ಮ, ಅಂಗಾಂಶಗಳ ಅಗತ್ಯವಿರುವವರು ಬಹಳಷ್ಟು ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಒಬ್ಬ ದಾನಿ 8 ಜೀವ ಉಳಿಸಬಹುದು. ಹೃದಯ, ಮೂತ್ರಪಿಂಡ, ಪಿತ್ತಜನಕಾಂಗ, ಮೇದೋಜೀರಕ ಗ್ರಂಥಿ, ಸಣ್ಣ ಕರುಳು, ಶ್ವಾಸಕೋಶಗಳನ್ನು ದಾನ ಮಾಡಬಹುದು. ಅದೇ ದಾನಿ ಅಂಗಾಂಶ ದಾನದ ಮೂಲಕ 50ಕ್ಕೂ ಹೆಚ್ಚು ಜನರ ಜೀವ ಉಳಿಸಬಹುದಾಗಿದೆ ಎಂದು ಸಂಸ್ಥೆ ಹೇಳಿದೆ.

ಡಿವೈಎಸ್ಪಿ, ಎಸಿಪಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 17 ಅಧಿಕಾರಿಗಳು ಸೇರಿದಂತೆ ರಾಜ್ಯದ ಒಟ್ಟು 45 ಡಿವೈಎಸ್ಪಿ/ಎಸಿಪಿಗಳನ್ನು ವರ್ಗಾವಣೆ ಮಾಡಿ ಪೊಲೀಸ್ ಸಿಬ್ಬಂದಿ ಮಂಡಳಿ ಸೋಮವಾರ ಆದೇಶ ಹೊರಡಿಸಿದೆ.

ವರ್ಗಾವಣೆಯಾದವರು: ಎಂ.ಎಚ್. ಮಂಜುನಾಥ್ ಚೌಧರಿ; ಸಿಸಿಬಿ, ಸಿ. ಬಾಲಕೃಷ್ಣ; ಕಬ್ಬನ್‌ಪಾರ್ಕ್ ಉಪವಿಭಾಗ, ಶಿವಾನಂದ್ ಎಚ್. ಚಲವಾದಿ; ಹಲಸೂರು ಗೇಟ್, ವಿ. ನಾರಾಯಣಸ್ವಾಮಿ; ಜಯನಗರ, ಎಚ್. ಕೃಷ್ಣಮೂರ್ತಿ; ಮಲ್ಲೇಶ್ವರ, ಪ್ರಿಯದರ್ಶಿನಿ ಸಾಣೆಕೊಪ್ಪ; ಮಾರತ್ತಹಳ್ಳಿ, ಕೆ.ವಿ. ಶ್ರೀಧರ್; ಬಿಎಂಟಿಎಫ್, ಎಂ. ಮುರುಗೇಂದ್ರಯ್ಯ; ಸಂಪಿಗೆಹಳ್ಳಿ, ಕಿಶೋರ್ ಭರಣಿ; ಬೆಂಗಳೂರು ಸಂಚಾರ ಪೂರ್ವ, ಕೆ.ಎಸ್. ನಾಗರಾಜ್; ಸಂಚಾರ ಈಶಾನ್ಯ, ಎನ್. ಚಂದನ್‌ಕುಮಾರ್; ವಿಜಯನಗರ, ಕೆ.ಎಸ್. ಪುಟ್ಟಮ್ಮ; ಸಂಚಾರ ಪಶ್ಚಿಮ, ಜಿ. ಅನುಷಾ; ಬೆಸ್ಕಾಂ, ಡಿ.ಎಸ್. ರಾಜೇಂದ್ರ; ಕರ್ನಾಟಕ ಲೋಕಾಯುಕ್ತ, ಜಿ. ವನಿತಾ; ಹೈಕೋರ್ಟ್ ವಿಚಕ್ಷಣಾ ದಳ, ಆರ್. ಪ್ರಕಾಶ್; ಶೇಷಾದ್ರಿಪುರ, ಮೇರಿ ಶೈಲಜಾ; ಯಶವಂತಪುರ.

'ಸ್ಪರ್ಧಾತ್ಮಕ ಪರೀಕ್ಷೆಗೆ ದಿನಪತ್ರಿಕೆ ದಾರಿದೀಪ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪ್ರತಿದಿನ ದಿನಪತ್ರಿಕೆಗಳನ್ನು ಓದುವುದರಿಂದ ಸಮಾಜದಲ್ಲಿನ ಆಗುಹೋಗುಗಳ ಬಗ್ಗೆ ತಿಳಿದುಕೊಳ್ಳುವುದಲ್ಲದೆ, ಸ್ಪರ್ಧಾತ್ಮಕ ಪರೀಕ್ಷೆಗೆ ದಾರಿದೀಪವಾಗುತ್ತದೆ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಕಾಳಸ್ತ್ರೀ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳನ್ನು ಉಚಿತವಾಗಿ ವಿತರಿಸಿ ಅವರು ಮಾತನಾಡಿದರು.

ಕಾಳಸ್ತ್ರೀ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕ್ರೀಡಾಕೂಟದಲ್ಲಿ ಚಾಂಪಿಯನ್ ಆದ ವಿದ್ಯಾರ್ಥಿನಿಗೆ ಶಾಸಕ ಎಸ್. ಮುನಿರಾಜು ಅವರು ಬಹುಮಾನ ವಿತರಣೆ ಮಾಡಿದರು.

ಕಾಲೇಜಿನ ಪ್ರಾಂಶುಪಾಲ ಎಸ್. ಪ್ರಸಾದ ಸ್ವಾಮಿ ಮಾತನಾಡಿ, 'ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕ್ರೀಡೆಯಲ್ಲಿ ವಿಜೇತರಾಗಿ ಕಾಲೇಜಿಗೆ ಹೆಸರು ತಂದಿದ್ದಾರೆ' ಎಂದು ಶ್ಲಾಘಿಸಿದರು.

ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು. ದೈಹಿಕ ಶಿಕ್ಷಣ ನಿರ್ದೇಶಕರಾದ ಅಬಿದಾ ಬೇಗಂ, ಸಾಂಸ್ಕೃತಿಕ ಸಮಿತಿ ಸಂಚಾಲಕ ಸಿ. ದೇವರಾಜ ಇದ್ದರು.

ಕರಾವಳಿಯಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ಮಲೆನಾಡು ಹಾಗೂ ಕರಾವಳಿಯಲ್ಲಿ ಮಳೆ ಅಬ್ಬರವು ಮತ್ತೆ ಬಿರುಸು ಪಡೆಯುವ ಸಾಧ್ಯತೆಯಿದೆ. ಉಡುಪಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡಕ್ಕೆ ಆಗಸ್ಟ್ 2ರಿಂದ 4ರ ತನಕ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ವೇಳೆ ಮೀನುಗಾರರು ಮೀನುಗಾರಿಕೆಗೆ ಸಮುದ್ರಕ್ಕೆ ಇಳಿಯದಂತೆ ಸೂಚಿಸಲಾಗಿದೆ. ಬೆಂಗಳೂರಿನಲ್ಲೂ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ನಗರದಲ್ಲಿ ಇಂದು

ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಪುನಶ್ಚೇತನ ಹಾಗೂ ಪ್ರತಿಭಾ ಪುರಸ್ಕಾರ-2023: ಅಧ್ಯಕ್ಷತೆ: ಎನ್. ಆರ್. ಪಂಡಿತಾರಾಧ್ಯ, ಅತಿಥಿ: ಸ್ವಾಮಿ ಜಪಾನಂದಜೀ ಮಹಾರಾಜ್, ಪ್ರತಿಭಾ ಪುರಸ್ಕಾರ ವಿತರಣೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸಂಯುಕ್ತ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9.30

ದಕ್ಷಿಣ ಭಾರತ ಉಡುಪುಗಳ ಮೇಳ: **ಅತಿಥಿಗಳು:** ಸಂತೋಷ್ ಲಾಡ್, ಬಿ.ಸಿ. ಶಿವಕುಮಾರ್, ಶರಣ್ಯ ಶೆಟ್ಟಿ, ಆಯೋಜನೆ: ದಕ್ಷಿಣ ಭಾರತ ಉಡುಪುಗಳ ಸಂಘ, ಸ್ಥಳ: ಪ್ರಿನ್ಸೆಸ್ ಶ್ರೈನ್, ಗೇಟ್ ನಂ. 9 ಅರಮನೆ ಮೈದಾನ, ಬೆಳಿಗ್ಗೆ 10

ಗೊರೂರು ಚಲನಚಿತ್ರೋತ್ಸವ-2023: ಉದ್ಘಾಟನೆ: ಹೇಮಂತ್ ಎಂ. ನಿಂಬಾಳ್ಕರ್, ಅತಿಥಿಗಳು: ಉಮೇಶ ಬಣಕಾರ, ವಸಂತಿ ಮೂರ್ತಿ ಗೊರೂರು, ಪ್ರಾಸ್ತಾವಿಕ: ಇಂದಿರಾ ಕೃಷ್ಣಪ್ಪ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಸಂಸ್ಥಾಪನಾ ದಿನಾಚರಣೆ: ಅತಿಥಿ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎನ್.ಎ. ಹ್ಯಾರಿಸ್, ಆಯೋಜನೆ: ಸಾರಿಗೆ ನಿಗಮ, ಸ್ಥಳ: ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-2ರ ಆವರಣ, ಬೆಳಿಗ್ಗೆ 11

ಹುಣ್ಣಿಮೆ ಹಾಡು: 'ಭಾವ ಶ್ರಾವಣ' ಕವಿ ಗೀತೆಗಳ ಭಾವ ಚೈತ್ರೋತ್ಸವ: ಆನಂದ ಮಾದಲಗೆರೆ, ಮೃತ್ಯುಂಜಯ ದೊಡ್ಡವಾಡ ತಂಡ, ಕಾಡು ಮಲ್ಲಿಕಾರ್ಜುನ ಅಂಕಿತದ ವಚನವಾಣಿ ಬಿಡುಗಡೆ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ರಂಗಮಂದಿರ, ಸಂಜೆ 6.30

ಪ್ರವಚನ ವಾಹಿನಿ: ಸಾಮೂಹಿಕ ಸತ್ಯ ನಾರಾಯಣ ಪೂಜೆ, ಆಯೋಜನೆ: ರಾಗಿಗುಡ್ಡದ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಭಾಸ್ಕರ್ ನೀನಾಸಂ, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸ್ನೇಹಿತನ ಕೊಂದು ಠಾಣೆಗೆ ಶರಣು

ಬೆಂಗಳೂರು: ಬೈಕ್ ಕೀ ವಿಚಾರವಾಗಿ ಸ್ನೇಹಿತ ತಿಲಕ್ ಎಂಬುವವರನ್ನು ಕೊಲೆ ಮಾಡಲಾಗಿದ್ದು, ಆರೋಪಿ ಸಿದ್ದರಾಜು ಗಿರಿನಗರ ಠಾಣೆಗೆ ಶರಣಾಗಿದ್ದಾರೆ.

ನೇಪಾಳದ ತಿಲಕ್, ಹೊಸಕೆರೆಹಳ್ಳಿಯಲ್ಲಿರುವ ಕೋಳಿ ಮಾಂಸ ಮಾರಾಟ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಮಂಡ್ಯದ ಸಿದ್ದರಾಜು ಸಹ ಅದೇ ಮಳಿಗೆಯಲ್ಲಿ ಕೆಲಸಕ್ಕಿದ್ದರು ಮದ್ಯದ ಅಮಲಿನಲ್ಲಿ ಜಗಳ ನಡೆದಿತ್ತು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಕಿರಣ್ ವಿ ರೆಡ್ಡಿ
ಶ್ರೀ. ವೆಂಕಟರೆಡ್ಡಿಯವರ ಸುಪುತ್ರ
31.07.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರ ಅಂತ್ಯಕ್ರಿಯೆಯನ್ನು ದಿ. 01.08.2023 ರಂದು ಮಧ್ಯಾಹ್ನ 3 ಗಂಟೆಗೆ ಬಾಣಸವಾಡಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು
ದುಃಖತಪ್ತರು:
ಕುಟುಂಬವರ್ಗದವರು ಮತ್ತು ಬಂಧುಮಿತ್ರರು

ಕಾಟನ್‌ಪೇಟೆ ಪೊಲೀಸರ ಕಾರ್ಯಾಚರಣೆ • ಚಿನ್ನಾಭರಣ ವ್ಯಾಪಾರಿ ಬಂಧನ

₹4 ಕೋಟಿಗಾಗಿ ಸುಲಿಗೆ ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 2.31 ಕೋಟಿ ಮೌಲ್ಯದ ಚಿನ್ನಾಭರಣ ಸುಲಿಗೆ ಆಗಿರುವುದಾಗಿ ಸುಳ್ಳು ದೂರು ನೀಡಿ ₹ 4 ಕೋಟಿ ಗಳಿಸಲು ಸಂಚು ರೂಪಿಸಿದ್ದ ವ್ಯಾಪಾರಿ ರಾಜು ಜೈನ್‌ನನ್ನು ಕಾಟನ್‌ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಗರ್ತಪೇಟೆ ಮುಖ್ಯರಸ್ತೆಯಲ್ಲಿರುವ ಕೇಸರ್ ಜ್ಯುವೆಲರ್ಸ್ ಮಳಿಗೆ ಮಾಲೀಕ ರಾಜು ಜೈನ್, ಚಿನ್ನಾಭರಣ ಸುಲಿಗೆ ಬಗ್ಗೆ ದೂರು ನೀಡಿದ್ದ. ತನಿಖೆ ಕೈಗೊಂಡಾಗ, ಕೃತ್ಯದ ಬಗ್ಗೆ ಪುರಾವೆಗಳು ಸಿಕ್ಕಿರಲಿಲ್ಲ. ರಾಜುನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಅಕ್ರಮವಾಗಿ ಹಣ ಗಳಿಸಲು ಸುಳ್ಳು ದೂರು ನೀಡಿರುವುದಾಗಿ ತಪ್ಪೊಪ್ಪಿಕೊಂಡ' ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ್ ತಿಳಿಸಿದರು.

'ಅಕ್ಕನ ಮಗ ಆದಿತ್ಯ ಚೌಪದ್ ಹಾಗೂ ಮನನ್, 3 ಕೆ.ಜಿ 780 ಗ್ರಾಂ ಚಿನ್ನಾಭರಣದ ಬ್ಯಾಗ್ ಸಮೇತ ಜುಲೈ 12ರಂದು ಸಂಜೆ ಎಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ಡೆಡ್ ಹೌಸ್ ಬಳಿಯ ಮೇಲ್ಸೇತುವೆಯಲ್ಲಿ ತೆರಳುತ್ತಿದ್ದರು. ಅದೇ ಸಂದರ್ಭದಲ್ಲಿ ಬೈಕ್‌ನಲ್ಲಿ ಬಂದಿದ್ದ ಇಬ್ಬರು, ಆದಿತ್ಯ ಅವರ ವಾಹನಕ್ಕೆ ಡಿಕ್ಕಿ ಹೊಡೆದು ಚಿನ್ನಾಭರಣದ ಬ್ಯಾಗ್ ಕಿತ್ತೊಯ್ದಿದ್ದಾರೆ' ಎಂಬುದಾಗಿ ರಾಜು ಜೈನ್ ದೂರು ನೀಡಿದ್ದ' ಎಂದು ಹೇಳಿದರು.



ರಾಜು ಜೈನ್

20 ದಿನ ತರಬೇತಿ: 'ಚಿನ್ನಾಭರಣ ಸುಲಿಗೆ ನಾಟಕವಾಡಿದರೆ, ವಿಮೆ ಹಣ ಕ್ಲೇಮ್ ಆಗುತ್ತದೆ. ಜೊತೆಗೆ, ಚಿನ್ನಾಭರಣವನ್ನೂ ಬೇರೆಡೆ ಮಾರಬಹುದು. ಇದರಿಂದ ಒಟ್ಟು ₹ 4 ಕೋಟಿ ಗಳಿಸಬಹುದೆಂದು ರಾಜು ಜೈನ್ ಸಂಚು ರೂಪಿಸಿದ್ದ. ಸಂಬಂಧಿಕರೇ ಆಗಿದ್ದ ಯುವಕರಿಗೆ 20 ದಿನ ತರಬೇತಿ ನೀಡಿದ್ದ' ಎಂದು ಪೊಲೀಸರು ತಿಳಿಸಿದರು. 'ಸಿ.ಸಿ.ಟಿ.ವಿ ಕ್ಯಾಮೆರಾಗಳು ಇಲ್ಲದ ಸ್ಥಳಗಳನ್ನು ಆರೋಪಿ ಗುರುತಿಸಿದ್ದ. ಅದೇ ಸ್ಥಳಕ್ಕೆ ದ್ವಿಚಕ್ರ ವಾಹನದಲ್ಲಿ ಹೋಗಿ ಸುಲಿಗೆ ನಾಟಕವಾಡಿದರೆ, ಯಾರಿಗೂ ಅನುಮಾನ ಬರುವುದಿಲ್ಲವೆಂದು ಆತ ಅಂದುಕೊಂಡಿದ್ದ' ಎಂದರು.

ಕಾಟನ್‌ಪೇಟೆ ಪೊಲೀಸರು ಜಪ್ತಿ ಮಾಡಿರುವ ಚಿನ್ನಾಭರಣ

ನಕಲಿ ಬಿಲ್ ಸೃಷ್ಟಿ: 'ರಾಜು ಜೈನ್ ಬಳಿ ಕೇವಲ 2 ಕೆ.ಜಿ 760 ಗ್ರಾಂ ಚಿನ್ನಾಭರಣವಿತ್ತು. ಆದರೆ, ಈತ 3 ಕೆ.ಜಿ 780 ಗ್ರಾಂ ಚಿನ್ನಾಭರಣ ಸುಲಿಗೆ ಆಗಿರುವುದಾಗಿ ಸುಳ್ಳು ದೂರು ನೀಡಿದ್ದ. ಇದಕ್ಕಾಗಿ ನಕಲಿ ಬಿಲ್ ಸೃಷ್ಟಿಸಿದ್ದ' ಎಂದು ಪೊಲೀಸರು ಹೇಳಿದರು.

ಹೈದರಾಬಾದ್‌ನಲ್ಲಿ ಚಿನ್ನಾಭರಣ ಮಾರಾಟ: 'ಆದಿತ್ಯ ಚೌಪದ್ ಹಾಗೂ ಮನನ್, ದ್ವಿಚಕ್ರ ವಾಹನದಲ್ಲಿ ಜುಲೈ 12ರಂದು ಡೆಡ್ ಹೌಸ್ ಬಳಿಯ ಮೇಲ್ಸೇತುವೆ ಬಳಿ ಹೋಗಿ ನಿಂತಿದ್ದರು. ಅದೇ ಸ್ಥಳಕ್ಕೆ ತೆರಳಿದ್ದ ರಾಜು, ಚಿನ್ನಾಭರಣ ಬ್ಯಾಗ್ ತೆಗೆದುಕೊಂಡು ತನ್ನ ವಾಹನದ ಡಿಕ್ಕಿಯಲ್ಲಿಟ್ಟುಕೊಂಡಿದ್ದ. ಆದಿತ್ಯ ವಾಹನ ಸಮೇತ ಠಾಣೆಗೆ ಬಂದು ದೂರು ನೀಡಿದ್ದ' ಎಂದು ಪೊಲೀಸರು ತಿಳಿಸಿದರು.

'ಡಿಕ್ಕಿಯಲ್ಲಿದ್ದ 2 ಕೆ.ಜಿ 760 ಗ್ರಾಂ ಚಿನ್ನಾಭರಣವನ್ನು ರಾಜು ಜೈನ್, ಹೈದರಾಬಾದ್‌ನಲ್ಲಿರುವ ವ್ಯಾಪಾರಿಯೊಬ್ಬರಿಗೆ ಮಾರಿದ್ದ. ಅದಕ್ಕೂ ನಕಲಿ ಬಿಲ್ ಸೃಷ್ಟಿಸಿದ್ದ' ಎಂದು ಹೇಳಿದರು.

ವಾಟ್ಸ್‌ಆ್ಯಪ್ ಕರೆ ಸುಳಿವು: 'ಠಾಣೆ ಸಿಬ್ಬಂದಿಗೆ ಪದೇ ಪದೇ ಕರೆ ಮಾಡುತ್ತಿದ್ದ ಆರೋಪಿ, ಚಿನ್ನಾಭರಣ ಯಾವಾಗ ಸಿಗುತ್ತೆ? ಎಂದು ವಿಚಾರಿಸುತ್ತಿದ್ದ. ಹಿರಿಯ ಅಧಿಕಾರಿಗಳು ಹಾಗೂ ಪ್ರಭಾವಿಗಳಿಂದಲೂ ಕರೆ ಮಾಡಿಸಿ ಒತ್ತಡ ಹಾಕುತ್ತಿದ್ದ. ಕೃತ್ಯಕ್ಕೆ ಸಂಬಂಧಪಟ್ಟಂತೆ ಪುರಾವೆಗಳು ಸಿಗದಿದ್ದಾಗ, ರಾಜುನ ಮೊಬೈಲ್ ಜಪ್ತಿ ಮಾಡಿ ಪರಿಶೀಲಿಸಲಾಗಿತ್ತು' ಎಂದು ತಿಳಿಸಿದರು.

'ಸುಲಿಗೆ ಕೃತ್ಯಕ್ಕೂ ಮುನ್ನ ರಾಜು, ವಾಟ್ಸ್‌ಆ್ಯಪ್ ಮೂಲಕ ಸಂಬಂಧಿಕರಾದ ಯುವಕರ ಜೊತೆ ಮಾತನಾಡಿದ್ದ. ಅದೇ ಸುಳಿವು ಆಧರಿಸಿ ರಾಜುನನ್ನು ಪ್ರಶ್ನಿಸಿದಾಗ, ಸುಲಿಗೆ ಪ್ರಕರಣವೇ ಸುಳ್ಳು ಎಂಬುದು ಪತ್ತೆಯಾಯಿತು' ಎಂದರು.

ಸುದ್ದಿ 2 ನಿಮಿಷ

ಮೆಟ್ರೊ ನಿಲ್ದಾಣಗಳಲ್ಲಿ ಪ್ರಯಾಣಿಕರ ಸುರಕ್ಷತೆಗೆ ಪಿಎಸ್‌ಡಿ

ಬೆಂಗಳೂರು: ಮೆಟ್ರೊ ನಿಲ್ದಾಣಗಳಲ್ಲಿ ಪ್ರಯಾಣಿಕರ ಸುರಕ್ಷತೆಗಾಗಿ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ (ಪಿಎಸ್‌ಡಿ) ವ್ಯವಸ್ಥೆ ಕಲ್ಪಿಸಲು ಬಿಎಂಆರ್‌ಸಿಎಲ್ ಯೋಜನೆ ರೂಪಿಸುತ್ತಿದೆ.

ನಮ್ಮ ಮೆಟ್ರೊ ಈಗ ಹಸಿರು ಮತ್ತು ನೇರಳೆ ಮಾರ್ಗಗಳನ್ನು ಹೊಂದಿದೆ. 70 ಕಿಲೋಮೀಟರ್ ಉದ್ದದ ಈ ಮೆಟ್ರೊ ಜಾಲದಲ್ಲಿ 63 ನಿಲ್ದಾಣಗಳಿದ್ದರೂ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ವ್ಯವಸ್ಥೆ ಇಲ್ಲ. ಈಗ ಕಾಮಗಾರಿ ನಡೆಯುತ್ತಿರುವ ಈ ವರ್ಷದ ಅಂತ್ಯಕ್ಕೆ ಪೂರ್ಣಗೊಳಿಸುವ ಗುರಿಯನ್ನು ಇಟ್ಟುಕೊಂಡಿರುವ ಹಳದಿ ಮಾರ್ಗದಲ್ಲಿ ಇರುವ ಎಲೆಕ್ಟ್ರಾನಿಕ್ ಸಿಟಿ ಬಳಿಯ ಕೋನಪ್ಪನ ಅಗ್ರಹಾರ ಬಳಿ ನಿರ್ಮಾಣಗೊಳ್ಳುತ್ತಿರುವ ನಿಲ್ದಾಣದಲ್ಲಿ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ಆರಂಭಿಸಲು ತಯಾರಿ ನಡೆಸಿದೆ.

ಇನ್ಫೋಸಿಸ್ ಫೌಂಡೇಶನ್ ಅನುದಾನದಲ್ಲಿ ಈ ನಿಲ್ದಾಣ ನಿರ್ಮಾಣಗೊಳ್ಳುತ್ತಿದೆ. ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ನಿರ್ಮಿಸಲು ಇದೇ ಫೌಂಡೇಶನ್ ಕೋರಿದೆ. ಅದರ ಹೆಚ್ಚುವರಿ ವೆಚ್ಚವನ್ನು ಭರಿಸಲು ಫೌಂಡೇಶನ್ ಒಪ್ಪಿಕೊಂಡಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ನಿಲ್ದಾಣಗಳಲ್ಲಿ ಹಳಿಗಳತ್ತ ಪ್ರಯಾಣಿಕರು ನುಗ್ಗುವುದನ್ನು ತಪ್ಪಿಸಲು ಈ ವ್ಯವಸ್ಥೆಯನ್ನು ಚೆನ್ನೈ, ದೆಹಲಿ ಮತ್ತು ಮುಂಬಯಿಯಲ್ಲಿ ಈಗಾಗಲೇ ಅನುಷ್ಠಾನ ಮಾಡಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ರಾಜ್ಯಪಾಲರ ಬಿಟ್ಟು ನಿರ್ಗಮಿಸಿದ ವಿಮಾನ: ಸಿಬ್ಬಂದಿ ಅಮಾನತು

ದೇವನಹಳ್ಳಿ: ಈಚೆಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನೇ ಬಿಟ್ಟು ವಿಮಾನ ನಿರ್ಗಮಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಏರ್ ಏಷ್ಯಾ ಸ್ಟೇಷನ್ ಮ್ಯಾನೇಜರ್ ಝಿಕೊ ಸೋರಸ್ ಅವರನ್ನು ಒಂದು ತಿಂಗಳ ಅವಧಿಗೆ ಸಂಸ್ಥೆ ಅಮಾನತು ಮಾಡಿದೆ. ಜುಲೈ 27ರಂದು ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದ ಏರ್ ಏಷ್ಯಾ ವಿಮಾನಯಾನ ಸಂಸ್ಥೆಯು ಅತಿಮುಖ್ಯ ಗಣ್ಯರಿಗೆ ಕಾಯಲು ಅವಕಾಶ ನೀಡದೆ ವಿಮಾನ ಹಾರಾಟಕ್ಕೆ ಹಸಿರು ನಿಶಾನೆ ತೋರಿದ ಆರೋಪದ ಮೇರೆಗೆ ಝಿಕೊ ಸೋರಸ್ ಅವರನ್ನು ಶನಿವಾರ ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನಿಬ್ಬರು ಸಿಬ್ಬಂದಿಯನ್ನು ಅಮಾನತು ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರು ಸೂಚನೆ ಸಂ.: Y/E.29/2023-24/22 ದಿನಾಂಕ: 25.07.2023

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
(ಮರು–ಟೆಂಡರು) ಮೈಸೂರು – ಪ್ರಸ್ತಾವನೆಯಂತೆ ಅಧಿಕಾರಿಗಳ ವಿಶ್ರಾಂತಿ ಗೃಹ – 6 ಸೂಟ್ಸ್‌ಗಳ ನಿರ್ಮಾಣ ಕಾರ್ಯ.	ರೂ. 10,89,322/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.08.2023, 11:00 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: Y/E.29/2023-24/23 ದಿನಾಂಕ: 27.07.2023

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಚಿಕ್ಕಜಾಜೂರು – ತೊಳಹುಣಿಸೆ, ಬೀರೂರು–ಚಿಕ್ಕಜಾಜೂರು, ಸಂಪಿಗೆ ರೋಡ್–ಬೀರೂರು ವಿಭಾಗಗಳಲ್ಲಿ 2 ವರ್ಷಗಳ ಅವಧಿಗೆ ಟಿಆರ್‌ಡಿ ನಿರ್ವಹಣೆ ಮತ್ತು ಬ್ರೇಕ್‌ಡೌನ್ ಚಟುವಟಿಕೆಗಳ ಹೊರ ಗುತ್ತಿಗೆ.	ರೂ. 9,33,43,841.01

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.08.2023, 11:00 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: Y/E.29/2023-24/24 ದಿನಾಂಕ: 27.07.2023

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ತೊಳಹುಣಿಸೆ–ಕರಜಗಿ, ಬೀರೂರು–ಕುಂಸಿ, ಮೈಸೂರು–ಎಲಿಯೂರು, ಮೈಸೂರು–ಚಾಮರಾಜನಗರ ಮತ್ತು ಹಾಸನ–ಅರಸೀಕೆರೆ ವಿಭಾಗಗಳಲ್ಲಿ 2 ವರ್ಷಗಳ ಅವಧಿಗೆ ಟಿಆರ್‌ಡಿ ನಿರ್ವಹಣೆ ಮತ್ತು ಬ್ರೇಕ್‌ಡೌನ್ ಚಟುವಟಿಕೆಗಳ ಹೊರ ಗುತ್ತಿಗೆ.	ರೂ. 8,89,52,577.09

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.08.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಮೈಸೂರು
PUB/275/AAD/PRB/SWR/2023-24
S.W.Railways SWRRLY SWRRLY

IN THE COURT OF THE III ADDL. CIVIL JUDGE (S.D) AT TUMAKURU.
O.S. No. 716/2021
Plaintiff: Canara Bank, Shridevi Medical College Branch, Sira Road, Tumakuru. -V/S-
Defendant: Sri. Girish G.

PAPER PUBLICATION

Notice to Defendant in the above case

Defendant: Sri. Girish G. S/o Govindappa, Aged about 37 years, Residing at No.12, Gundappa Layout, Chowdeshwarinagari, Laggere, Bangalore-560058.

Whereas, the above plaintiff has instituted the above suit against the defendant for the recovery of loan amount Rs. 5,78,174.00.

Bank Detail: With reference to the above subject, Name of the Bank: Canara Bank (Shridevi Medical College Branch), Place of the Branch: Sira Road, Tumakuru, Account No. 5289768000087.

The defendant in the above suit avoiding to receive the Court summons and managing to receive the same hence, the above suit is posted for your appearance on 04.09.2023 at 11 A.M. before the Court of the III Addl. Civil Judge (S.D.) at Tumakuru. Therefore you are hereby summoned to appear on the said date to answer the Petition, failing which the case will be heard and determined in yours absence by placing you as Ex-parte. Given under my hand and seal of this court, this the 18th day of July 2023.

By Order of this Court,
sign/- Senior Sheristedar
Senior Civil Judge & CJM Court, Tumkur.
Advocate for Petitioner:
Mohamed Afroze Ahamed Advocate & Legal Adviser, Opp.SBI Bank, M.G. Road, Tumkur.

ಬ್ಲ್ಯಾಕ್‌ಮೇಲ್: ₹1.14 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈವಾಹಿಕ ಜಾಲತಾಣವೊಂದರ ಮೂಲಕ ಪರಿಚಯವಾಗಿದ್ದ ಯುವತಿಯೊಬ್ಬರು ಸಾಫ್ಟ್‌ವೇರ್ ಎಂಜಿನಿಯರೊಬ್ಬರನ್ನು ಬ್ಲ್ಯಾಕ್‌ಮೇಲ್ ಮಾಡಿ ₹ 1.14 ಕೋಟಿ ಪಡೆದು ವಂಚಿಸಿದ್ದು, ಈ ಬಗ್ಗೆ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಮೆರಿಕದ ಸಾಫ್ಟ್‌ವೇರ್ ಎಂಜಿನಿಯರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಸಾನ್ವಿ ಅರೋರಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಪ್ರಕರಣ ದಾಖಲಾಗುತ್ತಿದ್ದಂತೆ, ಆರೋಪಿಯದ್ದು ಎನ್ನಲಾದ ₹ 84 ಲಕ್ಷ ಹಣವಿದ್ದ ಬ್ಯಾಂಕ್ ಖಾತೆಯನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಫ್ಟ್‌ವೇರ್ ಕಂಪನಿ ಉದ್ಯೋಗಿಯಾಗಿರುವ 41 ವರ್ಷದ ದೂರುದಾರ, ತರಬೇತಿ ಉದ್ದೇಶದಿಂದ ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದಾರೆ. ಮದುವೆಯಾಗಲು ವಧುವಿಗಾಗಿ ಹುಡುಕಾಟ ನಡೆಸುತ್ತಿದ್ದ ಅವರು, ವೈವಾಹಿಕ ಜಾಲತಾಣವೊಂದರಲ್ಲಿ ಖಾತೆ ತೆರೆದು ಫೋಟೊ ಸಮೇತ ಸ್ವ–ವಿವರ ಅಪ್‌ಲೋಡ್ ಮಾಡಿದ್ದರು.'

'ಜಾಲತಾಣದ ಮೂಲಕ ದೂರುದಾರರನ್ನು ಪರಿಚಯ ಮಾಡಿಕೊಂಡಿದ್ದ ಸಾನ್ವಿ ಅರೋರಾ, ಮದುವೆಯಾಗುವುದಾಗಿ ಹೇಳಿದ್ದರು. ಜುಲೈ 7ರಂದು ದೂರುದಾರರಿಗೆ ಕರೆ ಮಾಡಿದ್ದ ಯುವತಿ, ಲೈಂಗಿಕವಾಗಿ ಪ್ರಚೋದಿಸಿದ್ದರು. ಇದರಿಂದಾಗಿ ದೂರುದಾರ, ಬಟ್ಟೆಗಳನ್ನು ಬಿಚ್ಚಿ ಬೆತ್ತಲಾಗಿದ್ದರು. ಅದೇ ದೃಶ್ಯಗಳನ್ನು ಯುವತಿ, ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

'ದೂರುದಾರರಿಗೆ ಮರುದಿನ ವಿಡಿಯೊ ಕಳುಹಿಸಿದ್ದ ಯುವತಿ, ಹಣಕ್ಕಾಗಿ ಬೇಡಿಕೆ ಇರಿಸಿದ್ದರು. ಹಣ ನೀಡದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಹಾಗೂ ಪೋಷಕರಿಗೆ ಕಳುಹಿಸುವುದಾಗಿ ಬೆದರಿಸಿದ್ದರು. ಹೆದರಿದ್ದ ದೂರುದಾರ, ಹಂತ ಹಂತವಾಗಿ ₹ 1.14 ಕೋಟಿ ಹಣ ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ದೂರುದಾರರು ಹಣ ವರ್ಗಾವಣೆ ಮಾಡಿದ್ದ ಆರೋಪಿಯ ಬ್ಯಾಂಕ್ ಖಾತೆಗಳ ವಿವರ ಸಂಗ್ರಹಿಸಲಾಗಿತ್ತು. ಖಾತೆಗಳಲ್ಲಿ ₹ 84 ಲಕ್ಷ ಹಣವಿತ್ತು. ಉಳಿದ ಹಣವನ್ನೆಲ್ಲ ಆರೋಪಿ ಡ್ರಾ ಮಾಡಿಕೊಂಡಿದ್ದರು.

ಹೀಗಾಗಿ, ₹ 84 ಲಕ್ಷ ಹಣವಿದ್ದ ಖಾತೆಯನ್ನು ವಹಿವಾಟು ನಡೆಸದಂತೆ ಜಪ್ತಿ ಮಾಡಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ

₹ 18 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: 'ಡ್ರಗ್ಸ್ ಮಾರಾಟ ಹಾಗೂ ಸಾಗಣೆ ವಿರುದ್ಧ ಜುಲೈನಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದ್ದು, ₹ 18 ಕೋಟಿ ಮೌಲ್ಯದ 1,785 ಕೆ.ಜಿ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಕಮಿಷನರ್ ಬಿ.ದಯಾನಂದ್ ತಿಳಿಸಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಡ್ರಗ್ಸ್‌ಗೆ ಸಂಬಂಧಪಟ್ಟಂತೆ ನಗರದ 8 ವಿಭಾಗಗಳ ವ್ಯಾಪ್ತಿಯ ಠಾಣೆಗಳಲ್ಲಿ 378 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 487 ಆರೋಪಿಗಳನ್ನು ಬಂಧಿಸಲಾಗಿದ್ದು, ಇದರಲ್ಲಿ 13 ವಿದೇಶಿಯರಿದ್ದಾರೆ' ಎಂದರು.

'ಗಾಂಜಾ, ಅಫೀಮು, ಹೆರಾಯಿನ್, ಹಶೀಷ್, ಚರಸ್, ಕೊಕೇನ್, ಎಂಡಿಎಂಎ ಹಾಗೂ ಇತರೆ ಪ್ರಕಾರದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ 11 ವಿದೇಶಿಯರನ್ನು ಈಗಾಗಲೇ ಗಡಿಪಾರು ಮಾಡಲಾಗಿದೆ' ಎಂದು ಹೇಳಿದರು.

'ಡ್ರಗ್ಸ್ ಮಾರಾಟದ ಜೊತೆಯಲ್ಲಿ, ಸೇವನೆ ಮಾಡುವವರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನಿರ್ಬಂಧಿತ ಸ್ಥಳಗಳಲ್ಲಿ ತಂಬಾಕು ಉತ್ಪನ್ನ ಮಾರುತ್ತಿದ್ದವರ ವಿರುದ್ಧವೂ ಪ್ರಕರಣ ದಾಖಲಿಸಕೊಂಡು, ₹ 5.99 ಲಕ್ಷ ದಂಡ ವಿಧಿಸಲಾಗಿದೆ' ಎಂದು ತಿಳಿಸಿದರು.

ಅಪರಾಧ ಸುದ್ದಿಗಳು

Ministry of Culture Government of India
Azadi Ka Amrit Mahotsav
G20

ಸಾಹಿತ್ಯ ಅಕಾಡೆಮಿ
ಯುವ ಪುರಸ್ಕಾರ್–2024

ಸಾಹಿತ್ಯ ಅಕಾಡೆಮಿಯು ತಾನು ಅಂಗೀಕರಿಸಿದ 24 ಭಾರತೀಯ ಭಾಷೆಗಳಲ್ಲಿ ಪ್ರದಾನ ಮಾಡುವ ಯುವ ಪುರಸ್ಕಾರ್–2024 ಪ್ರಶಸ್ತಿಗಾಗಿ ಆಸಕ್ತ ಪ್ರಕಾಶಕರು ಹಾಗೂ ಯುವ ಸಾಹಿತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ಪ್ರಶಸ್ತಿಯು ರೂ. 50,000/– ನಗದನ್ನು ಒಳಗೊಂಡಿರುತ್ತದೆ. 1 ಜನವರಿ 2024ಕ್ಕೆ 35 ವರ್ಷ ವಯಸ್ಸು ಮೀರದ ಯುವ ಸಾಹಿತಿಗಳು ತಮ್ಮ ಜನ್ಮ ದೃಢೀಕರಣ ಪತ್ರದ ಜೊತೆಗೆ ಪುಸ್ತಕಗಳನ್ನು ದಿನಾಂಕ: 31 ಆಗಸ್ಟ್ 2023ರ ಒಳಗೆ ಸಲ್ಲಿಸಬೇಕಾಗಿ ಕೋರಿದೆ. **ಜನ್ಮ ದೃಢೀಕರಣ ಪತ್ರವಿಲ್ಲದ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ.** ಈ ಪ್ರಶಸ್ತಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಾಹಿತ್ಯ ಅಕಾಡೆಮಿ ವೆಬ್‌ಸೈಟ್ www.sahitya-akademi.gov.inನ್ನು ದಯವಿಟ್ಟು ವೀಕ್ಷಿಸಿ.

ಸಹಿ/– ಕಾರ್ಯದರ್ಶಿ
ಸಾಹಿತ್ಯ ಅಕಾಡೆಮಿ, ನವದೆಹಲಿ
cbc09104/12/0002/2324

ಪಾಲಿಕೆ ಮಾಜಿ ಸದಸ್ಯೆ, ಪತಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ಹಕ್ಕು ಕಾರ್ಯಕರ್ತ ಲಿಂಗರಾಜು ಕೊಲೆ ಪ್ರಕರಣದಲ್ಲಿ ಬಿಬಿಎಂಪಿ ಮಾಜಿ ಸದಸ್ಯೆ ಗೌರಮ್ಮ, ಪತಿ ಸಿ.ಗೋವಿಂದರಾಜು ಹಾಗೂ ಇತರ 10 ಮಂದಿಗೆ ಕರ್ನಾಟಕ ಸರ್ಕಾರ ಸಲ್ಲಿಸಿದ ಅರ್ಜಿಯ ಮೇರೆಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರ ಪೀಠವು ರಾಜ್ಯ ಸರ್ಕಾರದ ಪರವಾಗಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅಮನ್ ಪನ್ವಾರ್ ಮತ್ತು ವಕೀಲ ವಿ.ಎನ್. ರಘುಪತಿ ವಾದ ಆಲಿಸಿದ ನಂತರ ಎಲ್ಲ ಆರೋಪಿಗಳಿಂದ ಪ್ರತಿಕ್ರಿಯೆ ಕೇಳಿತು.

ಗೋವಿಂದರಾಜು ಮತ್ತು ಗೌರಮ್ಮ ಸೇರಿದಂತೆ 12 ಮಂದಿಗೆ ಬೆಂಗಳೂರು ಸೆಷನ್ ನ್ಯಾಯಾಲಯವು 2020ರಂದು ಅಕ್ಟೋಬರ್ 28ರಂದು ಜೀವಾವಧಿ ಶಿಕ್ಷೆ ವಿಧಿಸಿತ್ತು. ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ 2022ರ ನವೆಂಬರ್ 4ರಂದು ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಕರ್ನಾಟಕ ಸರ್ಕಾರ ತನ್ನ ಅರ್ಜಿಯಲ್ಲಿ, 'ಮೃತರ ಪತ್ನಿ ಉಮಾದೇವಿ ಹಾಗೂ ಪುದುರದೃಷ್ಟವಶಾತ್ ಅವರೆಲ್ಲ ಹೇಳಿಕೆ ಬದಲಿಸಿದರು. ಹಣದ ಆಮಿಷಕ್ಕೆ ಒಳಗಾಗಿ ಹಾಗೂ ಜೀವದ ಬೆದರಿಕೆಯಿಂದ ಸಾಕ್ಷಿಗಳು ಹೇಳಿಕೆಗಳನ್ನು ಹಿಂಪಡೆದರು. ಆದ್ದರಿಂದ, ಸಾಕ್ಷಿಗಳು ಮೊದಲಿಗೆ ಪೊಲೀಸರಿಗೆ ನೀಡಿದ ಹೇಳಿಕೆ ವಿಶ್ವಾಸಾರ್ಹವೇ ಅಥವಾ ವಿಚಾರಣೆ ವೇಳೆ ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆ ವಿಶ್ವಾಸಾರ್ಹವೇ ಎಂಬುದನ್ನು ಸಾಬೀತುಪಡಿಸಲು ಯಾವುದೇ ಸಾಕ್ಷಿಗಳಿಲ್ಲ' ಎಂದು ತಿಳಿಸಿದೆ.

ಲಿಂಗರಾಜು ಅವರನ್ನು 2012ರ ನವೆಂಬರ್ 20ರಂದು ಕೊಲೆ ಮಾಡಲಾಗಿತ್ತು. ಅಕ್ರಮ ಆಸ್ತಿ ಸಂಪಾದನೆ ಆರೋಪದ ಮೇಲೆ ಕಾರ್ಪೊರೇಟರ್ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದ್ದರಿಂದ ಅವರನ್ನು ಕೊಚ್ಚಿ ಕೊಲೆ ಮಾಡಲಾಗಿದೆ ಎಂದು ಪ್ರಾಸಿಕ್ಯೂಷನ್ ಪ್ರತಿಪಾದಿಸಿತ್ತು.

ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಆರೋಪಿಸಿ ಗೋವಿಂದರಾಜು ಹಾಗೂ ಗೌರಮ್ಮ ವಿರುದ್ಧ ಲಿಂಗರಾಜು ದೂರು ನೀಡಿದ್ದರು. ಈ ದೂರಿನ ಆಧಾರದಲ್ಲಿ ಗೋವಿಂದರಾಜು ಹಾಗೂ ಗೌರಮ್ಮ ಮನೆ ಮೇಲೆ ಪೊಲೀಸರು ದಾಳಿ ನಡೆಸಿದ್ದರು. ದಾಳಿ ನಡೆದ 11 ದಿನಗಳ ಬಳಿಕ ಲಿಂಗರಾಜು ಕೊಲೆಯಾಗಿತ್ತು. ಕರ್ನಾಟಕ ಹೈಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು. ಪ್ರಕರಣದ ತನಿಖೆಗೆ ವಿಶೇಷ ತನಿಖಾ ದಳ ರಚಿಸಿತ್ತು.

ಪ್ರಜಾವಾಣಿ@75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ನಿಧನ ವಾರ್ತೆ

ಸಿ. ಕಮಲ

ಬೆಂಗಳೂರು: ರಾಜ್ಯ ಸರ್ಕಾರದ ನಿವೃತ್ತ ಉಪ ಕಾರ್ಯದರ್ಶಿ ದಿವಂಗತ ಸಿ. ಕೃಷ್ಣಮೂರ್ತಿ ಅವರ ಪತ್ನಿ ಸಿ. ಕಮಲ (72) ಅವರು ಸೋಮವಾರ ಅನಾರೋಗ್ಯದಿಂದಾಗಿ ನಿಧನರಾದರು.

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಹೂಲಿಕುಂಟೆ ಗ್ರಾಮದ ಕಮಲ ಅವರು ಬೆಂಗಳೂರಿನ ವಿಜಯನಗರದಲ್ಲಿ ನೆಲೆಸಿದ್ದರು. ಅವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ಅಳಿಯ ಡಾ. ಎಚ್. ಜಿ.ರಂಗರಾಜು, ಪ್ರಸ್ತುತ ಮಂಡ್ಯ ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದಾರೆ. 2ನೇ ಅಳಿಯ ಚಂದ್ರಶೇಖರಯ್ಯ ಹೆಚ್.ಜಿ ಅವರು ಬೆಂಗಳೂರು ಉತ್ತರ ವಿ.ವಿ ಕುಲಸಚಿವರಾಗಿದ್ದಾರೆ. 'ಕಮಲ ಅವರ ಅಂತ್ಯಕ್ರಿಯೆಯನ್ನು ಹೂಲಿಕುಂಟೆ ಗ್ರಾಮದಲ್ಲಿ ನಡೆಸಲಾಗುವುದು' ಎಂದು ಕುಟುಂಬದವರು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Lost

ಕಳೆದಿದೆ
ಬೆಂಗಳೂರು ನಗರದ ನಂದಿನಿ ಲೇಔಟ್‌ನ ನಂ. 854ರಲ್ಲಿ ಹನುಮೇಗೌಡ ನಾನು ವಾಸವಾಗಿರುತ್ತೇನೆ. ನನ್ನ ಮೂಲ ಕ್ರಯಪತ್ರವು (ಗೋವಿಂದಪ್ಪರವರಿಂದ ರುದ್ರಣಮ್ಮ) ಕಳೆದು ಹೋಗಿರುತ್ತದೆ. ನನ್ನ ಮೂಲ ಕ್ರಯಪತ್ರ ನಂ. BLND331, dt.20-09-2006 ಯಾರಿಗಾದರೂ ಸಿಕ್ಕರೆ ದಯವಿಟ್ಟು ಈ ಕೆಳಗಿನ ನಂಬರ್‌ನ್ನು ಸಂಪರ್ಕಿಸಿ.
9740007472

I, VASANTH Kumar K.V. residing at No. 31, 1st main road, 2nd stage Arekere MICO Layout, Bannerghatta Road, Bangalore- 560076 have lost my daughter's RISHIKA KIRANA KUMAR, ICSE Original Marks Card of Document ID- 7847505 of year 2023 near Sri Chaitanya PU College, J.P.Nagar FIR No. 0651557/ 2023. If found, please contact: 9980168733

Announcements

ANNOUNCEMENT
I, ZEBA SHERIEN W/o Mohammed Abrar Matheen, R/at. Flat No. 102, 1st Floor, No. 5, Nishant Prime Aprt, Prime Street, Richmond Town, Bengaluru-25 declare that my DOB is wrongly mentioned in some documents as 20-3-1972 instead of correct DOB 19-03-1972, vide affidavit dated 31/07/2023 before Notary Meer Hassan, Bangalore.

Change of Name

CHANGE OF NAME
I, ARASAKUMARAN, R/at. 431, 3rd Cross, M V Garden, Near Police Station, Ulsoor, HAL 2nd Stage, Bengaluru-560008, have changed my name to M ARASAKUMARAN vide affidavit dt. 31/07/2023, before Notary S. Samuel Solomon, Bangalore. Henceforth, I shall be called M ARASAKUMARAN only

CHANGE OF NAME
I, KRISHNAPPA M, Ex Sep No. 6484347N, R/at # 40, Iyengar Layout, 2nd Cross, Ganapathi Nagar, Laggere, Bangalore-58 have changed my daughter's name from VERSHINI to VARSHA K vide affidavit dated 31/07/2023 before Notary V. Rajashekara, Bangalore.

CHANGE OF NAME
I, VENKAT SUBBU, S/o Chinnabba, R/at. Belthur, Kadugodi, Whitefield Road, Bangalore-560067 have changed my name from VENKATA SUBBU to SUBRAMANYAM vide affidavit dated 06/07/2023 before Notary G.B.Turamari, Bangalore.

CHANGE OF NAME
I, BENILDUS M EDWIN, Rank POEL(P) Service No. 162871-N, R/at # 39, 1st Main, 1st Cross, Viveknagar 2nd Stage, Bengaluru-560047, declare that my father's name is wrongly mentioned in Naval Records as Edwin Nelson instead of correct name EDWIN NELSON FURTADO vide affidavit dated 24/07/2023 before Notary Ravi, Bangalore.

I, NIDA ANJUM'D/O MOHAMMED Nisar'R/a #D-103,MK'House 4th'Main Road,New Gurappanapalya, Bangalore'South Dharmaram College, Bangalore- 560029 have'changed'my Name'from AFSHAN KOUSER MOMIN to NIDA ANJUM'Vide affidavit'dated 28.7.2023 before Notary'Mohammed Hussain, Bangalore

DH ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply*
For more information Contact:
9845114560 : 9731810277
9901641752 : 9886213331
080 - 45557163 / 164

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕೆಎಸ್‌ಆರ್‌ಟಿಸಿ ಗೃಹ ನಿರ್ಮಾಣ ಅಕ್ರಮ: ನಾಲ್ವರಿಗೆ ಹಿಂಬಡ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ₹ 12 ಕೋಟಿ ಅವ್ಯವಹಾರ ಎಸಗಿರುವ ಆಪಾದನೆ ಎದುರಿಸುತ್ತಿರುವ ನಾಲ್ವರಿಗೆ ಮೂಲ ವೇತನ ಬಡ್ತಿಯ ನಾಲ್ಕು ಹಂತಗಳನ್ನು ಕಡಿತಗೊಳಿಸಿ ಕೆಎಸ್‌ಆರ್‌ಟಿಸಿ ಶಿಸ್ತುಪಾಲನಾ ಅಧಿಕಾರಿಯೂ ಆಗಿರುವ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಆದೇಶ ಹೊರಡಿಸಿದ್ದಾರೆ.

ಈ ಸಹಕಾರ ಸಂಘದಲ್ಲಿ 2007–08ರಿಂದ 2017–18ರ ವರೆಗೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿಯ 900 ಸದಸ್ಯರು ನಿವೇಶನಕ್ಕಾಗಿ ₹ 40 ಕೋಟಿ ಪಾವತಿಸಿದ್ದರು. ನಿವೇಶನಗಳನ್ನು ಹಂಚಿಕೆ ಮಾಡದೇ ವಂಚಿಸಿದ್ದಾರೆ ಎಂದು ಸಂಘದ ಪದಾಧಿಕಾರಿಗಳಾಗಿದ್ದ ಅಂದಿನ ಲೆಕ್ಕಾಧಿಕಾರಿ ಟಿ.ಎಲ್. ಅರುಣಕುಮಾರ್, ಕೆಂಪೇಗೌಡ ಬಸ್ ನಿಲ್ದಾಣದ ಸಹಾಯಕ ವಿಶ್ವೇಶ್ವರಯ್ಯ, ಅಂದಿನ ಭದ್ರತಾ ಮತ್ತು ಜಾಗೃತಾಧಿಕಾರಿ ಜಿ.ಎ. ಮಂಜುನಾಥ, ರಾಮನಗರ ವಿಭಾಗೀಯ ಸಂಚಲನಾಧಿಕಾರಿ ಪುರುಷೋತ್ತಮ, ಚಾಲಕರಾದ ಎಸ್.ಎನ್. ರಾಜಣ್ಣ, ಸಿ. ರಾಮಯ್ಯ ಅವರೆಲ್ಲರ ವಿರುದ್ಧ 2018ರಲ್ಲಿ ಟಿ. ಹನುಮಂತಪ್ಪ ಅವರು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ವಿಶ್ವೇಶ್ವರಯ್ಯ, ಸೇವಾ ನಿವೃತ್ತಿ ಪಡೆದಿರುವುದರಿಂದ ಅವರಿಗೆ ಸಂಬಂಧಿಸಿದ ಪ್ರಕರಣವನ್ನು ಇತ್ಯರ್ಥ ಪಡಿಸಲಾಗಿತ್ತು. ಉಳಿದ ಆರೋಪಿಗಳ ಬಗ್ಗೆ ತನಿಖೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿತ್ತು. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಕೆ.ಎಂ. ತಮ್ಮಯ್ಯ ವಿಚಾರಣಾಧಿಕಾರಿಯಾಗಿ ವಿಚಾರಣೆ ಪೂರ್ಣಗೊಳಿಸಿದ್ದರು.

ಟಿ.ಎಲ್. ಅರುಣಕುಮಾರ್, ಜಿ.ಎ. ಮಂಜುನಾಥ, ಪುರುಷೋತ್ತಮ, ಮತ್ತು ಎಸ್.ಎನ್. ರಾಜಣ್ಣ ಮೇಲಿನ ಆರೋಪ ಸಾಬೀತಾಗಿದೆ. ಸಿ. ರಾಮಯ್ಯ ಅವರ ಮೇಲಿನ ಆರೋಪ ರುಜುವಾತಾಗಿಲ್ಲ ಎಂದು ಕೆ.ಎಂ. ತಮ್ಮಯ್ಯ ವರದಿ ನೀಡಿದ್ದರು. ಕರ್ನಾಟಕ ಸಹಕಾರ ಸಂಘಗಳ ಉಪನಿಬಂಧಕರು ಕೂಡ ಪರಿಶೀಲನೆ ಮಾಡಿದ್ದರು. ನಾಲ್ವರ ಮೇಲಿನ ಆರೋಪ ರುಜುವಾತಾಗಿದೆ ಎಂದು ಅವರೂ ವರದಿ ನೀಡಿದ್ದರು.

ಇವೆಲ್ಲವನ್ನು ಪರಿಗಣಿಸಿ ಟಿ.ಎಲ್. ಅರುಣಕುಮಾರ್, ಜಿ.ಎ. ಮಂಜುನಾಥ್, ಪುರುಷೋತ್ತಮ ಮತ್ತು ಎಸ್. ಎನ್. ರಾಜಣ್ಣ ಅವರ ನಾಲ್ಕು ಹಂತದ ಬಡ್ತಿಗಳನ್ನು ಇಳಿಸಲು ಅನ್ಬುಕುಮಾರ್ ಆದೇಶಿಸಿದ್ದಾರೆ. ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾಗುವವರೆಗೆ ಇವರ ಉಪದಾನ ಮತ್ತು ನಿವೃತ್ತಿ ಗಳಿಕೆ ರಜೆ ನಗದೀಕರಣಕ್ಕೂ ಶೇ 50ರಷ್ಟು ತಡೆಹಿಡಿಯಲು ಆದೇಶ ನೀಡಿದ್ದಾರೆ.

₹ 3 ಲಕ್ಷ ಸುಲಿಗೆ: ಯೂಟ್ಯೂಬ್ ಚಾನೆಲ್‌ನ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಂಸ ಮಾರಾಟ ಮಳಿಗೆ ಬಗ್ಗೆ ವಿಡಿಯೊ ಸುದ್ದಿ ಬಿತ್ತರಿಸಿ ಪೊಲೀಸರಿಂದ ಜಪ್ತಿ ಮಾಡಿಸುವುದಾಗಿ ಬೆದರಿಸಿ ವ್ಯಾಪಾರಿಯೊಬ್ಬರಿಂದ ₹ 3 ಲಕ್ಷ ಸುಲಿಗೆ ಮಾಡಿರುವ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಆತ್ಮಾನಂದ್ ಹಾಗೂ ಆನಂದ್ ಅಲಿಯಾಸ್ ಫಿಗರ್ ಬಂಧಿತರು. ಇವರಿಬ್ಬರು, ಯೂಟ್ಯೂಬ್‌ನಲ್ಲಿ 'ಎ.ಕೆ. ನ್ಯೂಸ್ ಕನ್ನಡ' ಚಾನೆಲ್ ಮಾಡಿದ್ದರು. ಅದರ ಹೆಸರಿನಲ್ಲಿ ಜನರನ್ನು ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದರು. ಕೆ.ಆರ್. ಪುರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಇವರಿಬ್ಬರನ್ನು ಸೆರೆ ಹಿಡಿಯಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಆತ್ಮಾನಂದ್

ಆನಂದ್

'ವಿಡಿಯೊ ಸುದ್ದಿ ಬಿತ್ತರಿಸುವುದಾಗಿ ಹೇಳಿ ಜನರನ್ನು ಸುಲಿಗೆ ಮಾಡುವುದನ್ನೇ ಆರೋಪಿಗಳು ವೃತ್ತಿ ಮಾಡಿಕೊಂಡಿದ್ದರು. ಸಾದಿಕ್ ಖಾನ್ ಮಾತ್ರ ಸದ್ಯ ದೂರು ನೀಡಿದ್ದಾರೆ. ಬೇರೆ ಯಾರಿಗಾದರೂ ವಂಚನೆಯಾಗಿದ್ದರೆ, ದೂರು ನೀಡಬಹುದು' ಎಂದು ತಿಳಿಸಿವೆ.

ಆರಂಭದಲ್ಲಿ ₹2 ಲಕ್ಷ ವಸೂಲಿ: 'ಕೆ.ಆರ್. ಪುರ ನಿವಾಸಿ ಸಾದಿಕ್ ಖಾನ್, ಮಾಂಸ ಮಾರಾಟ ಮಳಿಗೆ ಇಟ್ಟುಕೊಂಡಿದ್ದಾರೆ. ನಾಲ್ಕು ತಿಂಗಳ ಹಿಂದೆ ಅಂಗಡಿ ಬಳಿ ಹೋಗಿದ್ದ ಆರೋಪಿಗಳು, 'ನಾವು 'ಎ.ಕೆ. ನ್ಯೂಸ್ ಕನ್ನಡ' ಚಾನೆಲ್ ವರದಿಗಾರರು. ನಿಮ್ಮ ಅಂಗಡಿ ಬಗ್ಗೆ ಸುದ್ದಿ ಬಿತ್ತರಿಸಿ, ಪೊಲೀಸರಿಂದ ಜಪ್ತಿ ಮಾಡಿಸುತ್ತೇವೆ' ಎಂಬುದಾಗಿ ಬೆದರಿಸಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ. '₹ 5 ಲಕ್ಷ ನೀಡಿದರೆ ಸುದ್ದಿ ಮಾಡುವುದಿಲ್ಲವೆಂದು ಆರೋಪಿಗಳು ಹೇಳಿದ್ದರು. ಹೆದರಿದ್ದ ಸಾದಿಕ್, ₹ 2 ಲಕ್ಷ ನೀಡಿದ್ದರು. ಇದಾದ ನಂತರವೂ ಆರೋಪಿಗಳ ಕಿರುಕುಳ ಮುಂದುವರಿದಿತ್ತು. ಪುನಃ ಹಣಕ್ಕೆ ಆರೋಪಿಗಳು ಬೇಡಿಕೆ ಇರಿಸಿದ್ದರು. ಆದರೆ, ಹಣವಿಲ್ಲವೆಂದು ಸಾದಿಕ್ ಹೇಳಿದ್ದರು.' 'ಹಣ ನೀಡಲಿಲ್ಲವೆಂಬ ಕಾರಣಕ್ಕೆ ಆರೋಪಿಗಳು, ಕೆ.ಆರ್.ಪುರ ಪೊಲೀಸರ ಮೂಲಕ ಸಾದಿಕ್ ಅಣ್ಣನ ಅಂಗಡಿ ಮೇಲೆ ದಾಳಿ ಮಾಡಿಸಿದ್ದರು. ನಂತರ, ಸಾದಿಕ್ ಅಂಗಡಿ ಮೇಲೂ ದಾಳಿ ಮಾಡಿಸುವುದಾಗಿ ಬೆದರಿಸಿ ಪುನಃ ₹ 1 ಲಕ್ಷ ಪಡೆದಿದ್ದರು. ಪ್ರತಿ ತಿಂಗಳು ₹ 20 ಸಾವಿರದಿಂದ ₹ 25 ಸಾವಿರ ನೀಡುವಂತೆಯೂ ಆರೋಪಿಗಳು ಒತ್ತಾಯಿಸಿದ್ದರು.' ಎಂದು ತಿಳಿಸಿವೆ.

₹ 500 ಮುಖಬೆಲೆ ಖೋಟಾ ನೋಟು ಜಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರದಿಂದ ಖೋಟಾ-ನೋಟುಗಳನ್ನು ತಂದು ನಗರದಲ್ಲಿ ಚಲಾವಣೆ ಮಾಡುತ್ತಿದ್ದ ಆರೋಪದಡಿ ಮೂವರನ್ನು ಕಾಟನ್‌ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡು ಕಲ್ಲಪಲ್ಲಿಯ ಸರವಣನ್ (34), ಕೇರಳದ ತಿರುವನಂತಪುರಂ ದೇವನ್ (20) ಹಾಗೂ ಎಸ್. ನಿತಿನ್ (19) ಬಂಧಿತರು. ಇವರಿಂದ ₹500 ಮುಖಬೆಲೆಯ 1,307 (₹6,53,500) ನೋಟು ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. 'ಪ್ರಮುಖ ಆರೋಪಿ ಸರವಣನ್, ಆಗಾಗ ಬಿಹಾರದ ಪಟ್ನಾಗೆ ಹೋಗುತ್ತಿದ್ದ. ಅಲ್ಲಿಯ ವ್ಯಕ್ತಿಯೊಬ್ಬರಿಗೆ ಅಸಲಿ ನೋಟುಗಳ ₹ 25 ಸಾವಿರ ನೀಡಿ, ₹ 1 ಲಕ್ಷ ಮೊತ್ತಕ್ಕೆ ಖೋಟಾ ನೋಟುಗಳನ್ನು ತಂದು ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣ, ರೈಲು ನಿಲ್ದಾಣ ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿ ಸಹಚರರ ಜೊತೆ ಸೇರಿ ಚಲಾವಣೆ ಮಾಡುತ್ತಿದ್ದ' ಎಂದು ತಿಳಿಸಿದರು.

ಸರವಣನ್

ದೇವನ್

ನಿತಿನ್

ಇನ್‌ಸ್ಟಾಗ್ರಾಂ ಮೂಲಕ ನಿರ್ವಹಣೆ: 'ಆರೋಪಿಗಳು ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಖಾತೆ ತೆರೆದಿದ್ದರು. ಅದರ ಮೂಲಕವೇ ಖೋಟಾ ನೋಟು ವ್ಯವಹಾರ ನಡೆಸುತ್ತಿದ್ದರು' ಎಂದು ಹೇಳಿದರು.

'ಆರೋಪಿಗಳು ಖೋಟಾ ನೋಟು ಚಲಾವಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿತ್ತು. ಜುಲೈ 28ರಂದು ಕಾರ್ಯಾಚರಣೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಖೋಟಾನೋಟು ಮುದ್ರಣ ಮಾಡುತ್ತಿರುವ ಬಿಹಾರದ ವ್ಯಕ್ತಿ ಹಾಗೂ ಇತರರ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ' ಎಂದರು.

₹ 10 ಲಕ್ಷ ಮೊತ್ತಕ್ಕೆ ಖೋಟಾ ನೋಟು: 'ಸರವಣನ್ ಬಿಹಾರದಿಂದ ಇದುವರೆಗೂ ₹10 ಲಕ್ಷ ಮೊತ್ತಕ್ಕೆ ಖೋಟಾನೋಟು ಖರೀದಿಸಿ ತಂದಿದ್ದಾನೆ. ಕೇರಳ, ಕರ್ನಾಟಕ, ತಮಿಳುನಾಡಿನಲ್ಲಿ ₹ 4 ಲಕ್ಷ ಮೊತ್ತದ ಖೋಟಾನೋಟುಗಳನ್ನು ಚಲಾವಣೆ ಮಾಡಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಬಿಡಿಎ ಪೆರಿಫೆರಲ್ ವರ್ತುಲ ರಸ್ತೆ: ಸ್ವಾಧೀನಗೊಂಡ ಭೂಮಿ ಮಾಲೀಕರು ಮತ್ತು ರೈತರ ಒಕ್ಕೊರಲ ಒತ್ತಾಯ

‘ಪರಿಹಾರ ಹೆಚ್ಚು ಕೊಡಿ; ಇಲ್ಲ ಎನ್‌ಒಸಿ ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘18 ವರ್ಷಗಳಿಂದ ಬದುಕು ನರಕವಾಗಿದೆ. ಇರುವ ಭೂಮಿಗೆ ಪರಿಹಾರ ಸಿಕ್ಕಿಲ್ಲ, ಕಷ್ಟಕ್ಕೂ ಮಾರಾಟ ಮಾಡಲು ಆಗುತ್ತಿಲ್ಲ. ಅಪ್ಪನ ಕಾಲದಲ್ಲಿ ಭೂಸ್ವಾಧೀನಕ್ಕೆ ಅಧಿಸೂಚನೆಯಾದರೂ ಇನ್ನೂ ಏನೂ ಸಿಕ್ಕಿಲ್ಲ. ನಮಗೆ ನಿಮ್ಮ ರಸ್ತೆ ಬೇಡ, ಬ್ರಿಟಿಷರ ಕಾಲದ ನಿಮ್ಮ ಬಿಡಿಗಾಸಿನ ಪರಿಹಾರವೂ ಬೇಡ. 2013ರಂತೆ ಹೆಚ್ಚಿನ ಪರಿಹಾರಕೊಡಿ. ಇಲ್ಲದಿದ್ದರೆ ಭೂಮಿ ನಮಗೆ ಬಿಟ್ಟುಬಿಡಿ, ಎನ್‌ಒಸಿ ಕೊಡಿ, ನಮ್ಮ ಜೀವನ ನಾವು ನೋಡಿಕೊಳ್ಳುತ್ತೇವೆ...’

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಬಿಡಿಎ ಸೋಮವಾರ ಆಯೋಜಿಸಿದ್ದ ಪೆರಿಫೆರಲ್ ವರ್ತುಲ ರಸ್ತೆ ಯೋಜನೆಗೆ ಸ್ವಾಧೀನಗೊಂಡ ಭೂ ಮಾಲೀಕರು ಹಾಗೂ ರೈತರ ಜೊತೆಗಿನ ಕುಂದುಕೊರತೆ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಇವು.

‘ಸುಪ್ರೀಂ ಕೋರ್ಟ್ ತೀರ್ಪು ಪ್ರಶ್ನಿಸಿ ಉನ್ನತ ಪೀಠಕ್ಕೆ ಮೇಲ್ಮನವಿ ಸಲ್ಲಿಸಲು ನಮ್ಮ ಬಳಿ ಹಣವಿಲ್ಲ. ನಮ್ಮ ಪರವಾಗಿ ಸರ್ಕಾರವೇ ನ್ಯಾಯಾಲಯದಲ್ಲಿ ಅರ್ಜಿ ಹಾಕಬೇಕು. ಇಲ್ಲದಿದ್ದರೆ 2013ರಲ್ಲಿ ಜಾರಿಗೆ ತಂದ ಕಾಯ್ದೆಯಂತೆ ಪರಿಹಾರ ನೀಡಿ. ಬಿಡಿಎ ಕಾಯ್ದೆಯಂತೆ ಪರಿಹಾರ ನೀಡಬೇಕು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕರಣದಲ್ಲಿ ಸರ್ಕಾರ ಹಾಗೂ ಬಿಡಿಎ ಮಾತ್ರ ವಾದಿಗಳು ಮತ್ತು ಪ್ರತಿವಾದಿಗಳು. ರೈತರು ಅಲ್ಲಿರಲಿಲ್ಲ’ ಎಂದು ರೈತರು ದೂರಿದರು.

‘ರಸ್ತೆಗೆ ಜಮೀನು ಸ್ವಾಧೀನ ಆಗಿದ್ದು 2-3 ಗುಂಟೆ ಜಮೀನು ಮಾತ್ರ ಉಳಿದಿದೆ. ಇದನ್ನು ಭೂ ಪರಿವರ್ತನೆ ಮಾಡಲು ಅರ್ಜಿ ಹಾಕಿದರೂ ಸಾಧ್ಯವಾಗುತ್ತಿಲ್ಲ. ನಮಗೆ ಹಳೆ ಪರಿಹಾರಕ್ಕಿಂತ ಅದೇ ಗ್ರಾಮದಲ್ಲಿ ಬದಲು ಜಮೀನು ಕೊಡಿಸಿ. ಈ ಯೋಜನೆಯಲ್ಲಿ ಜಮೀನು ಕಳೆದುಕೊಳ್ಳುವ ನಮಗೆ ಸುತ್ತಮುತ್ತ ಹಳ್ಳಿಗಳಲ್ಲಿರುವ ಸರ್ಕಾರಿ ಜಮೀನನ್ನು ಬದಲಿಯಾಗಿ ನೀಡಿ. ಆಗ ನಾವು ಅಲ್ಲೇ ವ್ಯವಸಾಯ ಮಾಡಿಕೊಂಡು ಹೋಗುತ್ತೇವೆ’ ಎಂದು ನಾಗೇನಹಳ್ಳಿ, ಹನುಮಸಾಗರ, ಹೊಸಕೋಟೆಯ ಭೂಮಾಲೀಕರು ಹೇಳಿದರು.

ಪಿಆರ್‌ಆರ್ ಭೂ ಸ್ವಾಧೀನ ಕುಂದು ಕೊರತೆ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರೈತರು ಹಾಗೂ ಭೂ ಮಾಲೀಕರ ಜೊತೆ ಸಂವಾದ ನಡೆಸಿದರು – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಉಪಮುಖ್ಯಮಂತ್ರಿ ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆ
- ಮೇಲ್ಮನವಿ ಸಲ್ಲಿಸಲು ಹಣವಿಲ್ಲ ಎಂದ ರೈತರು
- ಬದಲಿ ಜಮೀನು ನೀಡುವಂತೆ ಬೇಡಿಕೆ

ಯೋಜನೆ ನಿಲ್ಲಿಸುವುದಿಲ್ಲ: ಉಪಮುಖ್ಯಮಂತ್ರಿ

‘ನಾನು ಸ್ವಾಧೀನ ಆಗಿರುವ ಭೂಮಿ ಡಿನೋಟಿಫೈ ಮಾಡೊಲ್ಲ. ಎನ್‌ಒಸಿ ನೀಡಲು ಸಾಧ್ಯವಿಲ್ಲ. ನಾನು ಈ ಯೋಜನೆ ನಿಲ್ಲಿಸುವುದಿಲ್ಲ. ಅದನ್ನು ನೇರವಾಗಿ ನಿಮಗೆ ಸ್ಪಷ್ಟಪಡಿಸುತ್ತೇನೆ. ಆದರೆ ಯಾವ ರೀತಿ ನಿಮ್ಮ ಹಿತ ಕಾಯಬೇಕು, ಯಾವ ರೀತಿ ನಿಮಗೆ ಹೆಚ್ಚಿನ ಅನುಕೂಲ ಆಗುವಂತೆ ಅಗತ್ಯ ಕ್ರಮ ಕೈಗೊಳ್ಳುತ್ತೇನೆ. ರಸ್ತೆಯೂ ಆಗಬೇಕು, ನಿಮಗೂ ನ್ಯಾಯ ಒದಗಿಸಬೇಕು ಎಂಬುದು ನನ್ನ ಉದ್ದೇಶ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಕಾಲಮಿತಿಯಲ್ಲಿ ಯೋಜನೆ ಜಾರಿ, ಪರ್ಯಾಯ ಭೂಮಿ ಹಂಚಿಕೆ, ಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಎನ್‌ಒಸಿ ನೀಡಬೇಕು, ಬದಲಿ ನಿವೇಶನ ನೀಡುವ ಬಗ್ಗೆ ಸಲಹೆ ನೀಡಿದ್ದೀರಿ. ಕಾನೂನು ತಜ್ಞರ ಜೊತೆ ಚರ್ಚೆ ಮಾಡುತ್ತೇನೆ. ನಂತರ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ಆದಷ್ಟು ಬೇಗ ಈ ವಿಚಾರವಾಗಿ ತೀರ್ಮಾನ ಮಾಡಲಾಗುತ್ತದೆ’ ಎಂದರು.

‘ಪೆರಿಫೆರಲ್ ವರ್ತುಲ ರಸ್ತೆ ಯೋಜನೆ ಭೂಸ್ವಾಧೀನಕ್ಕೆ 2007ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಈ ಯೋಜನೆಗೆ 25 ಸಾವಿರ ಕೋಟಿ ಅಗತ್ಯವಿದೆ. ಆಗಲೇ ಈ ರಸ್ತೆ ನಿರ್ಮಾಣವಾಗಿದ್ದರೆ, ಇಷ್ಟು ಹೊರೆ ಆಗುತ್ತಿರಲಿಲ್ಲ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಬಿಡಿಎಗೆ ಹೊಸ ಭೂಸ್ವಾಧೀನ ಕಾನೂನು ಅನ್ವಯ ಆಗುವುದಿಲ್ಲ. ನಮ್ಮ ಸರ್ಕಾರ ಹೊಸ ಭೂಮಿಗೆ ಅಧಿಸೂಚನೆ ಹೊರಡಿಸುವ ಪರಿಸ್ಥಿತಿಯಲ್ಲಿ ಇಲ್ಲ. ನಾವು ಈ ಯೋಜನೆಯನ್ನು ಮುಂದಕ್ಕೆ ತಳ್ಳಿಕೊಂಡು ಹೋಗಲು ಆಗುವುದಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಭೂ ಮಾಲೀಕರು ಹೀಗೆಂದರು...

- ಮನೆಯಲ್ಲಿ ನನ್ನ ಫೋಟೊ ಹಾಕುವ ಮುನ್ನ ಪರಿಹಾರ ಕೊಡಿ, ಇಲ್ಲವೇ ಜಮೀನು ಬಿಟ್ಟಬಿಡಿ
- ಬೆಂಗಳೂರು ನಗರಕ್ಕೆ ಅನುಕೂಲವಾಗುತ್ತದೆ, ಉದ್ಯಮಿಗಳಿಗೆ ಪ್ರಯೋಜನ ಅನ್ನುತ್ತೀರಿ... ರೈತರಿಗೆ ಏನು ಪ್ರಯೋಜನ ಹೇಳಿ...?
- ಎರಡು–ಮೂರು ವರ್ಷಕ್ಕೊಮ್ಮೆ ಅಲೈನ್‌ಮೆಂಟ್ ಬದಲಾಯಿಸುತ್ತಿದ್ದಾರೆ. ಬಿಲ್ಡರ್‌ಗಳಿಗೆ, ರಾಜಕಾರಣಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ.
- ಪಿಆರ್‌ಆರ್ ಅಂದರೆ ಪೊಲಿಟಿಸಿಯನ್ ರಿಕ್ವೈರ್ಡ್ ರೋಡ್. ರಾಜಕಾರಣಿಗಳಿಗಾಗಿ ಮಾತ್ರ.
- ಪರಿಹಾರಕ್ಕೆ ಬಿಡಿಎ ಕಾನೂನು ಎನ್ನುತ್ತೀರಿ... 5 ವರ್ಷ ಯೋಜನೆ ಆರಂಭವಾಗದಿದ್ದರೆ ಭೂಸ್ವಾಧೀನ ರದ್ದಾಗುತ್ತದೆ ಎಂದು ಅದೇ ಕಾನೂನಿನಲ್ಲಿದೆ. ನಿಮಗೆ ಬೇಕಾದ್ದನ್ನು ಮಾತ್ರ ಪರಿಗಣಿಸುತ್ತೀರಾ?
- ಭೂಸ್ವಾಧೀನವಾದಾಗ ತಂದೆಗೆ 60 ವರ್ಷ, ಇದೀಗ 76 ವರ್ಷ. ಅವರಿಗೆ ಬರಲು ಸಾಧ್ಯವಾಗುತ್ತಿಲ್ಲ. ಮಗಳಾಗಿ ನಾನು ಬಂದಿದ್ದೇನೆ. ಸ್ವಾಧೀನಪಡಿಸಿಕೊಂಡ ಮನೆಗೆ ಬದಲಿ ಮನೆ ನೀಡಿ.
- ನೈಸ್ ರಸ್ತೆಗೆ ಲಿಂಕ್ ಮಾಡಲು ಪಕ್ಕದಲ್ಲೇ ಸರ್ಕಾರಿ ಜಾಗ, ಗೋಮಾಳ ಇದೆ. ಅದನ್ನು ಬಿಟ್ಟು 300 ಮನೆ ಕೆಡವಲು ನೋಟಿಫೈ ಮಾಡಿದ್ದಾರೆ.
- ನಗರದ ಸಂಚಾರ ಸಮಸ್ಯೆಗೆ ಫ್ಲೈಓವರ್ ಮಾಡಿ, ಸುರಂಗ ಮಾರ್ಗ ಮಾಡಿ, ರೈತರನ್ನು ಬಿಟ್ಟುಬಿಡಿ ಸ್ವಾಮಿ
- ದೇವರಿಗೆ ನಾವು ಕೈ ಮುಗಿಯುವುದಿಲ್ಲ, ಹಾಳಾಗಿ ಹೋಗಿದ್ದೇವೆ. ನೀವೆಲ್ಲ ದೇವರಂತೆ ಕುಳಿತಿದ್ದೀರಿ, ಕೈ ಮುಗಿದು ಕೇಳುತ್ತೇವೆ, ನ್ಯಾಯ ಕೊಡಿಸಿ.
- ಸಚಿವರೇ, ನೀವೆಲ್ಲ ಅಲ್ಲಿ ಕುಳಿತಿದ್ದೀರಲ್ಲ. ನಮಗೆ ಕೊಡುವುದಾಗಿ ಹೇಳುತ್ತಿರುವ ಪರಿಹಾರ ನಿಮಗೆ ನ್ಯಾಯ ಅನ್ನಿಸುತ್ತಾ? ಹೇಳಿ ನೋಡೋಣ...
- ಪಿಆರ್‌ಆರ್ ಹತ್ತಿರವೇ ಹಲವು ರಸ್ತೆಗಳಿವೆ. ಪರ್ಯಾಯ ರಸ್ತೆಗಳೇ ಸಾಕಲ್ಲವೇ? ಅಧಿಕಾರಿಗಳು, ಎಂಜಿನಿಯರ್‌ಗಳು ಓದಿದ್ದವರು, ಅವರಿಗೆ ಗೊತ್ತಾಗುವುದಿಲ್ಲವೇ?

ಬಾಲೇಖಾನ್ ಪ್ರಶಸ್ತಿಗೆ ಆಯ್ಕೆ

ಬೆಂಗಳೂರು: ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಫೌಂಡೇಷನ್ ಟ್ರಸ್ಟ್ ನೀಡುವ 2022ನೇ ಸಾಲಿನ ‘ಇನ್ಫೊಸಿಸ್– ಸಿತಾರ್ ನವಾಜ್ ಬಾಲೇಖಾನ್ ಸ್ಮರಣಾರ್ಥ ಪ್ರಶಸ್ತಿ’ಗೆ ಸರೋದ್ ವಾದಕ ಉಸ್ತಾದ್ ಆಶೀಶ್ ಖಾನ್ ಆಯ್ಕೆಯಾಗಿದ್ದಾರೆ.

‘ಸಿತಾರ್ ನವಾಜ್ ಉಸ್ತಾದ ಬಾಲೇಖಾನ್ ಸ್ಮರಣಾರ್ಥ ಸಹಕಲಾವಿದ ಪ್ರಶಸ್ತಿ’ಗೆ ತಬಲಾ ವಾದಕ ಸತೀಶ್ ಹಂಪಿಹೊಳಿ ಆಯ್ಕೆಯಾಗಿದ್ದಾರೆ. ಇನ್ಫೊಸಿಸ್– ಸಿತಾರ್ ನವಾಜ್ ಬಾಲೇಖಾನ್ ಸ್ಮರಣಾರ್ಥ ಪ್ರಶಸ್ತಿಯು ₹1 ಲಕ್ಷ ನಗದು, ಸಿತಾರ್ ನವಾಜ್ ಉಸ್ತಾದ ಬಾಲೇಖಾನ್ ಸ್ಮರಣಾರ್ಥ ಸಹಕಲಾವಿದ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿಯು ಆಗಸ್ಟ್ 5ರಂದು ಜಯನಗರದಲ್ಲಿರುವ ಯುವಪಥದ ವಿವೇಕ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಚರ್ಚ್ ಸ್ಟ್ರೀಟ್: ನಾರುತ್ತಿದೆ ಒಳಚರಂಡಿ

ಬೆಂಗಳೂರಿನ: ಚರ್ಚ್ ಸ್ಟ್ರೀಟ್‌ನಲ್ಲಿ ಕಟ್ಟಡವೊಂದರ ಒಳಚರಂಡಿ ನೀರು ರಸ್ತೆಯ ಮೇಲೆಯೇ ಹರಿಯುತ್ತಿದ್ದು, ಈ ಪ್ರದೇಶ ಗಬ್ಬೆದ್ದು ನಾರುತ್ತಿದೆ.

ಅಕ್ರಮವಾಗಿ ಹುಕ್ಕಾಬಾರ್ ನಡೆಸುತ್ತಿರುವ ಕಟ್ಟಡದಿಂದ ಒಳಚರಂಡಿ ನೀರು ಹರಿದರೂ, ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ, ಸ್ಮಾರ್ಟ್ ಸಿಟಿ ಕಂಪನಿ ಕ್ರಮ ಕೈಗೊಂಡಿಲ್ಲ. ಕೂಡಲೇ ಸಮಸ್ಯೆ ಬಗೆಹರಿಸುವಂತೆ ಎಎಪಿ ಉಪಾಧ್ಯಕ್ಷ ಮೋಹನ್ ದಾಸರಿ ಆಗ್ರಹಿಸಿದ್ದಾರೆ.

ಆದೇಶ ಹಿಂಪಡೆಯಲು ಆಗ್ರಹಿಸಿ ಕಾಲ್ನಡಿಗೆ ಜಾಥಾ

‘ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಬೇಡಿ’

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ರೈತರು ಮತ್ತು ಬೀದಿ ಬದಿ ವ್ಯಾಪಾರಿಗಳು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರ್ಯಾಂಡ್ ಬೆಂಗಳೂರು ಹೆಸರಿನಲ್ಲಿ ನಗರದ ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವ ಆದೇಶವನ್ನು ಕೂಡಲೇ ಹಿಂಪಡೆಯುವಂತೆ ಆಗ್ರಹಿಸಿ ರೈತರು ಮತ್ತು ಬೀದಿ ಬದಿ ವ್ಯಾಪಾರಿಗಳು ಸೋಮವಾರ ಕಾಲ್ನಡಿಗೆ ಜಾಥಾ ನಡೆಸಿದರು.

ಅಖಿಲ ಕರ್ನಾಟಕ ರೈತರ ಮತ್ತು ವ್ಯಾಪಾರಿಗಳ ಸಂಘದ ಆಶ್ರಯದಲ್ಲಿ ಈ ಜಾಥಾ ಹಮ್ಮಿಕೊಳ್ಳಲಾಗಿತ್ತು. ಕೆ.ಆರ್. ಪುರ ಸಂತೆ ಮೈದಾನದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಕಾಲ್ನಡಿಗೆ ಜಾಥಾ ನಡೆಸಲಾಯಿತು.

‘ರಾಜಧಾನಿ ಬೆಂಗಳೂರಿನಲ್ಲಿ ಸುಮಾರು 2 ಲಕ್ಷ ಕುಟುಂಬಗಳು ಬೀದಿ ಬದಿ ವ್ಯಾಪಾರದಲ್ಲಿ ತೊಡಗಿಕೊಂಡಿವೆ. ಹೂವು, ಹಣ್ಣು–ತರಕಾರಿ, ಮಸಾಲೆ ಪದಾರ್ಥಗಳನ್ನು ಮಾರಾಟ ಮಾಡುತ್ತಾ ಜೀವನ ನಡೆಸುತ್ತಿದ್ದೇವೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿದ್ದೇವೆ. ಸದನದಲ್ಲಿ ನಮ್ಮ ಪರವಾಗಿ ಮಾತನಾಡುವ ಜನಪ್ರತಿನಿಧಿಗಳೇ ಇಲ್ಲ’ ಎಂದು ಬೀದಿಬದಿ ವ್ಯಾಪಾರಿಗಳು ದೂರಿದರು.

‘ಬಿಬಿಎಂಪಿ ಅಧಿಕಾರಿಗಳು ಕ್ರೇನ್ ಸಹಾಯದಿಂದ ಪಾದಚಾರಿ ಮಾರ್ಗಗಳಲ್ಲಿ ದೊಡ್ಡ ದೊಡ್ಡ ಹೂವಿನ ಕುಂಡಗಳನ್ನು ಇಡುವುದರ ಮೂಲಕ ನಮ್ಮನ್ನು ಬೀದಿಗೆ ತಳ್ಳುವ ಹುನ್ನಾರ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಬೀದಿಬದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವ ಪ್ರಸ್ತಾವವನ್ನು ಕೂಡಲೇ ಕೈಬಿಡಬೇಕು. ರಾಜ್ಯದ ಬೀದಿಬದಿ ವ್ಯಾಪಾರಿಗಳ ಸಮೀಕ್ಷೆ ನಡೆಸಿ ಗುರುತಿನ ಚೀಟಿ ನೀಡಬೇಕು. ಪ್ರತ್ಯೇಕ ನಿಗಮ–ಮಂಡಳಿ ಸ್ಥಾಪಿಸಿ ಬೀದಿಬದಿ ವ್ಯಾಪಾರಿಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕು. ಕಟ್ಟಡ ಮತ್ತು ಇತರೆ ಕಾರ್ಮಿಕರಿಗೆ ನೀಡುವ ಸೌಲಭ್ಯಗಳನ್ನು ಈ ವ್ಯಾಪಾರಿಗಳಿಗೂ ಒದಗಿಸಬೇಕು’ ಎಂದು ಆಗ್ರಹಿಸಿದರು.

ಹಿತ ರಕ್ಷಣೆಗೆ ಕ್ರಮ: ‘ಬೆಂಗಳೂರಿನ ಬಹುತೇಕ ರಸ್ತೆಗಳ ಪಾದಚಾರಿ ಮಾರ್ಗದಲ್ಲಿ ಜನರಿಗೆ ಓಡಾಡಲು ಅವಕಾಶವೇ ಇಲ್ಲದಂತಾಗಿದೆ. ಹೀಗಾಗಿ, ಬೀದಿಬದಿ ವ್ಯಾಪಾರಿಗಳ ಹಿತ ರಕ್ಷಣೆ ಜತೆಗೆ ಪಾದಚಾರಿಗಳ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುವುದು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸೋಮವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆಸಿದ ಅವರು, ‘ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಬೇಕೆಂಬ ಒತ್ತಡವಿದೆ. ಈ ಬಗ್ಗೆ ನಾನೇ ಖುದ್ದಾಗಿ ಪರಿಶೀಲಿಸಿದ್ದೇನೆ. ನಗರದ ಅನೇಕ ಭಾಗದಲ್ಲಿ ರಸ್ತೆಯೇ ಇಲ್ಲ. ಬೀದಿ ವ್ಯಾಪಾರಿಗಳ ವಿರುದ್ಧ ನಾವಿಲ್ಲ, ಅವರಿಗೆ ತೊಂದರೆ ನೀಡುವ ಉದ್ದೇಶವೂ ಇಲ್ಲ. ಅವರು ಕೂಡ ಬದುಕಬೇಕು, ಜೀವನ ಮಾಡಬೇಕು. ಆದರೆ, ಸಾರ್ವಜನಿಕರ ಓಡಾಟಕ್ಕೆ ಪಾದಚಾರಿ ಮಾರ್ಗದಲ್ಲಿ ಆಕ್ರಮಿಸಿಕೊಳ್ಳಬಾರದು. ಪಾದಚಾರಿಗಳ ಸಂಚಾರಕ್ಕೆ ರಸ್ತೆ ಬಿಟ್ಟರೇ ಯಾವುದೇ ರೀತಿ ಅಭ್ಯಂತರವಿಲ್ಲ. ಇಬ್ಬರ ಹಿತರಕ್ಷಣೆ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದು ತಿಳಿಸಿದರು.

‘ಮಹಿಳಾ ಪ್ರಾತಿನಿಧ್ಯ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿ ಸೇರಿದಂತೆ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಯಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಬೇಕೆಂದು ಕರ್ನಾಟಕ ಪತ್ರಕರ್ತೆಯರ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಮನವಿ ಸಲ್ಲಿಸಿತು.

ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ ಪದಾಧಿಕಾರಿಗಳು, ಮುದ್ರಣ ಮತ್ತು ದೃಶ್ಯ ಮಾಧ್ಯಮದಲ್ಲಿ ನೂರಾರು ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದು, ಪತ್ರಕರ್ತೆಯರಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ. ನೇಮಕಾತಿಗಳಲ್ಲಿ ಪ್ರಾತಿನಿಧ್ಯ ಕೊಡಿಸುವಂತೆ ಕೋರಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಿವಿಧ ಸಮಿತಿಗಳು ಹಾಗೂ ಮಾಧ್ಯಮಕ್ಕೆ ಸಂಬಂಧಿಸಿದ ಆಯ್ಕೆ ಸಮಿತಿಗಳಲ್ಲಿ ಕನಿಷ್ಠ ಇಬ್ಬರು ಪತ್ರಕರ್ತೆಯರ ನೇಮಿಸಬೇಕು. ಸಂಘದ ಕಾರ್ಯಚಟುವಟಿಕೆಗಳಿಗೆ ಅಗತ್ಯ ಕಟ್ಟಡ ಅಥವಾ ನಿವೇಶನ ಒದಗಿಸುವುದು, ಪತ್ರಕರ್ತೆಯರಿಗೆ ಮಾಸಾಶನ ನೀಡುವಾಗ ವಯಸ್ಸಿನ ಮಿತಿ ಇಳಿಕೆ, ಆರೋಗ್ಯ ವಿಮೆ ಸೇರಿದಂತೆ ಇತರೆ ಬೇಡಿಕೆ ಈಡೇರಿಸಬೇಕೆಂದು ಕೋರಿದರು.

ಮನವಿ ಪತ್ರ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದರು. ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ, ಪ್ರಧಾನ ಕಾರ್ಯದರ್ಶಿ ಮಂಜುಶ್ರೀ ಕಡಕೋಳ, ಉಪಾಧ್ಯಕ್ಷೆ ವಾಣಿಶ್ರೀ, ಮಾಜಿ ಅಧ್ಯಕ್ಷೆ ಶಾಂತಲಾ ಧರ್ಮರಾಜ್, ಪದಾಧಿಕಾರಿಗಳಾದ ಚೇತನಾ ಬೆಳಗೆರೆ, ಶ್ರೀಜಾ ವಿ.ಎನ್., ಶಾಂತ ತಮ್ಮಯ್ಯ, ಶೀಲಾ ಸಿ. ಶೆಟ್ಟಿ, ಗೊರೂರು ಪಂಕಜ, ಹಲೀಮತ್ ಸಾದಿಯಾ, ಮೇರಿ ಜೋಸೆಫ್ ಇದ್ದರು.

ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಜಯನಗರ ಸಾರ್ವಜನಿಕ ಆಸ್ಪತ್ರೆಗೆ ಸೋಮವಾರ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭೇಟಿ ನೀಡಿ ಪರಿಶೀಲಿಸಿದರು. ಶಾಸಕ ಸಿ.ಕೆ. ರಾಮಮೂರ್ತಿ ಇದ್ದರು – ಪ್ರಜಾವಾಣಿ ಚಿತ್ರ

ಎಕ್ಸ್‌ಪ್ರೆಸ್ ವೇ: ನಿಯಮ ಮೀರಿದರೆ ₹ 500 ದಂಡ

ಇಂದಿನಿಂದ ದ್ವಿಚಕ್ರ, ತ್ರಿಚಕ್ರ ವಾಹನ ನಿಷೇಧ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ (ರಾಷ್ಟ್ರೀಯ ಹೆದ್ದಾರಿ– 275) ದ್ವಿಚಕ್ರ ವಾಹನ, ಆಟೊ, ಕೃಷಿ ವಾಹನಗಳು ಸೇರಿದಂತೆ ವಿವಿಧ ಬಗೆ ವಾಹನಗಳ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹೇರಿರುವ ನಿಷೇಧ ಸೋಮವಾರದಿಂದ ಜಾರಿಗೆ ಬರಲಿದೆ.

ನಿಯಮ ಮೀರಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಸವಾರರು ರಸ್ತೆಗಿಳಿದರೆ ಪೊಲೀಸರು ₹500 ದಂಡ ವಿಧಿಸಲಿದ್ದಾರೆ. ಮೋಟಾರು ವಾಹನ ಕಾಯ್ದೆ ಅನ್ವಯ ಪ್ರಾಧಿಕಾರ ಜುಲೈ 12ರಂದು ಈ ಕುರಿತು ಗೆಜೆಟ್ ಅಧಿಸೂಚನೆ ಹೊರಡಿಸಿದೆ. ಅದರಂತೆ ಇಂದಿನಿಂದ ಜಾರಿಗೆ ಬರುವ ನಿಷೇಧ ಕಟ್ಟುನಿಟ್ಟಾಗಿ ಜಾರಿಗೆ ತರಲು ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ.

ಜಾಗೃತಿ: ನಿಷೇಧ ಕುರಿತು ವಾಹನಗಳ ಸವಾರರಿಗೆ ಜಾಗೃತಿ ಮೂಡಿಸಲು ಟೋಲ್ ಸಂಗ್ರಹ ಕೇಂದ್ರಗಳು, ಹೆದ್ದಾರಿ ಪ್ರವೇಶ ಮತ್ತು ನಿರ್ಗಮನ ಸ್ಥಳಗಳಲ್ಲಿ ಬ್ಯಾನರ್ ಹಾಕಲಾಗಿದೆ. ಡಿಜಿಟಲ್ ಡಿಸ್‌ಪ್ಲೆ ಬೋರ್ಡ್‌ಗಳಲ್ಲೂ ನಿಷೇಧ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದರು.

ಪೊಲೀಸರ ಸಹಯೋಗದಲ್ಲಿ ನಿಷೇಧ ನಿಯಮ ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತದೆ. ಮೊದಲ ದಿನ ಸಾರ್ವಜನಿಕರು ಹಾಗೂ ವಾಹನ ಸವಾರರು ಗಲಾಟೆ ಮಾಡುವ ಸಾಧ್ಯತೆ ಇರುವುದರಿಂದ ಪ್ರಾಧಿಕಾರಿದ ಅಧಿಕಾರಿಗಳು ಮತ್ತು ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಲಿದ್ದಾರೆ ಎಂದು ಹೇಳಿದರು.

ಜಿಲ್ಲಾ ಪೊಲೀಸರು ಕೂಡ ಸಾಮಾಜಿಕ ಜಾಲತಾಣದಲ್ಲಿ ನಿಷೇಧ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ.

ಹೆಚ್ಚುವರಿ ಸಿಬ್ಬಂದಿ: ‘ನಿಯಮ ಜಾರಿಗೆ ಪ್ರಾಧಿಕಾರದವರು ಸಹಕಾರ ಕೋರಿರುವುದರಿಂದ ಜಿಲ್ಲೆಯ ವ್ಯಾಪ್ತಿಗೆ ಬರುವ ಹೆದ್ದಾರಿಯ ಎಲ್ಲ ಪ್ರವೇಶ– ನಿರ್ಗಮನ ಹಾಗೂ ಟೋಲ್ ಸಂಗ್ರಹ ಕೇಂದ್ರಗಳ ಬಳಿಯೂ ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಾಹನಗಳ ಸವಾರರು ಅನಗತ್ಯವಾಗಿ ಎಕ್ಸ್‌ಪ್ರೆಸ್ ವೇಗೆ ಬಾರದೆ, ಸರ್ವೀಸ್ ರಸ್ತೆಯಲ್ಲಿ ಸಂಚರಿಸುವ ಮೂಲಕ ನಿಯಮ ಪಾಲಿಸಬೇಕು. ಆದಾಗ್ಯೂ ಯಾರಾದರೂ ಬಂದರೆ ಸಿಬ್ಬಂದಿ ದಂಡದ ಬಿಸಿ ಮುಟ್ಟಿಸಲಿದ್ದಾರೆ’ ಎಂದು ಎಚ್ಚರಿಕೆ ನೀಡಿದರು.

ಯಾವುದಕ್ಕೆಲ್ಲಾ ನಿಷೇಧ

- ಮೋಟಾರ್ ಸೈಕಲ್‌ಗಳು (ಸ್ಕೂಟರ್ ಹಾಗೂ ಇತರ ದ್ವಿಚಕ್ರ ವಾಹನ)
- ಮೂರು ಚಕ್ರದ ವಾಹನಗಳು (ಇ– ಗಾಡಿ, ಇ–ರಿಕ್ಷಾ)
- ಮೋಟಾರ್ ರಹಿತ ವಾಹನಗಳು
- ಟ್ರೇಲರ್‌ಗಳ ಸಹಿತ ಅಥವಾ ರಹಿತವಾದ ವಿಶೇಷ ಟ್ರಾಕ್ಟರ್‌ಗಳು
- ಮಲ್ಟಿ ಆಕ್ಸೆಲ್ ಹೈಡ್ರಾಲಿಕ್ ಟ್ರೈಲರ್ ವಾಹನಗಳು
- ಕ್ವಾಡ್ರಿ ಸೈಕಲ್‌ಗಳು

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

H.O:#156, 8th Main, 17th Cross, Malleswaram, Bengaluru - 560 055. Ph: 080- 23341972/ 2344 9450/ 2344 2648

ಸ್ಥಿರಾಸ್ತಿ ಸ್ವಾಧೀನತೆಯ ಪ್ರಕಟಣೆ

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ **ದಿನಾಂಕ:25–04–2023ರಂದು** ಈ ಕೆಳಗಿನ ಸಾಲಗಾರರರಾದ **ಶ್ರೀ ಸಿದ್ದಯ್ಯ ಜಿ, ಶ್ರೀ ಗೋವಿಂದಪ್ಪ ರವರ ಪುತ್ರ, ನಂ.3860, 2ನೇ ಮೈನ್, 4ನೇ ಕ್ರಾಸ್, ಗಾಯತ್ರಿನಗರ, ಬೆಂಗಳೂರು–560021** ರವರಿಗೆ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.18,50,209/– + ರೂ.2,44,209/– ಒಟ್ಟು ರೂ.21,19,418/ (ಇಪ್ಪತ್ತೊಂದು ಲಕ್ಷ ಹತ್ತೊಂಬತ್ತು ಸಾವಿರದ ನಾಲ್ಕು ನೂರ ಹದಿನೆಂಟು ರೂಗಳು ಮಾತ್ರ)**ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.)

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು **ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಿದ ಆಸ್ತಿಯನ್ನು 26 ಜುಲೈ 2023 ರಂದು ಸ್ವಾಧೀನಪಡಿಸಿಕೊಂಡಿದ್ದಾರೆ.**

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, #156, 8ನೇ ಮೈನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 055.** ದಿನಾಂಕ **31–03–2023**ರವರೆಗೆ ಬರಬೇಕಾದ ಬಾಕಿ **ರೂ.18,50,209/–/ + ರೂ.2,44,209//– ಒಟ್ಟು ರೂ.21,19,418/ (ಇಪ್ಪತ್ತೊಂದು ಲಕ್ಷ ಹತ್ತೊಂಬತ್ತು ಸಾವಿರದ ನಾಲ್ಕು ನೂರ ಹದಿನೆಂಟು ರೂಗಳು ಮಾತ್ರ)** ಪಾವತಿಸಬೇಕು ಮತ್ತು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಬಿ.ಬಿ.ಎಂ.ಪಿ/ಬಿ.ಡಿ.ಎ. ನಂ.26, ಹಳೇ ನಂ.3860, 4ನೇ ಮೈನ್, 'ಬಿ' ಬ್ಲಾಕ್, ಸುಬ್ರಮಣ್ಯನಗರ, ಬೆಂಗಳೂರು, ಬಿ.ಬಿ.ಎಮ್.ಪಿ ವಾರ್ಡ್ ನಂ.9 (ಸುಬ್ರಮಣ್ಯನಗರ) (ಪಿ.ಐ.ಡಿ ನಂ.9–42–26) (ಹೊಸ ಪಿ.ಐ.ಡಿ ನಂ. 066–ಡಬ್ಲ್ಯು0084–25) ನಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 29.6 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 59 ಅಡಿ ಇರುವ ಆಸ್ತಿ ಚಕ್ಕುಬಂದಿ: ಪೂರ್ವಕ್ಕೆ–ಮನೆ ನಂ.3861, ಪಶ್ಚಿಮಕ್ಕೆ–ಆಸ್ತಿ ನಂ.3859, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ–ಮನೆ ನಂ.3874 & 3874/ಎ.

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ **ದಿನಾಂಕ:18–04–2023ರಂದು** ಈ ಕೆಳಗಿನ ಸಾಲಗಾರರಾದ **ಶ್ರೀ ವೆಂಕಟಪ್ಪಸಿ, ಶ್ರೀ ಚಿನ್ನಪ್ಪ ರವರ ಪುತ್ರ, ನಂ.1, ಪಿ.ಡಬ್ಲ್ಯು.ಡಿ ಮೈನ್ ರೋಡ್, ಎ.ನಾರಾಯಣಪ್ಪ, ಬೆಂಗಳೂರು–560016** ರವರಿಗೆ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.24,41,546/– + ರೂ.4,17,561/– ಒಟ್ಟು ರೂ.28,84,107/–** (ಇಪ್ಪತ್ತೆಂಟು ಲಕ್ಷ ಎಂಬತ್ತನಾಲ್ಕು ಸಾವಿರದ ಒಂದುನೂರ ಏಳು ರೂಗಳು ಮಾತ್ರ) ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು **ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಿದ ಆಸ್ತಿಯನ್ನು 26 ಜುಲೈ 2023 ರಂದು ಸ್ವಾಧೀನಪಡಿಸಿಕೊಂಡಿದ್ದಾರೆ.**

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, #156, 8ನೇ ಮೈನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 055 ದಿನಾಂಕ 31–03–2023**ರವರೆಗೆ ಬರಬೇಕಾದ ಬಾಕಿ **ರೂ.24,41,546/– + ರೂ.4,17,561/– –ಒಟ್ಟು ರೂ.28,84,107/– (ಒಟ್ಟು ಇಪ್ಪತ್ತೆಂಟು ಲಕ್ಷ ಎಂಬತ್ತನಾಲ್ಕು ಸಾವಿರದ ಒಂದುನೂರ ಏಳು ರೂಗಳು ಮಾತ್ರ)** ಪಾವತಿಸಬೇಕು ಮತ್ತು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಬಿ.ಬಿ.ಎಮ್.ಪಿ/ಬಿ.ಡಿ.ಎ ವಾರ್ಡ್ ನಂ. 56 (ಬಿ.ನಾರಾಯಣಪುರ) ದಲ್ಲಿರುವ ಬಿ.ಬಿ.ಎಮ್.ಪಿ/ಬಿ.ಡಿ.ಎ ನಂ.1, ಖಾತಾ ನಂ.1/1, ಬಿ.ನಾರಾಯಣಪ್ಪ ವಿಲೇಜ್, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಈಸ್ಟ್ ತಾಲ್ಲೂಕು ಪೂರ್ವದಿಂದ ಪಶ್ಚಿಮಕ್ಕೆ–(105+88)/2 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ–(108+100)/2 ಅಡಿ ಇದ್ದು ಚಕ್ಕುಬಂದಿ: ಪೂರ್ವಕ್ಕೆ–ಪಿಳ್ಳಪ್ಪನವರ ಸ್ವತ್ತು, ಪಶ್ಚಿಮಕ್ಕೆ–ರಸ್ತೆ, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ–ವಿಜಯರಾಜು.ಸಿ ಮತ್ತು ನಂದಗೋಪಾಲ್ ರವರ ಸ್ವತ್ತು

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ **ದಿನಾಂಕ:26–04–2023**ರಂದು ಈ ಕೆಳಗಿನ ಸಾಲಗಾರರಾದ **ಶ್ರೀ ಬೈರಣ್ಣ ರವರ ಪುತ್ರ, ಶ್ರೀ ಶಾಮಣ್ಣ.ವೈ.ಬಿ. ನಂ.48, ಹೆಗ್ಗನಹಳ್ಳಿ ಮೈನ್ ರೋಡ್, ಪೀಣ್ಯ 2ನೇ ಹಂತ, ಬೆಂಗಳೂರು–560091** ರವರಿಗೆ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.8,96,954/–+16,10,657/– ಒಟ್ಟು 25,32,611/– (ಇಪ್ಪತ್ತೈದು ಲಕ್ಷ ಮೂವತ್ತೆರಡು ಸಾವಿರದ ಆರುನೂರ ಹನ್ನೊಂದು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು **ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಿದ ಆಸ್ತಿಯನ್ನು 26 ಜುಲೈ 2023 ರಂದು ಸ್ವಾಧೀನಪಡಿಸಿಕೊಂಡಿದ್ದಾರೆ.**

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, #156, 8ನೇ ಮೈನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 055 ದಿನಾಂಕ 31–03–2023**ರವರೆಗೆ ಬರಬೇಕಾದ ಬಾಕಿ **ರೂ.8,96,954/–+16,10,657/– ಒಟ್ಟು 25,32,611/– (ಇಪ್ಪತ್ತೈದು ಲಕ್ಷ ಮೂವತ್ತೆರಡು ಸಾವಿರದ ಆರುನೂರ ಹನ್ನೊಂದು ರೂಗಳು ಮಾತ್ರ)** ಪಾವತಿಸಬೇಕುಮತ್ತು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಬಿ.ಬಿ.ಎಂ.ಪಿ. ಖಾತಾ ನಂ.166, ವಿ.ಪಿ.ಖಾತಾ ನಂ.186 ರಲ್ಲಿನ ಆಸ್ತಿ ನಂ.48, ಹೆಗ್ಗನಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಇಲ್ಲಿ ಬಿ.ಬಿ.ಎಂ.ಪಿ. ವಾರ್ಡ್ ನಂ.71 (ಹೆಗ್ಗನಹಳ್ಳಿ) ಪೂರ್ವದಿಂದ ಪಶ್ಚಿಮಕ್ಕೆ–30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ–45 ಅಡಿ ಚಕ್ಕುಬಂದಿ: ಪೂರ್ವಕ್ಕೆ–ಸೈಟ್ ನಂ.49, ಪಶ್ಚಿಮಕ್ಕೆ–ಸೈಟ್ ನಂ.45, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ–ಸ30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ–45 ಅಡಿ ಚಕ್ಕುಬಂದಿ: ಪೂರ್ವಕ್ಕೆ–ಸೈಟ್ ನಂ.49, ಪಶ್ಚಿಮಕ್ಕೆ–ಸೈಟ್ ನಂ.45, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ–ಸೈಟ್ ನಂ.47.

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ **ದಿನಾಂಕ:02.05.2023ರಂದು** ಈ ಕೆಳಗಿನ ಸಾಲಗಾರರಾದ **ಶ್ರೀ ರಾಮಕೃಷ್ಣ ರವರ ಪುತ್ರ, ಶ್ರೀ ಶಂಕರ್.ಹೆಚ್.ಆರ್ ನಂ.498, 13ನೇ ಕ್ರಾಸ್, 5ನೇ ಮೈನ್, ಪೂರ್ಣಚಂದ್ರ ಲೇಔಟ್, 'ಡಿ' ಗ್ರೂಪ್, ನಾಗರಭಾವಿ 2ನೇ ಹಂತ, ಬೆಂಗಳೂರು–560091** ರವರಿಗೆ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.83,30,890/–(ಎಂಬತ್ತಮೂರು ಲಕ್ಷ ಮೂವತ್ತು ಸಾವಿರದ ಎಂಟುನೂರ ತೊಂಬತ್ತು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು **ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಿದ ಆಸ್ತಿಯನ್ನು 26 ಜುಲೈ 2023 ರಂದು ಸ್ವಾಧೀನಪಡಿಸಿಕೊಂಡಿದ್ದಾರೆ.**

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, #156, 8ನೇ ಮೈನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 055 ದಿನಾಂಕ 30–04–2023**ರವರೆಗೆ ಬರಬೇಕಾದ ಬಾಕಿ **ರೂ.83,30,890/– (ಎಂಬತ್ತಮೂರು ಲಕ್ಷ ಮೂವತ್ತು ಸಾವಿರದ ಎಂಟುನೂರ ತೊಂಬತ್ತು ರೂಗಳು ಮಾತ್ರ)** ಪಾವತಿಸಬೇಕು ಮತ್ತು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರ ಆಸ್ತಿಯ ವಿವರ

ಆಸ್ತಿ ನಂ.102, ಇ ಬ್ಲಾಕ್, ಸರ್ವೆ ನಂ.20/2,3,7. 21/1,2, 22, 27/4,5,7,8(ಪಿ), 27/14, 28(ಪಿ), 35/1(ಪಿ), 36/1(ಪಿ), 36/6(ಪಿ), 37/22, 40/4, 40/5, 116, 118, 121(20/1), 122, 123, 124 (20/1), 125 ಮತ್ತು 126ರಲ್ಲಿ ದಿ ರಾಜಾಜಿನಗರ ಹೌಸಿಂಗ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ ನವರು ಮಾಡಿರುವ ಲೇಔಟ್, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಯವರಿಂದ ರೆಸಲ್ಯೂಷನ್ ಅಮೆಂಡೆಡ್ ನಂ.222/ಬಿ/2003 ದಿನಾಂಕ 30–12–2003 ರೀತ್ಯ ಶ್ರೀಗಂಧದಕವಲು ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂತರು ನಾರ್ತ್ ತಾಲ್ಲೂಕು, ಬೆಂಗಳೂರಿನಲ್ಲಿದ್ದು, ಈಗ ಬಿ.ಬಿ.ಎಂ.ಪಿ ವಾರ್ಡ್ ನಂ.129, ಜ್ಞಾನಭಾರತಿ, ಬೆಂಗಳೂರಿನಲ್ಲಿದ್ದು ಪೂರ್ವದಿಂದ ಪಶ್ಚಿಮಕ್ಕೆ–40 ಅಡಿ ಮತ್ತು ಉತ್ತರದಿಂದ ದಕ್ಷಿನಣಕ್ಕೆ–30 ಅಡಿ ಒಟ್ಟು 1200 ಚದರಡಿ ಇದ್ದು ಚಕ್ಕುಬಂದಿ ಪೂರ್ವಕ್ಕೆ–ರಸ್ತೆ, ಪಶ್ಚಿಮಕ್ಕೆ–ಸೈಟ್ ನಂ.117, ಉತ್ತರಕ್ಕೆ–ಸೈಟ್ ನಂ.101, ದಕ್ಷಿಣಕ್ಕೆ–ಸೈಟ್ ನಂ.103.

ಕೆಳಸಹಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯೂರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ (ಸೆಕೆಂಡ್) ಆರ್ಡಿನೆನ್ಸ್ 2002 (ಆದೇಶ 3 ರ 2002) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13 (2) & 13(12) ನಿಯಮ 8 & 9 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ **ದಿನಾಂಕ:06–05–2023ರಂದು ಶ್ರೀಮತಿ ಮುನಿಮಾರಮ್ಮ, ಮರಣ ಹೊಂದಿದ್ದು, ಅವರ ನ್ಯಾಯವಾದ ಹಕ್ಕುದಾರರಾದ ಶ್ರೀ ಶ್ರೀನಿವಾಸಲು.ಕೆ, ಲೇಟ್ ಕೊಂಡಪ್ಪನವರ ಪುತ್ರ, ಶ್ರೀಮತಿ ವಿಮಲ.ಕೆ, ಲೇಟ್ ಕೊಂಡಪ್ಪನವರ ಪುತ್ರಿ ಶ್ರೀಮತಿ ಪದ್ಮಾವತಿ ಕೆ, ಲೇಟ್ ಕೊಂಡಪ್ಪನವರ ಪುತ್ರಿ, ಶ್ರೀಮತಿ ದೀಪ ಕೆ, ಲೇಟ್ ಕೊಂಡಪ್ಪನವರ ಪುತ್ರಿ, ನಂ.15, 'ಎಫ್' ಬೀದಿ, ಪಿ.ಕೆ ಕಾಲೋನಿ, ಶಾಂತಿನಗರ, ಬೆಂಗಳೂರು–560027,** ಇವರಿಗೆ ನೋಟೀಸ್‌ನಲ್ಲಿ ಸೂಚಿಸಿರುವ ಮೊತ್ತವಾದ **ರೂ.5,94,697/– (ಐದು ಲಕ್ಷ ತೊಂಬತ್ತನಾಲ್ಕು ಸಾವಿರದ ಆರುನೂರ ತೊಂಬತ್ತೇಳು ರೂಗಳು ಮಾತ್ರ)** ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ 60 ದಿನಗಳ ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು ಹಣವನ್ನು ಮರುಪಾವತಿಸಲು ವಿಫಲವಾಗಿದ್ದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಸಹಿದಾರರು **ಸೆಕ್ಷನ್ 13(4)ರ ನಿಯಮ 8 ಮತ್ತು 9ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಿದ ಆಸ್ತಿಯನ್ನು ಕೆಳಸಹಿದಾರರು 26 ಜುಲೈ 2023 ರಂದು ಸ್ವಾಧೀನಪಡಿಸಿಕೊಂಡಿದ್ದಾರೆ.**

ಸಾಲಗಾರರು, ಅಡಮಾನದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ, **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, #156, 8ನೇ ಮೈನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 055 ದಿನಾಂಕ 31–03–2023**ರವರೆಗೆ ಬರಬೇಕಾದ ಬಾಕಿ **ರೂ.5,94,697/– (ಐದು ಲಕ್ಷ ತೊಂಬತ್ತನಾಲ್ಕು ಸಾವಿರದ ಆರುನ್ನೂರ ತೊಂಬತ್ತೇಳು ರೂಗಳು ಮಾತ್ರ)** ಮತ್ತು (ಯಾವುದೇ ಹಣವನ್ನು ಪಾವತಿಸಿದ್ದಲ್ಲಿ, ಅದನ್ನು ಅಂತಿಮ ಸೆಟಲ್ಮೆಂಟ್ ಸಮಯದಲ್ಲಿ ಹಾಗೂ ಬಡ್ಡಿಯನ್ನು ಪರಿಗಣಿಸಲಲಾಗುವುದು.

ಸ್ಥಿರಾಸ್ತಿಯ ವಿವರ

ಬಿ.ಬಿ.ಎಂ.ಪಿ ವಾರ್ಡ್ 70 (ಶಾಂತಿನಗರ) (ಪಿ.ಐ.ಡಿ ನಂ.70–120–25), (ಹೊಸ ಪಿ.ಐ.ಡಿ ನಂ.117–ಡಬ್ಲ್ಯು0143–2) ನಲ್ಲಿರುವ ಬಿ.ಬಿ.ಎಂ.ಪಿ/ಬಿ.ಡಿ.ಎ. ಸ್ವತ್ತು ನಂ.25, ಪಿ.ಕೆ.ಕಾಲೋನಿ, ಶಾಂತಿನಗರ, ಬೆಂಗಳೂರು ಪೂರ್ವದಿಂದ ಪಶ್ಚಿಮಕ್ಕೆ–20 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ–15 ಅಡಿ. ಚಕ್ಕುಬಂದಿ: ಪೂರ್ವಕ್ಕೆ–ಸೈಟ್ ನಂ.02, ಪಶ್ಚಿಮಕ್ಕೆ–ರಸ್ತೆ, ಉತ್ತರಕ್ಕೆ–ಸೈಟ್ ನಂ.26, ಜಕ್ಷಿಣಕ್ಕೆ–ಸೈಟ್ ನಂ.24.

ದಿನಾಂಕ: 26.07.2023
ಬೆಂಗಳೂರು.

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.
ಅಧಿಕೃತ ಅಧಿಕಾರಿ

ಎಚ್ಚರ! ನಿಮ್ಮ ನಡೆ ನುಡಿಗಳನ್ನು ಮಕ್ಕಳು ನೋಡುತ್ತಿದ್ದಾರೆ

ಮಕ್ಕಳು ಪ್ರಪಂಚಕ್ಕೆ ತೆರೆದುಕೊಳ್ಳುತ್ತಾರೆ. ಹೊರಗಿನ ಅನೇಕ ಪ್ರಭಾವಗಳಿಗೆ ಒಳಗಾಗುತ್ತಾರೆ. ಅವನ್ನೆಲ್ಲಾ ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾದರೆ ಮನೆಯಲ್ಲಿ ಮಕ್ಕಳಿಗೆ ಬೆಂಬಲವಾಗಿ, ಮಾರ್ಗದರ್ಶಕರಾಗಿ, ಮಾದರಿಯಾಗಿ ಪೋಷಕರು ಇರಬೇಕಾಗುತ್ತದೆ

ರಮ್ಯಾ ಶ್ರೀಹರಿ

ತಂದೆ-ತಾಯಿಯ ಯಾವ ವರ್ತನೆಗಳು ಮಕ್ಕಳನ್ನು ಯಾವ ರೀತಿ ಗಾಸಿಗೊಳಿಸುತ್ತದೆ; ಅದು ಹೇಗೆ ಅವರ ಮಾನಸಿಕ, ಬೌದ್ಧಿಕ, ಭಾವನಾತ್ಮಕ ಬೆಳವಣಿಗೆಗೆ ಅಡಚಣೆಯಾಗುತ್ತದೆ ಎನ್ನುವುದರ ಚಿಂತನೆ ಮತ್ತು ಚರ್ಚೆ ಪೋಷಕರಿಗೆ ಅತಿ ಅಗತ್ಯವಾದದ್ದು. ಮಕ್ಕಳ ಮನಸ್ಸಿಗೆ ನೋವುಂಟುಮಾಡಿ ಅವರ ವ್ಯಕ್ತಿತ್ವವನ್ನೇ ಊನಗೊಳಿಸುವ ತಮ್ಮ ಯಾವುದೇ ವರ್ತನೆಯ ಬಗ್ಗೆ ಪೋಷಕರು ಜಾಗೃತರಾಗಿ, ತಾವೇ ಜವಾಬ್ದಾರಿ ಹೊತ್ತು, ಮೊದಲ ಆದ್ಯತೆಯಾಗಿ ತಮ್ಮಲ್ಲಿನ ಅಂತಹ ವರ್ತನೆಯನ್ನು ಸರಿಪಡಿಸಿಕೊಳ್ಳಬೇಕಾದುದು ಕೇವಲ ತಮ್ಮ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದಷ್ಟೇ ಅಲ್ಲದೆ, ಸಮಾಜದ ಹಿತದೃಷ್ಟಿಯಿಂದಲೂ ಉಚಿತವಾದದ್ದೇ ಹೌದು.

ಉದಾಹರಣೆಗೆ, ಯಾವುದೇ ರೀತಿಯ ಶಿಸ್ತನ್ನು ರೂಢಿಸಿಕೊಳ್ಳದೆ ತಮ್ಮ ಬದುಕನ್ನು ಅಸ್ತವ್ಯಸ್ತವಾಗಿಟ್ಟುಕೊಂಡಿರುವ ಪೋಷಕರು ಆ ಅಶಿಸ್ತಿನ ಕಾರಣಕ್ಕೆ ಉಂಟಾಗುವ ಎಲ್ಲ ತೊಂದರೆಗಳಿಗೆ ಇತರರನ್ನು ಹೊಣೆಗಾರರನ್ನಾಗಿ ಮಾಡುತ್ತಿರುತ್ತಾರೆ. ಅಂತಹ ಪೋಷಕರು ತಮ್ಮ ಅಸಮಾಧಾನಕ್ಕೆ ಮಕ್ಕಳನ್ನೂ ಸದಾ ದೂರುತ್ತಿರುತ್ತಾರೆ. ಆಗ ಮಕ್ಕಳಿಗೆ ಎರಡು ರೀತಿಯ ತೊಂದರೆಗಳಾಗುತ್ತವೆ: ಒಂದು, ಶಿಸ್ತಿನ ಬದುಕನ್ನು ರೂಢಿಸಿಕೊಳ್ಳಲು ಸರಿಯಾದ ಮಾದರಿ ದೊರೆಯದಿರುವುದು; ಇನ್ನೊಂದು, ಪೋಷಕರು ತಮ್ಮ ಹತಾಶೆಗಳನ್ನು ಮಕ್ಕಳ ಮೇಲೆ ತೋರ್ಪಡಿಸಿಕೊಳ್ಳುವುದರಿಂದ ಆಗುವ ಭಾವನಾತ್ಮಕ ನೋವು, ಅಸಹಾಯಕತೆ. ಮಕ್ಕಳಿಗೆ ತಮ್ಮಿಂದ ತೊಂದರೆಯಾಗುತ್ತಿದೆ ಎಂದು ಅರಿತು ತಮ್ಮಲ್ಲಿನ ಈ ವರ್ತನೆಯ ಜವಾಬ್ದಾರಿಯನ್ನು ಪೋಷಕರು ತೆಗೆದುಕೊಳ್ಳದೇ, ಹೀಗೇ ಅವರಿವರ ಮೇಲೆ ದೋಷಾರೋಪಣೆ ಮಾಡುತ್ತಾ ತಮ್ಮ ಎಂದಿನ ಅಶಿಸ್ತಿನ ಬದುಕನ್ನು ಪರಾಮರ್ಶೆಗೊಳಪಡಿಸದೆ ಬದುಕುತ್ತಿದ್ದರೆ ಅದು ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುವುದಿಲ್ಲವೇ?

ಹಾಗಾಗಿ ತಮ್ಮ ತಮ್ಮ ವರ್ತನೆಗಳಿಗೆ ತಾವೇ ಜವಾಬ್ದಾರರಾಗುವುದನ್ನು ಕಲಿಯುವುದು 'ಉತ್ತಮ ಪೋಷಕತ್ವ'ದ ಕಡೆಗೆ ಮೊದಲ ಹೆಜ್ಜೆಯೇ ಹೌದು. ಮಕ್ಕಳು ಸಾಮಾನ್ಯವಾಗಿ ತೋರಿಸುವ ಸಾಧಾರಣ ಹಠ, ಸೋಮಾರಿತನಗಳನ್ನೆಲ್ಲಾ ತಾವು ಪ್ರೌಢತೆಯಿಂದ ನಿರ್ವಹಿಸಲಾರದೆ, ತಮ್ಮ ಬದುಕಿನ ಕಸಿವಿಸಿಗಳ ಮಧ್ಯೆ ಮಕ್ಕಳಿಗೆ ಗಮನ ಕೊಡಲಾಗದೆ ಅದರಿಂದ ಉಂಟಾಗುವ ಪಾಪಪ್ರಜ್ಞೆಯನ್ನು ಹೊರಹಾಕುವ ಮಾರ್ಗವಾಗಿ ಮಕ್ಕಳನ್ನು ನಿಂದಿಸಿ, ಅವಮಾನಿಸಿ, ಕೆಲವೊಮ್ಮೆ ಹೊಡೆದು-ಬಡಿದು ನಂತರ 'ನೀನು ರೇಗಿಸಿದೆ; ತಪ್ಪು ಮಾಡಿದೆ; ಹಾಗಾಗಿ ನಾನು ತಾಳ್ಮೆ ಕಳೆದುಕೊಂಡೆ; ಇಲ್ಲದಿದ್ದರೆ ನಿನ್ನ ಮೇಲೆ ನನಗೆ ತುಂಬಾ ಪ್ರೀತಿಯುಂಟು' ಎಂದೆಲ್ಲಾ ತಮ್ಮ ವರ್ತನೆಯ ಜವಾಬ್ದಾರಿಯನ್ನು ತಾವು ಹೊರದೇ ಮಕ್ಕಳಿಗೆ ವರ್ಗಾಯಿಸುವುದು ಮಕ್ಕಳ ಮನಸ್ಸಿಗೆ ಆಘಾತವನ್ನು ಉಂಟುಮಾಡುತ್ತದೆ.

ಮಕ್ಕಳು ಪ್ರಪಂಚಕ್ಕೆ ತೆರೆದುಕೊಳ್ಳುತ್ತಾರೆ. ಹೊರಗಿನ ಅನೇಕ ಪ್ರಭಾವಗಳಿಗೆ ಒಳಗಾಗುತ್ತಾರೆ. ಅವನ್ನೆಲ್ಲಾ ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾದರೆ ಮನೆಯಲ್ಲಿ ಮಕ್ಕಳಿಗೆ ಬೆಂಬಲವಾಗಿ, ಮಾರ್ಗದರ್ಶಕರಾಗಿ, ಮಾದರಿಯಾಗಿ ಪೋಷಕರಿರಬೇಕಾಗುತ್ತದೆ.

ಹಾಗಾದರೆ ಪೋಷಕರಾದ ಮಾತ್ರಕ್ಕೆ ತಪ್ಪೇ ಮಾಡದಂತೆ, ಸದಾ ಅತ್ಯುತ್ತಮ ವರ್ತನೆಯನ್ನೇ ತೋರಿಸುತ್ತಿರುವುದು ಸಾಧ್ಯವೇ? ಪೋಷಕರೂ ಮನುಷ್ಯರಲ್ಲವೇ? ಹೌದು, ಪೋಷಕರಿಗೂ ದೌರ್ಬಲ್ಯಗಳಿರುತ್ತವೆ; ಎಲ್ಲವನ್ನೂ ಒಮ್ಮೆಲೇ ಬದಲಾಯಿಸಿಕೊಳ್ಳುವುದು ಸಾಧ್ಯವಿಲ್ಲ. ಆದರೆ ತಮ್ಮ ಭಾವನೆಗಳಿಗೆ, ವರ್ತನೆಗಳಿಗೆ, ನಿರ್ಧಾರಗಳಿಗೆ ತಾವೇ ಜವಾಬ್ದಾರರಾಗುತ್ತಾ, ತಮ್ಮನ್ನು ತಾವು ಬದಲಾಯಿಸಿಕೊಳ್ಳಲು ಕಷ್ಟವಾದರೂ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ತಂದೆ ತಾಯಿಯನ್ನು ನೋಡುತ್ತಾ ಬೆಳೆಯುವುದು ಮಕ್ಕಳಿಗೆ ನೈತಿಕ ಬಲ ಕೊಡುತ್ತದೆ. ಮನುಷ್ಯ ಬದುಕಿನ ಸಂಕೀರ್ಣತೆಗಳನ್ನು ಅರ್ಥಮಾಡಿಕೊಳ್ಳುವ ಮನೋಭಾವವೂ, ತನ್ನನ್ನು ಇತರರನ್ನು ಸಹಾನುಭೂತಿಯಿಂದ ನೋಡುವ ಪರಿಪಾಠವೂ ಬೆಳೆಯುತ್ತದೆ. ನಮ್ಮ ಬೆಳವಣಿಗೆಯಲ್ಲೇ ನಮ್ಮ ಮಕ್ಕಳ ಬೆಳವಣಿಗೆಯೂ ಅಡಗಿದೆ ಎಂಬ ಅರಿವು ಪೋಷಕತ್ವಕ್ಕೆ ಅಗತ್ಯವಾಗಿ ಬೇಕಾದ ತಿಳಿವಳಿಕೆ.

ಯಾವುದು ಸರಿ ಯಾವುದು ತಪ್ಪು ಎನ್ನುವ ತೀರ್ಮಾನಕ್ಕೆ ನಾವು ಹೇಗೆ ಬರುತ್ತೇವೆ; 'ನೈತಿಕ- ಅನೈತಿಕ'ಗಳ ನಡುವಿನ ವ್ಯತ್ಯಾಸವನ್ನು ನಾವೆಷ್ಟು ಸೂಕ್ಷ್ಮವಾಗಿ, ಸಾವಧಾನವಾಗಿ ಕಂಡುಕೊಳ್ಳುತ್ತೇವೆ ಎನ್ನುವುದಕ್ಕೆ ಮಕ್ಕಳೂ ಸಾಕ್ಷಿಯಾಗುತ್ತಿರುತ್ತಾರೆ. ನೈತಿಕ-ಅನೈತಿಕಗಳ ಜಿಜ್ಞಾಸೆಯಲ್ಲಿ ನಾವು ತೊಡಗುತ್ತೇವೋ ಇಲ್ಲವೋ; ಅಂತಹ ಜಿಜ್ಞಾಸೆಯಲ್ಲಿರುವಾಗ ನಾವು ಹೇಗೆ ಮಾತನಾಡುತ್ತೇವೆ, ಯಾರೊಂದಿಗೆ ನಮ್ಮ ಗೊಂದಲಗಳನ್ನು ಹಂಚಿಕೊಳ್ಳುತ್ತೇವೆ, ಕೊನೆಗೆ ಸರಿ ಅನಿಸಿದ್ದನ್ನು ಹೇಗೆ ಪಟ್ಟುಬಿಡದೇ ಸತ್ಯವಾದುದಕ್ಕೇ ಅಂಟಿಕೊಂಡಿರಬೇಕೆಂದು ಹೋರಾಡುತ್ತೇವೆ, ನಮ್ಮದೇ ತಪ್ಪಿದ್ದಾಗ ಹೇಗೆ ಪರಿತಪಿಸುತ್ತೇವೆ, ಅದನ್ನು ಸರಿಮಾಡಲು ಹೇಗೆಲ್ಲಾ ಕಷ್ಟಪಡುತ್ತೇವೆ - ಹೀಗೆ ನಮ್ಮ ಜೀವನದ ಒಳಪದರಗಳ ನಾಜೂಕು ವಿನ್ಯಾಸವನ್ನು ಮಕ್ಕಳು ಅಂತರ್ಗತಗೊಳಿಸಿಕೊಳ್ಳುತ್ತಿರುತ್ತಾರೆ. 'ನೈತಿಕ-ಅನೈತಿಕ'ಗಳ ಪರಿಜ್ಞಾನವಿಲ್ಲದೆ ನಡೆಯುವ ಪೋಷಕರ ಮಕ್ಕಳು ಕೀಳರಿಮೆಯಿಂದ, ಅವಮಾನದಿಂದ ನರಳುತ್ತಿರುತ್ತಾರೆ, ಆತ್ಮಗೌರವವಿಲ್ಲದೆ ಸೊರಗುತ್ತಾರೆ.

ತಂದೆ ತಾಯಿ ಪ್ರಪಂಚವನ್ನು ಹೇಗೆ ನೋಡುತ್ತಾರೆ; ಒಂದು ವ್ಯಕ್ತಿಯಾಗಿ ತಮ್ಮನ್ನು ತಾವು ಹೇಗೆ ನೋಡಿಕೊಳ್ಳುತ್ತಾರೆ; ಮಕ್ಕಳನ್ನು ಹೇಗೆ ನೋಡುತ್ತಾರೆ - ಎನ್ನುವುದನ್ನು ಗಮನಿಸುತ್ತಾ, ಅದನ್ನು ಆಧರಿಸಿಯೇ ತಮ್ಮ ಒಳದನಿಯನ್ನು, ಸ್ವ-ಪ್ರತಿಮೆಯನ್ನು (self-image) ಮಕ್ಕಳು ರೂಪಿಸಿಕೊಳ್ಳುತ್ತಿರುತ್ತಾರೆ. ಅಷ್ಟೇ ಅಲ್ಲದೆ, ಇನ್ನೊಂದು ಸಂಗತಿಯೂ ಮಕ್ಕಳ ಭಾವನಾತ್ಮಕ ಬೆಳವಣಿಗೆಯಲ್ಲಿ ಮುಖ್ಯಪಾತ್ರವನ್ನು ವಹಿಸುತ್ತದೆ, ಅದು: ತಂದೆ-ತಾಯಿ ಪರಸ್ಪರರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎನ್ನುವುದು.

ತಂದೆ-ತಾಯಿಯ ನಡುವಿನ ಬಾಂಧವ್ಯದ ಸ್ವರೂಪ ಮಕ್ಕಳನ್ನು ತುಂಬಾ ಪ್ರಭಾವಿಸುತ್ತದೆ. ಹಾಗೆಂದು ಮಕ್ಕಳ ಮುಂದೆ ಜಗಳವನ್ನೇ ಆಡದೇ ನಾವು ಸದಾ ಅನ್ಯೋನ್ಯವಾಗೇ ಇರುತ್ತೇವೆ ಎಂದು ಬಿಂಬಿಸುವುದು ಎಷ್ಟು ಸರಿ? ಜಗಳ ಜೀವನದ, ಸಂಬಂಧಗಳ ಅವಿಭಾಜ್ಯ ಅಂಗ; ಅದು ಸಾಮಾನ್ಯ ಮತ್ತು ಸರ್ವವ್ಯಾಪಿ; ಆತ್ಮೀಯತೆಯನ್ನು ಸಾಧಿಸುವ ಹಾದಿಯಲ್ಲಿ ಅದು ಅನಿವಾರ್ಯವೂ ಹೌದು. ಆದರೆ ಜಗಳ ವೈಯಕ್ತಿಕ ನಿಂದನೆ, ಹೀಯಾಳಿಸುವಿಕೆ, ಇನ್ನೊಬ್ಬರ ಆತ್ಮವಿಶ್ವಾಸವನ್ನು ಕುಂದಿಸುವ ಪ್ರಯತ್ನ - ಹೀಗಿರದೇ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಪರಸ್ಪರ ಪ್ರೀತಿಸುವ ಇಬ್ಬರು ವ್ಯಕ್ತಿಗಳು ಮಾಡುವ ಮನಃಪೂರ್ವಕ ಪ್ರಯತ್ನವಾಗಿರಬೇಕು. ಇಬ್ಬರು ವಿಭಿನ್ನ ವ್ಯಕ್ತಿಗಳು ತಾವೇನು ಅನುಭವಿಸುತ್ತಿದ್ದಾರೆ; ಇನ್ನೊಬ್ಬರಿಂದ ಏನನ್ನು ನಿರೀಕ್ಷಿಸುತ್ತಿದ್ದಾರೆ ಎನ್ನುವುದನ್ನು ಹೇಳಿಕೊಂಡು ಸಾಮರಸ್ಯದಿಂದ ಬಾಳುವ ಪ್ರಯಾಸವಾಗಿ ಜಗಳವಿದ್ದಾಗ ಸಂಘರ್ಷ ನಿರ್ವಹಣೆಯೆನ್ನುವುದು ಸಂಬಂಧದಲ್ಲಿ ಪ್ರಮುಖವಾದದ್ದು, ಜಟಿಲವಾದದ್ದು; ಹಾಗಾಗಿ ತಾಳ್ಮೆಯಿಂದ ಇರಬೇಕೆನ್ನುವುದನ್ನು ಮಕ್ಕಳಿಗೆ ಕಲಿಸಿಕೊಡುತ್ತದೆ.

ಹಾಗಿಲ್ಲದೇ ತಮ್ಮ ಜಗಳದಲ್ಲಿ ಮಕ್ಕಳನ್ನು ಒಳಗೊಳ್ಳುವುದು; ತಂದೆ ತಾಯಿ ಇಬ್ಬರ ನಡುವೆ ಯಾರದಾದರೂ ಒಬ್ಬರ ಪಕ್ಷವನ್ನು ವಹಿಸುವಂತೆ ಒತ್ತಾಯಿಸುವುದು; ತಾನು ಮಾತ್ರ ಸರಿ - ಎಂದು ತೋರಿಸಿಕೊಂಡು ತನ್ನ ಸಂಗಾತಿಯ ದೋಷಗಳನ್ನು, ದುರ್ವರ್ತನೆಗಳನ್ನು ಮಕ್ಕಳ ಮುಂದೆ ಹೇಳಿಕೊಂಡು ಮಕ್ಕಳಿಂದಲೇ ಸಹಾನುಭೂತಿ, ಸಾಂತ್ವನ, ಭಾವನಾತ್ಮಕ ಆಸರೆ ಬಯಸುವುದು; 'ನನ್ನ ಕಷ್ಟಗಳೆಲ್ಲಾ ತೀರಬೇಕಾದರೆ ನೀನು ಹೀಗಿರಬೇಕು, ಹಾಗಿರಬೇಕು' ಎಂದು ಮಕ್ಕಳ ಮೇಲೆ ನಿರೀಕ್ಷೆಯ ಭಾರ ಹೇರುವುದು; ತಮ್ಮ ಸಂಗಾತಿಯ ಬಗೆಗಿನ ಸಿಟ್ಟನ್ನು, ಅತೃಪ್ತಿಯನ್ನು ಮಕ್ಕಳನ್ನು ಮುಂದಿಟ್ಟುಕೊಂಡು ತೋರ್ಪಡಿಸಿಕೊಳ್ಳುವುದು - ಮುಂತಾದ ಪ್ರವೃತ್ತಿಗಳು ಮಕ್ಕಳಲ್ಲಿ ಒಂಟಿತನ, ಅಭದ್ರತೆ, ಅನಾಥಪ್ರಜ್ಞೆ, ಸದಾ ಪೋಷಕರನ್ನು ಮೆಚ್ಚಿಸುವ ಪ್ರಯತ್ನದಿಂದಾಗಿ ತಮ್ಮತನವನ್ನು ಕಂಡುಕೊಳ್ಳದಿರುವುದು ಮುಂತಾದ ತೊಂದರೆಗಳಿಗೆ ದಾರಿಮಾಡಿಕೊಡುತ್ತವೆ.

ಮಕ್ಕಳಿಗೆ ತಂದೆ-ತಾಯಿಯ ಪ್ರೀತಿಗಿಂತ ಮಹತ್ತರ ರಕ್ಷೆ ಇನ್ನೊಂದಿಲ್ಲ. ತಮ್ಮ ಆಂತರ್ಯದ ದನಿಗೆ ಬೆಲೆಕೊಡುವ, ಆತ್ಮಾವಲೋಕನದ ಅಭ್ಯಾಸವುಳ್ಳ, ಪ್ರೀತಿಯನ್ನು ಅದರ ನಾನಾ ರೂಪಗಳನ್ನು, ಆಳವನ್ನು ಅರಿಯಲು ಬೇಕಾದ ಭಾವನಾತ್ಮಕ, ಬೌದ್ಧಿಕ ಮುಕ್ತತೆಯಿರುವ ಪೋಷಕರಿಗಿಂತ ಮಿಗಿಲಾದ ಭಾಗ್ಯ ಮಕ್ಕಳ ಜೀವನದಲ್ಲಿ ಬೇರೆ ಉಂಟೇ?

❖

ನಿದ್ದೆ ಎಂದು 'ನಿದ್ದೆ'ಗೆ ಜಾರಬೇಡಿ!

ಡಾ. ಕುಶ್ವಂತ್ ಕೋಳಿಬೈಲು

ಸಮತೋಲನ ಆಹಾರ, ನಿತ್ಯ ವ್ಯಾಯಾಮ ಮತ್ತು ಸರಿಯಾದ ನಿದ್ದೆ ಉತ್ತಮವಾದ ಆರೋಗ್ಯಕ್ಕೆ ಬೇಕಾದ ಮೂರು ಆಧಾರ ಸ್ತಂಭಗಳು. ಆಹಾರ ಮತ್ತು ವ್ಯಾಯಾಮದ ಬಗ್ಗೆ ಅಗತ್ಯಕ್ಕಿಂತ ಹೆಚ್ಚು ತಲೆಕೆಡಿಸಿಕೊಳ್ಳುವ ನಾವು ನಮ್ಮ ನಿದ್ದೆಯ ಅವಧಿ ಮತ್ತು ಗುಣಮಟ್ಟದ ಬಗ್ಗೆ ಎಚ್ಚರಿಕೆಯನ್ನು ವಹಿಸುವುದಿಲ್ಲ. ಹೆಚ್ಚು ನಿದ್ದೆ ಮಾಡುವವರನ್ನು ಸೋಮಾರಿಗಳೆಂದು ನಿಂದಿಸುವುದು ಮತ್ತು ಲೇವಡಿ ಮಾಡುವುದರ ಮೂಲಕ ನಾವು ಚೆನ್ನಾಗಿ ನಿದ್ದೆ ಮಾಡುವವರನ್ನು ಅಪಹಾಸ್ಯ ಮಾಡುತ್ತೇವೆ. ನಿದ್ದೆಯನ್ನು ನಿಯಂತ್ರಣ ಮಾಡಲು ಆಗದವರನ್ನು ನಾವು ದುರ್ಬಲರು ಮತ್ತು ಇಚ್ಛಾಶಕ್ತಿಯ ಕೊರತೆಯಿರುವವರು ಎಂದು ಮೌಲ್ಯಮಾಪನ ಮಾಡುತ್ತೇವೆ. ಬೇಜವಾಬ್ದಾರಿಯಿಂದ ವರ್ತಿಸಿದವರನ್ನೂ ನಾವು 'ಏಕೆ ಈ ವಿಚಾರದಲ್ಲಿ ನಿದ್ದೆ ಮಾಡಿದಿರಿ' ಎಂದು ಕುಹಕವಾಡುತ್ತೇವೆ.

ಕ್ರಿಯಾಶೀಲ ಮನುಷ್ಯರು ಹೆಚ್ಚು ಕೆಲಸ ಮಾಡಲು ಅಡ್ಡ ಬರುವ ನಿದ್ದೆಯನ್ನು ಶಾಪವೆಂಬಂತೆ ಪರಿಗಣಿಸುವ ವಾತಾವರಣವೂ ಒಂದಾನೊಂದು ಕಾಲದಲ್ಲಿತ್ತು. ಎರಡನೆಯ ವಿಶ್ವಯುದ್ಧದಲ್ಲಿ ಫೈಟರ್ ಪೈಲೆಟ್‌ಗಳು ನಿದ್ದೆಯಿಲ್ಲದೆ ಕಾರ್ಯಾಚರಣೆ ಮಾಡುವ ಸಲುವಾಗಿ ಅವರನ್ನು 'ಯ್ಯಾಫಿಟಮೈನ್ಸ್' (Amphetamines) ಎಂಬ ಪದಾರ್ಥವನ್ನು ತಿನ್ನಿಸಲಾಗುತ್ತಿತ್ತು. ಎಂದರೆ, ನಮ್ಮ ಆರೋಗ್ಯದ ಅಡಿಪಾಯವಾದ ನಿದ್ದೆಗೆ ನಾವೇ ಹಲವು ಕಳಂಕಗಳನ್ನು ಅಂಟಿಸಿಬಿಟ್ಟಿದ್ದೇವೆ; ನಿದ್ದೆಯ ಅಗತ್ಯತೆ ಮತ್ತು ಪ್ರಾಮುಖ್ಯವನ್ನು ನಿರಂತರವಾಗಿ ಅಲ್ಲಗಳೆಯುತ್ತ ಬಂದಿದ್ದೇವೆ !

ಕೈಗಾರಿಕೆಗಳು ಮತ್ತು ವಿವಿಧ ವಾಣಿಜ್ಯ ಕ್ಷೇತ್ರಗಳು ಬೆಳೆದಂತೆ ದಿನದ ಇಪ್ಪತ್ತನಾಲ್ಕು ಗಂಟೆ ಕಾರ್ಯನಿರ್ವಹಿಸಬೇಕಾಗಿ ಬರುವ ಆಸ್ಪತ್ರೆ, ವಿಮಾನನಿಲ್ದಾಣ ಮತ್ತು ಕಾರ್ಖಾನೆಗಳಲ್ಲಿ ರಾತ್ರಿ ಪಾಳಿಯಲ್ಲಿ ಲಕ್ಷಾಂತರ ಜನರು ಕೆಲಸ ಮಾಡುತ್ತಿದ್ದಾರೆ. ಸರಿಯಾದ ನಿದ್ದೆಯಿಂದ ವಂಚಿತರಾಗುತ್ತಿರುವ ಜನರು ಜಾಸ್ತಿಯಾದಂತೆ, ನಿದ್ರಾಹೀನತೆಯು ಆರೋಗ್ಯದ ಮೇಲೆ ಉಂಟುಮಾಡುವ ದುಷ್ಪರಿಣಾಮಗಳೂ ಅನಾವರಣಗೊಳ್ಳುತ್ತಿವೆ.

ನಿದ್ದೆಯು ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡುವಲ್ಲಿ ಎಷ್ಟು ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಮನುಷ್ಯ ನಿದ್ದೆ ಮಾಡಿದಾಗ ಅವನ ಮೆದುಳಿನ ಎಲ್ಲಾ ಚಟುವಟಿಕೆಗಳು ನಿಲ್ಲುವುದಿಲ್ಲ. ಮೆದುಳಿನೊಳಗೆ ವಿವಿಧ ವಿದ್ಯುತ್ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುತ್ತದೆ. ದಿನದಲ್ಲಿ ನಡೆದ ಘಟನೆಗಳನ್ನು ದೀರ್ಘಕಾಲದ ನೆನಪಾಗಿ ಪರಿವರ್ತಿಸುವುದರ ಜೊತೆಗೆ ನಮ್ಮ ಸುಪ್ತ ಜಾಗರೂಕತೆ ಮತ್ತು ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸುವಲ್ಲಿಯೂ ನಿದ್ದೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸ್ಪಷ್ಟವಾಗಿ ಆಲೋಚನೆ ಮಾಡುವುದರಿಂದ ಹಿಡಿದು ಭಾವನಾತ್ಮಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದಕ್ಕೂ ಮನುಷ್ಯ ಉತ್ತಮವಾಗಿ ನಿದ್ದೆ ಮಾಡುವ ಅವಶ್ಯಕತೆಯಿದೆ. ಹೆಚ್ಚಿನ ರಸ್ತೆ ಅಪಘಾತಗಳು ಮತ್ತು ಪ್ರಪಂಚದ ದೊಡ್ಡ ಕೈಗಾರಿಕಾ ಮತ್ತು ಅಣುಶಕ್ತಿಯ ವಿಪತ್ತು ಸಂಭವಿಸಿದ ಪ್ರಕರಣಗಳ ತನಿಖೆಯ ಆಳದಲ್ಲಿ ನಿದ್ರಾಹೀನತೆಯ ಸಮಸ್ಯೆಗಳ ಛಾಯೆಯಿದೆ.

ಹಗಲಾಗುವುದನ್ನು ಮತ್ತು ಕತ್ತಲಾಗುವುದನ್ನು ಗಮನಿಸುವ ಮೂಲಕ ಎಲ್ಲಾ ಜೀವಿಗಳಂತೆ ಮನುಷ್ಯನೂ ದಿನದ ಸಮಯವನ್ನು ಗ್ರಹಿಸಬಲ್ಲನು. ನಮ್ಮೊಳಗಿರುವ ನೈಸರ್ಗಿಕ ಗಡಿಯಾರವು ಮೆದುಳಿಗೆ ಈ ಮಾಹಿತಿಯನ್ನು ರವಾನಿಸುತ್ತಿರುತ್ತದೆ. ಕತ್ತಲಿಗೆ ಪ್ರತಿಕ್ರಿಯೆಯಾಗಿ ದೇಹದ 'ಪೈನಿಯಲ್' ಗ್ರಂಥಿಯಿಂದ ಹೊರಬರುವ 'ಮೆಲಟೋನಿನ್' ಎಂಬ ಹಾರ್ಮೋನ್ ದೇಹದ ಈ ಗಡಿಯಾರವನ್ನು ಚಾಲ್ತಿಯಲ್ಲಿಡುತ್ತದೆ. ಈ ಮೆಲಟೋನಿನ್ ಹಾರ್ಮೋನಿನಲ್ಲಿ ಏನಾದರೂ ವ್ಯತ್ಯಾಸವಾದರೆ ನಿದ್ರಾಹೀನತೆಯ ಸಮಸ್ಯೆಗಳು ಕಂಡುಬರುತ್ತದೆ. ನಮ್ಮ ದೇಹದ ಆರೋಗ್ಯವನ್ನು ನಿಯಂತ್ರಿಸುವ ಇತರೆ ನೂರಾರು ಹಾರ್ಮೋನ್‌ಗಳು ಸಮರ್ಪಕವಾಗಿ ಕೆಲಸ ಮಾಡುವಲ್ಲಿಯೂ ನಿದ್ದೆಯ ಪಾತ್ರವೂ ಪ್ರಮುಖವಾಗಿದೆ. ಮನೋರೋಗಗಳ ಜೊತೆಜೊತೆಗೆ ನಿದ್ರಾಹೀನತೆಯು ರಕ್ತದೊತ್ತಡ, ಸಕ್ಕರೆಕಾಯಿಲೆ, ಬೊಜ್ಜು ಮುಂತಾದ ಕಾಯಿಲೆಗಳಿಗೆ ಕಾರಣವಾಗುವುದರಿಂದ ಹಿಡಿದು ದೇಹದ ರೋಗನಿರೋಧಕ ಶಕ್ತಿಯನ್ನೂ ಕುಂದಿಸುತ್ತದೆ.

ದಿನದಲ್ಲಿ ನಡೆದ ಘಟನೆಗಳನ್ನು ದೀರ್ಘಕಾಲದ ನೆನಪಾಗಿ ಪರಿವರ್ತಿಸುವುದರ ಜೊತೆಗೆ ನಮ್ಮ ಸುಪ್ತ ಜಾಗರೂಕತೆ ಮತ್ತು ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸುವಲ್ಲಿಯೂ ನಿದ್ದೆ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ನಿದ್ದೆ ಸಮರ್ಪಕವಾಗಿದ್ದಾಗ ಮಾತ್ರ ಕನಸುಗಳು ಬೀಳಲು ಸಾಧ್ಯ. ನಿದ್ದೆಯಲ್ಲಿ ಬೀಳುವ ಕನಸುಗಳಿಗೂ ಮತ್ತು ನಮ್ಮ ಮಾನಸಿಕ ಆರೋಗ್ಯಕ್ಕಿರುವ ಸಂಬಂಧಗಳನ್ನು ಈಗ ವಿಶ್ಲೇಷಣೆ ಮಾಡಲಾಗುತಿದೆ. ನಮ್ಮ ಮನಸ್ಸಿನ ಭಾವನೆಗಳನ್ನು ಪರಿಷ್ಕರಿಸುವಲ್ಲಿ ಮತ್ತು ಅರ್ಥ ಮಾಡಿಕೊಳ್ಳುವಲ್ಲಿ ಕನಸುಗಳಿಗೆ ತಮ್ಮದೇ ಆದ ಪ್ರಾಮುಖ್ಯವಿದೆ. ವಿವಿಧ ವೈಜ್ಞಾನಿಕ ವರದಿಗಳು ಮನುಷ್ಯನ ದೇಹಕ್ಕೆ ಕನಿಷ್ಠ ಪಕ್ಷ ಏಳು ಗಂಟೆಗಳ ನಿದ್ದೆಯ ಅವಶ್ಯಕತೆಯಿದೆ ಎಂದು ಸ್ಪಷ್ಟ ಪಡಿಸಿದ್ದರೂ ತಮ್ಮ ದೇಹಕ್ಕೆ ಕಡಿಮೆ ಅವಧಿಯ ನಿದ್ದೆ ಸಾಕಾಗುತ್ತದೆ ಎಂದು ನಂಬುವವರಿದ್ದಾರೆ. ರಾತ್ರಿ ನಿದ್ದೆ ಕೆಡುವ ಸಂದರ್ಭ ಬಂದಲ್ಲಿ ನಾವು ಹಗಲು ನಿದ್ರಿಸುವ ಮೂಲಕ ತಮ್ಮ ದಿನದ ನಿದ್ದೆಯ ಅವಧಿಯನ್ನು ಸರಿದೂಗಿಸಿಕೊಳ್ಳಬಹುದೆಂಬ ತಪ್ಪುಕಲ್ಪನೆಗಳು ನಮ್ಮಲ್ಲಿವೆ. ಅದಕ್ಕಿಂತಲೂ ಆಶ್ಚರ್ಯಕರವಾದ ಸಂಗತಿಯೆಂದರೆ ಹಾಸಿಗೆ ಮೇಲೆ ನಿದ್ದೆಯಿಲ್ಲದೆ ಹೊರಳಾಡಿದ ಸಮಯವನ್ನೂ ನಾವು ನಿದ್ದೆಯ ಸಾಲಿಗೆ ಸೇರಿಸುತ್ತೇವೆ!

ವಾರದಲ್ಲಿ ಮೂರು ದಿನಗಳ ಕಾಲ ನಿದ್ರಾಹೀನತೆಯು ಕಾಡುತ್ತಿದ್ದರೆ ಮತ್ತು ಅಂತಹ ಸಮಸ್ಯೆಯಿಂದ ಯಾರಾದರು ಮೂರು ತಿಂಗಳುಗಳಿಗಿಂತ ಹೆಚ್ಚು ಸಮಯ ಬಳಲಿದರೆ ನಾವು ಅಂತವರನ್ನು 'ನಿದ್ರಾಹೀನತೆ' (Insomnia) ಕಾಯಿಲೆಯಿಂದ ಬಳಲುವವರೆಂದು ಪರಿಗಣಿಸುತ್ತೇವೆ. ನಿದ್ರಾಹೀನತೆಯ ಕಾಯಿಲೆಗೆ ನೀಡುವ ಔಷಧಿಯು ಮೆದುಳಿನ ಮೇಲೆ ದುಷ್ಪರಿಣಾಮ ಬೀರುವುದರಿಂದ ನಿದ್ರಾಹೀನತೆಗಾಗಿ ಯಾವುದೇ ಔಷಧಿಯನ್ನು ವೈದ್ಯರ ಸಲಹೆಯಿಲ್ಲದೆ ಪಡೆಯುವುದು ಅಪಾಯಕಾರಿಯಾಗಬಹುದು. ನಮ್ಮ ಜೀವನಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರೆ ನಾವು ನಮ್ಮ ನಿದ್ದೆಯ ಗುಣಮಟ್ಟದ ಜೊತೆಗೆ ನಮ್ಮ ಆರೋಗ್ಯವನ್ನು ಸುಧಾರಿಸಬಹುದು.

ಪ್ರತಿನಿತ್ಯ ನಿಗದಿತ ಸಮಯಕ್ಕೆ ಸರಿಯಾಗಿ ಮಲಗುವುದನ್ನು ಮತ್ತು ಏಳುವುದನ್ನು ರೂಢಿಸಿಕೊಂಡಲ್ಲಿ ನಮ್ಮ ದೇಹದಲ್ಲಿನ ನೈಸರ್ಗಿಕ ಗಡಿಯಾರ ಹೆಚ್ಚು ಸಮರ್ಪಕವಾಗಿ ಕೆಲಸ ಮಾಡುವುದು. ಇದರಿಂದಾಗಿ ನಾವು ಮಲಗಿದ ತಕ್ಷಣ ನಿದ್ದೆಗೆ ಜಾರಲು ಮತ್ತು ಉಲ್ಲಾಸದಿಂದ ಎದ್ದೇಳಲು ಸಹಾಯವಾಗುವುದು. ಮುಂಜಾನೆ ಎದ್ದ ನಂತರ ಪ್ರತಿನಿತ್ಯ ಇಪ್ಪತ್ತು ನಿಮಿಷಗಳ ಕಾಲ ಸೂರ್ಯನ ಬೆಳಕಿಗೆ ಮೈಯೊಡ್ಡುವುದರಿಂದ ದೇಹದ ನೈಸರ್ಗಿಕ ಗಡಿಯಾರವು ಹೆಚ್ಚು ಜಾಗೃತಗೊಳ್ಳುವುದು. ದಿನದಲ್ಲಿ ನಾವು ಮಾಡುವ ವ್ಯಾಯಾಮವು ನಮ್ಮ ರಾತ್ರಿ ವೇಳೆಯ ನಿದ್ದೆಯ ಗುಣಮಟ್ಟವನ್ನು ಹೆಚ್ಚಿಸುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ಮಲಗುವ ಒಂದೆರಡು ಗಂಟೆಗಳ ಮೊದಲು ಕಾಫಿ ಅಥವಾ ಟೀ ಸೇವಿಸಿದಲ್ಲಿ ಅದು ನಿದ್ರಾಹೀನತೆಯ ಸಮಸ್ಯೆಯನ್ನು ಉಲ್ಬಣಿಸುತ್ತದೆ. ಮಲಗುವ ಕನಿಷ್ಠ ಒಂದು ಗಂಟೆಗಳ ಮೊದಲು ಟಿವಿ, ಮೊಬೈಲ್ ಅಥವಾ ಕಂಪ್ಯೂಟರ್ ಸ್ಕ್ರೀನ್ ವೀಕ್ಷಣೆ ಮಾಡಿದ್ದಲ್ಲಿ ಅದು ಮೆಲಟೋನಿನ್ ಹಾರ್ಮೋನುವಿನ ಉತ್ಪಾದನೆಯನ್ನು ತಡೆಯುವ ಕಾರಣದಿಂದ ಮಲಗುವ ಮೊದಲು ಸ್ಕ್ರೀನ್ ವೀಕ್ಷಣೆಯಿಂದ ದೂರವಿರುವುದು ಉತ್ತಮ. ಆಲ್ಕೊಹಾಲ್ ಮನುಷ್ಯನ ನಿದ್ದೆಯ ಗುಣಮಟ್ಟವನ್ನು ಹದಗೆಡಿಸುವುದರಿಂದ ನಿದ್ರಾಹೀನತೆಯಿಂದ ಬಳಲುವವರು ಕುಡಿತದಿಂದ ದೂರವಿರಬೇಕು.

ನಿದ್ದೆಯ ಪ್ರಾಮುಖ್ಯ ನಮಗೆ ಇತ್ತೀಚಿನ ದಿನಗಳಲ್ಲಿ ಗಮನಕ್ಕೆ ಬರುತ್ತಿರುವ ಕಾರಣ ವ್ಯಾಯಾಮ ಮತ್ತು ಆಹಾರದ ವಿಚಾರದಲ್ಲಿ ಸಲಹೆ ನೀಡುವ ತಜ್ಞರಷ್ಟು ತಜ್ಞರು ನಿದ್ದೆಯ ವಿಚಾರದಲ್ಲಿ ಇಲ್ಲ. ಆರೋಗ್ಯವನ್ನು ಕಾಪಾಡಿಕೊಳ್ಳುದಕ್ಕೆ ಉತ್ತಮ ನಿದ್ದೆಯ ಅಗತ್ಯದ ಬಗ್ಗೆ ಜಾಗೃತಿ ಹೆಚ್ಚಾದಂತೆ ಜನರು ವ್ಯಾಯಾಮಶಾಲೆಗೆ ಹೋಗುವಷ್ಟು ಶಿಸ್ತು ಮತ್ತು ಬದ್ಧತೆಯಿಂದ ರಾತ್ರಿ ಸಮಯಕ್ಕೆ ಸರಿಯಾಗಿ ಮಲಗಲು ತಯಾರಾಗುವ ದಿನಗಳು ದೂರವಿಲ್ಲ.

❖

ಗೃಹಿಣಿಗೂ ಬೇಕು ನಿವೃತ್ತಿ

ಲಾವಣ್ಯಗೌರಿ ವೆಂಕಟೇಶ್



ನಿವೃತ್ತಿ ಎಂದರೆ ನೀವು ಕೆಲಸವನ್ನು ನಿರ್ವಹಿಸಲು ಸಾಧ್ಯವಿಲ್ಲ ಎಂದಲ್ಲ; ಹಾಗೆಯೇ ನಿಮಗೆ ವಯಸ್ಸಾಗಿದೆ ಎಂದೂ ಅಲ್ಲ. ಇದೊಂದು ಜೀವನದ ಹೊಸ ಅವಕಾಶಗಳ ಅಧ್ಯಾಯ. ಇದರ ಲೇಖಕರು ನೀವೇ; ನಿಮಗಿಷ್ಟವಾದುದನ್ನು ನೀವು ಬರೆದುಕೊಳ್ಳಬಹುದಾಗಿದೆ. ವೃತ್ತಿಯಿಂದ ನಿವೃತ್ತಿಯಾಗುವ ವೇಳೆಗೆ ಸ್ತ್ರೀಯರಿಗಾಗಲೀ ಪುರುಷರಿಗಾಗಲೀ, ಬಹುಪಾಲು ಜನರಿಗೆ ಬಹಳಷ್ಟು ಜವಾಬ್ದಾರಿಗಳು ಮುಗಿದಿರುತ್ತವೆ. ಇದೊಂದು ಬದಲಾವಣೆಯ ಸಮಯ ಅಷ್ಟೆ. ಕೆಲಸದ ಒತ್ತಡದಿಂದಾಗಿ ತಡೆಹಿಡಿದ ನಿಮ್ಮ ಆಸೆ-ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಸಮಯವಿದು. ಇದು ಸ್ತ್ರೀ-ಪುರುಷರಿಬ್ಬರಿಗೂ ಅನ್ವಯಿಸುತ್ತಾದರೂ, ಇದರ ಫಲಾನುಭವಿಗಳು ಪುರುಷರು ಮಾತ್ರ ಎಂಬಂತಾಗಿದೆ! ಮಹಿಳೆಯರು ವೃತ್ತಿಯಿಂದ ನಿವೃತ್ತರಾದರೂ, ಮನೆಕೆಲಸದಿಂದ ಮಾತ್ರ ಎಂದಿಗೂ ಮುಕ್ತಿ ಸಿಗುವುದಿಲ್ಲ. ಆಕೆಯೂ ಪುರುಷರಂತೆಯೇ, ದುಡಿದಿರುತ್ತಾಳೆ. ತನ್ನ ಬಯಕೆಗಳನ್ನು ಅದುಮಿಟ್ಟು ಅನೇಕ ತ್ಯಾಗಗಳನ್ನು ಮಾಡಿರುತ್ತಾಳೆ. ಆದರೆ ಮಹಿಳೆಗೆ ನಿವೃತ್ತಿಯ ನಂತರವೂ ಬಿಡುವು ಸಿಗುವುದೇ ಇಲ್ಲ.

ನಮ್ಮ ಸಮಾಜದಲ್ಲಿ ಮನೆಯಲ್ಲಿದ್ದು ಕೆಲಸ ಮಾಡುವ ಮಹಿಳೆಗೆ 'ಗೃಹಿಣಿ' ಎಂಬ ಪಟ್ಟವನ್ನು ನೀಡಲಾಗಿದೆ. ಹಾಗೆಯೇ ಹೊರಗೆ ಹೋಗಿ ದುಡಿಯುವ ಮಹಿಳೆಗೆ 'ವರ್ಕಿಂಗ್ ವುಮೆನ್' ಅಥವಾ 'ದುಡಿಯುವ ಮಹಿಳೆ' ಎಂದು ಕರೆಯಲಾಗುತ್ತದೆ. ಹಾಗಾದರೆ ಮನೆಯಲ್ಲಿ ಮಾಡುವ ಕೆಲಸ ಕೆಲಸವಲ್ಲವೇ? ಹಾಗೆಂದು ದುಡಿಯುವ ಮಹಿಳೆ ಗೃಹಿಣಿಯಲ್ಲವೇ? ಮಹಿಳೆಯೂ ದಣಿಯುತ್ತಾಳೆ. ಅವಳಿಗೂ ವಿಶ್ರಾಂತಿಯ ಅವಶ್ಯಕತೆಯಿದೆಯೆಂದು ಎಷ್ಟು ಮಂದಿ ಯೋಚಿಸುತ್ತಾರೆ? ಗೃಹಿಣಿಯಾದವಳು ತನ್ನ ಕುಟುಂಬದ ಸದಸ್ಯರನ್ನು ನೋಡಿಕೊಂಡು, ಮಕ್ಕಳನ್ನು ಹೊತ್ತು, ಹೆತ್ತು, ಪೋಷಿಸಿ, ಮನೆಯನ್ನು ನಿರ್ವಹಿಸುವ ನಿರ್ವಾಹಕಿ. ಹೆಣ್ಣಾಗಿ ಹುಟ್ಟಿದ ಮೇಲೆ ಮನೆಯ ನಿರ್ವಹಣೆ ಕಡ್ಡಾಯ ಎಂದು ಬಹಳಷ್ಟು ಮಹಿಳೆಯರೇ ನಂಬಿದ್ದಾರೆ. ಮಹಿಳೆಯರು ಮನೆಯ ಒಳಗೆ ಮಾಡುವ ವೇತನರಹಿತ ಕೆಲಸಗಳನ್ನು ಯಾರೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸಾಮಾನ್ಯವಾಗಿ ಮಹಿಳೆ ತನ್ನ ಜೀವಿತಾವಧಿಯಲ್ಲಿ ಹಾಸಿಗೆ ಹಿಡಿಯುವವರೆಗೂ ಕೆಲಸ ಮಾಡುತ್ತಲೇ ಇರುತ್ತಾಳೆ. ಎಲ್ಲಾ ವೃತ್ತಿಗೂ ನಿವೃತ್ತಿ ಇರುವಾಗ ಗೃಹಿಣಿಗೇಕಿಲ್ಲ?

ಮನೆಯಿಂದ ಹೊರಗೆ ಹೋಗಿ ದುಡಿಯುವ ಮಹಿಳೆಗಾದರೂ ಕೆಲವರ ಮನೆಯಲ್ಲಿ ಗಂಡನಿಂದಲೋ ಅಥವಾ ಮನೆಯ ಇತರ ಸದಸ್ಯರಿಂದಲೋ ಸಹಾಯಹಸ್ತ ಸಿಗುತ್ತದೆ. ಆದರೆ 'ಗೃಹಿಣಿ' ಎಂಬ ಪಟ್ಟ ಹೊತ್ತು ಮನೆಯ ಎಲ್ಲಾ ಜವಾಬ್ದಾರಿಯನ್ನು ನಿರ್ವಹಿಸುವ ವನಿತೆಗೆ ಸಿಗುವ ಬಿರುದು 'ಕೆಲಸವಿಲ್ಲದವಳೆಂಬ' ಮೂದಲಿಕೆಯ ಮಾತು. ಈ ರೀತಿಯ ತಾರತಮ್ಯದಿಂದಲೇ ಇಂದಿನ ಹುಡುಗಿಯರು, ಸಣ್ಣ ಪುಟ್ಟ ಕೆಲಸವಾದರೂ ಸರಿ, ಹೊರಗೆ ಹೋಗಿ ದುಡಿಯಲು ಇಚ್ಛಿಸುತ್ತಾರೆ. ಆರ್ಥಿಕ ಸ್ವಾತಂತ್ರ್ಯದ ಜೊತೆಗೆ ಗೌರವ-ಪ್ರತಿಷ್ಠೆಗಳು ಹೊರಗೆ ಹೋಗಿ ದುಡಿಯುವುದರಿಂದ ದೊರೆಯುತ್ತವೆ ಎಂದು ಭಾವಿಸಿದ್ದಾರೆ. ಮಹಿಳೆಯರು ತಮಗೆ ಎದುರಾಗುವ ನೋವುಗಳನ್ನು ನುಂಗಿಕೊಂಡು ಕೆಲಸ ಮಾಡಿದರೂ, ವಿರಾಮದ ವಿಷಯ ಬಂದಾಗ ಅಸಮಾನತೆ ಎದ್ದುಕಾಣುತ್ತದೆ. ಹೊರಗಿನ ಕೆಲಸ ಮುಗಿಸಿ ಮನೆಗೆ ಬರುವ ಪುರುಷ ಆರಾಮಾಗಿ ಕೂರುತ್ತಾನೆ. ಅದೇ ಮಹಿಳೆ ಹೊರಗಿನ ಕೆಲಸ ಮುಗಿಸಿ ಬಂದಮೇಲೂ ಮನೆಗೆಲಸಗಳಿಗಾಗಿ ಟೊಂಕ ಕಟ್ಟಿ ನಿಲ್ಲುತ್ತಾಳೆ.

ಎಲ್ಲರೂ ಸೇರಿ ಮನೆಗೆಲಸವನ್ನು ಮುಗಿಸಿದಲ್ಲಿ, ಬಿಡುವಿನ ವೇಳೆ ಎಲ್ಲರಿಗೂ ಸಿಗುತ್ತದೆ.

ವೃತ್ತಿಯಿಂದ ನಿವೃತ್ತಿ ಹೊಂದಿದ ಹಲವರು ಪುರುಷರನ್ನು ಖಿನ್ನತೆ ಆವರಿಸುತ್ತದೆ. ಕಾರಣ, ನಿವೃತ್ತಿಯಾದ ಮರುದಿನದಿಂದಲೇ ಬಹುತೇಕರಿಗೆ ಮಾಡಲು ಏನೂ ಕೆಲಸವಿರುವುದಿಲ್ಲ. ಆದರೆ ಮಹಿಳೆಗೆ ಹಾಗಲ್ಲ. ಆಕೆ ಹೊರಗಿನ ವೃತ್ತಿಯಿಂದ ನಿವೃತ್ತಳಾದರೂ ಕೂಡ ಮನೆ ಕೆಲಸದಿಂದ ಆಕೆಗೆ ವಿಶ್ರಾಂತಿ ಸಿಗುವುದೇ ಇಲ್ಲ. ಮನೆಯ ಮುಖ್ಯ ಆಧಾರಸ್ತಂಭ ಮಹಿಳೆ. ಸ್ತ್ರೀಯರಿಗೆ ವಿರಾಮ ಎಂಬುದು ದೂರದ ಮಾತಾಗಿದೆ. ಮಹಿಳೆಯೂ ನಿವೃತ್ತಜೀವನದ ಸವಿಯನ್ನು ಸವಿಯಬೇಕು. ಎಲ್ಲಾ ಕೆಲಸದಂತೆ ಗೃಹಿಣಿಗೂ ಮನೆಗೆಲಸದಿಂದ ವಿಶ್ರಾಂತಿ ಕೊಡಿಸುವುದು ಮನೆಯ ಇತರ ಸದಸ್ಯರ ಜವಾಬ್ದಾರಿ ಕೂಡ ಹೌದು. ಮಹಿಳೆಯರಿಗೂ ವಯಸ್ಸಾಗುತ್ತಾ ಹೋದಂತೆ ಅನಾರೋಗ್ಯ ಕಾಣಿಸಿಕೊಳ್ಳತೊಡಗುತ್ತದೆ. ಆಕೆಗೂ ಆಯಾಸವಾಗುತ್ತದೆ. ಇದನ್ನು ಕುಟುಂಬದ ಸದಸ್ಯರು ಅರಿತುಕೊಳ್ಳಬೇಕು. ಇದು ಯಾವ ಶಾಸಕಾಂಗ ಸಭೆಯಲ್ಲೂ ಚರ್ಚೆಯಾಗಿ, ಮಸೂದೆಯಾಗಿ ಹೊರ ಹೊಮ್ಮಬೇಕಾದ ವಿಚಾರವೇನಲ್ಲ. ಮನೆಗೆಲಸದಲ್ಲಿ ಕುಟುಂಬದ ಪ್ರತಿಯೊಬ್ಬರೂ ತೊಡಗಿಕೊಂಡರೆ ಮಾತ್ರ ಆ ಮನೆಯ ಗೃಹಿಣಿಗೂ ವಿಶ್ರಾಂತಿ ಸಿಗುತ್ತದೆ. ನಮ್ಮ ಮನೆಯ ಕೆಲಸವನ್ನು ನಾವೇ ಮಾಡಿಕೊಳ್ಳಲು ನಾಚಿಕೆಯೇಕೆ? ಎಲ್ಲರೂ ಸೇರಿ ಕೆಲಸವನ್ನು ಮುಗಿಸಿದಲ್ಲಿ, ಬಿಡುವಿನ ವೇಳೆ ಎಲ್ಲರಿಗೂ ಸಿಗುತ್ತದೆ. ಮನೆಯೊಂದರಲ್ಲಿ ಮನೆಯೊಡತಿ ಸಂತೋಷದಿಂದಿದ್ದಾಗ ಮಾತ್ರ ಆ ಮನೆಯಲ್ಲಿ ಶಾಂತಿ, ನೆಮ್ಮದಿ ನೆಲೆಸಲು ಸಾಧ್ಯ.

❖

ಅದ್ದೂರಿಯಾಗಿ ದಸರಾ ಆಚರಣೆಗೆ ಸಿದ್ಧತೆ: ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ

ದಸರಾ ಸ್ತಬ್ಧಚಿತ್ರದಲ್ಲೂ ‘ಗ್ಯಾರಂಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಮೈಸೂರು ದಸರಾದಲ್ಲಿ ರಾಜ್ಯ ಸರ್ಕಾರದ ಐದು ‘ಗ್ಯಾರಂಟಿ’ ಯೋಜನೆಗಳನ್ನು ಪ್ರತಿಬಿಂಬಿಸುವ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸುವಂತೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

2023ರ ಮೈಸೂರು ದಸರಾ ಆಚರಣೆಯ ಸಿದ್ಧತೆ ಕುರಿತು ಚರ್ಚಿಸಲು ಸೋಮವಾರ ನಡೆದ ಉನ್ನತಮಟ್ಟದ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ ಪರಂಪರೆ, ಜಿಲ್ಲೆಗಳ ವೈಶಿಷ್ಟ್ಯಗಳನ್ನು ಪ್ರತಿಬಿಂಬಿಸುವ ಸ್ತಬ್ಧಚಿತ್ರಗಳಿಗೆ ಆದ್ಯತೆ ನೀಡಬೇಕು. ಜತೆಯಲ್ಲಿ ನಮ್ಮ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಕುರಿತು ಜನರಿಗೆ ಸಂದೇಶ ನೀಡುವ ಸ್ತಬ್ಧಚಿತ್ರಗಳನ್ನೂ ಆಯ್ಕೆ ಮಾಡುವಂತೆ ಸೂಚಿಸಲಾಗಿದೆ’ ಎಂದರು.

ಸ್ಥಳೀಯ ಕಲಾವಿದರಿಗೆ ಆದ್ಯತೆ

ದಸರಾ ಉತ್ಸವದಲ್ಲಿ ಗಾಯನ, ನೃತ್ಯ, ಜಾನಪದ ಕಲಾ ಪ್ರದರ್ಶನ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗುವುದು. ಹೊರ ರಾಜ್ಯಗಳ ಕಲಾವಿದರನ್ನು ಆಹ್ವಾನಿಸಲು ನಿರ್ಬಂಧವಿಲ್ಲ. ಆದರೆ, ರಾಜ್ಯದಲ್ಲಿರುವ ಅತ್ಯುತ್ತಮ ಕಲಾವಿದರನ್ನು ಗುರುತಿಸಿ ಅವಕಾಶ ನೀಡುವಂತೆ ಸೂಚಿಸಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿ ದಸರಾ ಆಚರಿಸಲಾಗುವುದು. ಶ್ರೀರಂಗಪಟ್ಟಣ ಮತ್ತು ಚಾಮರಾಜನಗರಗಳಲ್ಲೂ ದಸರಾ ಆಚರಿಸಲಾಗುವುದು. ‘ಶಕ್ತಿ’ ಯೋಜನೆ ಕಾರಣದಿಂದ ಹೆಚ್ಚಿನ ಮಹಿಳೆಯರು ಮೈಸೂರು ದಸರಾ ಉತ್ಸವದಲ್ಲಿ ಭಾಗವಹಿಸುವ ಸಾಧ್ಯತೆ ಇದೆ ಎಂದರು.

ಉದ್ಘಾಟಕರ ಆಯ್ಕೆ ಸಿ.ಎಂಗೆ ಅಧಿಕಾರ

‘ದಸರಾ ಉದ್ಘಾಟಕರನ್ನು ಆಯ್ಕೆ ಮಾಡುವ ಅಧಿಕಾರವನ್ನು ನನಗೆ ನೀಡಿದ್ದಾರೆ. ಉಳಿದವರ ಜತೆಗೂ ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಕೆ.ಆರ್. ನಗರ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಅವರು, ಸುತ್ತೂರು ಶ್ರೀಗಳ ಹೆಸರನ್ನು ಪ್ರಸ್ತಾಪಿಸಿದರು. ಉಳಿದಂತೆ ಏನೂ ಚರ್ಚೆ ಆಗಿಲ್ಲ. ಯಾರು ಉದ್ಘಾಟಿಸಬೇಕು ಎಂಬುದನ್ನು ಚರ್ಚಿಸಿ ನಿರ್ಧರಿಸಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅನವಶ್ಯಕ ವೆಚ್ಚಗಳಿಲ್ಲದೇ ಅದ್ದೂರಿಯಾಗಿ ದಸರಾ ಆಚರಿಸಲು ತೀರ್ಮಾನಿಸಲಾಗಿದೆ. ವೆಚ್ಚದ ಕುರಿತು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಕಾರ್ಯಕಾರಿ ಸಮಿತಿ ಅಂದಾಜು ವರದಿ ನೀಡಲಿದೆ. ಆ ಬಳಿಕ ಅನುದಾನ ಮಂಜೂರಾತಿ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಅಕ್ಟೋಬರ್ 15ರಂದು ಬೆಳಿಗ್ಗೆ 10.15ರಿಂದ 10.30ರ ಅವಧಿಯಲ್ಲಿ ದಸರಾ ಉದ್ಘಾಟನೆಯಾಗಲಿದೆ. ಅದೇ ದಿನ ವಸ್ತು ಪ್ರದರ್ಶನ ಮತ್ತು ವಿದ್ಯುತ್ ದೀಪಾಲಂಕಾರವೂ ಆರಂಭವಾಗಲಿದೆ. ಈ ಬಾರಿ ವಿಶೇಷವಾಗಿ ದೀಪಾಲಂಕಾರ ಮಾಡುವಂತೆ ಸೂಚಿಸಲಾಗಿದೆ. ಉದದ್ಘಾಟನೆಯ ದಿನದಿಂದ ದಸರಾ ಮುಗಿದು ವಾರದವರೆಗೆ ದೀಪಾಲಂಕಾರ ಇರಲಿದೆ ಎಂದು ತಿಳಿಸಿದರು.

ರೈತ ದಸರಾ, ಯುವ ದಸರಾ, ಚಲನಚಿತ್ರೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳೂ ಇರಲಿವೆ. ಈ ದಸರಾ ಹಬ್ಬವನ್ನು ಅತ್ಯಂತ ಅರ್ಥಪೂರ್ಣವಾಗಿ ಜನರ ಉತ್ಸವವಾಗಿ ಆಚರಿಸಲಾಗುವುದು. ವಸ್ತು ಪ್ರದರ್ಶನದಲ್ಲಿ ಸರ್ಕಾರಿ ಇಲಾಖೆಗಳಿಂದಲೂ ಮಳಿಗೆ ತೆರೆಯುವಂತೆ ಸೂಚಿಸಲಾಗಿದೆ ಎಂದರು.

ಜನಾಕರ್ಷಣೆಗೆ ಏರ್ ಶೋ: ಜನಾಕರ್ಷಣೆಗಾಗಿ ಏರ್ ಶೋ ಆಯೋಜಿಸಲು ಯೋಚಿಸಲಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಈ ಕುರಿತು ಮಾತುಕತೆ ನಡೆಸಲಾಗುವುದು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಶಿವರಾಜ ತಂಗಡಗಿ, ಎಚ್.ಕೆ. ಪಾಟೀಲ, ಬೈರತಿ ಸುರೇಶ್, ಕೆ. ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸಭೆಯಲ್ಲಿದ್ದರು.

ಕೆಸರಿನಲ್ಲಿ ಹಗ್ಗ ಜಗ್ಗಾಟ...

ಕೊಡಗು ಜಿಲ್ಲಾ ಯುವ ಬಂಟ್ಸ್ ಅಸೋಸಿಯೇಷನ್, ಕೊಡಗು ಜಿಲ್ಲಾ ಬಂಟರ ಸಂಘ, ಮಡಿಕೇರಿ ನಗರ ಬಂಟರ ಮಹಿಳಾ ಘಟಕ, ಗಾಳಿಬೀಡು ಹೋಬಳಿ ಬಂಟರ ಸಂಘದ ಸಹಕಾರದಲ್ಲಿ ಗಾಳಿಬೀಡುವಿನ ಕೃಷಿಕ ಹೊರಮಲೆ ಶಿವಪ್ರಸಾದ್ ರೈ ಅವರ ಭತ್ತದ ಗದ್ದೆಯಲ್ಲಿ ಭಾನುವಾರ ನಡೆದ ‘ಆಟಿಡೊಂಜಿ ದಿನ ಕೆಸರ್ದ ಗೊಬ್ಬು’ ಕಾರ್ಯಕ್ರಮದಲ್ಲಿ ನಡೆದ ಹಗ್ಗ ಜಗ್ಗಾಟ

‘ಶಕ್ತಿ’ ಆಕ್ಷೇಪಿಸಿ ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಒದಗಿಸುವ, ‘ಶಕ್ತಿ ಯೋಜನೆ’ಯಿಂದ ಪ್ರಯಾಣಿಕರು ಅನೇಕ ತೊಂದರೆಗಳನ್ನು ಎದುರಿಸುವಂತಾಗಿದೆ. ಅಷ್ಟೇ ಅಲ್ಲ; ಯೋಜನೆಯು ಆರ್ಥಿಕ ಸಂಕಷ್ಟಗಳಿಗೆ ದೂಡುವ ಆತಂಕವಿದೆ ಎಂದು ಆಕ್ಷೇಪಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ಇನ್ನಷ್ಟೇ ವಿಚಾರಣೆಗೆ ಬರಬೇಕಿರುವ ಈ ಅರ್ಜಿಯನ್ನು ಕಾನೂನು ವಿದ್ಯಾರ್ಥಿಗಳಾದ ಬೆಂಗಳೂರಿನ ಅಶ್ವಿನ್ ಶಂಕರ್ ಭಟ್, ನೇಹಾ ವೆಂಕಟೇಶ್ ಹಾಗೂ ಮುಂಬೈನ ಯಾಶಿಕಾ ಸರವಣ ಸಲ್ಲಿಸಿದ್ದಾರೆ. ಸಾರಿಗೆ ಇಲಾಖೆ ಹಾಗೂ ನಾಲ್ಕೂ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಶಾಲಾ ಮಕ್ಕಳಿಗೆ ವಿಶೇಷ ಬಸ್: ಮನವಿ

‘ಶಾಲಾ ಮಕ್ಕಳು, ಹಿರಿಯ ನಾಗರಿಕರಿಗೆ ಬಸ್ ಹತ್ತಿ-ಇಳಿಯಲು ಸೂಕ್ತ ವ್ಯವಸ್ಥೆ ಮಾಡಬೇಕು. ದೂರದ ಊರುಗಳಿಗೆ ತೆರಳುವ ಬಸ್‌ಗಳಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸಿದ ಪ್ರಯಾಣಿಕರಿಗೆ ಬಸ್‌ಗಳಲ್ಲಿ ಹತ್ತಲು ಮೊದಲು ಅವಕಾಶ ಮಾಡಿಕೊಡಬೇಕು. ಟಿಕೆಟ್ ಪಡೆದವರಿಗೆ ಶೇ 50ರಷ್ಟು ಸೀಟುಗಳನ್ನು ಮೀಸಲಿಡಬೇಕು. ಕಿಟಕಿ ಹಾಗೂ ಚಾಲಕ ಹತ್ತುವ ಬಾಗಿಲುಗಳ ಮೂಲಕ ಪ್ರಯಾಣಿಕರು ಬಸ್‌ಗಳಲ್ಲಿ ತೂರುವುದನ್ನು ನಿರ್ಬಂಧಿಸಬೇಕು. ಶಾಲಾ ಮಕ್ಕಳಿಗೆ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಬೇಕು’ ಎಂದು ಮನವಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ ?: ‘ಶಕ್ತಿ ಯೋಜನೆ ಜಾರಿಗೆ ಬಂದಾಗಿನಿಂದ ಬಸ್‌ಗಳಲ್ಲಿ ಜನದಟ್ಟಣೆ ಹೆಚ್ಚಾಗಿದೆ. ಸೀಟು ಪಡೆಯಲು ಗಲಾಟೆ, ಹೊಡೆದಾಟ ಸಂಭವಿಸಿವೆ. ಹಿರಿಯ ನಾಗರಿಕರು, ಮಕ್ಕಳು ಬಸ್ ಹತ್ತಲು ಆಗುತ್ತಿಲ್ಲ. ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ ಶಾಲಾ-ಕಾಲೇಜು ತಲುಪಲು ಆಗುತ್ತಿಲ್ಲ. ಇದರಿಂದಾಗಿ ಬಸ್ ಹಾಗೂ ಬಸ್ ನಿಲ್ದಾಣಗಳಲ್ಲಿ ಅನುಚಿತ ವರ್ತನೆ, ಅಹಿತಕರ ಘಟನೆಗಳು ನಡೆಯುತ್ತಿವೆ. ಬಸ್ ನಿಲ್ದಾಣ ಮತ್ತು ಸರ್ಕಾರಿ ಬಸ್‌ಗಳು ಯುದ್ಧ ಭೂಮಿ, ಮೀನು ಮಾರುಕಟ್ಟೆ ಆಗಿವೆ’ ಎಂದು ಅರ್ಜಿಯಲ್ಲಿ ದೂರಲಾಗಿದೆ.

‘ಯೋಜನೆ ಜಾರಿಗೆ ಬಂದಾಗಿನಿಂದ 3 ಕೋಟಿ ಮಹಿಳೆಯರು ಉಚಿತವಾಗಿ ಬಸ್‌ಗಳಲ್ಲಿ ಪ್ರಯಾಣ ಮಾಡಿದ್ದಾರೆ. ಇದರಿಂದ ತೆರಿಗೆದಾರರ ₹100 ಕೋಟಿಯಷ್ಟು ಹಣ ಪ್ರತಿ ವಾರ ನಷ್ಟವಾಗುತ್ತಿದೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಹಾಲಿನ ದರ ಹೆಚ್ಚಳ ಇಂದಿನಿಂದ

ಒಂದನೇ ಪುಟದಿಂದ...

2022ರಲ್ಲಿ ಚರ್ಮಗಂಟು ರೋಗ, ಪಶು ನಿರ್ವಹಣಾ ವೆಚ್ಚ ಇತ್ಯಾದಿ ಕಾರಣಗಳಿಂದ ರಾಜ್ಯದಲ್ಲಿ ಸುಮಾರು 35 ಸಾವಿರಕ್ಕೂ ಹೆಚ್ಚು ರೈತರು ಹೈನುಗಾರಿಕೆಯಿಂದ ವಿಮುಖರಾಗಿದ್ದರು. ಇದರಿಂದಾಗಿ, ಜಿಲ್ಲಾ ಹಾಲು ಒಕ್ಕೂಟಗಳಲ್ಲಿ ಹಾಲಿನ ಶೇಖರಣೆ ಕಡಿಮೆಯಾಗಿತ್ತು. ಪ್ರಸ್ತುತ ಪ್ರತಿ ದಿನ ಅಂದಾಜು 10 ಲಕ್ಷ ಲೀಟರ್ ಹಾಲು ಶೇಖರಣೆ ಕಡಿಮೆಯಾಗಿದೆ. ಹೀಗಾಗಿ, ಹೈನುಗಾರರನ್ನು ಉತ್ತೇಜಿಸಲು ದರ ಹೆಚ್ಚಳ ಅನಿವಾರ್ಯವಾಗಿದೆ ಎಂದು ವಿವರಿಸಿದ್ದಾರೆ.

ಕೆಎಂಎಫ್ ಅಧ್ಯಕ್ಷ ಎಲ್.ಬಿ.ಪಿ. ಭೀಮ ನಾಯ್ಕ ಅವರ ನೇತೃತ್ವದಲ್ಲಿ ಮಹಾಮಂಡಳದ ನಿರ್ದೇಶಕರು ಹಾಗೂ ಎಲ್ಲ ಜಿಲ್ಲಾ ಹಾಲು ಒಕ್ಕೂಟಗಳ ಅಧ್ಯಕ್ಷರು ಜುಲೈ 21ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಪ್ರತಿ ಲೀಟರ್‌ಗೆ ₹5 ಹೆಚ್ಚಿಸುವಂತೆ ಪ್ರಸ್ತಾವ ಸಲ್ಲಿಸಿದ್ದರು. ಮುಖ್ಯಮಂತ್ರಿ ಅವರು ₹3 ಹೆಚ್ಚಿಸಲು ಅನುಮತಿ ನೀಡಿದ್ದರು.

510 ಮಿ.ಲೀ ಪೊಟ್ಟಣ: ಪ್ರತಿ ಲೀಟರ್‌ಗೆ ₹3ರಂತೆ ಮಾರಾಟ ದರ ಹೆಚ್ಚಿಸಿದಲ್ಲಿ 500 ಮಿ.ಲೀ. ಒಂದು ಪೊಟ್ಟಣಕ್ಕೆ ₹1.50ರಂತೆ ಹೆಚ್ಚಿಸಬೇಕಾಗುತ್ತದೆ. ಇದರಿಂದಾಗಿ ಚಿಲ್ಲರೆ ಸಮಸ್ಯೆಯಾಗುತ್ತದೆ. ಹೀಗಾಗಿ, 500 ಮಿ.ಲೀ ಪ್ರತಿ ಪೊಟ್ಟಣಕ್ಕೆ 10.ಮಿ.ಲೀ. ಹೆಚ್ಚಿಗೆ ನೀಡಲಾಗುತ್ತದೆ. ಹೆಚ್ಚುವರಿ ನೀಡುತ್ತಿರುವ ಹಾಲಿನ ಪ್ರಮಾಣವನ್ನು ಇಂಕ್‌ಜೆಟ್ ಪ್ರಿಂಟರ್ ಮೂಲಕ ಎಲ್ಲ ಪೊಟ್ಟಣಗಳ ಮೇಲೆ ಹೆಚ್ಚುವರಿ 10 ಮಿ.ಲೀ. ಎಂದು ಮುದ್ರಿಸಲಾಗುತ್ತಿದ್ದು, ದರವನ್ನು ₹2ರಷ್ಟು ಹೆಚ್ಚಿಸಲಾಗಿದೆ.

ಇದು ಧಾರವಾಡ, ವಿಜಯಪುರ, ಕಲಬುರಗಿ ಮತ್ತು ಹಾವೇರಿ ಹಾಲು ಒಕ್ಕೂಟಗಳಲ್ಲಿ ಉತ್ಪಾದನೆ ಮಾಡುತ್ತಿರುವ ಎಚ್‌ಟಿಎಂ 500 ಮಿ.ಲೀ. ಪೊಟ್ಟಣಗಳಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದು ಕೆಎಂಎಫ್ ಪ್ರಕಟಣೆ ತಿಳಿಸಿದೆ.

ಯಾವುದೇ ಲೋಪವಾಗಿಲ್ಲ: ಪ್ರಜ್ಞಾ ಅಮ್ಮೆಂಬಳ

ಬೆಂಗಳೂರು: ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಬೆಂಗಳೂರು ಅನೌಪಚಾರಿಕ ಪಡಿತರ ವಲಯದ (ಐಆರ್‌ಎ) ಹೆಚ್ಚುವರಿ ನಿರ್ದೇಶಕರ ಕಚೇರಿಯ ಪ್ರಭಾರದ ವಿಚಾರದಲ್ಲಿ ತಮ್ಮಿಂದ ಯಾವುದೇ ಲೋಪವಾಗಿಲ್ಲ ಎಂದು ಕೆಎಎಸ್ ಅಧಿಕಾರಿ ಪ್ರಜ್ಞಾ ಅಮ್ಮೆಂಬಳ ತಿಳಿಸಿದ್ದಾರೆ.

‘ಪ್ರಜಾವಾಣಿ’ಯ ಶನಿವಾರದ (ಜುಲೈ 29) ಸಂಚಿಕೆಯಲ್ಲಿ ‘ಐಆರ್‌ಎ ಕುರ್ಚಿ ಕಿತ್ತಾಟ: ಕಚೇರಿಗೆ ಬೀಗ!’ ಶೀರ್ಷಿಕೆಯಡಿ ಪ್ರಕಟವಾದ ವರದಿ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ‘ಮೂರು ತಿಂಗಳ ಹಿಂದೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಪಡೆದ ಅನುಮತಿಯನ್ನು ಆಧರಿಸಿ ನಾನು ವಿದೇಶ ಪ್ರವಾಸಕ್ಕೆ ತೆರಳಿದ್ದೆ. ಈ ಅವಧಿಯಲ್ಲಿ ರಜೆಯ ಮೇಲೆ ತೆರಳಿದ್ದೆ. ಕಚೇರಿಗೆ ಬೀಗ ಹಾಕಿ ಹೋಗಿರಲಿಲ್ಲ. ವಾಹನ ಚಾಲಕನ ಬಳಿಯಲ್ಲೇ ಇತ್ತು’ ಎಂದಿದ್ದಾರೆ.

‘ಸರ್ಕಾರದ ಆದೇಶದಂತೆ ಆ ಹುದ್ದೆಯ ಅಧಿಕಾರವನ್ನು ವಹಿಸಿಕೊಂಡಿದ್ದೆ. ನಾನು ರಜೆ ಮೇಲೆ ತೆರಳುವ ಸಂದರ್ಭದಲ್ಲಿ ವರ್ಗಾವಣೆ ಆದೇಶಕ್ಕೆ ಯಾವುದೇ ತಡೆಯಾಜ್ಞೆ ಇರಲಿಲ್ಲ. ರಜೆ ಅವಧಿಯಲ್ಲಿ ಕಚೇರಿ ಪ್ರಭಾರವನ್ನು ಯಾರಿಗೆ ವಹಿಸಬೇಕು ಎಂಬುದರ ಕುರಿತು ಸ್ಪಷ್ಟತೆ ಇರಲಿಲ್ಲ. ರಜೆ ಮೇಲೆ ತೆರಳುವ ಮುನ್ನ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು’ ಎಂದು ತಿಳಿಸಿದ್ದಾರೆ.

ಕೋವಿಡ್ ಹಗರಣ: ನ್ಯಾಯಾಂಗ ತನಿಖೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಗರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

’ಮುಖ್ಯಮಂತ್ರಿ ಅವರ ಗಮನಕ್ಕೆ ಇದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ತರಲಾಗಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿಯಲ್ಲೂ ಸಾಕಷ್ಟು ಅಂಶಗಳಿವೆ. ಹೀಗಾಗಿ, ತನಿಖೆ ನಡೆಸಲಾಗುವುದು’ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಕೋವಿಡ್ ಸಂದರ್ಭದಲ್ಲಿ ಕೆಲವು ಉಪಕರಣಗಳನ್ನು ದುಬಾರಿ ಬೆಲೆಗೆ ಖರೀದಿ ಮಾಡಲಾಗಿದೆ ಎನ್ನುವ ಆರೋಪಗಳಿವೆ. ತನಿಖೆ ಸಂದರ್ಭದಲ್ಲಿ ಸತ್ಯಾಸತ್ಯತೆ ಹೊರಬರಲಿದೆ’ ಎಂದು ಅವರು ಹೇಳಿದರು.

ವಿ.ವಿ ಕುಲಸಚಿವ ಹುದ್ದೆ: ‘ಮ್ಯೂಸಿಕಲ್ ಚೇರ್’

ಒಂದನೇ ಪುಟದಿಂದ...

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತಂದು ಕುಲಸಚಿವ ಸ್ಥಾನಕ್ಕೆ ಐಎಎಸ್, ಐಎಫ್‌ಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳನ್ನು ನೇಮಿಸಬಹುದು ಎಂದು ನಿಯಮ ರೂಪಿಸಿತು. ಕಾಯ್ದೆ ಜಾರಿಯ ನಂತರ ಹಲವು ವಿಶ್ವವಿದ್ಯಾಲಯಗಳಿಗೆ ಐಎಎಸ್, ಐಎಫ್‌ಎಸ್, ಐಪಿಎಸ್ ಶ್ರೇಣಿಯ ಅಧಿಕಾರಿಗಳು ನೇಮಕವಾದರೂ, ಐದಾರು ತಿಂಗಳಿಗಿಂತ ಹೆಚ್ಚು ಅವಧಿ ಯಾರೂ ಕೆಲಸ ಮಾಡಲಿಲ್ಲ. ಮಲೆನಾಡಿನ ಕುವೆಂಪು ವಿಶ್ವವಿದ್ಯಾಲಯಕ್ಕೆ ನೇಮಕವಾಗಿದ್ದ ಐಎಫ್‌ಎಸ್ ಅಧಿಕಾರಿ ಪ್ರವೀಣ್‌ಚಂದ್ರ ಪಾಂಡೆ ನಾಲ್ಕು ವರ್ಷ ಆ ಸ್ಥಾನದಲ್ಲಿ ಇದ್ದುದೇ ಇದುವರೆಗಿನ ದಾಖಲೆ.

ಕುಲಸಚಿವ ಹುದ್ದೆಗಳಿಗೆ ತೆರಳಲು ಐಎಎಸ್ ದರ್ಜೆಯ ಅಧಿಕಾರಿಗಳು ಮನಸ್ಸು ಮಾಡದ ಕಾರಣ ಉನ್ನತ ಶಿಕ್ಷಣ ಇಲಾಖೆ ಅನಿವಾರ್ಯವಾಗಿ ಮತ್ತೆ ಪ್ರಾಧ್ಯಾಪಕರನ್ನೇ ಆ ಹುದ್ದೆಗೆ ನೇಮಿಸಲು ಆರಂಭಿಸಿತ್ತು. ಕೆಎಎಸ್ ಅಧಿಕಾರಿಗಳನ್ನು ನೇಮಕ ಮಾಡಲು ವಿಶ್ವವಿದ್ಯಾಲಯಗಳ ಕಾಯ್ದೆಗೆ 2022ರಲ್ಲಿ ಮತ್ತೆ ತಿದ್ದುಪಡಿ ತರಲಾಯಿತು. ವಿಪರ್ಯಾಸವೆಂದರೆ ತಿದ್ದುಪಡಿ ತರಲು ಶ್ರಮಿಸಿದ್ದ ಅಂದಿನ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರೇ ಅಸ್ತಿತ್ವಕ್ಕೆ ತಂದ ರಾಜ್ಯದ ಎಂಟು ಹೊಸ ವಿಶ್ವವಿದ್ಯಾಲಯಗಳ ಪ್ರಥಮ ಕುಲಸಚಿವ ಸ್ಥಾನಕ್ಕೆ ಅಧ್ಯಾಪಕರನ್ನೇ ನೇಮಿಸಿದ್ದರು.

ಕೆಎಎಸ್ ಅಧಿಕಾರಿಗಳಿಗೆ ವಿರೋಧ ಏಕೆ?

ಕೆಎಎಸ್ ಅಧಿಕಾರಿಗಳನ್ನು ನೇಮಕ ಮಾಡಲು ವಿಶ್ವವಿದ್ಯಾಲಯಗಳೇ ವಿರೋಧ ಮಾಡುತ್ತಾ ಬಂದಿವೆ. ಕುಲಸಚಿವ ಸ್ಥಾನಕ್ಕೆ ಬರುವ ಅಧಿಕಾರಿಗಳು ಸರ್ಕಾರದ ಆದೇಶಗಳನ್ನು ಚಾಚೂ ತಪ್ಪದೇ ಪಾಲಿಸುತ್ತಾರೆ. ಅನುಷ್ಠಾನಗೊಳಿಸುತ್ತಾರೆ. ಆದರೆ, ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಕುಲಪತಿಯ ಆದೇಶಗಳ ಬಗ್ಗೆ ತಾತ್ಸಾರ ತೋರುವುದು ಸಾಮಾನ್ಯ ಸಂಗತಿ. ಇದರಿಂದ ವಿಶ್ವವಿದ್ಯಾಲಯದ ಆಂತರಿಕ ಆಡಳಿತ ನಿಧಾನವಾಗುತ್ತದೆ. ಇದೇ ವಿಚಾರಕ್ಕೆ ಎಷ್ಟೋ ವೇಳೆ ಸಿಂಡಿಕೇಟ್, ಕುಲಪತಿ ಹಾಗೂ ಕುಲಸಚಿವರ ನಡುವೆ ಸಂಘರ್ಷಮಯ ವಾತಾವರಣ ನಿರ್ಮಾಣವಾಗುತ್ತದೆ ಎನ್ನುತ್ತಾರೆ ಬೆಂಗಳೂರು ವ್ಯಾಪ್ತಿಯ ವಿಶ್ವವಿದ್ಯಾಲಯವೊಂದರ ಕುಲಪತಿ.

ಯಾರು ನೇಮಕವಾದರೂ ಅನುಕೂಲ, ಅನನುಕೂಲಗಳಿವೆ. ಕೆಎಎಸ್ ಅಧಿಕಾರಿಗಳಿಗೆ ನಿಯಮ ಮುಖ್ಯ. ಪ್ರಾಧ್ಯಾಪಕರು ಶಿಕ್ಷಣದ ಪ್ರಗತಿಗೆ ಒತ್ತು ನೀಡುತ್ತಾರೆ

ಜೋಗನ್ ಶಂಕರ್, ವಿಶ್ರಾಂತ ಕುಲಪತಿ.

ಅಂಕಿ ಅಂಶಗಳು

32 ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳು

14 ಕೆಎಎಸ್ ಅಧಿಕಾರಿಗಳು

11 ಅಧ್ಯಾಪಕರು

2 ನೇ ಐಎಫ್‌ಎಸ್ ಅಧಿಕಾರಿ

5 ಖಾಲಿ ಹುದ್ದೆಗಳು

‘ಕಸ್ತೂರಿರಂಗನ್ ವರದಿ ಜಾರಿ ಮಾಡುವುದಾಗಿ ಹೇಳಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದ ಕೆ. ಕಸ್ತೂರಿರಂಗನ್ ಸಮಿತಿ ವರದಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವುದಾಗಿ ನಾನು ಹೇಳಿಕೆ ನೀಡಿಲ್ಲ’ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಏಟ್ರಿಯಾ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಜುಲೈ 28ರಂದು ನಡೆದ ಅಂತರ ಜೀವಿ ಪ್ರಭೇದ ಸಮಾವೇಶದಲ್ಲಿನ ತಮ್ಮ ಭಾಷಣದ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಸೋಮವಾರ ಪತ್ರಿಕಾ ಹೇಳಿಕೆ ಮೂಲಕ ಅವರು ಅಲ್ಲಗಳೆದಿದ್ದಾರೆ.

‘ಆ ಕಾರ್ಯಕ್ರಮದಲ್ಲಿದ್ದ ಕೆಲವರು ಕಸ್ತೂರಿರಂಗನ್ ವರದಿ ಕುರಿತಂತೆ ನನ್ನನ್ನು ಪ್ರಶ್ನಿಸಿದರು. ಕೇಂದ್ರ ಸರ್ಕಾರ ನೇಮಿಸಿರುವ ಸಂಜಯ್ ಕುಮಾರ್ ನೇತೃತ್ವದ ಪುನರ್ ಪರಿಶೀಲನಾ ಸಮಿತಿ ಡಿಸೆಂಬರ್ ವೇಳೆಗೆ ವರದಿ ಸಲ್ಲಿಸಲಿದೆ. ಆ ಬಳಿಕ ಸಂಪುಟ ಉಪ ಸಮಿತಿ ಸಭೆಯಲ್ಲಿ ಚರ್ಚಿಸಲಾಗುವುದು. ನಂತರ ಈ ವರದಿಯ ವಿಚಾರದಲ್ಲಿ ಸರ್ಕಾರ ನಿರ್ಧಾರಕ್ಕೆ ಬರಲಿದೆ ಎಂದಷ್ಟೇ ಹೇಳಿದ್ದೆ’ ಎಂದಿದ್ದಾರೆ.

ಈಶ್ವರ ಖಂಡ್ರೆ

ಕಸ್ತೂರಿರಂಗನ್ ವರದಿ ಹತ್ತು ವರ್ಷಗಳಷ್ಟು ಹಳೆಯದು. ಅದು ಈಗ ಪ್ರಸ್ತುತವೇ ಎಂಬ ಪ್ರಶ್ನೆಯೂ ಇದೆ. ವರದಿ ಬಗ್ಗೆ ಪಶ್ಚಿಮ ಘಟ್ಟಗಳ ಪ್ರದೇಶದ ಜನರಲ್ಲಿ ಭೀತಿ ಇದೆ. ಇದೊಂದು ಸೂಕ್ಷ್ಮ ವಿಷಯ. ಈ ವಿಚಾರದಲ್ಲಿ ಸರ್ಕಾರ ಯಾವುದೇ ಆತುರದ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ತಿಳಿಸಿದ್ದಾರೆ.

‘ಗ್ಯಾರಂಟಿ’ಗೆ ಪರಿಶಿಷ್ಟರ ₹11,000 ಕೋಟಿ

ಒಂದನೇ ಪುಟದಿಂದ...

‘ಎಸ್‌ಸಿಎಸ್‌ಪಿ- ಟಿಎಸ್‌ಪಿ ಅನುದಾನದಲ್ಲಿ ₹13 ಸಾವಿರ ಕೋಟಿ ಗ್ಯಾರಂಟಿಗಳಿಗೆ ನೀಡಲಾಗಿದೆ. ಇದು ಅನುದಾನದ ದುರ್ಬಳಕೆ’ ಎಂಬ ಬಿಜೆಪಿ ನಾಯಕರು ಮಾಡಿರುವ ಆರೋಪಗಳ ಬಗ್ಗೆ ಗಮನ ಸೆಳೆದಾಗ ಆರಂಭದಲ್ಲಿ ‘ಹುರುಳಿಲ್ಲದ ಆರೋಪ’ ಎಂದು ಸಚಿವರು ವಾದಿಸಿದರು. ಆ ಬಳಿಕ ಅನುದಾನ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಸಚಿವರಾದ ನಾಗೇಂದ್ರ, ಎಚ್.ಕೆ.ಪಾಟೀಲ, ಪ್ರಿಯಾಂಕ್ ಖರ್ಗೆ, ಎಂ.ಸಿ.ಸುಧಾಕರ್, ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ಶಾಸಕ ಪಿ.ಎಂ. ನರೇಂದ್ರ ಸ್ವಾಮಿ, ಪ್ರಸಾದ್‌ಅಬ್ಬಯ್ಯ, ಇ.ತುಕಾರಾಂ, ವಿಧಾನಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಸಭೆಯಲ್ಲಿ ಇದ್ದರು.

ಮೌಲ್ಯಮಾಪನ ವರದಿ ಪಡೆಯಲಾಗುವುದು: ಸಿದ್ದರಾಮಯ್ಯ

‘ಈ ಅನುದಾನದ ಅಡಿ ಯೋಜನೆಗಳ ಅನುಷ್ಠಾನ ನಂತರದ ಪರಿಣಾಮಗಳ ಮೌಲ್ಯಮಾಪನ ವರದಿಯನ್ನು ಸಿದ್ಧಪಡಿಸಿ ಫಲಾನುಭವಿಗಳ ಸ್ಥಿತಿಗತಿಯಲ್ಲಿ ಆಗಿರುವ ಬದಲಾವಣೆಗಳ ಮಾಹಿತಿ ಪಡೆಯಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆಯಲ್ಲಿ ತಿಳಿಸಿದರು.

‘ಒಂದು ವೇಳೆ ಈ ಅನುದಾನವನ್ನು ಖರ್ಚು ಮಾಡದಿದ್ದರೆ, ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಕಾಯ್ದೆ ಹೇಳುತ್ತದೆ. ಕಾಯ್ದೆ ಗಂಭೀರವಾಗಿದೆ. ಯಾರು ನಿರ್ಲಕ್ಷ್ಯ ಮಾಡುತ್ತಾರೊ ಅವರ ವಿರುದ್ಧ ಕಾಯ್ದೆ ಅಡಿ ಕ್ರಮ ಕೈಗೊಳ್ಳಲಾಗುತ್ತದೆ’ ಎಂದೂ ಎಚ್ಚರಿಸಿದರು.

ಸಭೆಯ ಪ್ರಮುಖ ಅಂಶಗಳು

- ಈ ಸಾಲಿನಲ್ಲಿ ರಾಜ್ಯದ ಒಟ್ಟು ಆಯವ್ಯಯ ಗಾತ್ರವು ₹3.28 ಲಕ್ಷ ಕೋಟಿ ಆಗಿದ್ದು, ಇದರಲ್ಲಿ ಅಭಿವೃದ್ಧಿಗಾಗಿ ₹1.42 ಲಕ್ಷ ಕೋಟಿ ನಿಗದಿ ಮಾಡಲಾಗಿದೆ. ಆ ಪೈಕಿ ಎಸ್‌ಸಿಎಸ್‌ಪಿ- ಟಿಎಸ್‌ಪಿಗೆ ಶೇ 24.10 ಅನುದಾನ ಅಂದರೆ ₹34,221.49 ಕೋಟಿ ಮತ್ತು ಹಿಂದಿನ ವರ್ಷ ಬಳಕೆಯಾಗದ ಮೊತ್ತ ₹72.20 ಕೋಟಿ ಸೇರಿಸಿ ₹34,293.69 ಕೋಟಿ ಅನುದಾನ ನೀಡಲಾಗಿದೆ
- ಸಂಬಂಧಿಸಿದ ಇಲಾಖೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಅನುದಾನ ಉಳಿದರೆ, ಅದರ ಮರುಹಂಚಿಕೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗುವುದು
- ಪರಿಶಿಷ್ಟ ಜಾತಿ ಮತ್ತು ಪಂಗಡದ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ವಿದ್ಯಾರ್ಥಿ ನಿಲಯ ಸೌಲಭ್ಯ ಕಲ್ಪಿಸಬೇಕು. ಯಾವುದೇ ಕಾರಣಕ್ಕೂ ದಲಿತರ ಮಕ್ಕಳು ಮಧ್ಯದಲ್ಲೇ ಶಾಲೆ ಬಿಟ್ಟು ಹೋಗಬಾರದು
- ದಲಿತರಿಗೆ ಎಲ್ಲೆಲ್ಲಿ ರುದ್ರಭೂಮಿ ಬೇಡಿಕೆ ಇದೆಯೊ ಅಲ್ಲಿ ರುದ್ರಭೂಮಿ ಒದಗಿಸಬೇಕು

ಬೆಂಗಳೂರು ಅರಮನೆ ಆವರಣದಲ್ಲಿ ಸೆ.25ರಿಂದ ನಾಲ್ಕು ದಿನ ಆಯೋಜನೆ

ಕಾಫಿ ಸಮ್ಮೇಳನ: ಮಾರುಕಟ್ಟೆ ವಿಸ್ತರಣೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಫಿ ಬೆಳೆಗಾರರು ಹಾಗೂ ಉದ್ಯಮಿಗಳಿಗೆ ಹೊಸ ಅವಕಾಶ ಸೃಷ್ಟಿ ಹಾಗೂ ಮಾರುಕಟ್ಟೆ ವಿಸ್ತರಣೆಯ ಆಶಯದೊಂದಿಗೆ ರಾಜಧಾನಿಯಲ್ಲಿ 5ನೇ ವಿಶ್ವ ಕಾಫಿ ಸಮ್ಮೇಳನವನ್ನು ಸೆ. 25ರಿಂದ 28ರ ತನಕ ಆಯೋಜಿಸಲಾಗಿದೆ.

ಭಾರತೀಯ ಕಾಫಿ ಮಂಡಳಿ, ಅಂತರರಾಷ್ಟ್ರೀಯ ಕಾಫಿ ಸಂಘಟನೆಗಳು (ಐಸಿಒ) ಹಾಗೂ ಕಾಫಿ ಉದ್ಯಮದ ಸಹಯೋಗದಲ್ಲಿ ನಗರದ ಅರಮನೆ ಆವರಣದಲ್ಲಿ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಸಮ್ಮೇಳನದ ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ಟೆನಿಸ್ ಆಟಗಾರ ರೋಹನ್ ಬೋಪಣ್ಣ ಅವರು ಸೋಮವಾರ ಲಾಂಛನವನ್ನು ಅನಾವರಣ ಮಾಡಿದರು.

ಭಾರತೀಯ ಕಾಫಿ ಮಂಡಳಿ ಸಿಇಒ ಕೆ.ಜಿ.ಜಗದೀಶ್ ಮಾತನಾಡಿ, ‘ಇಂಗ್ಲೆಂಡ್, ಬ್ರೆಜಿಲ್, ಗ್ವಾಟೆಮಾಲಾ, ಇಥಿಯೋಪಿಯಾದಲ್ಲಿ ನಾಲ್ಕು ಸಮ್ಮೇಳನಗಳು ನಡೆದಿದ್ದವು. ಏಷ್ಯಾದಲ್ಲಿ ಮೊದಲ ಬಾರಿಗೆ ಸಮ್ಮೇಳನ ಆಯೋಜಿಸಲಾಗುತ್ತಿದೆ. ಅದರಲ್ಲೂ ಬೆಂಗಳೂರು ವೇದಿಕೆಯಾಗುತ್ತಿರುವುದು ಹೆಮ್ಮೆಯ ವಿಚಾರ’ ಎಂದು ಹೇಳಿದರು.

ಬೆಂಗಳೂರಿನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ 5ನೇ ವಿಶ್ವ ಕಾಫಿ ಸಮ್ಮೇಳನದ ಲಾಂಛನವನ್ನು ಟೆನಿಸ್ ಆಟಗಾರ ರೋಹನ್ ಬೋಪಣ್ಣ (ಎಡದಿಂದ ನಾಲ್ಕನೆಯವರು) ಅನಾವರಣಗೊಳಿಸಿದರು. ಕಾಂಟಿನೆಂಟಲ್ ಕಾಫಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಚಲ ಶ್ರೀಶಾಂತ್, ಕಾಫಿ ಮಂಡಳಿ ಸಿಇಒ ಕೆ.ಜಿ.ಜಗದೀಶ್, ಸಮ್ಮೇಳನದ ಸಂಯೋಜಕ ಜಗದೀಶ್ ಪಟಾಂಕರ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್ ಇದ್ದರು.

‘ವಿಶ್ವದಲ್ಲಿ ಭಾರತವು ಕಾಫಿ ಉತ್ಪಾದನೆಯಲ್ಲಿ 7ನೇ ಸ್ಥಾನದಲ್ಲಿದೆ. ರಫ್ತಿನಲ್ಲಿ 5ನೇ ಸ್ಥಾನದಲ್ಲಿದೆ. ದೇಶದ ರಫ್ತು ಪ್ರಮಾಣದಲ್ಲಿ ಕರ್ನಾಟಕದ ಕೊಡುಗೆಯೇ ಶೇ 70ರಷ್ಟಿದೆ. ಗುಣಮಟ್ಟಕ್ಕೆ ರಾಜ್ಯದ ಕಾಫಿ ಪ್ರಸಿದ್ಧಿಯಾಗಿದೆ. ಮಾರುಕಟ್ಟೆ ವಿಸ್ತರಣೆಯ ಉದ್ದೇಶದಿಂದ ಈ ಸಮ್ಮೇಳನವು ಮಹತ್ವದ್ದು’ ಎಂದು ಪ್ರತಿಪಾದಿಸಿದರು.

‘ಕಾಫಿ ಮಾರುಕಟ್ಟೆ ಸ್ಥಿರವಾಗಿಲ್ಲ. ಬೆಲೆಯಿದ್ದ ವರ್ಷದಲ್ಲಿ ಫಸಲು ಕಡಿಮೆಯಿದೆ. ಫಸಲು ಹೆಚ್ಚಿರುವ ವರ್ಷಗಳಲ್ಲಿ ಬೆಲೆಯೇ ಇರುವುದಿಲ್ಲ. ಇದಕ್ಕೆ ಪರಿಹಾರ ಕಂಡುಕೊಳ್ಳುವುದಕ್ಕೆ ಸಮ್ಮೇಳನ ಹೆಚ್ಚು ಉಪಯುಕ್ತವಾಗಲಿದೆ. ಭಾರತದ ಕಾಫಿ ಉತ್ಪಾದನೆ ಹಾಗೂ ಪರಂಪರೆಯನ್ನು ಜಗತ್ತಿಗೆ ಪರಿಚಯಿಸಲು ಸಾಧ್ಯವಾಗಲಿದೆ. ಹವಾಮಾನ ವೈಪರೀತ್ಯದಿಂದ ಬೆಳೆಗಾರರು ಸಾಕಷ್ಟು ಸವಾಲು ಎದುರಿಸುತ್ತಿದ್ದಾರೆ. ಅದರಿಂದ ಆಗುತ್ತಿರುವ ಹಾನಿ ತಡೆಗಟ್ಟುವುದರ ಕುರಿತು ಮಂಡಳಿಯಿಂದ ಸಂಶೋಧನೆಗಳು ನಡೆಯುತ್ತಿವೆ’ ಎಂದು ಹೇಳಿದರು.

ರೋಹನ್ ಬೋಪಣ್ಣ ಮಾತನಾಡಿ, ‘ಕಾಫಿ ಉದ್ಯಮವು ವೇಗವಾಗಿ ಬೆಳೆಯುತ್ತಿದೆ. ಬ್ರ್ಯಾಂಡ್ ಅಂಬಾಸಿಡರ್ ಆಗಿರುವ ಕಾರಣಕ್ಕೆ ವಿಶ್ವದಾದ್ಯಂತ ಕಾಫಿ ಪರಿಚಯಿಸಲು ಸಾಧ್ಯವಾಗಲಿದೆ’ ಎಂದು ಹೇಳಿದರು.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎಸ್. ಸೆಲ್ವಕುಮಾರ್ ಮಾತನಾಡಿ, ‘ಸಮ್ಮೇಳನದಿಂದ ಕಾಫಿ ರಫ್ತು ಹೆಚ್ಚಳವಾಗುವ ಸಾಧ್ಯತೆಯಿದ್ದು ಇದರಿಂದ ಬೆಳೆಗಾರರಿಗೆ ವರವಾಗಲಿದೆ’ ಎಂದು ಹೇಳಿದರು.

ಸಮ್ಮೇಳನದ ಸಂಯೋಜಕ ಜಗದೀಶ್ ಪಟಾಂಕರ್, ‘ಸಮ್ಮೇಳನಕ್ಕೂ ಮೊದಲು ಮತ್ತು ನಂತರ ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲೆ ಕಾಫಿ ಎಸ್ಟೇಟ್‌ಗಳಿಗೆ ವಿದೇಶಿ ಪ್ರತಿನಿಧಿಗಳು ಭೇಟಿ ನೀಡಿ ಅಧ್ಯಯನ ನಡೆಸಲಿದ್ದಾರೆ’ ಎಂದರು.

ಸಮ್ಮೇಳನದ ವೈಶಿಷ್ಟ್ಯ ಏನು?

- ಸಮ್ಮೇಳನದಲ್ಲಿ ಸುಸ್ಥಿರ ಕಾಫಿ ಉದ್ಯಮದ ಕುರಿತು ಚರ್ಚೆ
- 80ಕ್ಕೂ ಹೆಚ್ಚು ದೇಶಗಳ 2 ಸಾವಿರ ಪ್ರತಿನಿಧಿಗಳು ಭಾಗಿ
- 150ಕ್ಕೂ ಹೆಚ್ಚು ಮಳಿಗೆ ಸ್ಥಾಪನೆ, ಮೌಲ್ಯವರ್ಧಿತ ಕಾಫಿ ಉತ್ಪನ್ನಗಳ ಪ್ರದರ್ಶನ
- 10 ಸಾವಿರ ವೀಕ್ಷಕರು ಪಾಲ್ಗೊಳ್ಳುವ ನಿರೀಕ್ಷೆ

ಐಸಿಒ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು, ಬೆಳೆಗಾರರು, ಕಾಫಿ ರೋಸ್ಟರ್‌ಗಳು, ಉದ್ಯಮದ ಪ್ರತಿನಿಧಿಗಳು, ಕೆಫೆ ಮಾಲೀಕರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ

ಕೆ.ಜಿ.ಜಗದೀಶ್, ಸಿಇಒ, ಭಾರತೀಯ ಕಾಫಿ ಮಂಡಳಿ

ನಮ್ಮ ತಂದೆಯೂ ಕಾಫಿ ಬೆಳೆಗಾರರು. ನಾನು ಕಾಫಿ ಸಮ್ಮೇಳನದ ಭಾಗವಾಗುತ್ತಿರುವುದಕ್ಕೆ ಅತೀವ ಹೆಮ್ಮೆ ಎನಿಸುತ್ತಿದೆ

ರೋಹನ್ ಬೋಪಣ್ಣ, ಬ್ರ್ಯಾಂಡ್ ಅಂಬಾಸಿಡರ್

ಸಿ.ಎಂ ಕಾನೂನು ಸಲಹೆಗಾರರಾಗಿ ಪೊನ್ನಣ್ಣ



ಬೆಂಗಳೂರು: ಕೊಡಗು ಜಿಲ್ಲೆಯ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎ.ಎಸ್. ಪೊನ್ನಣ್ಣ ಪೊನ್ನಣ್ಣ ಅವರನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರನ್ನಾಗಿ ತಕ್ಷಣದಿಂದಲೇ ಜಾರಿಗೆ ಬರುವಂತೆ ನೇಮಕ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಸಂಪುಟ ದರ್ಜೆ ಸಚಿವರ ಸ್ಥಾನಮಾನ ಹೊಂದಿರುವ ಈ ಹುದ್ದೆಗೆ ಪೊನ್ನಣ್ಣ ಅವರ ನೇಮಕವನ್ನು ಈ ಮೊದಲೇ ಘೋಷಿಸಲಾಗಿತ್ತು. ಆದರೆ, ನೇಮಕಾತಿಗೆ ಕಾನೂನು ತಿದ್ದುಪಡಿ ಆಗಬೇಕಿದ್ದ ಕಾರಣ ಅವರು ಅಧಿಕೃತವಾಗಿ ಅಧಿಕಾರ ವಹಿಸಿಕೊಂಡಿರಲಿಲ್ಲ.

ಹಿರಿಯ ವಕೀಲ ಮತ್ತು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕರೂ ಆಗಿದ್ದ ದಿವಂಗತ ಎ.ಕೆ. ಸುಬ್ಬಯ್ಯ ಅವರ ಪುತ್ರರಾದ ಪೊನ್ನಣ್ಣ ಈ ಹಿಂದೆ ಸಿದ್ದರಾಮಯ್ಯ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಹೈಕೋರ್ಟ್‌ನ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು. ನಂತರ ಹೈಕೋರ್ಟ್‌ನ ಹಿರಿಯ ವಕೀಲರಾಗಿ ನಿಯೋಜಿತರಾಗಿದ್ದರು.

ಕರ್ನಾಟಕ ರಾಜ್ಯ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು-560100.

ಸಂ:ಕೇಕಾಬೆಂ/ದರಖಾಸ್ತು(ಕಾರ್ಖಾನೆ ಮತ್ತು ಬೇಕರಿ)/23-24 ದಿನಾಂಕ: 31-07-2023

ಅಲ್ಪಾವಧಿ ಇ-ಟೆಂಡರ್ ನೋಟಿಸ್ (ಕರೆ-2)

ಕೆಟಿಪಿಪಿ ನಿಯಮದನ್ವಯ 2023-24 ನೇ ಸಾಲಿಗೆ ಬೆಂಗಳೂರು ಕೇಂದ್ರ ಕಾರಾಗೃಹದ ಕಾರ್ಖಾನೆ ಮತ್ತು ಬೇಕರಿ ವಿಭಾಗಕ್ಕೆ ಕಚ್ಚಾ ವಸ್ತುಗಳು / ಪದಾರ್ಥಗಳನ್ನು ಖರೀದಿಸಲು ಅಲ್ಪಾವಧಿ ಇ-ದರಖಾಸ್ತನ್ನು (ಕರೆ-2) ಕರೆಯಲಾಗಿದೆ.

ಟೆಂಡರ್ ಇಂಡೆಂಟ್ ಸಂಖ್ಯೆ: ಇ-ಪೋರ್ಟಲ್ ನಂತೆ. ದರಖಾಸ್ತು ವಿವರ: 1) ಬೆಂಗಳೂರು, ಕೇಂದ್ರ ಕಾರಾಗೃಹದ ಬೇಕರಿ ವಿಭಾಗಕ್ಕೆ ಅವಶ್ಯಕವಿರುವ ಭಾಗ-13 ರಲ್ಲಿ ಬರುವ ಕಚ್ಚಾ ಪದಾರ್ಥಗಳನ್ನು ಖರೀದಿಸುವ ಬಗ್ಗೆ. 2) ಬೆಂಗಳೂರು, ಕೇಂದ್ರ ಕಾರಾಗೃಹದ ಕಾರ್ಖಾನೆ ವಿಭಾಗಕ್ಕೆ (ನೇಯ್ಗೆ, ಕುಲುಮೆ ಇತ್ಯಾದಿ) ಅವಶ್ಯಕವಿರುವ ಭಾಗ-14 ರಲ್ಲಿ ಬರುವ ಕಚ್ಚಾ ವಸ್ತುಗಳನ್ನು ಖರೀದಿಸುವ ಬಗ್ಗೆ. 3) ಬೆಂಗಳೂರು, ಕೇಂದ್ರ ಕಾರಾಗೃಹದ ಕಾರ್ಖಾನೆ ವಿಭಾಗಕ್ಕೆ (ಸೋಪು, ಫಿನಾಯಲ್ ಮತ್ತು ಮುದ್ರಣ) ಅವಶ್ಯಕವಿರುವ ಭಾಗ-15ರಲ್ಲಿ ಬರುವ ಕಚ್ಚಾ ವಸ್ತುಗಳನ್ನು ಖರೀದಿಸುವ ಬಗ್ಗೆ.

ದರಖಾಸ್ತುದಾರರು ಹೆಚ್ಚಿನ ಮಾಹಿತಿಯನ್ನು ಇ-ಪೋರ್ಟಲ್‌ನ ವೆಬ್‌ಸೈಟ್: **kppp.karnataka.gov.in or Helpline No.+91-80460 10000, +91-80689 48777** ಗಳಿಗೆ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/- ಮುಖ್ಯ ಅಧೀಕ್ಷಕರು,
ಕೇಂದ್ರ ಕಾರಾಗೃಹ, ಬೆಂಗಳೂರು, ಕಾರಾಗೃಹ ಮತ್ತು
ಸುಧಾರಣಾ ಸೇವೆಗಳು, ಕರ್ನಾಟಕ ರಾಜ್ಯ, ಬೆಂಗಳೂರು.

DIPR/CP/RO720/AAPL/2023-24

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಯೋಜನಾ ನಿರ್ದೇಶಕರವರ ಕಛೇರಿ (ಆರ್.ಸಿ.ಹೆಚ್),
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು 560 023

ಸಂ: DD/NHM/PROC/09A/22-23 (IND0003) ದಿನಾಂಕ: 28/07/2023

ಟೆಂಡರ್ ಅಧಿಸೂಚನೆ

ಆರ್ಥಿಕ ವರ್ಷ 2022-23 ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕ್ರೂಡಿಕೃತ ಮುದ್ರಣ ಹಾಗೂ ಸರಬರಾಜು ಮಾಡಲು ಟೆಂಡರ್ ಅಧಿಸೂಚನೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಕಾರ್ಯಕ್ರಮಗಳಿಗೆ ಕ್ರೂಡಿಕೃತ ಮುದ್ರಣ ಹಾಗೂ ಸರಬರಾಜು ಮಾಡಲು ಅಧಿಕೃತ ಮುದ್ರಣದಾರರಿಂದ ಮುದ್ರಣಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಯೊಂದಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯು ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ 28/07/2023 ಪೂರ್ವಾಹ್ನ 11.00 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ 07/09/2023 ಅಪರಾಹ್ನ 05.30 ರೊಳಗೆ ಸಲ್ಲಿಸತಕ್ಕದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 05.30 ಗಂಟೆಯೊಳಗೆ ಪಡೆಯಬಹುದಾಗಿರುತ್ತದೆ.

ಸಹಿ/-
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/BCPL/717/2023-24

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483636/38/39

ಸಂಖ್ಯೆ. HR1-047/SS/2023-24 ದಿನಾಂಕ: 27.07.2023

ಡಿಪೋ ಸಪೋರ್ಟ್ ಸಿಬ್ಬಂದಿ ಸೇವೆಯನ್ನು ಒದಗಿಸಲು ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟು, ಸಾಕಷ್ಟು ಅನುಭವವುಳ್ಳ ಮತ್ತು ಮಾನವ ಸಂಪನ್ಮೂಲ ಹೊಂದಿರುವ ಅರ್ಹ ಏಜೆನ್ಸಿಗಳಿಂದ ನಿಗಮದ ಮದ್ಯ/ಮದ್ಯಸಾರ ಮಳಿಗೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ ಅವಧಿಗೆ ಡಿಪೋ ಸಪೋರ್ಟ್ ಸಿಬ್ಬಂದಿ ಸೇವೆ ಒದಗಿಸಲು, ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ) (ಟೆಂಡರ್ ಮೊತ್ತದ ಶೇ. 1.5 ರಂತೆ)
1	2	3	4
1	ಪೂರ್ವ ವಲಯ	624.34	9.36
	ಪಶ್ಚಿಮ ವಲಯ	403.99	6.06
	ಉತ್ತರ ವಲಯ	477.44	7.16
	ದಕ್ಷಿಣ ವಲಯ	1070.31	16.05

ಟೆಂಡರ್‌ನಲ್ಲಿ ಭಾಗವಹಿಸಲಚ್ಚಿಸುವ ಏಜೆನ್ಸಿಗಳು ಮೇಲಿನ ಕಾಲಂ ಸಂಖ್ಯೆ (4)ರಲ್ಲಿ ತಿಳಿಸಿರುವಂತೆ ಟೆಂಡರಿಗಿಟ್ಟ ಮೊತ್ತ ಇಎಂಡಿಯನ್ನು ವಲಯವಾರು ಪ್ರತ್ಯೇಕವಾಗಿ ಅನ್ವಯವಾಗುವಂತೆ ನಿಯಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರತ್ಯೇಕವಾಗಿ ಸಂದಾಯ ಮಾಡಬೇಕು. ಟೆಂಡರ್ ಪ್ರಕ್ರಿಯೆಯ ಕಾಲಕ್ರಮ ಈ ಕೆಳಗಿಂತಿರುತ್ತದೆ.

1) ಪ್ರೀ-ಬಿಡ್ ಮೀಟಿಂಗ್ **ದಿನಾಂಕ: 16.08.2023 ರಂದು ಬೆಳಿಗ್ಗೆ 11:30 ಗಂಟೆಗೆ.** 2) ಬಿಡ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ ಮತ್ತು ಸಮಯ: 30.08.2023ರ ಸಂಜೆ 5:30 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 01.09.2023ರ ಬೆಳಿಗ್ಗೆ 11:30 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 11.09.2023ರ ಬೆಳಿಗ್ಗೆ 11:30 ಗಂಟೆಗೆ.**

ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ : **www.kppp.karnataka.gov.in** or **www.ksbcl.com** ಭೇಟಿ ನೀಡಿ ಪಡೆಯಬಹುದು.

ಸಹಿ/-
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)

ವಾಸಾಸಂಇ/ವಾಪ್ರ/ಜಿಎ/700/2023-24

ಸುಭಾಷಿತ

ನಿಮ್ಮ ಹೃದಯವು ಜ್ವಾಲಾಮುಖಿಯಾಗಿರುವಾಗ, ಅಲ್ಲಿ ಹೂವುಗಳು ಅರಳಬೇಕೆಂದು ನೀವು ನಿರೀಕ್ಷಿಸುವುದಾದರೂ ಹೇಗೆ? -ಖಲೀಲ್ ಗಿಬ್ರಾನ್

ಹುಲಿ ಸಂಖ್ಯಾವೃದ್ಧಿಗೆ ಭಲೇ ಎನ್ನಬೇಕು ಸಮೃದ್ಧಿಯೇ ಸಮಸ್ಯೆಯಾಗದಿದ್ದರೆ ಸಾಕು

ಜಗತ್ತೇ ಮೆಚ್ಚಿಕೊಳ್ಳುವಂತೆ ಭಾರತದ 'ಹುಲಿ ಯೋಜನೆ' ಯಶಸ್ಸಿನ 50ನೇ ವರ್ಷಕ್ಕೆ ಕಾಲಿಟ್ಟಿದೆ. ಐವತ್ತು ವರ್ಷಗಳ ಹಿಂದೆ 1,780ರಷ್ಟಿದ್ದ ಹುಲಿಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತ, ಈ ಐದು ದಶಕಗಳಲ್ಲಿ 3,682ಕ್ಕೆ ಏರಿದೆ. ಇದು ಬಹುದೊಡ್ಡ ಸಾಧನೆ. ಏಕೆಂದರೆ, ಇದೇ ಅವಧಿಯಲ್ಲಿ ಜನಸಂಖ್ಯೆ (1970ರಲ್ಲಿ 55 ಕೋಟಿ ಇದ್ದದ್ದು) 140 ಕೋಟಿಗೆ ಏರಿದೆ, ಪ್ರಾಣಿಜ ಜೀವಿತಾವಧಿ ಏರಿದೆ, ಕೃಷಿ ವಿಸ್ತರಣೆ ಹೆಚ್ಚುತ್ತಲೇ ಹೋಗಿದೆ, ವನ್ಯಜೀವಿ ಬಳಸುವ ಶಸ್ತ್ರಾಸ್ತ್ರಗಳ ಗುಣಮಟ್ಟ ಹೆಚ್ಚಾಗಿದೆ. ಇವೆಲ್ಲವುಗಳ ನಡುವೆಯೂ ಹುಲಿಗಳ ಸಂಖ್ಯೆ ಹೆಚ್ಚುತ್ತಲೇ ಹೋಗಿದೆ. ಹುಲಿಗಳನ್ನು ಅವುಗಳ ಸಹಜ ಪರಿಸರದಲ್ಲೇ ನೋಡಲು ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಿದ್ದರಿಂದ ಹಣದ ಗಳಿಕೆಯೂ ಗಣನೀಯವಾಗಿ ಹೆಚ್ಚಿದೆ. ರಾಷ್ಟ್ರದ ಈ ಯಶಸ್ಸಿನಲ್ಲಿ ಕರ್ನಾಟಕದ ಪಾಲು ದೊಡ್ಡದು. ನಮ್ಮ ಅರಣ್ಯ ರಕ್ಷಕರು, ವನ್ಯಜೀವಿ ವಿಜ್ಞಾನಿಗಳು ಹಾಗೂ ವನ್ಯಪ್ರೇಮಿಗಳ ಸಹಯೋಗದಿಂದ ಹುಲಿಗಳ ಸಂರಕ್ಷಿತ ಪ್ರದೇಶಗಳ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಹುಲಿಗಳ ಸಂಖ್ಯೆ ಹೆಚ್ಚಾಗಿದ್ದೇ ಅಲ್ಲ, ದೇಶಕ್ಕೇ ಮಾದರಿಯಾಗುವಂತೆ ಹುಲಿಗಳ ಗಣತಿಯಲ್ಲಿ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಂಡಿದ್ದೂ ಕರ್ನಾಟಕದ ಹೆಗ್ಗಳಿಕೆಯಾಗಿದೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಇತ್ತೀಚಿನ ವರದಿಯ ಪ್ರಕಾರ, ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ 563ಕ್ಕೆ ಏರಿದೆ. ಸಹಜವಾಗಿಯೇ ಜುಲೈ 29ರ 'ಅಂತರ ರಾಷ್ಟ್ರೀಯ ವ್ಯಾಘ್ರ ದಿನ'ದಂದು ಈ ಸಂಭ್ರಮ ವನ್ಯಪ್ರೇಮಿಗಳಲ್ಲಿ ಗರಿಗೆದರಿದ್ದು ನಾನಾ ಮಾಧ್ಯಮಗಳಲ್ಲಿ ವ್ಯಕ್ತವಾಗುತ್ತಿದೆ.

ಹುಲಿಗಳ ಸಂತಾನದ ಸಮೃದ್ಧಿಯಿಂದಾಗಿ ಬರುವ ಸಮಸ್ಯೆಗಳನ್ನು ನಾಜೂಕಿನಿಂದ ನಿವಾರಿಸಿಕೊಳ್ಳಬೇಕಿದೆ

ಆದರೆ ಹುಲಿಗಳ ಸಂಖ್ಯಾವೃದ್ಧಿಯಿಂದಾಗಿ ಸುಶಿಕ್ಷಿತ, ನಗರವಾಸಿ ವನ್ಯಪ್ರೇಮಿಗಳಲ್ಲಿ ಕಂಡಷ್ಟೇ ಸಂಭ್ರಮ ಅಭಯಾರಣ್ಯದ ಸುತ್ತಲೂ ವಾಸಿಸುತ್ತಿರುವ ತಳಸಮುದಾಯಗಳಲ್ಲಿ, ರೈತರಲ್ಲಿ ಮನೆಮಾಡಿದೆಯೇ ಎಂದು ಕೇಳಿದರೆ ನಮಗೆ ಭಿನ್ನ ಚಿತ್ರಣವೇ ಸಿಕ್ಕೀತು. ಹುಲಿಗಳ ಸಂಖ್ಯಾವೃದ್ಧಿಯಿಂದಾಗಿ ಹುಲಿಗಳಿಗೂ ತೊಂದರೆ ಆಗುತ್ತಿದೆ, ಸುತ್ತ ವಾಸಿಸುತ್ತಿರುವ ಜನ ಸಮುದಾಯಕ್ಕೂ ಸಂಕಷ್ಟಗಳು ದಿನೇದಿನೇ ಹೆಚ್ಚುತ್ತಿವೆ. ಉದಾಹರಣೆಗೆ, ನಾಗರಹೊಳೆ ಅಭಯಾರಣ್ಯದಲ್ಲಿ ವಾಸಿಸುತ್ತಿರುವ ಪ್ರತಿ ಹುಲಿಗೆ ಓಡಾಡಲು ಸರಾಸರಿ ಹತ್ತು ಚದರ ಕಿಲೊಮೀಟರ್ ಸ್ಥಳಾವಕಾಶ ಇದ್ದುದು ಈಗ ಆರು ಚದರ ಕಿಲೊಮೀಟರ್‌ಗೆ ಇಳಿದಿದೆ. ದಟ್ಟಣೆ ಹೆಚ್ಚಿದ್ದರಿಂದ ಹುಲಿಗಳು ಗಡಿರಕ್ಷಣೆ- ವಿಸ್ತರಣೆಗೆಂದು ತಮ್ಮತಮ್ಮಲ್ಲೇ ಬಡಿದಾಡಿಕೊಂಡು ಸಾವಪ್ಪುತ್ತಿರುವ ವರದಿಗಳೂ ಆಗಾಗ ಬರುತ್ತಿವೆ. ನಮ್ಮ ರಾಜ್ಯದ ಶೇಕಡ 40ರಷ್ಟು ಹುಲಿಗಳು ಸಂರಕ್ಷಿತ ಪ್ರದೇಶಗಳ ಹೊರಗಡೆಯೇ ವಾಸಿಸುತ್ತಿವೆ. ಸಹಜವಾಗಿ ಅಲ್ಲಲ್ಲ ಮನುಷ್ಯರು ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ಹೆಚ್ಚುತ್ತಿದೆ. ಕಾಡಾನೆ, ಕಾಡುಹಂದಿ, ಕಾಟಿ ಮತ್ತು ಮಂಗಗಳ ಹಾವಳಿಯಿಂದ ರೈತರು ಈಗಾಗಲೇ ರೋಸಿಹೋಗಿದ್ದಾರೆ. ಅವುಗಳ ಬೇಟೆಗೆಂದು ಬೆನ್ನಟ್ಟಿ ಬಫರ್ ವಲಯವನ್ನು ದಾಟಿ ಬರುವ ಹುಲಿಗಳು ದನ-ಕುರಿಗಳನ್ನು ಕೊಂದಾಗ ಕುಪಿತ ರೈತರು ವಿಷ ಹಾಕಿಯೊ, ಉರುಳಿಗೆ ಸಿಕ್ಕಿಸಿಯೊ ಅಥವಾ ವಿದ್ಯುತ್ ಆಘಾತ ಕೊಟ್ಟೋ ಹುಲಿಗಳನ್ನು ಸಾಯಿಸುತ್ತಾರೆ. ಹಿಂದೆ ರಾಜಮಹಾರಾಜರ ಮತ್ತು ಬ್ರಿಟಿಷ್ ಅಧಿಕಾರಿಗಳ ಬಂದೂಕಿನಿಂದಾಗಿ ಅಳಿವಿನಂಚಿಗೆ ಬಂದಿದ್ದ ಹುಲಿಗಳು ಈಗ ರಕ್ಷಿತಾರಣ್ಯಗಳ ಆಸುಪಾಸಿನಲ್ಲಿ ವಾಸಿಸುವ ರೈತಸಮುದಾಯದ ದೇಸಿ ಮಾರಕಾಸ್ತ್ರಗಳಿಗೆ ಬಲಿಯಾಗಬೇಕಿದೆ. ಈ ಸಮಸ್ಯೆಯನ್ನು ನಿವಾರಿಸುವ ದಿಸೆಯಲ್ಲಿ ಬಫರ್ ವಲಯವನ್ನೇ ಮೂಲ ಅರಣ್ಯದೊಳಕ್ಕೆ ಸೇರಿಸುವ ಕೆಲಸ ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಕೆಲವೆಡೆ ನಡೆದಿದೆ.

ವನ್ಯಜೀವಿಗಳ ಸಂರಕ್ಷಣೆಯ ಸಮಸ್ಯೆ ತೀರಾ ಸಂಕೀರ್ಣವಾದುದು. ಹುಲಿಗಳು ಬದುಕಬೇಕೆಂದರೆ ಮೇಯುವ ಜೀವಿಗಳ ಸಂಖ್ಯೆ ಸಾಕಷ್ಟಿರಬೇಕು. ಅಲ್ಲಿ ಲಂಟಾನಾ, ಯುಪಟೋರಿಯಂ, ಪಾರ್ಥೇನಿಯಂನಂತಹ ಕಳೆ ಇರಬಾರದು. ಕಳೆ ನಿಯಂತ್ರಣಕ್ಕೆಂದು ವ್ಯಾಪಕ ಪ್ರಮಾಣದಲ್ಲಿ ಕಳೆನಾಶಕ ರಾಸಾಯನಿಕಗಳನ್ನು ಸುರಿಯುತ್ತಾ ಹೋದರೆ ಅಲ್ಲಿ ಮೇಯುವ ವನ್ಯಜೀವಿಗಳಿಗೂ ಅಪಾಯ ತಪ್ಪಿದ್ದಲ್ಲ. ಅನಾರೋಗ್ಯ ಪೀಡಿತ ಜಿಂಕೆ, ಕಡವೆ, ಕಾಟಿಗಳನ್ನು ಹಿಡಿದು ಭಕ್ಷಿಸುವ ಹುಲಿ, ಚಿರತೆಗಳ ಸಂತಾನ ಅದೆಷ್ಟು ಸುದೃಢ ಇದ್ದೀತೊ ಎಲ್ಲೂ ಅಧ್ಯಯನ ನಡೆದಂತಿಲ್ಲ. ಮೇಲಾಗಿ, ರಕ್ಷಿತಾರಣ್ಯದ ಸೀಮಿತ ವಲಯದಲ್ಲಿ ವಾಸಿಸುವ ಪ್ರಾಣಿಗಳು ಅನಿವಾರ್ಯವಾಗಿ ತಮ್ಮತಮ್ಮೊಳಗೇ ವಂಶಾಭಿವೃದ್ಧಿ ಮಾಡಿಕೊಳ್ಳುತ್ತಿದ್ದರೂ ತಳಿದೌರ್ಬಲ್ಯ ತಲೆದೋರುತ್ತದೆ. ಹಿಂದಿನಂತೆ ಹುಲಿಗಳು ಸುದೃಢ ಸಂತಾನಕ್ಕಾಗಿ ಒಂದು ಕಾಡಿನಿಂದ ಇನ್ನೊಂದಕ್ಕೆ ನಿರಾತಂಕವಾಗಿ ಚಲಿಸುವಂತೆಯೂ ಇಲ್ಲ. ವಿವಿಧ ಅಭಯಾರಣ್ಯಗಳನ್ನು ಮತ್ತೆ ಹಸಿರುಪಟ್ಟಿಯ ಮೂಲಕ ಜೋಡಿಸುವುದಂತೂ ಸಾಧ್ಯವಿಲ್ಲ. ರಕ್ಷಿತ ಅರಣ್ಯವಲಯದ ಆಸುಪಾಸಿನ ರೈತರ ಜಮೀನನ್ನು ಖರೀದಿಸಿ ಅರಣ್ಯ ವಿಸ್ತರಣೆ ಮಾಡುವುದೂ ಸುಲಭದ್ದಲ್ಲ. ಈಗ ಉಳಿದ ಒಂದೇ ಉಪಾಯವೆಂದರೆ, ಹುಲಿಗಳ ಸಂಖ್ಯೆ ತೀರಾ ಜಾಸ್ತಿ ಇರುವ ಬಂಡೀಪುರ- ನಾಗರಹೊಳೆಯಂಥ ಕ್ಷೇತ್ರಗಳಿಂದ ಕಡಿಮೆ ದಟ್ಟಣೆ ಇರುವ ಅರಣ್ಯಗಳಿಗೆ ಅವುಗಳ ಸ್ಥಾನಾಂತರ ಮಾಡುವುದು. ಸವಾಲು ಬೆಟ್ಟದಷ್ಟಿದೆ. ಸಮೃದ್ಧಿಯಿಂದಾಗಿ ಬರುವ ಸಮಸ್ಯೆಗಳನ್ನು ನಾಜೂಕಿನಿಂದ ನಿವಾರಿಸಿಕೊಳ್ಳಬೇಕಿದೆ.

ದಿನದ ಟ್ವೀಟ್

ನ್ಯಾಯ ವಿತರಣೆ ತ್ವರಿತವಾಗಲಿ

ಐತಿಹಾಸಿಕ. ಭಾರತದ ಕೋರ್ಟ್‌ಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಇಂದು 5 ಕೋಟಿಯನ್ನು ದಾಟಿದೆ– ನಿಖರವಾಗಿ ಹೇಳುವುದಾದರೆ, 5.2 ಕೋಟಿ. ಇಡೀ ದಕ್ಷಿಣ ಕೊರಿಯಾದ ಜನಸಂಖ್ಯೆ ಇಷ್ಟಿದೆ. ನಮ್ಮ ನ್ಯಾಯ ವಿತರಣೆಯು ಇದೇ ಗತಿಯಲ್ಲಿ ಸಾಗಿದರೆ, ಬಾಕಿ ಉಳಿದಿರುವ ಈ ಪ್ರಕರಣಗಳನ್ನೆಲ್ಲ ಇತ್ಯರ್ಥಪಡಿಸಲು 323 ವರ್ಷಗಳು ಬೇಕಾಗುತ್ತವೆ.

ಆನಂದ್ ರಂಗನಾಥನ್, ಲೇಖಕ

ಕಿಡಿನುಡಿ

ಏರ್‌ಏಷ್ಯಾ ಇಂಡಿಯಾ– ತನ್ನ ಕರ್ತವ್ಯ ನಿರ್ವಹಿಸಿದ ಒಬ್ಬ ಉತ್ತಮ ಉದ್ಯೋಗಿಯನ್ನು ನೀವು ಅಮಾನತುಗೊಳಿಸಿದ್ದೀರಾ? ನಿಮ್ಮ ಸಮಯಪಾಲನೆಯಲ್ಲಿ ಲೋಪವಿರದಂತೆ ಅವರು ನೋಡಿಕೊಂಡಿದ್ದರು. ಎಲ್ಲ ಬೋರ್ಡಿಂಗ್ ಗೇಟ್‌ಗಳನ್ನೂ 25 ನಿಮಿಷ ಮೊದಲೇ ಮುಚ್ಚಲಾಗುತ್ತದೆ. ಆದರೆ ನಿರ್ಗಮನ ಸಮಯ ಕಳೆದ ಬಳಿಕ ವಿಐಪಿ ಆಗಮಿಸುತ್ತಾರೆ ಮತ್ತು ಮ್ಯಾನೇಜರ್ ಅಮಾನತು ಆಗುತ್ತಾರೆ. ಇದು ಸರಿಯೇ? ವಿಐಪಿ ಸಂಸ್ಕೃತಿ ಕೊನೆಗೊಳ್ಳಲೇಬೇಕು.

(ಕರ್ನಾಟಕದ ರಾಜ್ಯಪಾಲರು ಬರುವ ಮುನ್ನವೇ ವಿಮಾನವು ಹೈದರಾಬಾದ್‌ಗೆ ಹೊರಟ ಪ್ರಕರಣದಲ್ಲಿ, ಏರ್‌ಏಷ್ಯಾ ಇಂಡಿಯಾವು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ತನ್ನ ಸ್ಟೇಷನ್ ಮ್ಯಾನೇಜರ್ ಅವರನ್ನು ಅಮಾನತು ಮಾಡಿರುವುದಕ್ಕೆ ಪ್ರತಿಕ್ರಿಯೆ)

ಆರ್.ಕೆ.ಮಿಶ್ರಾ, ಆಡಳಿತ ಮಂಡಳಿ ಸದಸ್ಯ, ಅಸೋಚಾಂ, ಕರ್ನಾಟಕ ಘಟಕ

25 ವರ್ಷಗಳ ಹಿಂದೆ

ಶನಿವಾರ, 1-8-1998

• ರಾಜೀವ್ ಹತ್ಯೆ: ವಿಶೇಷ ತನಿಖಾ ಸಂಸ್ಥೆ ರಚನೆ

ನವದೆಹಲಿ, ಜುಲೈ 31 (ಪಿಟಿಐ)– ರಾಜೀವ್ ಗಾಂಧಿ ಹತ್ಯೆ ಕುರಿತಂತೆ ವಿಚಾರಣೆ ನಡೆಸಿದ ಜೈನ್ ಆಯೋಗದ ಅಂತಿಮ ವರದಿಯ ಶಿಫಾರಸಿನಂತೆ, ರಾಜೀವ್ ಹತ್ಯೆಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕರುಣಾನಿಧಿ, ವಿವಾದಾತ್ಮಕ ಸಾಧು ಚಂದ್ರಸ್ವಾಮಿ ಮತ್ತು ಜನತಾ ಪಕ್ಷದ ಅಧ್ಯಕ್ಷ ಡಾ. ಸುಬ್ರಮಣಿಯನ್ ಸ್ವಾಮಿ ಅವರ ಪಾತ್ರದ ಕುರಿತಂತೆ ತನಿಖೆ ನಡೆಸಲು ಕೇಂದ್ರ ಸರ್ಕಾರವು ವಿಶೇಷ ತನಿಖಾ ಸಂಸ್ಥೆಯನ್ನು ರಚಿಸಿದೆ. ಜೈನ್ ಆಯೋಗದ ಅಂತಿಮ ವರದಿ ಮತ್ತು ಅದರ ಆಧಾರದಲ್ಲಿ ಕೈಗೊಳ್ಳಲಾದ ಕ್ರಮದ ವರದಿಯನ್ನು ಕೇಂದ್ರ ಗೃಹ ಸಚಿವ ಎಲ್.ಕೆ.ಅಡ್ವಾಣಿ ಅವರು ಸಂಸತ್ತಿನಲ್ಲಿ ಇಂದು ಮಂಡಿಸಿದರು.

ಜೈನ್ ಆಯೋಗದ ಶಿಫಾರಸುಗಳನ್ನು ಸರ್ಕಾರ ಒಪ್ಪಿಕೊಂಡಿದ್ದು, ಎಲ್ಲ ಆರೋಪಿಗಳ ಪಾತ್ರ ಕುರಿತಂತೆ ತನಿಖೆ ನಡೆಸಲು 'ಎಲ್ಲ ತನಿಖಾ ವಿಭಾಗಗಳನ್ನೊಳಗೊಂಡ ತನಿಖಾ ಸಂಸ್ಥೆಯೊಂದನ್ನು (ಎಂಡಿಎಂಎ) ರಚಿಸಲಾಗುವುದು' ಎಂದು ಕ್ರಮ ಕೈಗೊಂಡ ವರದಿಯಲ್ಲಿ ತಿಳಿಸಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 1-8-1973

• ಬಿಹಾರದಲ್ಲಿ ಹಸಿವಿನಿಂದ 14 ಸಾವು: ಕೂಡಲೇ ಆಹಾರ ರವಾನೆಗೆ ಒತ್ತಾಯ

ನವದೆಹಲಿ, ಜುಲೈ 31– ಬಿಹಾರದಲ್ಲಿ ಹಸಿವಿನಿಂದ ಕೊನೇಪಕ್ಷ 14 ಮಂದಿ ಮರಣ ಹೊಂದಿರುವುದಾಗಿಯೂ ರಾಜ್ಯಕ್ಕೆ ಕೂಡಲೇ ಕೇಂದ್ರ ಸರ್ಕಾರವು ಆಹಾರ ಧಾನ್ಯವನ್ನು ಕಳುಹಿಸಬೇಕೆಂದೂ ಇತ್ತೀಚೆಗೆ ಬಿಹಾರದ ಅಭಾವಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದ ವಿರೋಧ ಪಕ್ಷಗಳ ಸದಸ್ಯರು ಲೋಕಸಭೆಯಲ್ಲಿ ಇಂದು ಒತ್ತಾಯ ಪಡಿಸಿದರು.

ಭಾಗಲ್ಪುರ, ಸಂತಾಲ್ ಪರಗಣ, ಗಯ ಜಿಲ್ಲೆಗಳಲ್ಲಿ ಆಹಾರಧಾನ್ಯ ಹಂಚಿಕೆ ಪದ್ಧತಿ ಸಂಪೂರ್ಣ ಕುಸಿದು ಹೋಗಿರುವುದಾಗಿಯೂ ಅವರು ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸುವಂತೆ ವಿರೋಧ ಪಕ್ಷದ ಸದಸ್ಯರು ಒತ್ತಾಯಪಡಿಸಿದರು.

• ಮೈಸೂರು- ಮಹಾರಾಷ್ಟ್ರ ಗಡಿ ವಿವಾದ ಚಳವಳಿಗೆ ಪ್ರಚೋದನೆ ಬೇಡ: ಸಂಸದರಿಗೆ ಸಚಿವ ಪಂತ್ ಮನವಿ

ನವದೆಹಲಿ, ಜುಲೈ 31– ಮೈಸೂರು– ಮಹಾರಾಷ್ಟ್ರ ಗಡಿ ವಿವಾದದ ವಿಷಯದಲ್ಲಿ ಚಳವಳಿಗಳಿಗೆ ಪ್ರಚೋದಿಸುವಂಥ ಯಾವುದೇ ಕಾರ್ಯ ಮಾಡಬೇಡಿ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಕೆ.ಸಿ. ಪಂತ್ ಅವರು ಇಂದು ಲೋಕಸಭೆಯಲ್ಲಿ ಸದಸ್ಯರಿಗೆ ಮನವಿ ಮಾಡಿದರು.

ಈ ವಿವಾದದ ಬಗ್ಗೆ ಕೇಂದ್ರವು ಶೀಘ್ರವೇ ಪರಿಹಾರ ಕಂಡುಹಿಡಿಯಬೇಕು ಎಂಬ, ಸೋಷಲಿಸ್ಟ್ ಪಕ್ಷದ ಸದಸ್ಯ ಮಧು ದಂಡವತೆ ಅವರ ಆಗ್ರಹಕ್ಕೆ ಪಂತ್ ಅವರು ಈ ರೀತಿ ಮನವಿ ಮಾಡಿಕೊಂಡರು.

ಶತ್ರುಪಾಳಯದ ಹೆಂಗಸರ ಮೇಲೆ ಆಕ್ರಮಣ ಮಾಡುವುದು ಇಂದು ನಿನ್ನೆಯದೇ?

ಪೈಶಾಚಿಕತೆ ನಡುವೆ ಮನುಷ್ಯರಾಗುವ ಸವಾಲು

ವಿಶ್ಲೇಷಣೆ

ಸಬಿತಾ ಬನ್ನಾಡಿ

'ನನ್ನಿಂದ ಸಂಪತ್ತನ್ನೂ ಪ್ರಸಿದ್ಧಿಯನ್ನೂ ಬೇಕಿದ್ದರೆ ಯೌವನವನ್ನೂ ಸೆಳೆದುಕೋ. ಆದರೆ ನನ್ನ ಬಾಲ್ಯದ ಮಳೆಗಾಲವನ್ನೂ, ಅದರಲ್ಲಿ ಕಾಗದದ ದೋಣಿ ಬಿಡುವ ಸುಖವನ್ನೂ ವಾಪಸ್ ತಂದುಕೊಡು' ಎಂಬ ಗಜಲ್ ಕೇಳಿಸಿಕೊಂಡಾಗ, ಇಂದಿನ ವಿಪ್ಲವದಿಂದ ಓಡಿ ಬಾಲ್ಯದ ಮುಗ್ಧತೆಯಲ್ಲಿ ಅಡಗಿಕೊಳ್ಳುವ ಬಯಕೆಯಾಗುತ್ತದೆ. ಭಯಾನಕ ಘಟನೆಗಳು ಮೇಲಿಂದ ಮೇಲೆ ಸಂಭವಿಸುತ್ತಿದ್ದರೂ, ಏನೂ ಆಗಿಲ್ಲವೆಂಬ ನಿರುಮ್ಮಳತೆಯನ್ನು ಅಭಿನಯಿಸುತ್ತಿರುವ ಈ ಲೋಕದ ಮನುಷ್ಯ ಸಂತತಿ ಏನಾದರೂ ನಾಶದ ಅಂಚಿನಲ್ಲಿ ಬಂದು ನಿಂತಿದೆಯೇ?

ಒಂದೆಡೆ, ಕರ್ನಾಟಕದಲ್ಲಿ ಹನ್ನೊಂದು ವರ್ಷಗಳ ಹಿಂದೆ ನಡೆದ ಸೌಜನ್ಯಾ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತೀರ್ಪು ಹೊರಬಿದ್ದಿದ್ದು, ಎರಡು ಆಘಾತಗಳನ್ನು ನೀಡಿದೆ. ಒಂದು, ಅಪರಾಧಿಯನ್ನು ಹಿಡಿಯಲಾಗಿಲ್ಲ. ಇನ್ನೊಂದು, ನಿರಪರಾಧಿಯೊಬ್ಬನನ್ನು ಈ ಪ್ರಕರಣದಲ್ಲಿ ಸಿಲುಕಿಸಿ, ಆತನನ್ನು ಆರು ವರ್ಷ ಜೈಲುವಾಸಕ್ಕೆ ತಳ್ಳಲಾಗಿತ್ತು. ಆತನೀಗ ನಿರಪರಾಧಿ ಎಂದು ಸಾಬೀತಾಗಿದೆ. ನಿರಪರಾಧಿಯನ್ನು ಆರು ವರ್ಷ ಜೈಲಲ್ಲಿಟ್ಟಿದ್ದು ಕೂಡಾ ಇಡೀ ದೇಶ ತಲೆತಗ್ಗಿಸುವ ಸಂಗತಿ ಅಲ್ಲವೇ? ಸುಮಾರು ಮೂವತ್ತೈದು ವರ್ಷಗಳ ಹಿಂದೆ, ಅದೇ ಪ್ರದೇಶದಲ್ಲಿ ಪದ್ಮಲತಾ ಎಂಬ ಹುಡುಗಿಯ ಅತ್ಯಾಚಾರ ಮತ್ತು ಕೊಲೆ ನಡೆದಿತ್ತು. ಅಂದು ಆ ಅಪರಾಧ ಎಸಗಿದವರನ್ನು ಮಟ್ಟ ಹಾಕಬೇಕಾಗಿತ್ತು. ಆದರೆ ಹಾಗೆ ಆಗಲಿಲ್ಲ. ಯಾಕೆ, ಆಳುವವರನ್ನೂ ಸೇರಿಸಿಕೊಂಡು ಎಲ್ಲರೂ ಉಸಿರು ಬಿಗಿ ಹಿಡಿದುಕೊಂಡು ಅಪರಾಧಗಳಿಗೆ ಕುಮ್ಮಕ್ಕು ಕೊಡುತ್ತಿದ್ದಾರೆಯೇ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಬಡವರು, ಅಸಹಾಯಕರ ಹತ್ಯೆ ಮತ್ತು ಮಹಿಳೆಯರ ಮೇಲಿನ ಅತ್ಯಾಚಾರ ಹಾಗೂ ಹತ್ಯೆ ಇಷ್ಟು ಸಲೀಸಾಗಿದ್ದು ಹೇಗೆ?

ಇಂದು ಮಣಿಪುರದ ವಿದ್ಯಮಾನ ಜಗತ್ತನ್ನೇ ಬೆಚ್ಚಿಬೀಳಿಸಿದೆ. ಅಲ್ಲಿನ ಮುಖ್ಯಮಂತ್ರಿಯವರೇ 'ಇಂತಹ ನೂರಾರು ಘಟನೆಗಳು ನಡೆದಿವೆ' ಎಂದು ನಿರ್ಭಾವುಕವಾಗಿ, ಎರಡು ತಿಂಗಳಿನಿಂದ ನಿಷ್ಕ್ರಿಯವಾಗಿದ್ದರ ಬಗ್ಗೆ ಯಾವ ಪಶ್ಚಾತ್ತಾಪವಾಗಲೀ ಮುಜುಗರವಾಗಲೀ ಇಲ್ಲದೆ ಹೇಳಿಕೆ ನೀಡುತ್ತಾರೆ. ಅಂದರೆ, ನೂರಾರು ಸಂಖ್ಯೆಯ ಪುರುಷರು ಅನ್ಯ ಕೋಮಿನ ಯುವತಿಯರನ್ನು ಬೆತ್ತಲುಗೊಳಿಸಿ ಮೆರವಣಿಗೆ ಮಾಡುತ್ತಾ, ತೀರಾ ಭೀಕರವೆನಿಸುವಂತೆ ಅಸಭ್ಯ ವರ್ತನೆ ತೋರುತ್ತಾ, ಅವರ ತಂದೆ, ತಮ್ಮಂದಿರನ್ನು ಕಣ್ಣೆದುರೇ ಕೊಂದು ಹಾಕುತ್ತಾ ಕೇಕೆ ಹಾಕಿ ಅಟ್ಟಹಾಸ ಮೆರೆದು ಅತ್ಯಾಚಾರ ಎಸಗುವುದು ಇವರಿಗೆ ಅತ್ಯಂತ ಸಾಮಾನ್ಯ ಸಂಗತಿ! ಇದೇನು ಮನರಂಜನೆಯ ಬಯಲಾಟವೇ? ಅದೇ ರಾಜ್ಯದ ಆ ಯುವತಿಯರು ಅನ್ಯ ಕೋಮಿನ ಬುಡಕಟ್ಟು ಜನಾಂಗದವರಾಗಿರುವುದು ಅಪರಾಧವೇ?

ಅಧಿಕಾರದ ಬಲ ಇರುವ ವ್ಯಕ್ತಿಗಳು ಮತ್ತು ಸಮುದಾಯದವರು ತಮ್ಮ ಬಲ ಹೆಚ್ಚಿಸಿಕೊಳ್ಳಲು ತುಳಿಯುವ ದಾರಿಯಿದು. ಜೀವ ಭಾವವಿಲ್ಲದ ಹೊನ್ನು ಮತ್ತು ಮಣ್ಣಿನ ಮೇಲೆ ಸ್ವಾಮ್ಯ ಸಾಧಿಸಲು ಜೀವ ಭಾವವಿರುವ ಹೆಣ್ಣಿನ ಮೇಲೆ ಅತಿಕ್ರಮಣ ಮಾಡುವುದನ್ನು ರಣನೀತಿಯನ್ನಾಗಿಸಿಕೊಂಡಿರುವುದೇ ಇದರ ಹಿಂದಿರುವ ಕುನೀತಿ. ಈ ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಪೋಷಿಸುವ ಕೆಲಸವನ್ನು ಆಳುವ ಸೂತ್ರ ಹಿಡಿದಿರುವವರು ನಿರಂತರವಾಗಿ ಮಾಡುತ್ತಲೇ ಬಂದಿದ್ದಾರೆ. ಯಾಕೆಂದರೆ, ಅದು ಆಡಳಿತವನ್ನು ಕೈವಶ ಮಾಡಿಕೊಳ್ಳುವ ಏಣಿ. ಎಲ್ಲೋ ಕೆಲವು ಪ್ರಾಮಾಣಿಕ, ಧೀಮಂತ ಅಧಿಕಾರಿಗಳು, ಮಾಧ್ಯಮಗಳವರು ಇದರ ವಿರುದ್ಧ ಸಾಂವಿಧಾನಿಕವಾಗಿ ಕ್ರಮ ಕೈಗೊಳ್ಳಲು ಪ್ರಯತ್ನಿಸಿ- ಆಗ್ರಹಿಸಿ, ಸಾಮಾನ್ಯರ ಬದುಕು ಅಷ್ಟಿಷ್ಟು ಸಹ್ಯವಾಗುವಂತೆ ಮಾಡುತ್ತಾರೆ.

ಮಣಿಪುರದ ವಿಷಯವನ್ನೇ ನೋಡಿ. 2000ದಿಂದ 2016ರ ತನಕ ಹದಿನಾರು ವರ್ಷಗಳ ಕಾಲ ಅನ್ನ ನೀರಿಲ್ಲದೆ ಇರೋಮ್ ಶರ್ಮಿಳಾ ಉಪವಾಸ ಮಾಡಿದ್ದು ಕೂಡಾ ವಿಶೇಷ ಸಶಸ್ತ್ರ ಪಡೆಗಳು ಮಹಿಳೆಯರ ಮೇಲೆ ನಡೆಸುತ್ತಿದ್ದ ದೌರ್ಜನ್ಯವನ್ನು ವಿರೋಧಿಸಲೆಂದು. ಎಲ್ಲ ಮಹಿಳೆಯರನ್ನೂ ಪ್ರತಿನಿಧಿಸಿದ್ದ ಅವಳನ್ನು ಇಂದು ಎಲ್ಲರೂ ಮರೆತುಬಿಟ್ಟಿದ್ದಾರೆ. ಈ ನಡುವೆ ಮೈತೇಯಿ ಮತ್ತು ಕುಕಿ ಬುಡಕಟ್ಟು ಜನ ಅಲ್ಲಿನ ಬೆಟ್ಟ ಕಣಿವೆಯಂತೆ ಜೊತೆಗಿದ್ದವರು ರಾಜಕೀಯ ಕಾರಣಗಳಿಗಾಗಿ ಬಣಗಳಾಗಿದ್ದಾರೆ. ಈಗ ಕೆಲವು ಮೈತೇಯಿ ಮಹಿಳೆಯರು ತಮ್ಮ ಪುರುಷರನ್ನು ಬೆಂಬಲಿಸಲು ಸೈನ್ಯ ಮತ್ತು ಪೊಲೀಸ್ ಪಡೆಗಳನ್ನು ತಡೆಯುತ್ತಾರೆ.

ಕೋಮುವಾದ ಎಂಬುದು ಎಂತಹ ಭಯಾನಕ ವಿಷವೆಂದರೆ, ಈ ನಂಜೇರಿಸಿಕೊಂಡ ಹೆಂಗಸರೂ ವಿವೇಚನೆ, ಮನುಷ್ಯತ್ವ, ಹೃದಯವನ್ನೇ ಕಳೆದುಕೊಳ್ಳುತ್ತಾರೆ. ಇವರಿಗೆ ಅವರು ಕೇವಲ 'ಕುಕಿ'ಗಳು! ಆ ಹೆಂಗಸರಿಗಾದ ಅವಮಾನ, ನೋವು, ವೇದನೆ ಇವರ ಕಣ್ತೆರೆಸುವುದಿಲ್ಲವೇ? (ಈ ನಡುವೆ ಎಲ್ಲಾ ಬಣಗಳ ಪ್ರಜ್ಞಾವಂತ ಹೆಂಗಸರ ಪ್ರತಿನಿಧಿಗಳು ಒಂದಾಗಿ ವಿಭಜನೆಯ ರಾಜಕಾರಣವನ್ನು ವಿರೋಧಿಸುವುದಕ್ಕಾಗಿ ಅಸ್ಸಾಂನಲ್ಲಿ ಸೇರಿದ್ದರು. ಪ್ರೊ. ಬೀನಾಲಕ್ಷ್ಮಿ ಅವರು ಹೇಳುವಂತೆ, ಯಾವ ಶಾಂತಿ ಸಭೆಗೂ ಹೆಂಗಸರನ್ನು ಇದುವರೆಗೆ ಕರೆದೇ ಇಲ್ಲ). ಅಲ್ಲಿನ ಪ್ರಸಿದ್ಧ ಮೈತೇಯಿ ಗಾಯಕನೊಬ್ಬ, 'ಕೊಟ್ಟಕೊನೆಯ ಕುಕಿ ಇರುವತನಕ ಮಣಿಪುರದಲ್ಲಿ ಶಾಂತಿ ನೆಲೆಸದು' ಎಂದು ಹಾಡು ಕಟ್ಟುತ್ತಾನಂತೆ! ಇದನ್ನು ಕೇಳಿಸಿಕೊಂಡೂ ಅಲ್ಲಿನ ಸರ್ಕಾರ ಮೌನ ವಹಿಸುತ್ತದಂತೆ!

ಕರಣ್ ಥಾಪರ್ ಅವರು ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗೆ, ಮೈತೇಯಿ ಪ್ರೊ. ಥೋಮಸ್ ತಂಗ್ಥಾಮ್ ಅದನ್ನು ಸಮರ್ಥಿಸದೇ ಕೊಟ್ಟ ಉತ್ತರವೇನೆಂದರೆ, ಮಣಿಪುರಿಗಳು ಮಿಲಿಟರೀಕರಣಕ್ಕೆ ಒಳಗಾದ ಪರಿಣಾಮವಾಗಿ ಅಲ್ಲಿನ ಭಾಷೆಯೇ ಮಿಲಿಟೆಂಟ್ ಆಗಿದೆ. ಇದೂ ಅಂತಹದೇ ಹಾಡು ಅಷ್ಟೇ! ಆಧುನಿಕತೆ ಮತ್ತು ಲೌಕಿಕ ವಸ್ತುಗಳ ವ್ಯಾಮೋಹಕ್ಕೆ ಒಳಗಾದ ಮಣಿಪುರ ಯುವಕರು, ಅದರಲ್ಲೂ ಆರ್ಥಿಕವಾಗಿ ಮುನ್ನೆಲೆಯಲ್ಲಿದ್ದ ಮೈತೇಯಿಗಳು ಕಾಲಾಂತರದಲ್ಲಿ ತಮ್ಮ ಅನನ್ಯತೆಗಾಗಿ ಪರಂಪರೆಯ ಕಡೆ ಮುಖ ಮಾಡಿದರು. ಇದರಿಂದಾಗಿ ಅವರು ತಮ್ಮ ಅಸ್ಮಿತೆಯನ್ನು ತಮ್ಮ ಜನಾಂಗದ ಮೋಹದಲ್ಲಿ ಗುರುತಿಸಿಕೊಳ್ಳುತ್ತಾ, ತಮ್ಮ ಎದುರಿಗೆ ಒಬ್ಬ ಶತ್ರುವನ್ನು ಸೃಷ್ಟಿಸಿಕೊಳ್ಳತೊಡಗಿದರು. ಅದರ ಪರಿಣಾಮವೇ ಕುಕಿಗಳ ಮೇಲಿನ ಹಗೆ ಎನ್ನುತ್ತಾರವರು.

ಇದು ಇಷ್ಟೇ ಅಲ್ಲ. ಒಂದು ಕಾಲಕ್ಕೆ ಹಂತಕರಾಗಿದ್ದ ಕಾಡುಜನ ಕುಕಿಗಳು ಕ್ರೈಸ್ತ ಮಿಷನರಿಗಳ ಪ್ರಭಾವದಿಂದ ನಾಗರಿಕರಾಗಿ ಮತಾಂತರವೂ ಆದರು. ಬುಡಕಟ್ಟು ಮಾನ್ಯತೆ ಪಡೆದಿರುವ ಕುಕಿಗಳು ಮಾತ್ರ ಆ ಪ್ರದೇಶದಲ್ಲಿ ಭೂಮಿ ಖರೀದಿಸುವ ಸೌಲಭ್ಯ ಹೊಂದಿದ್ದಾರೆ. ಬಹುಸಂಖ್ಯಾತರೂ, ಅಲ್ಲಿನ ಹಲವು ಜನಾಂಗಗಳಿಗಿಂತ ಬಲಾಢ್ಯರೂ ಆಗಿರುವ ಮೈತೇಯಿಗಳೀಗ ತಮ್ಮ ಸಾಮ್ರಾಜ್ಯವನ್ನು ಇನ್ನಷ್ಟು ವಿಸ್ತರಿಸಿಕೊಳ್ಳಲು ತಾವೂ ಬುಡಕಟ್ಟು ಮಾನ್ಯತೆ ಪಡೆದುಕೊಳ್ಳಬೇಕೆಂಬ ಲೋಭಕ್ಕೆ ಬಿದ್ದಿದ್ದಾರೆ. ಇದಕ್ಕೂ ಹೆಂಗಸರ ಮೇಲಿನ ಅಮಾನುಷ ಆಕ್ರಮಣಕ್ಕೂ ಏನು ಸಂಬಂಧ? ಶತ್ರುಪಾಳಯದ ಹೆಂಗಸರ ಮೇಲೆ ಆಕ್ರಮಣ ಮಾಡುವುದು ಇಂದು ನಿನ್ನೆಯದೇ? ಅದನ್ನೇ ಪೌರುಷ ಎಂದುಕೊಂಡಿರುವ ಹೇಡಿತನ ಇಂದು ನಿನ್ನೆಯದೇ? ಅದಕ್ಕೆ ಮೌನ ಸಮ್ಮತಿ ಕೊಡುವ 'ರಾಜ'ರಿರುವುದು ಗುಟ್ಟಿನ ಸಂಗತಿಯೇ?

ಬಿಲ್ಕಿಸ್‌ಬಾನು, ಕಾಶ್ಮೀರದ ಬಾಲಕಿ, ಉನ್ನಾವ್‌ನ ಸಂತ್ರಸ್ತೆಯರು, ದಾನಮ್ಮ, ಸೌಜನ್ಯಾಳಂತಹ ಸಹಸ್ರ ಪ್ರಕರಣಗಳಲ್ಲಿ ವಹಿಸಿರುವುದು ಮೌನವೇ ಅಲ್ಲವೇ? ಇದು ಅವೆಲ್ಲದರ ಮುಂದುವರಿದ ಸರಣಿ. ಜಗತ್ತಿನಾದ್ಯಂತ ಯುದ್ಧಗಳಲ್ಲಿ, ಸಂಘರ್ಷಗಳಲ್ಲಿ ಇದೇ ವರ್ತನೆ ಇದೆ. ಪೈಶಾಚಿಕ ಕೃತ್ಯ ಮಾಡುವವರು, ಅದನ್ನು ಸಮರ್ಥಿಸುವವರು, ಪೋಷಿಸುವವರು ಪಿಶಾಚಿಗಳೇ ನಿಜ. ಅವರ ನಡುವೆ ಮನುಷ್ಯರು ಬದುಕುವುದು ಹೇಗೆ ಎಂಬುದೇ ಆತಂಕದ ವಿಷಯ.

ಸುದ್ದಿಗಳು ಜಗತ್ತಿನ ಮೂಲೆ ಮೂಲೆಗೆ ತಲುಪುವ ಈ ಕಾಲದಲ್ಲಿ, ಉಳ್ಳವರು ತಮ್ಮ ಸುದ್ದಿ ತಲುಪದಂತೆ ಮಾಡುತ್ತಾರೆ. ಸರ್ಕಾರಗಳು ಇಂಟರ್‌ನೆಟ್ ಸ್ಥಗಿತಗೊಳಿಸಿ ಮಾಧ್ಯಮಗಳಿಗೆ, ವಿರೋಧ ಪಕ್ಷಗಳಿಗೆ ನಿರ್ಬಂಧ ವಿಧಿಸಿ, ತಮ್ಮ ಪರ ಇರುವ ಗಿಣಿಗಳನ್ನು ಮಾತ್ರ ಬಳಸಿಕೊಂಡು ಸತ್ಯಗಳನ್ನು ಅಡಗಿಸಿಡುತ್ತವೆ. ಕಾಶ್ಮೀರದಲ್ಲಾಗಲೀ ಮಣಿಪುರದಲ್ಲಾಗಲೀ ಏನಾಗುತ್ತಿದೆಯೆಂದು ಹೀಗೆ ಅಕಸ್ಮಾತ್ತಾಗಿ ಮಾತ್ರ ಗೊತ್ತಾಗಬೇಕು. ಗೊತ್ತಾಗದಿದ್ದರೆ ಗೋಸುಂಬೆಗಳ ಬಣ್ಣ ತಿಳಿಯುವುದೇ ಇಲ್ಲ. ಸೆಕ್ಸ್ ವಿಡಿಯೊಗಳು, ಡ್ರಗ್ಸ್ ಚಿಕ್ಕವರಿಗೆ ಸಲೀಸಾಗಿ ಸಿಗಲು ಸ್ಮಾರ್ಟ್‌ಫೋನ್‌ಗಳು ಸಾಧನವಾಗಿವೆ. ಮೊಬೈಲನ್ನು ಶಿಕ್ಷಣ ಸಾಧನವಾಗಿ ಅಧಿಕೃತಗೊಳಿಸಲಾಗಿದೆ. ಪರಿಣಾಮದ ಬಗ್ಗೆ ಯೋಚನೆಯಾಗಲೀ ಯೋಜನೆಯಾಗಲೀ ಇಲ್ಲ.

ಈಗೀಗ ಬಾಲ ಅತ್ಯಾಚಾರಿಗಳು ಹೆಚ್ಚುತ್ತಿದ್ದಾರೆ. ಆಡಳಿತದ ಅನರ್ಥಗಳು ಕಾಣುತ್ತಿವೆ. ಹಾಗಿದ್ದಲ್ಲಿ ಆಡಳಿತದ ಅರ್ಥವೇನು?

ಚುರುಮುರಿ



ಮದ್ರಾಸ್ ಐ ಬಂದದೆ

• ಲಿಂಗರಾಜು ಡಿ.ಎಸ್.

'ಬೆಂಗಳೂರಾದ ಬೆಂಗಳೂರಿಗೆಲ್ಲಾ ಮದ್ರಾಸ್ ಐ ಅಗ್ಯದೆ ಸರಿ. ಆದ್ರೆ ರಾಜಕೀಯಕ್ಕೂ ಮದ್ರಾಸ್ ಐ ಅಮರಿಕ್ಯಂಡದಲ್ಲಾ ಅಂತ!' ತುರೇಮಣೆ ಬೆಕ್ಕಸಬೆರಗಾದರು.

'ಇದೇನ್ಸಾ, ನಮ್ಮ ಗ್ರಹಸಚಿವರು ಉಡುಪಿ ವಿಡಿಯೊ ಕೇಸನ್ನ ಮಕ್ಕಳಾಟಿಕೆ ಅಂದಂಗೆ ನೀವೂ ನಗ್ಸಾರ ಮಾಡ್ತಿದೀರ' ಅಂತಂದೆ.

'ಹ್ಞೂಂಕಲಾ, ಇದೇ ರಾಜಕೀಯದ ಮದ್ರಾಸ್ ಐ ಲಕ್ಷಣ ಕನಪ್ಪಾ' ಅಂತ ಯಂಟಪ್ಪಣ್ಣ ಅನುಮಾನಪಟ್ಟಿತು.

'ಅಧಿಕಾರ ಇಲ್ಲದೇ ಡಿಸ್‌ಪ್ಲೆಶರ್ ವೈರಸ್ಸಿನಿಂದ ಬೀಜೆಪಿಗಳಿಗೆ ಮದ್ರಾಸ್ ಐ ಅಟ್ಯಾಕ್ ಆಗಿ ಕಣ್ಣುರಿಯಂತೆ. ಕಣ್ಣಲ್ಲಿ ನೀರು ಸುರಿತವಂತೆ, ಕಣ್ಣು ಊದ್ಯವಂತೆ, ಕೈಯಲ್ಲಿ ಕೆರಕಳಂಗೇ ಆಯ್ತು ಅದಂತೆ. ಇದರಿಂದ ಕೈ ಪಕ್ಷಕ್ಕೆ ಬಲು ಖುಷಿಯಾಗ್ಯದೆ ಅಂತ ಒಳಮಾತು' ತುರೇಮಣೆ ವ್ಯಾಖ್ಯಾನ ಕೊಟ್ಟರು.

'ಡಿಸ್‌ಪ್ಲೆಶರ್ ವೈರಸ್ ಕಾಂಗ್ರೆಸ್ಸಿಗೆ ಅಟ್ಯಾಕಾಗಿಲ್ಲವಾ?' ಅಂತ ಕೇಳಿದೆ.

'ವೈರಸ್ಸಿಗೆ ಯಾವ ಪಕ್ಷವಾದರೇನ್ಸಾ? ಸಚಿವರುಗಳಿಗೆ ಕಣ್ಣಲ್ಲಿ ಅಧಿಕಾರದ ಪಿಸುರು ತುಂಬಿಕ್ಯಂಡು ಏನೂ ಕಾಣ್ತಿಲ್ಲವಂತೆ. ಇದರಿಂದ ಕಾಂಗ್ರೆಸ್ ಶಾಸಕರು, ನಮಗೂ ಅಲರ್ಜಿ ಆಗಿ ಕಣ್ಣು ಕೆಂಪಾಯ್ತಾ ಅದೆ ಅಂತ ದೂರ್ಯವರೆ, ಸಿಎಂ ಅಲರ್ಜಿ ವಾಸಿ ಮಾಡಕ್ಕೆ ಡೆಲ್ಲಿ ಡಾಕ್ಟರ ತವು ಕರಕೋಯ್ತಾ ಅವ್ರಂತೆ' ತುರೇಮಣೆ ಡಯಾಗ್ನೈಸ್ ಮಾಡಿದರು.

'ಪಾಪ, ಹೊಸ ಡಾಕ್ಟ್ರು ಏನು ಮುಲಾಮು ಕೊಟ್ಟಾರೋ ಕಾಣೆ! ಪರಿಹಾರ ಯಂಗಪ್ಪ?' ಯಂಟಪ್ಪಣ್ಣ ಯೋಚನೆಗೆ ಬಿದ್ದಿತು.

'ಬೀಜೆಪಿಗಳು ದ್ವೇಷದ ವೈರಸ್ ಬುಟ್ಕಳದೇ ವೈರಸ್ ಫ್ರೀ ರಾಜಕೀಯ ಮಾಡಬಕು. ಪ್ರೆಸ್ಟೀಜ್ ವೈರಸ್ ಬಂದ್ರೆ ಕೆಮ್ಮು ಸುರುವಾಯ್ತದೆ. ಕೈ ಪಕ್ಷದವು ಸ್ವಚ್ಛವಾಗಿರಬಕು. ಪಕ್ಷಾಂತರದ ವೈರಸ್ಸಿನಿಂದ ದೂರ ಇರಬಕು. ಅಡಾವುಡಿ ರಾಜಕೀಯ ಮಾಡೋರಿಗೆ ಒಳ್ಳೆ ಔಷಧಿ ಕೊಡಬಕು' ಅಂತಂದರು.

'ಹಂಗಾರೆ ಪೊಲಿಟಿಕಲ್ ಮದ್ರಾಸ್ ಐ ರಾಜಕೀಯಕ್ಕೆಲ್ಲಾ ಹರಡಿ ಕಮ್ಯೂನಿಟಿಗೇ ಸೋಂಕಾಗ್ಯದೆ ಅಂದೀಯಾ?' ಅಂತ ಯಂಟಪ್ಪಣ್ಣ ಸೋಜುಗಪಟ್ಟಿತು.

ಸಂಗತ

ವಿದ್ಯಾರ್ಥಿ ಪ್ರಾಜೆಕ್ಟ್: ಆದ್ಯತೆ ಬದಲಾಗಲಿ

ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಜಾರಿಯಲ್ಲಿರುವ ಇಂತಹ ಕಾರ್ಯಕ್ರಮಗಳಿಗೆ ಅರ್ಜಿ ಶುಲ್ಕ ವಿಧಿಸುವ ಅಗತ್ಯ ಇದೆಯೇ?

• ಎಚ್.ಕೆ.ಶರತ್

ಎಂಜಿನಿಯರಿಂಗ್ ಅಂತಿಮ ವರ್ಷದ ವಿದ್ಯಾರ್ಥಿಗಳು, ತಾವು ಅದುವರೆಗೂ ಪಡೆದ ಜ್ಞಾನವನ್ನು ಪ್ರಾಯೋಗಿಕವಾಗಿ ಅನ್ವಯಿಸುವ ಸಲುವಾಗಿ ಪ್ರಾಜೆಕ್ಟ್ ಒಂದನ್ನು ಕೈಗೆತ್ತಿಕೊಳ್ಳಬೇಕಿರುವುದು ಕಡ್ಡಾಯ. ಮೂರ್ನಾಲ್ಕು ವಿದ್ಯಾರ್ಥಿಗಳು ಒಂದು ತಂಡವಾಗಿ ಪ್ರಾಜೆಕ್ಟ್ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಪ್ರಾಯೋಗಿಕ ಕಲಿಕೆಯ ಜೊತೆಗೆ ಗುಂಪಿನಲ್ಲಿ ಕೆಲಸ ಮಾಡುವಾಗ ಎದುರಾಗುವ ಸವಾಲುಗಳ ಕುರಿತು ಕೂಡ ಅರಿವು ಮೂಡಿಸುವುದು ಇದರ ಉದ್ದೇಶ.

ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅಗತ್ಯದ ಕಾರಣಕ್ಕಾಗಿ ಕೈಗೊಳ್ಳುವ ಪ್ರಾಜೆಕ್ಟ್‌ಗಳಿಗೆ ಧನಸಹಾಯ ನೀಡುವ ಮೂಲಕ ಅವರನ್ನು ಪ್ರೋತ್ಸಾಹಿಸುವ ಕೆಲಸವನ್ನು 'ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ'ಯು (ಕೆಎಸ್‌ಸಿಎಸ್‌ಟಿ) ಸ್ಟೂಡೆಂಟ್ಸ್ ಪ್ರಾಜೆಕ್ಟ್ ಪ್ರೋಗ್ರ್ಯಾಂ (ಎಸ್‌ಪಿಪಿ) ಮೂಲಕ 1978ರಿಂದಲೂ ಮಾಡಿಕೊಂಡು ಬಂದಿದೆ. ಪ್ರತಿವರ್ಷ ಇದಕ್ಕಾಗಿ ಎಂಜಿನಿಯರಿಂಗ್ ಅಂತಿಮ ಸೆಮಿಸ್ಟರ್‌ನ ವಿದ್ಯಾರ್ಥಿಗಳು ಹಾಗೂ ಎಂ.ಎಸ್ಸಿ, ಎಂ.ಸಿ.ಎ ಮತ್ತು ಎಂ.ಬಿ.ಎ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗುವುದು.

2022-23ನೇ ಸಾಲಿನಲ್ಲಿ ಕೆಎಸ್‌ಸಿಎಸ್‌ಟಿ ವತಿಯಿಂದ ಧನಸಹಾಯ ಪಡೆಯಲು ಅರ್ಜಿ ಸಲ್ಲಿಸುವ ಪ್ರತಿ ತಂಡವೂ ₹ 1,000 ಅರ್ಜಿ ಶುಲ್ಕ ಪಾವತಿಸುವಂತೆ ಸೂಚಿಸಲಾಗಿತ್ತು. ಅದರಂತೆ ರಾಜ್ಯದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ನಿಗದಿತ ಶುಲ್ಕ ಪಾವತಿಸಿ, ಪ್ರೋತ್ಸಾಹಧನಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಹೀಗೆ ಸಲ್ಲಿಕೆಯಾದ ಅರ್ಜಿಗಳ ಪೈಕಿ ಆಯ್ಕೆಯಾದ ಕೆಲ ಪ್ರಾಜೆಕ್ಟ್‌ಗಳಿಗೆ ಒದಗಿಸಲಾದ ಪ್ರೋತ್ಸಾಹಧನದ ಮೊತ್ತ ಗಮನಿಸಿದರೆ ಹುಬ್ಬೇರಿಸದೇ ಇರಲಾಗದು. ಒಂದು ಸಾವಿರ ರೂಪಾಯಿ ಅರ್ಜಿ ಶುಲ್ಕ ಪಡೆದು ಅಷ್ಟೇ ಮೊತ್ತವನ್ನು ಧನಸಹಾಯವಾಗಿ ನೀಡುವುದನ್ನು ಹೇಗೆ ಅರ್ಥೈಸಿಕೊಳ್ಳಬೇಕು?

ಈ ಬಾರಿ ಆಯ್ಕೆಯಾಗಿರುವ 1,494 ಪ್ರಾಜೆಕ್ಟ್‌ಗಳ ಪೈಕಿ ನಾಲ್ಕಕ್ಕೆ ಬರೀ ₹ 1,000 ಪ್ರೋತ್ಸಾಹಧನ ನಿಗದಿಯಾಗಿದೆ. ಆರು ಪ್ರಾಜೆಕ್ಟ್‌ಗಳಿಗೆ ₹ 2,000, 90ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳಿಗೆ ₹ 3,000 ಪ್ರೋತ್ಸಾಹಧನ ಒದಗಿಸಲಾಗಿದೆ. ಈ ಬಾರಿ ಪ್ರಾಜೆಕ್ಟ್ ಒಂದಕ್ಕೆ ಒದಗಿಸಿರುವ ಗರಿಷ್ಠ ಪ್ರೋತ್ಸಾಹಧನದ ಮೊತ್ತ ₹ 9,000. ವಿದ್ಯಾರ್ಥಿಗಳು ಆರಿಸಿಕೊಳ್ಳುವ ಪ್ರಾಜೆಕ್ಟ್ ಕೆಲಸ ಪೂರೈಸಲು ವ್ಯಯಿಸಬೇಕಿರುವ ಮೊತ್ತಕ್ಕೆ ಸಮನಾಗಿರುವುದಿಲ್ಲ. ಕೆಲ ಪ್ರಾಜೆಕ್ಟ್‌ಗಳನ್ನು ಅತ್ಯಲ್ಪ ಹಣದಲ್ಲಿ ಮುಗಿಸಲು ಸಾಧ್ಯವಾದರೆ, ಮತ್ತೆ ಕೆಲವಕ್ಕೆ ₹ 40 ಸಾವಿರಕ್ಕಿಂತ ಹೆಚ್ಚು ಹಣ ವ್ಯಯಿಸಿದರೂ ಸಾಲದಾಗಬಹುದು. ಕೆಎಸ್‌ಸಿಎಸ್‌ಟಿ ಕೂಡ ಆಯಾ ಪ್ರಾಜೆಕ್ಟ್‌ಗೆ ತಗಲಬಹುದಾದ ಒಟ್ಟಾರೆ ಖರ್ಚಿನ ಬಾಬ್ತು ಗಮನದಲ್ಲಿ ಇರಿಸಿಕೊಂಡೇ ಪ್ರೋತ್ಸಾಹಧನದ ಮೊತ್ತ ನಿಗದಿಪಡಿಸುತ್ತದೆ. ಆದರೆ, ಅರ್ಜಿ ಶುಲ್ಕವಾಗಿ ಒಂದು ಸಾವಿರ ಸ್ವೀಕರಿಸಿ ಅಷ್ಟೇ ಮೊತ್ತವನ್ನು ಪ್ರೋತ್ಸಾಹಧನವಾಗಿ ವಾಪಸ್ ನೀಡುವುದು ಹಾಸ್ಯಾಸ್ಪದವಾಗಿ ತೋರುವುದಿಲ್ಲವೇ?

ಉತ್ತಮ ಪ್ರಾಜೆಕ್ಟ್‌ಗಳನ್ನು ಗುರುತಿಸಿ ಪ್ರೋತ್ಸಾಹಿಸುವ ದಿಸೆಯಲ್ಲಿ ಕೆಎಸ್‌ಸಿಎಸ್‌ಟಿ ಇದುವರೆಗೂ ಮಾಡಿರುವ ಕೆಲಸ ಗಮನಾರ್ಹವಾದುದು. ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಎಂಜಿನಿಯರಿಂಗ್ ಪದವಿಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕಳೆದ ಎರಡು ದಶಕಗಳಿಂದೀಚೆಗೆ ಗಣನೀಯ ಪ್ರಮಾಣದಲ್ಲಿ ಏರಿಕೆ ಆಗಿರುವುದರಿಂದ, ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿ ಪ್ರಾಜೆಕ್ಟ್ ಕಾರ್ಯಕ್ರಮದಡಿ ಪ್ರೋತ್ಸಾಹಧನಕ್ಕೆ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆಯಲ್ಲೂ ಏರಿಕೆಯಾಗಿದೆ. ಪ್ರೋತ್ಸಾಹಧನಕ್ಕೆ ಆಯ್ಕೆ ಮಾಡುವ ಪ್ರಾಜೆಕ್ಟ್‌ಗಳ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಏರಿಕೆ ಆಗುತ್ತಿರುವುದರಿಂದ, ಆಯ್ಕೆಯಾಗುವ ಪ್ರಾಜೆಕ್ಟ್‌ಗಳಿಗೆ ಒದಗಿಸುವ ಮೊತ್ತದಲ್ಲಿ ಇಳಿಕೆಯಾಗುತ್ತಿದೆ.

ಕೆಎಸ್‌ಸಿಎಸ್‌ಟಿ ತನ್ನ ಜಾಲತಾಣದಲ್ಲಿ ಹೇಳಿಕೊಂಡಿರುವ ಪ್ರಕಾರ, ಸಲ್ಲಿಕೆಯಾಗುವ ನಾಲ್ಕು ಅರ್ಜಿಗಳ ಪೈಕಿ ಒಂದಕ್ಕೆ ಧನಸಹಾಯ ದೊರೆಯಲಿದೆ. ಇದನ್ನೇ ಆಧಾರವಾಗಿ ಇಟ್ಟುಕೊಂಡು ಅವಲೋಕಿಸಿದರೂ ಅರ್ಜಿ ಶುಲ್ಕದಿಂದಲೇ ಗಣನೀಯ ಪ್ರಮಾಣದ ಆರ್ಥಿಕ ಸಂಪನ್ಮೂಲ ಕೆಎಸ್‌ಸಿಎಸ್‌ಟಿಗೆ ಲಭ್ಯವಾಗುತ್ತಿದೆ. ಅತ್ಯಲ್ಪ ಮೊತ್ತದ ಪ್ರೋತ್ಸಾಹಧನಕ್ಕಾಗಿ ಇಷ್ಟೆಲ್ಲ ಕಸರತ್ತು ಮಾಡಬೇಕೇ ಎನ್ನುವ ಪ್ರಶ್ನೆ ವಿದ್ಯಾರ್ಥಿ ಸಮೂಹದಲ್ಲಿ ಬೇರೂರತೊಡಗಿದರೆ, ಉತ್ತಮ ಪ್ರಾಜೆಕ್ಟ್ ಕೈಗೊಳ್ಳುವ ವಿದ್ಯಾರ್ಥಿಗಳು ಕೂಡ ಅರ್ಜಿ ಸಲ್ಲಿಸಲು ಹಿಂಜರಿಯುವ ವಾತಾವರಣ ನಿರ್ಮಾಣವಾಗಲಿದೆ.

46 ವರ್ಷಗಳಷ್ಟು ಸುದೀರ್ಘ ಅವಧಿಯಿಂದ ಜಾರಿಯಲ್ಲಿರುವ ಉತ್ತಮ ಕಾರ್ಯಕ್ರಮವೊಂದು ಅನುದಾನದ ಅಲಭ್ಯತೆಯಿಂದಲೋ ಲಭ್ಯವಿರುವ ಅನುದಾನದ ಅಸಮರ್ಪಕ ಬಳಕೆಯಿಂದಲೋ ಅಥವಾ ಮತ್ತಾವುದೋ ಕಾರಣಕ್ಕೋ ಅಪ್ರಸ್ತುತ ಆಗಬಾರದಲ್ಲವೇ? ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗೆ ಪೂರಕ ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಳ್ಳಲು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುತ್ತಾ ಬಂದಿರುವ ವಿದ್ಯಾರ್ಥಿ ಪ್ರಾಜೆಕ್ಟ್ ಕಾರ್ಯಕ್ರಮವನ್ನು ವರ್ತಮಾನದ ಅಗತ್ಯಕ್ಕೆ ಅನುಗುಣವಾಗಿ ಮರುರೂಪಿಸುವ ಜರೂರತ್ತಿದೆ. ಹೆಚ್ಚೆಚ್ಚು ಪ್ರಾಜೆಕ್ಟ್‌ಗಳಿಗೆ ಅನುದಾನ ಒದಗಿಸುವ ಬದಲಿಗೆ, ಸೀಮಿತ ಸಂಖ್ಯೆಯ ಅತ್ಯುತ್ತಮ ಪ್ರಾಜೆಕ್ಟ್‌ಗಳಿಗೆ ಅಗತ್ಯವಿರುವಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಮಾರ್ಗದರ್ಶನ ಒದಗಿಸುವುದನ್ನು ಆದ್ಯತೆಯಾಗಿಸಿಕೊಳ್ಳುವ ಸಾಧ್ಯತೆ ಕುರಿತು ಅವಲೋಕಿಸಬೇಕಿದೆ.

ಸಾವಿರದಿಂದ ಒಂಬತ್ತು ಸಾವಿರ ರೂಪಾಯಿವರೆಗೆ ಧನಸಹಾಯ ನೀಡಲು ಸದ್ಯ ನಿಗದಿಪಡಿಸಿರುವ ₹ 1,000 ಅರ್ಜಿ ಶುಲ್ಕ ತೀರಾ ದುಬಾರಿ ಅನಿಸುವುದಿಲ್ಲವೇ? ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಜಾರಿಯಲ್ಲಿರುವ ಇಂತಹ ಕಾರ್ಯಕ್ರಮಗಳಿಗೆ ಅರ್ಜಿ ಶುಲ್ಕ ವಿಧಿಸುವ ಅಗತ್ಯವಾದರೂ ಇದೆಯೇ? ಇಂತಹ ಯೋಜನೆಗಳಿಗೆ ಬೇಕಿರುವ ಅನುದಾನ ಒದಗಿಸಲು ರಾಜ್ಯ ಸರ್ಕಾರಕ್ಕೆ ಆಗುವುದಿಲ್ಲವೇ?

ವಾಚಕರ ವಾಣಿ

ಸರ್ಕಾರ– ವಿರೋಧ ಪಕ್ಷಗಳಿಗೆ ಬೇಕು 'ಮಧ್ಯಸ್ಥಿಕೆ'

ವ್ಯಾಜ್ಯಗಳನ್ನು ಕೋರ್ಟಿನ ಬದಲು ಮಧ್ಯಸ್ಥಿಕೆ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸುವ 'ಮಧ್ಯಸ್ಥಿಕೆ ಮಸೂದೆ'ಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿರುವುದು ಆಶಾದಾಯಕ ಬೆಳವಣಿಗೆ. ಇಂಥ ವ್ಯವಸ್ಥೆಯು ಸಂಸತ್ತು ಮತ್ತು ವಿಧಾನಸಭೆ ಕಲಾಪಗಳ ವಿಷಯಕ್ಕೂ ಅನ್ವಯವಾಗಬೇಕಾದ ಅಗತ್ಯವಿದೆ ಅನಿಸುತ್ತದೆ. ಅಧಿವೇಶನಗಳಲ್ಲಿ ಯಾವುದೇ ಕಾರ್ಯಕಲಾಪಗಳು ನಿಗದಿಯಂತೆ ನಡೆಯದೆ ಗೊಂದಲ, ಗಲಾಟೆಗಳಲ್ಲಿಯೇ ಮುಗಿದು ಹೋಗುತ್ತಿವೆ. ರಾಜ್ಯ, ರಾಷ್ಟ್ರದ ಕುರಿತು ಚಿಂತನೆ, ಚರ್ಚೆಗಳು ನಡೆಯುತ್ತಿಲ್ಲ. ಮಹತ್ವದ ಮಸೂದೆಗಳು ಕೂಡ ಗದ್ದಲದಲ್ಲಿಯೇ ಪಾಸಾಗುತ್ತಿವೆ. ಸಂಸತ್ತು, ವಿಧಾನಸಭೆಗಳೇ ಅಪ್ರಸ್ತುತ ಅನ್ನುವಂಥ ಧೋರಣೆ, ಬೆಳವಣಿಗೆಗಳನ್ನು ನೋಡುತ್ತಿದ್ದೇವೆ. ದೇಶದ ಮತದಾರ ಇದೆಲ್ಲವನ್ನೂ ಅಸಹಾಯಕನಾಗಿ ಗಮನಿಸುತ್ತ ಇರಬೇಕಾಗಿದೆ.

ಸರ್ಕಾರ ಮತ್ತು ವಿರೋಧ ಪಕ್ಷಗಳ ಮಧ್ಯೆ ಸಂವಾದವೇ ಅಸಾಧ್ಯವಾಗಿದೆ. ಮುತ್ಸದ್ದಿತನ ಮಾಯವಾಗಿದೆ. ಸದನಗಳು ಸ್ವಪ್ರತಿಷ್ಠೆಯ ಕಣಗಳಾಗಿವೆ. ಸರ್ಕಾರ ಮತ್ತು ವಿರೋಧ ಪಕ್ಷಗಳ ಮಧ್ಯದ ಇಂತಹ ಬೆಳವಣಿಗೆಗಳನ್ನು ಒಂದು ಮಧ್ಯಸ್ಥಿಕೆ ವ್ಯವಸ್ಥೆ ಮೂಲಕ ಬಗೆಹರಿಸುವ ಮತ್ತು ಅಧಿವೇಶನಗಳು ಸಾಂಗವಾಗಿ ನಡೆಯುವ ವ್ಯವಸ್ಥೆಯನ್ನು ಜಾರಿಗೆ ತರಬೇಕಿದೆ. ಆಗಲಾದರೂ ನಮ್ಮ ಸಂಸತ್ತು ಮತ್ತು ವಿಧಾನಸಭೆಗಳು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬಹುದು.

ವೆಂಕಟೇಶ ಮಾಚಕನೂರ, ಧಾರವಾಡ

ಜ್ಯೋತಿಷಿಗಳಿಗೆ ಸಿಗಲಿ ಪರವಾನಗಿ

ವಿಶೇಷ ಪೂಜೆ ನೆಪದಲ್ಲಿ ಬೆಂಗಳೂರಿನ ಮನೆಯೊಂದಕ್ಕೆ ಬಂದಿದ್ದ ನಕಲಿ ಜ್ಯೋತಿಷಿಯೊಬ್ಬ, ₹ 5 ಲಕ್ಷ ಬೆಲೆಬಾಳುವ ಚಿನ್ನಾಭರಣ ಕದ್ದೊಯ್ದಿರುವ ಪ್ರಕರಣ ವರದಿಯಾಗಿದೆ (ಪ್ರ.ವಾ., ಜುಲೈ 28). ದೂರುದಾರ ಮಹಿಳೆ ನೀಡಿರುವ ಮಾಹಿತಿ ಪ್ರಕಾರ, ಮಗಳು ಮತ್ತು ಅಳಿಯನ ನಡುವೆ ಇದ್ದ ಜಗಳಕ್ಕೆ ಎರಡೂ ಕಡೆಯ ಪೋಷಕರು ಕುಳಿತು, ಸಾಧ್ಯವಾದರೆ ಹಿರಿಯ ಸಮಾಲೋಚಕರನ್ನು ಕರೆಸಿ, ಅಳಿಯ, ಮಗಳ ನಡುವೆ ಬೆಳೆದಿದ್ದ ಹಮ್ಮುಬಿಮ್ಮಿನ ಕೋಟೆಯನ್ನು ಕೆಡವಿ, ಇಬ್ಬರಿಗೂ ತಿಳಿಹೇಳಿ ಸರಿಪಡಿಸಬೇಕಾಗಿತ್ತು. ಬೇಕಿದ್ದರೆ ಸೂಕ್ತ ಕಾನೂನು ಸಲಹೆಯನ್ನೂ ಪಡೆಯಬಹುದಿತ್ತು. ಆದರೆ ಇಲ್ಲಿ ಆಗಿರುವುದೇ ಬೇರೆ. ಜ್ಯೋತಿಷಿಯ ಮೊರೆ ಹೋಗಿ ಪೂಜೆಗೆ ಕಟ್ಟುಬಿದ್ದಿದ್ದಾರೆ.

ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಪೂಜೆ, ಜ್ಯೋತಿಷ ತಪ್ಪು ಎನ್ನುವ ಧೈರ್ಯ ಯಾರಿಗೂ ಇಲ್ಲ. ಹೀಗಿರುವಾಗ, ಜ್ಯೋತಿಷಿ ಅಥವಾ ಪೂಜಾ ಅರ್ಚಕರು ನಕಲಿ ಇಲ್ಲವೇ ಅಸಲಿ ಎಂದು ಸಮಾಜಕ್ಕೆ ತಿಳಿಯುವುದಾದರೂ ಹೇಗೆ? ಮನೆಗಳಿಗೆ ಹೋಗಿ ಪೂಜೆ ಅಥವಾ ಜ್ಯೋತಿಷ ಹೇಳುವವರಿಗೆ ಮುಜರಾಯಿ ಇಲಾಖೆಯಿಂದ ಪರವಾನಗಿ ನೀಡಿದರೆ ಸರಿಯಾಗಬಹುದು. ಪರವಾನಗಿ ಹೊಂದಿರುವ ಅಧಿಕೃತ ವ್ಯಕ್ತಿಗಳೇ ಅಗತ್ಯ ಇರುವ ಮನೆಗಳಲ್ಲಿ ಸೇವಾ ಕಾರ್ಯ ನಡೆಸಿದರೆ, ನಕಲಿಗಳ ಹಾವಳಿ ತಪ್ಪಬಹುದು. ಅಲ್ಲದೆ ಪ್ರತಿ ವರ್ಷವೂ ಪರವಾನಗಿ ಪಡೆದವರಿಂದ ಎಷ್ಟು ಮನೆಗಳಲ್ಲಿ ಎಷ್ಟು ಗೌರವಧನ ಪಡೆದು ಜ್ಯೋತಿಷ ಇಲ್ಲವೇ ಪೂಜಾ ಕಾರ್ಯ ನೆರವೇರಿಸಿದರು, ಅದರಿಂದ ಹೊರಬಂದ ಪೂಜಾ ಪ್ರತಿಫಲ ಏನು ಎಂಬ ಬಗ್ಗೆ ವರದಿ ತರಿಸಬಹುದು. ಅಧ್ಯಯನ ಮಾಡುವವರಿಗೂ ಇದೊಂದು ಹೊಸ ಬಗೆಯ ವಸ್ತು ಆಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಪ್ರಾಂಶುಪಾಲರ ಪರೀಕ್ಷೆ: ಅನಗತ್ಯ ನಿರ್ಬಂಧವೇಕೆ?

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜುಲೈ 30ರಂದು ಪ್ರಾಂಶುಪಾಲರ ಪರೀಕ್ಷೆಯನ್ನು ನಡೆಸಿತು. ಪರೀಕ್ಷಾ ಶುಲ್ಕ ₹ 5,000. ಬಹುಶಃ ನಮ್ಮ ದೇಶದ ಎಲ್ಲಿಯೂ ಯಾವ ಇಲಾಖೆಯ ನೇಮಕಾತಿಗೂ ಇಷ್ಟೊಂದು ದುಬಾರಿಯಾದ ಪರೀಕ್ಷಾ ಶುಲ್ಕ ಇರುವುದಿಲ್ಲವೇನೊ? ಪ್ರಾಧಿಕಾರವು ಸರಿಯಾದ ತಿಳಿವಳಿಕೆ ನೀಡಿರಲಿಲ್ಲವಾದ್ದರಿಂದ, ಎಷ್ಟೋ ಜನ ಅತಿಥಿ ಉಪನ್ಯಾಸಕರೂ ಪರೀಕ್ಷೆ ಬರೆದರು. ಅವರು ಇನ್ನೂ ಸಹಾಯಕ ಪ್ರಾಧ್ಯಾಪಕರೇ ಆಗಿಲ್ಲ, ಅಂತಹವರಿಂದಲೂ ₹ 5,000ವನ್ನು ಪ್ರಾಧಿಕಾರ ಪೀಕಿಸಿಕೊಂಡಿತು.

ನಾನು ಕನ್ನಡ ಪರೀಕ್ಷೆ ಹೇಗಿರಬಹುದೆಂಬ ಕುತೂಹಲದಿಂದ ಪರೀಕ್ಷೆ ತೆಗೆದುಕೊಂಡಿದ್ದೆ. 150 ಅಂಕಗಳ ಕನ್ನಡ ಪರೀಕ್ಷೆ ಮಧ್ಯಾಹ್ನ 2ರಿಂದ ಸಂಜೆ 5ರವರೆಗೆ ಇತ್ತು. ನಾನು ಬರೀ ಒಂದು ಗಂಟೆಯಲ್ಲಿ ಬರೆದು ಮುಗಿಸಿದೆ. ಎರಡು ತಾಸು ಸುಮ್ಮನೆ ಕೂಡುವುದೇಕೆಂದು ಹೊರಗೆ ಹೋಗಲು ವಿನಂತಿಸಿದೆ. ನನ್ನಂತೆ ಹಲವರು ಗೋಗರೆದರೂ ಅದಕ್ಕೆ ಮಾನ್ಯತೆ ದೊರೆಯಲಿಲ್ಲ. 5 ಗಂಟೆಯವರೆಗೆ ಪರೀಕ್ಷಾ ಹಾಲ್ ಬಿಟ್ಟು ಹೊರಹೋಗುವಂತಿಲ್ಲ ಎಂಬ ತುಘಲಕ್ ಆದೇಶ ಬೇರೆ ಬಂದಿತು! ವಯಸ್ಸಾದವರೇ ಬಹಳಷ್ಟು ಜನರಿದ್ದೆವು. ಜಲಬಾಧೆ ತೀರಿಸಿಕೊಳ್ಳುವ ಮತ್ತು ನೈಸರ್ಗಿಕ ಕರೆಗೆ ಓಗೊಡುವ ಬೇಡಿಕೆಯನ್ನೂ ಮನ್ನಿಸದೆ ಕೂಡಿಸಿದ ಪ್ರಾಧಿಕಾರ ಇಷ್ಟೊಂದು ಅಮಾನವೀಯ ಆಗಿದ್ದು ಯಾವಾಗ?

ಬಹುಶಃ ರಾಜಪ್ರಭುತ್ವದ ಕಾಲದಲ್ಲಿಯೂ ನೈಸರ್ಗಿಕ ಕರೆಗೆ ಬಂಧನ ಇರಲಿಲ್ಲವೇನೊ. ಆದರೆ ಪ್ರಜಾಪ್ರಭುತ್ವದಲ್ಲಿ, ಜನಪರ ಆಡಳಿತದ ಕಾಲದಲ್ಲಿ ಇಂತಹ ಅಮಾನವೀಯ ನಡೆಯನ್ನು ರೂಢಿಸಿಕೊಂಡಿರುವವರಿಗೆ ಯಾರು ಕಿವಿ ಹಿಂಡಬೇಕು? ನಾವು ಅನುಭವಿಸಿದ ಆ ಯಾತನೆಗೆ ಯಾರು ಸಮಾಧಾನ ಹೇಳಬೇಕು?

ಸಿ.ಬಿ.ಚಿಲ್ಕರಾಗಿ, ರಾಯಚೂರು

ಮಾನವ ಕಳ್ಳಸಾಗಣೆ: ಬಿಗಿಯಾದ ನಿಗಾ ವ್ಯವಸ್ಥೆ ಬೇಕು

ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ನೀಡಿರುವ ಮಾಹಿತಿಯಂತೆ, ದೇಶದಲ್ಲಿ 2019ರಿಂದ 21ರವರೆಗಿನ ಅವಧಿಯಲ್ಲಿ 13.13 ಲಕ್ಷಕ್ಕೂ ಹೆಚ್ಚು ಬಾಲಕಿಯರು ಮತ್ತು ಮಹಿಳೆಯರು ನಾಪತ್ತೆಯಾಗಿದ್ದಾರೆ. ಇದು ಅತ್ಯಂತ ಆತಂಕಕಾರಿಯಾದುದು. ಹೆಣ್ಣು ಶಿಶುವಿನ ಮಾರಾಟ, ಕಳ್ಳತನ ಹಾಗೂ ಮಾನವ ಕಳ್ಳಸಾಗಣೆ ಎನ್ನುವುದು ನಿರಂತರ ಲಾಭದ ದಂಧೆಯಾಗಿ ದೇಶದಲ್ಲಿ ಹಲವಾರು ವರ್ಷಗಳಿಂದ ಜೀವಂತವಾಗಿದೆ. ಇದರ ಹಿಂದೆ ಬಲಿಷ್ಠ ಕೈಗಳಿವೆ. ರಾಜಕಾರಣಿಗಳು, ರೌಡಿಗಳು, ಕಳ್ಳರು, ಕೆಲವು ಚಲನಚಿತ್ರ ನಟ ನಟಿಯರಿದ್ದಾರೆ. ಹೆಣ್ಣುಮಕ್ಕಳನ್ನು ದಂಧೆಗಳಿಗೆ, ವೇಶ್ಯಾವಾಟಿಕೆಗೆ, ಅಂಗಾಂಗ ಕಸಿಗೆ, ಭಿಕ್ಷಾಟನೆಗೆ ಹೀಗೆ ಅನೇಕ ರೀತಿಯಲ್ಲಿ ಬಳಸುತ್ತಿರುವುದು ಕೆಲವು ಕಡೆ ತಿಳಿದ ಹಾಗೂ ಸಾಬೀತಾಗಿರುವ ಸಂಗತಿ.

ಐದು ವರ್ಷದ ಮಗುವಿನಿಂದ ಹಿಡಿದು 60 ವರ್ಷ ಮೀರಿದ ಅಜ್ಜಿಯವರೆಗೂ ಅತ್ಯಾಚಾರಕ್ಕೆ ಬಲಿಯಾಗುತ್ತಲೇ ಇದ್ದಾರೆ. ಕೇಂದ್ರ ಸರ್ಕಾರವು ಬಹುಮುಖ್ಯವಾಗಿ ಮಾನವ ಕಳ್ಳಸಾಗಣೆ ತಡೆಗಟ್ಟಲು ಇನ್ನೂ ಬಿಗಿಯಾದ ನಿಗಾ ವ್ಯವಸ್ಥೆಯನ್ನು ರೂಪಿಸಬೇಕಾದ ಅಗತ್ಯ ಕಾಣುತ್ತಿದೆ. ನಗರಗಳಲ್ಲಿ ಮಕ್ಕಳು ಕಾಣೆಯಾಗುವುದನ್ನು ಮತ್ತು ಹೆಣ್ಣುಮಕ್ಕಳು, ಮಹಿಳೆಯರ ಮಾರಾಟ ದಂಧೆಯನ್ನು ತಡೆಗಟ್ಟಲು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯ ಅಗತ್ಯ ಇದೆ.

ಎ.ಆರ್.ಗೋವಿಂದ ಸ್ವಾಮಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಐಎಂ ಕಾಯ್ದೆಗೆ ತಿದ್ದುಪಡಿ

ರಾಷ್ಟ್ರಪತಿಗೆ ಅಧಿಕಾರ

ದೇಶದ ಎಲ್ಲಾ ಐಐಎಂಗಳಿಗೆ ರಾಷ್ಟ್ರಪತಿಯನ್ನು 'ಸಂದರ್ಶಕ ಮುಖ್ಯಸ್ಥ'ರನ್ನಾಗಿಸಲು ಅವಕಾಶ ನೀಡುವ ಮಸೂದೆಯನ್ನು ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದೆ. ಸಂಪೂರ್ಣ ಸ್ವಾಯತ್ತ ಸಂಸ್ಥೆಗಳಾದ ಐಐಎಂಗಳ ಎಲ್ಲಾ ಕಾರ್ಯನಿರ್ವಹಣೆಯಲ್ಲಿ ಸಂದರ್ಶಕ ಮುಖ್ಯಸ್ಥರಿಗೆ ಹೆಚ್ಚಿನ ಅಧಿಕಾರವನ್ನು ಈ ಮಸೂದೆ ನೀಡುತ್ತದೆ. ಸಂಸತ್ತಿನ ಹೊರಗೆ ಈ ಮಸೂದೆಯ ಪರ ಮತ್ತು ವಿರೋಧದ ಚರ್ಚೆ ನಡೆಯುತ್ತಿದೆ. ಸರ್ಕಾರಿ ಸಂಸ್ಥೆಗಳಾದ ಐಐಎಂಗಳು ಸಾರ್ವಜನಿಕರಿಗೆ ಉತ್ತರದಾಯಿಯಾಗಿರಬೇಕು ಎಂಬುದು ಈ ಮಸೂದೆ ಪರವಾದ ವಾದವಾದರೆ, ಐಐಎಂಗಳ ಮೇಲೆ ಬಿಗಿಹಿಡಿತ ಸಾಧಿಸಲು ಸರ್ಕಾರದ ಹುನ್ನಾರ ಎಂಬುದು ಇದನ್ನು ವಿರೋಧಿಸುವವರ ಪ್ರತಿಪಾದನೆಯಾಗಿದೆ

ಪ್ರಜಾವಾಣಿ ವಾರ್ತೆ

ಐಐಎಂಗಳು ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳು. 2015ರಲ್ಲಿ ಕೇಂದ್ರ ಸರ್ಕಾರವು ಈ ಸಂಸ್ಥೆಗಳ ನಿರ್ವಹಣೆಗೆ ಎಂದೇ ಪ್ರತ್ಯೇಕ ಕಾಯ್ದೆಯನ್ನು ರೂಪಿಸಲು ಮುಂದಾಗಿತ್ತು. ಆ ಸಲುವಾಗಿ 2015ರಲ್ಲಿ ರೂಪಿಸಿದ ಮಸೂದೆಯು, ಐಐಎಂಗಳ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಹಸ್ತಕ್ಷೇಪಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ಐಐಎಂಗಳು ಸರ್ಕಾರಕ್ಕೆ ಸಲ್ಲಿಸಿದ್ದ ಆಕ್ಷೇಪಣೆಯಲ್ಲಿ ಉಲ್ಲೇಖಿಸಿದ್ದವು. ಹೀಗಾಗಿ ಆ ಮಸೂದೆಯನ್ನು ತಿದ್ದುಪಡಿ ಮಾಡಲಾಗಿತ್ತು. ಹೀಗೆ ತಿದ್ದುಪಡಿ ಮಾಡಲಾದ ಮಸೂದೆಯನ್ನು 2017ರಲ್ಲಿ ಮಂಡಿಸಿ, ಅನುಮೋದನೆ ಪಡೆಯಲಾಗಿತ್ತು. 2018ರ ಜನವರಿ ಒಂದರಿಂದ ಜಾರಿಗೆ ಬಂದಿದ್ದ 'ಐಐಎಂ ಕಾಯ್ದೆ–2017', ಐಐಎಂಗಳಿಗೆ ಹೆಚ್ಚಿನ ಅಧಿಕಾರ ನೀಡಿತ್ತು. ಈಗ ಈ ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಮುಂದಾಗಿದೆ.

ಈ ಸಂಬಂಧ 'ಐಐಎಂ (ತಿದ್ದುಪಡಿ) ಮಸೂದೆ–2023 ಅನ್ನು ಕೇಂದ್ರ ಶಿಕ್ಷಣ ಸಚಿವಾಲಯವು ಜುಲೈ 28ರ ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಿದೆ. ಐಐಎಂಗಳ ನಿರ್ದೇಶಕರ ನೇಮಕ, ಆಡಳಿತ ಮಂಡಳಿಗಳ ನೇಮಕ, ಆಡಳಿತ ಮಂಡಳಿ ಮುಖ್ಯಸ್ಥನ ಆಯ್ಕೆ, ಪರಿಶೀಲನಾ ಸಮಿತಿಯ ರಚನೆಯಲ್ಲಿ ರಾಷ್ಟ್ರಪತಿಗೆ ಹೆಚ್ಚಿನ ಅಧಿಕಾರವನ್ನು ನೀಡಲು ಈ ತಿದ್ದುಪಡಿ ಮಸೂದೆಯು ಅವಕಾಶ ಮಾಡಿಕೊಡುತ್ತದೆ. ಮುಂಬೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಅನ್ನು 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್–ಮುಂಬೈ' ಎಂದು ಮರುನಾಮಕರಣ ಮಾಡಲು ಮತ್ತು ಈ ಸಂಸ್ಥೆಗೆ ಐಐಎಂನ ಸ್ಥಾನ ನೀಡಲೂ ತಿದ್ದುಪಡಿ ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಜತೆಗೆ, ಐಐಎಂಗಳ ಎಲ್ಲಾ ಸ್ವರೂಪ ಕಾರ್ಯವೈಖರಿಗಳ ಬಗ್ಗೆ ಲೆಕ್ಕಪರಿಶೋಧನೆಗೆ ಆದೇಶಿಸುವ, ಲೆಕ್ಕಪರಿಶೋಧನೆಗಾಗಿ ಅಧಿಕಾರಿಗಳನ್ನು ನೇಮಕ ಮಾಡುವ, ಪರಿಶೋಧನಾ ವರದಿಯ ಆಧಾರದಲ್ಲಿ ಕ್ರಮಕ್ಕೆ ಆದೇಶಿಸುವ ಅಧಿಕಾರವನ್ನೂ ರಾಷ್ಟ್ರಪತಿಗೆ ಈ ಮಸೂದೆಯು ನೀಡುತ್ತದೆ. ಲೋಕಸಭೆಯಲ್ಲಿ ಈ ಮಸೂದೆ ಮಂಡನೆಯಾಗಿದೆಯಾದರೂ, ಅದರ ಮೇಲೆ ಚರ್ಚೆ ಇನ್ನೂ ನಡೆದಿಲ್ಲ. ಈ ವಾರದಲ್ಲಿ ಮಸೂದೆಯ ಮೇಲೆ ಚರ್ಚೆ ನಡೆಯುವ ಸಾಧ್ಯತೆಗಳು ಇವೆ.

ಐಐಎಂಗೆ ಮೂಗುದಾರ ಬೇಕು

ಐಐಎಂಗಳು ಸಾರ್ವಜನಿಕ ಸಂಸ್ಥೆಗಳು. ಈ ಸಂಸ್ಥೆಗಳು ಜನರಿಗೆ ಉತ್ತರದಾಯಿ ಆಗಿರಬೇಕು. ಇವು ಖಾಸಗಿ ಸ್ವತ್ತುಗಳಾಗಬಾರದು. ನಿರ್ದೇಶಕರು, ಆಡಳಿತ ಮಂಡಳಿ ಸದಸ್ಯರಿಗೆ ಮೂಗುದಾರ ಹಾಕುವ ಅಗತ್ಯ ಇದೆ

ಅತುಲ್ ಕುಮಾರ್, ಕೌಶಲ ಅಭಿವೃದ್ಧಿ ಸಚಿವಾಲಯದಲ್ಲಿ ನೀತಿ ವಿಶ್ಲೇಷಕರು

ಸೈದ್ಧಾಂತಿಕ 'ಪರಿಶುದ್ಧಿ' ತೂರಿಸುವ ಯತ್ನ

2017ರ ಕಾನೂನಿನಲ್ಲಿ ಐಐಎಂಗಳಿಗೆ ಸ್ವಾಯತ್ತೆ ನೀಡಲಾಗಿತ್ತು. ಇದೇ ಕಾರಣಕ್ಕಾಗಿ ಈ ಕಾನೂನನ್ನು ಇಡೀ ಸಂಸತ್ತು ಒಪ್ಪಿಕೊಂಡಿತ್ತು. ಆದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ತಾನು ಆರು ವರ್ಷಗಳ ಹಿಂದೆ ಮಾಡಿದ್ದನ್ನು ಈಗ ಅಳಿಸಿ ಹಾಕಲು ಹೊರಟಿದೆ. ಸ್ವಾಯತ್ತೆ ಈ ಸರ್ಕಾರಕ್ಕೆ ಇಷ್ಟವಿಲ್ಲ ಎಂಬುದು ಈ ಮೂಲಕ ಸ್ಪಷ್ಟವಾಗುತ್ತಿದೆ. ಐಐಎಂಗಳ ಚಿಂತನಾ ಸ್ವಾತಂತ್ರ್ಯ, ಸುಲಲಿತವಾದ ಆಡಳಿತವನ್ನು ಕೆಡಿಸುವ ಹಾಗೂ ಈ ಸಂಸ್ಥೆಗಳಲ್ಲಿ ಸೈದ್ಧಾಂತಿಕ 'ಪರಿಶುದ್ಧಿ'ಯನ್ನು ತೂರಿಸುವ ಕೆಲಸ ನಡೆಯುತ್ತಿದೆ. ಈ ಮೂಲಕ, ಪ್ರಧಾನಿ ಮೋದಿ ಐಐಎಂಗಳ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿದ್ದಾರೆ

ಜೈರಾಮ್ ರಮೇಶ್, ಕಾಂಗ್ರೆಸ್ ಸಂಸದ

ಸ್ವಾಯತ್ತೆ: ಜಗತ್ತಿನಲ್ಲೇ ಒಪ್ಪಿತ ಮಾದರಿ

ಐಐಎಂಗಳನ್ನು ಕೇಂದ್ರ ಸರ್ಕಾರ ತನ್ನ ನೇರ ಹಿಡಿತಕ್ಕೆ ತೆಗೆದುಕೊಳ್ಳಲು ಸಂದರ್ಶಕ ಮುಖ್ಯಸ್ಥ ಎನ್ನುವ ಹುದ್ದೆಯನ್ನು ಸೃಷ್ಟಿಸಲಾಗಿದೆ. ಸ್ವಾಯತ್ತೆಯ ಮೇಲಿನ ನೇರ ದಾಳಿ ಇದಾಗಿದೆ. ಜವಾಬ್ದಾರಿಯನ್ನು ಹೊರಿಸುವ ಅನ್ಯ ಹಲವು ಮಾರ್ಗಗಳು ಇದ್ದವು. ಸ್ವತಂತ್ರ ಮಂಡಳಿಯೊಂದು ಐಐಎಂಗಳನ್ನು ನಡೆಸುವುದು ಜಗತ್ತಿನಲ್ಲೇ ಒಪ್ಪಿತವಾದ ಮಾದರಿಯಾಗಿತ್ತು. ಜೊತೆಗೆ ಈ ಮಾದರಿಯು ಯಶಸ್ಸನ್ನು ಕಂಡಿದೆ. ಇದು ಭಾರತದಲ್ಲೂ ಸಾಧ್ಯವಿತ್ತು.

ಐಐಎಂಗಳ ಕೆಲವು ನಿರ್ದೇಶಕರ ಅಭಿಪ್ರಾಯ

ಆಧಾರ: ಐಐಎಂ ಕಾಯ್ದೆ–2017, ಐಐಎಂ ತಿದ್ದುಪಡಿ ಮಸೂದೆ–2023, ಪಿಟಿಐ

ಪ್ರಮುಖ ತಿದ್ದುಪಡಿಗಳು

ಈ ಮಸೂದೆಯು ರಾಷ್ಟ್ರಪತಿಯನ್ನು ದೇಶದ ಎಲ್ಲಾ ಐಐಎಂಗಳಿಗೆ 'ಸಂದರ್ಶಕ ಮುಖ್ಯಸ್ಥ'ರನ್ನಾಗಿ ನೇಮಕ ಮಾಡುತ್ತದೆ. ಈ ಪ್ರಕಾರ ರಾಷ್ಟ್ರಪತಿಯು ದೇಶದ ಎಲ್ಲಾ ಐಐಎಂಗಳ ಮುಖ್ಯಸ್ಥರಾಗುತ್ತಾರೆ.

ಸಮನ್ವಯ ಸಮಿತಿ: ಐಐಎಂಗಳ ಸಮನ್ವಯ ಸಮಿತಿಗಳ ಮುಖ್ಯಸ್ಥರನ್ನು ಪರಿಶೀಲನೆ ಮತ್ತು ಆಯ್ಕೆ ಸಮಿತಿಯು ನೇಮಕ ಮಾಡಬೇಕು ಎಂದು ಮೂಲ ಕಾಯ್ದೆ ಹೇಳುತ್ತದೆ. ತಿದ್ದುಪಡಿ ಮಸೂದೆಯಲ್ಲಿ ಇದಕ್ಕೆ ಬದಲಾವಣೆ ತರಲಾಗಿದೆ. ಸಮನ್ವಯ ಸಮಿತಿಯ ಮುಖ್ಯಸ್ಥರನ್ನು ಸಂದರ್ಶಕ ಮುಖ್ಯಸ್ಥರಾದ ರಾಷ್ಟ್ರಪತಿಯು ನಾಮನಿರ್ದೇಶನ ಮಾಡುತ್ತಾರೆ ಎಂದು ತಿದ್ದುಪಡಿ ಮಸೂದೆಯು ಹೇಳುತ್ತದೆ.

ಆಡಳಿತ ಮಂಡಳಿ ಮುಖ್ಯಸ್ಥರ ನೇಮಕ

ಈ ಸಂಬಂಧ ಮೂಲ ಕಾಯ್ದೆಯ 10ನೇ ಸೆಕ್ಷನ್‌ಗೆ ಕೆಲವು ಬದಲಾವಣೆಗಳನ್ನು ಮಸೂದೆಯಲ್ಲಿ ಸೂಚಿಸಲಾಗಿದೆ.

ಪ್ರತಿ ಐಐಎಂನಲ್ಲಿ 19 ಸದಸ್ಯರು ಇರುವ ಆಡಳಿತ ಮಂಡಳಿಯನ್ನು ರಚಿಸಲು ಅವಕಾಶವಿದೆ. ಈ ಮಂಡಳಿಗೆ ಕೇಂದ್ರ ಸರ್ಕಾರವು ಒಬ್ಬ ಸದಸ್ಯರನ್ನು ನೇಮಕ ಮಾಡಿದರೆ, ರಾಜ್ಯ ಸರ್ಕಾರವು ಒಬ್ಬ ಸದಸ್ಯರನ್ನು ನೇಮಕ ಮಾಡುತ್ತದೆ. ಉಳಿದ ಸದಸ್ಯರನ್ನು ವಿವಿಧ ಕ್ಷೇತ್ರಗಳ ತಜ್ಞರು/ಗಣ್ಯರು, ಬೋಧನಾ ಸಿಬ್ಬಂದಿಯಿಂದ ಆಯ್ಕೆ ಮಾಡಿಕೊಳ್ಳಬಹುದು. ಆಡಳಿತ ಮಂಡಳಿ ಮುಖ್ಯಸ್ಥರನ್ನು ಮಂಡಳಿಯ ಸದಸ್ಯರೇ ಆಯ್ಕೆ ಮಾಡಬೇಕು ಎಂದು ಮೂಲ ಕಾಯ್ದೆ ಹೇಳುತ್ತದೆ.

- ಇದಕ್ಕೆ ಮಸೂದೆಯಲ್ಲಿ ತಿದ್ದುಪಡಿ ತರಲಾಗಿದೆ. ಸಂದರ್ಶಕ ಮುಖ್ಯಸ್ಥರು ಅಂದರೆ, ರಾಷ್ಟ್ರಪತಿಯು ಆಡಳಿತ ಮಂಡಳಿ ಮುಖ್ಯಸ್ಥರನ್ನು ನೇಮಕ ಮಾಡುತ್ತಾರೆ ಎಂದು ತಿದ್ದುಪಡಿ ಮಸೂದೆಯಲ್ಲಿ ವಿವರಿಸಲಾಗಿದೆ
- ಆಡಳಿತ ಮಂಡಳಿಯನ್ನು ಅಮಾನತಿನಲ್ಲಿ ಇಟ್ಟಾಗ ಅಥವಾ ಬರ್ಖಾಸ್ತು ಮಾಡಿದಾಗ ಮಧ್ಯಂತರ ಆಡಳಿತ ಮಂಡಳಿಯನ್ನು ರಚಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ. ಇದಕ್ಕಾಗಿ 1ನೇ ಸೆಕ್ಷನ್‌ಗೆ 6ನೇ ಉಪಸೆಕ್ಷನ್ ಅನ್ನು ಹೊಸದಾಗಿ ಸೇರಿಸಲಾಗಿದೆ

ಪರಿಶೀಲನೆ ಮತ್ತು ತನಿಖೆಗೆ ಆದೇಶ

ಐಐಎಂಗಳ ಕಾರ್ಯನಿರ್ವಹಣೆ ಸಂಬಂಧ ಪ್ರಗತಿ ಪರಿಶೀಲನೆ ಮತ್ತು ಲೆಕ್ಕಪರಿಶೋಧನೆ ಹಾಗೂ ತನಿಖೆಗೆ ಆದೇಶಿಸುವ ಅಧಿಕಾರವನ್ನು ಮೂಲ ಕಾಯ್ದೆಯ 17ನೇ ಸೆಕ್ಷನ್ ಆಡಳಿತ ಮಂಡಳಿಗೆ ನೀಡುತ್ತದೆ. ಆದರೆ, ತಿದ್ದುಪಡಿ ಮಸೂದೆಯಲ್ಲಿ ಈ ಸೆಕ್ಷನ್ ಅನ್ನೇ ತೆಗೆದುಹಾಕಲಾಗಿದೆ. ಐಐಎಂಗಳ ಕಾರ್ಯನಿರ್ವಹಣೆ ಸಂಬಂಧ ಪ್ರಗತಿ ಪರಿಶೀಲನೆ ಮತ್ತು ಲೆಕ್ಕಪರಿಶೋಧನೆ ಹಾಗೂ ತನಿಖೆಗೆ ಆದೇಶಿಸುವ ಅಧಿಕಾರವನ್ನು ರಾಷ್ಟ್ರಪತಿಗೆ ನೀಡಲು '10ಎ' ಎಂಬ ಹೊಸ ಸೆಕ್ಷನ್ ಅನ್ನು ತಿದ್ದುಪಡಿ ಮಸೂದೆಯಲ್ಲಿ ಸೇರಿಸಲಾಗಿದೆ.

- ಐಐಎಂಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಪ್ರಗತಿ ಪರಶೀಲನೆಗೆ ಎಂದು ಒಬ್ಬ ಅಥವಾ ಅದಕ್ಕಿಂತಲೂ ಹೆಚ್ಚು ವ್ಯಕ್ತಿಗಳನ್ನು ಸಂದರ್ಶಕ ಮುಖ್ಯಸ್ಥರು ನೇಮಕ ಮಾಡಬಹುದು. ಐಐಎಂಗಳ ಕಾರ್ಯನಿರ್ವಹಣೆ ಸಂಬಂಧ ತನಿಖೆ ನಡೆಸಲೂ ಆದೇಶಿಸಬಹುದು
- ಆಡಳಿತ ಮಂಡಳಿಯು, ಅಗತ್ಯ ಎನಿಸಿದ ವಿಚಾರಗಳಲ್ಲಿ ತನಿಖೆ ನಡೆಸಿ ಎಂದು ಸಂದರ್ಶಕ ಮುಖ್ಯಸ್ಥರಿಗೆ ಶಿಫಾರಸು ಮಾಡಬಹುದು
- ಪ್ರಗತಿ ಪರಿಶೀಲನಾ ವರದಿ ಮತ್ತು ತನಿಖಾ ವರದಿಗಳ ಆಧಾರದಲ್ಲಿ ರಾಷ್ಟ್ರಪತಿ ಕ್ರಮ ತೆಗೆದುಕೊಳ್ಳಬಹುದು. ಜತೆಗೆ ರಾಷ್ಟ್ರಪತಿಗೆ ಅಗತ್ಯ ಎನಿಸಿದ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಅವರು, ಐಐಎಂಗಳಿಗೆ ಆದೇಶಿಸಬಹುದು. ರಾಷ್ಟ್ರಪತಿಯು ನೀಡುವ ಇಂತಹ ಆದೇಶ/ನಿರ್ದೇಶನಗಳಿಗೆ ಐಐಎಂಗಳು ಬದ್ಧವಾಗಿರಲೇಬೇಕು

ನಿರ್ದೇಶಕರ ನೇಮಕ

ಐಐಎಂನ ನಿರ್ದೇಶಕರ ಅಧಿಕಾರ, ನೇಮಕ, ಕಾರ್ಯನಿರ್ವಹಣೆಯನ್ನು ಮೂಲ ಕಾಯ್ದೆಯ 16ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಈ ಸೆಕ್ಷನ್‌ಗೆ ವ್ಯಾಪಕ ತಿದ್ದುಪಡಿ ತರಲಾಗಿದೆ.

ಐಐಎಂನ ನಿರ್ದೇಶಕರನ್ನು ಆಯ್ಕೆ ಮಾಡಲು 'ಪರಿಶೀಲನೆ ಮತ್ತು ಆಯ್ಕೆ ಸಮಿತಿ'ಯನ್ನು ರಚಿಸಬೇಕು ಎಂದು 16ನೇ ಸೆಕ್ಷನ್ ಹೇಳುತ್ತದೆ. ಮೂಲ ಕಾಯ್ದೆಯ ಪ್ರಕಾರ ಈ ಸಮಿತಿಯಲ್ಲಿ ಆಡಳಿತ ಮಂಡಳಿಯ ಮುಖ್ಯಸ್ಥರು, ಆಡಳಿತ/ಕೈಗಾರಿಕೆ/ಉದ್ಯಮ/ಶಿಕ್ಷಣ/ವಿಜ್ಞಾನ/ನಿರ್ವಹಣಾ ಕ್ಷೇತ್ರದ ಮೂವರು ಗಣ್ಯರು ಅಥವಾ ತಜ್ಞರನ್ನು ನೇಮಕ ಮಾಡಬೇಕು. ಈ ಸಮಿತಿಯು ಐಐಎಂನ ನಿರ್ದೇಶಕರನ್ನು ಆಯ್ಕೆ ಮಾಡುತ್ತದೆ ಎಂದು ಮೂಲ ಕಾಯ್ದೆಯ 16ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

'ಪರಿಶೀಲನೆ ಮತ್ತು ಆಯ್ಕೆ ಸಮಿತಿಗೆ ತಜ್ಞ ಅಥವಾ ಗಣ್ಯರು ಎಂದು ಇಬ್ಬರು ಸದಸ್ಯರನ್ನಷ್ಟೇ ನೇಮಕ ಮಾಡಬೇಕು. ಜತೆಗೆ, ಮತ್ತೊಬ್ಬ ಸದಸ್ಯರನ್ನು ರಾಷ್ಟ್ರಪತಿಯೇ ನಾಮನಿರ್ದೇಶನ ಮಾಡಬೇಕು' ಎಂದು ತಿದ್ದುಪಡಿ ಮಸೂದೆ ಹೇಳುತ್ತದೆ. ಇದಲ್ಲದೆ, ಪರಿಶೀಲನೆ ಮತ್ತು ಆಯ್ಕೆ ಸಮಿತಿಯು ರಾಷ್ಟ್ರಪತಿಯ ಪೂರ್ವಾನುಮತಿ ಪಡೆದುಕೊಂಡೇ ಐಐಎಂ ನಿರ್ದೇಶಕರನ್ನು ನೇಮಕ ಮಾಡಬೇಕು ಎಂದು ತಿದ್ದುಪಡಿ ಮಸೂದೆ ಹೇಳುತ್ತದೆ.

- ಆಯ್ಕೆ ಸಮಿತಿಗೆ ರಾಷ್ಟ್ರಪತಿಯು ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಹೊಸದಾಗಿ ಸೇರಿಸಲಾಗಿದೆ
- ನಿರ್ದೇಶಕರ ನೇಮಕಕ್ಕೂ ಮುನ್ನ ರಾಷ್ಟ್ರಪತಿಯ ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ
- ಐಐಎಂ ನಿರ್ದೇಶಕರನ್ನು ಆ ಹುದ್ದೆಯಿಂದ ತೆಗೆದುಹಾಕುವ ಅಧಿಕಾರವು ಆಡಳಿತ ಮಂಡಳಿಗೆ ಇತ್ತು. ಆದರೆ ಅದಕ್ಕೂ ಮುನ್ನ ಅಗತ್ಯ ತನಿಖೆ ನಡೆದು, ವರದಿ ಬಂದ ನಂತರವಷ್ಟೇ ಕ್ರಮ ತೆಗೆದುಕೊಳ್ಳಬೇಕಿತ್ತು. ಆದರೆ, ಈಗ ನಿರ್ದೇಶಕರನ್ನು ಆ ಹುದ್ದೆಯಿಂದ ತೆಗೆದುಹಾಕಲು, ಆಡಳಿತ ಮಂಡಳಿಯು ರಾಷ್ಟ್ರಪತಿಯ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು ಎಂದು ತಿದ್ದುಪಡಿ ಮಸೂದೆಯು ಹೇಳುತ್ತದೆ

ಆಗಸ್ಟ್ 11ಕ್ಕೆ 'ತೋತಾಪುರಿ–2'?

ತಮಿಳು, ತೆಲುಗು ಸೂಪರ್‌ಸ್ಟಾರ್‌ಗಳ ಸಿನಿಮಾ ರಿಲೀಸ್ ಇದ್ದಾಗ ಅಂತಹ ಶುಕ್ರವಾರ ಕನ್ನಡ ಚಿತ್ರಗಳ ಬಿಡುಗಡೆ ವಿರಳ. ಆದರೆ 'ತೋತಾಪುರಿ' ಚಿತ್ರತಂಡ ಹೊಸ ಸಾಹಸಕ್ಕೆ ಕೈಹಾಕಿದೆ. ಆ.10ರಂದು(ಗುರುವಾರ) ರಜನಿಕಾಂತ್ ನಟನೆಯ 'ಜೈಲರ್' ಸಿನಿಮಾ ರಿಲೀಸ್ ಆಗುತ್ತಿದ್ದು, ಶುಕ್ರವಾರ ಅಂದರೆ ಆ.11ರಂದು 'ತೋತಾಪುರಿ' ಚಿತ್ರದ ಎರಡನೇ ಭಾಗ ರಿಲೀಸ್‌ಗೆ ಸಿದ್ಧತೆ ನಡೆದಿದೆ.

'ನಾವು ಆಗಸ್ಟ್ ಎರಡನೇ ವಾರ ತೆರೆಗೆ ಬರಲು ತಯಾರಿ ಮಾಡಿಕೊಳ್ಳುತ್ತಿರುವುದು ನಿಜ' ಎನ್ನುತ್ತಾರೆ ಚಿತ್ರದ ನಿರ್ಮಾಪಕ ಸುರೇಶ್. ಆ.11ರಂದು ಬೇರೆ ಯಾವ ಕನ್ನಡ ಸಿನಿಮಾಗಳೂ ರಿಲೀಸ್ ದಿನಾಂಕ ಘೋಷಿಸಿಲ್ಲ. ನಟರಾದ ಜಗ್ಗೇಶ್-ಧನಂಜಯ ಕಾಂಬಿನೇಷನ್‌ನಲ್ಲಿ 'ತೋತಾಪುರಿ' ಎರಡನೇ ಭಾಗವು ಮೂಡಿಬಂದಿದೆ. ಸುಮನ್ ರಂಗನಾಥ್ ಹಾಗೂ ಧನಂಜಯ ಅವರ ಪಾತ್ರಗಳು ಮೊದಲ ಭಾಗದಲ್ಲಿ ಹೆಚ್ಚು ಕಾಣಿಸಿಕೊಂಡಿರಲಿಲ್ಲ. 'ತೋತಾಪುರಿ-2'ರಲ್ಲಿ ಜಗ್ಗೇಶ್ ಜೊತೆಗೆ ಧನಂಜಯ ಅವರಿಗೂ ಪ್ರಮುಖ ಪಾತ್ರವಿದೆ ಎಂದಿದೆ ಚಿತ್ರತಂಡ. ಜೊತೆಗೆ ಇಲ್ಲಿ ಸುಮನ್ ರಂಗನಾಥ್ ಕೂಡ ಮುಖ್ಯಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಚಿತ್ರದ ಮೊದಲನೇ ಭಾಗ ಕೆಲ ಪ್ರೇಕ್ಷಕರಿಗೆ ಅಷ್ಟೊಂದು ರುಚಿಸಿರಲಿಲ್ಲ. ಸಂಭಾಷಣೆಯ ಬಗ್ಗೆ ಅವರಿಗೆ ಅಸಮಾಧಾನವಿತ್ತು. ಆದರೆ ಭಾವಕೈದ ಕಥೆ ಹೇಳಹೊರಟಿದ್ದ ನಿರ್ದೇಶಕ ವಿಜಯ ಪ್ರಸಾದ್, ಎರಡನೇ ಭಾಗದಲ್ಲಿ ಹೆಚ್ಚಿನ ಕಥೆ ಇಟ್ಟಿದ್ದರು. ಮೊದಲ ಭಾಗದಲ್ಲಿ 'ಬಾಗ್ಲು ತೆಗಿ ಮೇರಿ ಜಾನ್' ಹಾಡು ಹಿಟ್ ಆಗಿತ್ತು. ಅದೇ ರೀತಿ ಎರಡನೇ ಭಾಗದ ಹಾಡೊಂದು ಸದ್ಯ ಸದ್ದು ಮಾಡುತ್ತಿದೆ. ಹೃದಯಶಿವ ಸಾಹಿತ್ಯ ರಚಿಸಿರುವ 'ಮೊದಲ ಮಳೆ ಮನದೊಳಗೆ...' ಎಂಬ ಹಾಡು ಇದಾಗಿದ್ದು, ಧನಂಜಯ ಹಾಗೂ ಸುಮನ್ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದು, ಸಂಜಿತ್ ಹೆಗಡೆ ಧ್ವನಿಯಾಗಿದ್ದಾರೆ.

ಮಲಯಾಳಂನತ್ತಲೂ ಶಿವಣ್ಣ?

ಇತ್ತೀಚೆಗೆ ಸೂಪರ್‌ಸ್ಟಾರ್ ಸಿನಿಮಾಗಳಲ್ಲಿ ಬಹುಭಾಷಾ ನಟರು ಅಭಿನಯಿಸುವ ಟ್ರೆಂಡ್ ಹೆಚ್ಚುತ್ತಿದೆ. ಪ್ಯಾನ್ ಇಂಡಿಯಾ ಪರಿಕಲ್ಪನೆಯ ಸಿನಿಮಾ, ದೊಡ್ಡ ಸ್ಟಾರ್‌ಗಳ ಸಿನಿಮಾವನ್ನು ಡಬ್ ಮಾಡಿ ಎಲ್ಲ ಭಾಷೆಗಳಲ್ಲಿಯೂ ಬಿಡುಗಡೆ ಮಾಡುವುದು ಇದಕ್ಕೆ ಮುಖ್ಯ ಕಾರಣ. ಕನ್ನಡದಲ್ಲಿ ಸಾಲು, ಸಾಲು ಸಿನಿಮಾಗಳನ್ನು ಒಪ್ಪಿಕೊಂಡಿರುವ ನಟ ಶಿವರಾಜ್ ಕುಮಾರ್, ತಮಿಳಿನಲ್ಲಿ ಕೂಡ ವಿಶೇಷ ಪಾತ್ರಗಳಲ್ಲಿ ಹೆಚ್ಚೆಚ್ಚು ಕಾಣಿಸಿಕೊಳ್ಳುತ್ತಿದ್ದಾರೆ.

ರಜನಿಕಾಂತ್ ಅಭಿನಯದ 'ಜೈಲರ್' ಸಿನಿಮಾದಲ್ಲಿ ಶಿವರಾಜ್ ಕುಮಾರ್ ಸುಮಾರು 10 ನಿಮಿಷಗಳ ಕಾಲ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರಂತೆ. ಆಗಸ್ಟ್ 10ರಂದು ಈ ಚಿತ್ರ ಬಿಡುಗಡೆಯಾಗುತ್ತಿದ್ದು, ಇತ್ತೀಚೆಗಷ್ಟೆ ಸಿನಿಮಾದ ಹಾಡು ಬಿಡುಗಡೆಗೊಂಡಿದೆ. ಆ ಕಾರ್ಯಕ್ರಮದಲ್ಲಿ ಮಾತನಾಡಿದ ಶಿವರಾಜ್ ಕುಮಾರ್, ತಮ್ಮ ಮುಂದಿನ ತಮಿಳು ಸಿನಿಮಾ ಬಗ್ಗೆಯೂ ಮಾಹಿತಿ ನೀಡಿದ್ದಾರೆ.



ಧನುಷ್ ಅಭಿನಯದ 'ಕ್ಯಾಪ್ಟನ್ ಮಿಲ್ಲರ್' ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ಹ್ಯಾಟ್ರಿಕ್ ಹೀರೋ ಕಾಣಿಸಿಕೊಂಡಿದ್ದಾರೆ. ಆ ಚಿತ್ರದ ಟೀಸರ್ ಕೂಡ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಜೈಲರ್'ಗಿಂತ 'ಕ್ಯಾಪ್ಟನ್ ಮಿಲ್ಲರ್'ನಲ್ಲಿ ಪಾತ್ರದ ವ್ಯಾಪ್ತಿ ದೊಡ್ಡದಿದೆ ಎಂದು ಶಿವರಾಜ್ ಕುಮಾರ್ ಹೇಳಿದ್ದಾರೆ. ಮಲಯಾಳಂನ ಪೃಥ್ವಿರಾಜ್ ಸುಕುಮಾರ್ ಅವರಿಂದಲೂ ತಮಗೆ ಆಫರ್ ಬಂದಿದೆ ಎಂದೂ ತಿಳಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **'ಈ ಕೆಳಗಡೆ** ನೀಡಿದ ಲಿಂಕ್ ಮೇಲೆ ಕ್ಲಿಕ್ ಮಾಡಿ. ಆವಾಗ ನಿಮಗೆ ಹಸಿರು ಚುಕ್ಕೆಗಳು ಕಂಡುಬರುತ್ತವೆ. ಅವು ಇಡೀ ಜಗತ್ತಿನಲ್ಲಿರುವ ಎಫ್‌ಎಂ ರೇಡಿಯೊ ಸ್ಟೇಷನ್‌ಗಳು. ನೀವು ಯಾವುದೇ ಹಸಿರು ಚುಕ್ಕೆಯ ಮೇಲೆ ಕ್ಲಿಕ್ ಮಾಡಿದಾಗ ಆಯಾ ಪ್ರದೇಶಗಳಲ್ಲಿನ ಎಫ್‌ಎಂ ಅನ್ನು ಕೇಳಿ ಆನಂದಿಸಬಹುದು. ಅಚ್ಚರಿಯೆಂದರೆ ಈ ರೀತಿ ಕೇಳಲು ಇಯರ್‌ಫೋನ್‌ನ ಅಗತ್ಯವಿಲ್ಲ. ಇದನ್ನು ಅಭಿವೃದ್ಧಿ ಪಡಿಸಿದ್ದು ನಮ್ಮ ಇಸ್ರೊ. ಅದಕ್ಕೆ ಧನ್ಯವಾದಗಳು' ಎಂಬ ಬರಹ ಇರುವ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಇದು ರೇಡಿಯೊ ಗಾರ್ಡನ್‌ಗೆ ಸಂಬಂಧಿಸಿದ ಲಿಂಕ್. ಆದರೆ, ಈ ಇಂಥ ಯಾವುದೇ ವ್ಯವಸ್ಥೆಯನ್ನು ಇಸ್ರೊ ಅಭಿವೃದ್ಧಿಪಡಿಸಿಲ್ಲ.

✅ **'ರೇಡಿಯೊ ಗಾರ್ಡನ್'** ಎನ್ನುವ ರೇಡಿಯೊ ವಾಹಿನಿಯನ್ನು ಸ್ಟುಡಿಯೊ ಪೂಕೆ ಆ್ಯಂಡ್ ಮೋನಿಕರ್ ಕಂಪೆನಿಯು ಅಭಿವೃದ್ಧಿ ಪಡಿಸಿದೆ. ಇದು ನೆದರ್‌ಲೆಂಡ್ಸ್ ಮೂಲದ ಕಂಪೆನಿಯಾಗಿದೆ. ನೆದರ್‌ಲೆಂಡ್ಸ್ ಇನ್‌ಸ್ಟಿಟ್ಯೂಟ್ ಫಾರ್ ಸೌಂಡ್ ಆ್ಯಂಡ್ ವಿಷನ್ ಎನ್ನುವ ಸಂಸ್ಥೆ ಏರ್ಪಡಿಸಿದ್ದ ಪ್ರದರ್ಶನ ಯೋಜನೆಯೊಂದಕ್ಕಾಗಿ 'ರೇಡಿಯೊ ಗಾರ್ಡನ್' ವಾಹಿನಿ ಯೋಜನೆಯನ್ನು ಸ್ಟುಡಿಯೊ ಪೂಕೆ 2016ರಲ್ಲಿ ಅಭಿವೃದ್ಧಿ ಪಡಿಸಿತ್ತು. ನಂತರ 2019ರಲ್ಲಿ 'ರೇಡಿಯೊ ಗಾರ್ಡನ್' ವಾಹಿನಿಯನ್ನು ಸಣ್ಣ ಉದ್ಯಮವಾಗಿ ಕಂಪನಿ ರೂಪಾಂತರಿಸಿತು. ಈ ಯೋಜನೆಗೂ ಇಸ್ರೊಗು ಯಾವುದೇ ಸಂಬಂಧ ಇಲ್ಲ ಎಂದು ನೆದರ್‌ಲೆಂಡ್ಸ್ ಇನ್‌ಸ್ಟಿಟ್ಯೂಟ್ ಫಾರ್ ಸೌಂಡ್ ಆ್ಯಂಡ್ ವಿಷನ್ ಸಂಸ್ಥೆಯ ವಕ್ತಾರ ಬಾಸ್ ಅಡರ್‌ಬರ್ಗ್ ಅವರು ಸ್ಪಷ್ಟನೆ ನೀಡಿದ್ದಾರೆ. ಆದ್ದರಿಂದ, 'ರೇಡಿಯೊ ಗಾರ್ಡನ್'ಗೂ ಇಸ್ರೊಗು ಯಾವುದೇ ಸಂಬಂಧ ಇಲ್ಲ ಎಂದು ಎಎಫ್‌ಪಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸ್ವಾವಲೋಕನ

ಸಂದೇಹವೀ ಕೃತಿಯೊಳಿನ್ನಿಲ್ಲವೆಂದಲ್ಲ |
ಇಂದು ನಂಬಿಹುದೆ ಮುಂದೆಂದುಮೆಂದಲ್ಲ ||
ಕುಂದು ತರ್ದಂದದನು ತಿದ್ದಿಕೊಳೆ ಮನಸುಂಟು |
ಇಂದಿಗೀ ಮತವುಚಿತ – ಮಂಕುತಿಮ್ಮ || 939 ||

ಪದ-ಅರ್ಥ: ಸಂದೇಹವೀ = ಸಂದೇಹವು + ಈ, ಕೃತಿಯೊಳಿನ್ನಿಲ್ಲವೆಂದಲ್ಲ = ಕೃತಿಯೊಳು + ಇ-ನ್ನಿಲ್ಲ + ಎಂದಲ್ಲ, ಮುಂದೆಂದುಮೆಂದಲ್ಲ = -ಮುಂದೆ + ಎಂದೆಂದುಮ್ + ಅಂದಲ್ಲ, ತರ್ದಂದದನು = ತರ್ದಂದು(ತೋರಿದಂದು) + ಅದನು, ಮತವುಚಿತ = ಮತ(ಅಭಿಪ್ರಾಯ) + ಉಚಿತ (ಸರಿಯಾದದ್ದು).

ವಾಚ್ಯಾರ್ಥ: ಈ ಕೃತಿಯೊಳಗೆ ಸಂದೇಹವಾವುದೂ ಇಲ್ಲ ಎಂದಲ್ಲ, ಇಂದು ನಂಬಿದ್ದೇ ಮುಂದೆ ಯಾವಾಗಲೂ ಸರಿ ಎಂದಲ್ಲ, ತಪ್ಪನ್ನು ತೋರಿಸಿದರೆ ತಿದ್ದಿಕೊಳ್ಳುವ ಮನವಿದೆ. ಇಂದಿಗೆ ಈ ಮತ ಸರಿಯಾದದ್ದು.

ವಿವರಣೆ: ಈ ಕಗ್ಗ ಸಾಧಕರೊಬ್ಬರು ಮಾಡಿಕೊಂಡ ಆತ್ಮವಿಮರ್ಶೆಯ ಅತ್ಯುತ್ತಮ ಮಾದರಿ. ತಾವು ಬರೆದ ಕೃತಿಯಲ್ಲಿ ಸಂದೇಹಗಳೇ ಇಲ್ಲ ಎನ್ನುವಂತಿಲ್ಲ. ತಾನು ಇಂದು ನಂಬಿದ್ದನ್ನು ಮುಂದೆಯೂ ನಂಬಿಯೇ ತೀರುತ್ತೇನೆ ಎಂಬ ಹಟವಿಲ್ಲ. ಇದರಲ್ಲಿ ಏನಾದರೂ ತಪ್ಪು ಕಂಡರೆ ತಿದ್ದಿಕೊಳ್ಳುವ ಮನಸ್ಸಿದೆ ಎನ್ನುವ ವಿನಮ್ರತೆಯೊಂದಿಗೆ, ಸ್ವವಿಮರ್ಶೆ ಇದೆ. ಆತ್ಮವಿಮರ್ಶೆ ಶರಣಾಗತಿಯಲ್ಲ, ಮಹತ್ವಾಕಾಂಕ್ಷೆಯೂ ಅಲ್ಲ. ಅದು ಪ್ರಾಮಾಣಿಕ ಮನಸ್ಸಿನ ಅತ್ಯಂತ ಸಹಜ ಅವಲೋಕನ. ಈ ಸ್ವಾವಲೋಕನ ಇಲ್ಲದೆ ವ್ಯಕ್ತಿ, ಸಮಾಜ, ಧರ್ಮ ಯಾವುದೂ ಬೆಳೆಯುವುದು ಸಾಧ್ಯವಿಲ್ಲ. ಶಾಸ್ತ್ರಗಳಿಂದ, ಗ್ರಂಥಗಳಿಂದ, ಜೀವನಾನುಭವಗಳಿಂದ ಪಡೆದ ಜ್ಞಾನವನ್ನು ಪರಿಷ್ಕರಿಸಿ, ಸರಿಯಾಗಿ ಜೋಡಿಸಿ ರಚಿಸಿದ ಈ ಕಗ್ಗಗಳಲ್ಲಿ ಸಾರ್ಥಕ ಜೀವನಕ್ಕೆ ಬೇಕಾದ ಸರ್ವಪದಾರ್ಥವೂ ಇದೆ. ತಾವು ಕಂಡದ್ದನ್ನು, ಕೇಳಿದ್ದನ್ನು, ಓದಿದ್ದನ್ನು ಅರಗಿಸಿಕೊಂಡು ಅತ್ಯಂತ ಸಾಮಾನ್ಯರ ಮನಸ್ಸಿಗೂ ತಟ್ಟುವಂತೆ ಬರೆದ ಕಗ್ಗದ ಬಗ್ಗೆ ಡಿ.ವಿ.ಜಿ ಎಷ್ಟು ನಿರ್ವಿಕಾರವಾಗಿ ಹೇಳುತ್ತಾರೆ, "ತಪ್ಪು ತೋರಿಸಿದರೆ ಒಪ್ಪಿಕೊಳ್ಳುವ, ತಿದ್ದಿಕೊಳ್ಳುವ ಮನಸ್ಸಿದೆ" ಎಂದು! ಇಂತಹುದೇ ಧ್ವನಿ ಮಹಾತ್ಮಾ ಗಾಂಧಿಯವರ ಜೀವನ ಚರಿತ್ರೆ, "ನನ್ನ ಸತ್ಯಾನ್ವೇಷಣೆ" ಯಲ್ಲಿ ಕೇಳುತ್ತದೆ. ಅವರೂ ಹೀಗೆಯೇ ಹೇಳುತ್ತಾರೆ, "ನಾನು ಬರೆದದ್ದೆಲ್ಲ ಶಾಶ್ವತ ಸತ್ಯವೆಂದೋ, ಕೊನೆಯ ತೀರ್ಮಾನಗಳೆಂದೋ, ನಿರ್ದೋಷವಾದವುಗಳೆಂದೋ ನಾನು ಹೇಳುವುದಿಲ್ಲ.. ಅವು ನನ್ನ ಮಟ್ಟಿಗೆ, ಈ ಪರಿಸ್ಥಿತಿಯಲ್ಲಿ, ಸರಿಯೆಂದೇ ತೋರಿವೆ. ನನ್ನ ಇಂದಿನ ಅಭಿಪ್ರಾಯ ಮುಂದೆಯೂ ಹಾಗೆಯೇ ಇದ್ದೀತು ಎಂದು ಹೇಳಲಾರೆ". ಇದು ಸತ್ಯವಲ್ಲವೆ? ನಮ್ಮ ಇಂದಿನ ಅಭಿಪ್ರಾಯಕ್ಕೆ ನಮ್ಮ ಇದುವರೆಗಿನ ಅನುಭವ, ಓದು, ಪರಿಸರ, ಪರಿಸ್ಥಿತಿ ಎಲ್ಲವೂ ಕಾರಣವಾಗುತ್ತವೆ. ಮುಂದೆ ಇವುಗಳು ಬದಲಾದಾಗ ಅಭಿಪ್ರಾಯಗಳೂ ಬದಲಾಗುತ್ತವೆ. ಅದಕ್ಕೇ ಕಗ್ಗ ಹೇಳುತ್ತದೆ, "ಇಂದಿಗೀ ಮತವುಚಿತ".

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಆಗಸ್ಟ್ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ಪೂರ್ಣಿಮಾ ಗಂ. 24-02 ನಕ್ಷತ್ರ: ಉತ್ತರಾಷಾಢ ಗಂ. 16-03 ಯೋಗ: ಪ್ರೀತಿ ಗಂ. 18-52 ಕರಣ: ವಿಷ್ಟಿ ಗಂ. 13-58, ಕರ್ಕಾಟಕ ಮಾಸದ 15 ನೇ ದಿನ, ಮಳೆನಕ್ಷತ್ರ: ಪುಷ್ಯ 4. ರಾಹುಕಾಲ : ಸಾಯಂಕಾಲ 03-00 - 04-30 ಸೂರ್ಯೋದಯ : 06-19 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 13 ಮೊಹರಮ್

ದಿನ ವಿಶೇಷ : ತಿಲಕರ ಸ್ಮರಣಾರ್ಥ ದಿನ

ಅದೃಷ್ಟ ಸಂಖ್ಯೆ : 12, 2

ಮೇಷ: ಪ್ರತಿಯೊಂದು ವೈಯಕ್ತಿಕ ಕೆಲಸಗಳಿಗೂ ಅನಾರೋಗ್ಯದ ಕಾರಣವಾಗಿ ಬೇರೆಯವರ ನೆರವು ಬೇಕಾಗುತ್ತದೆ. ಸ್ವಂತ ವ್ಯವಹಾರದಲ್ಲಿ ಹಂತ ಹಂತವಾದ ಅಭಿವೃದ್ಧಿ ಕಾಣುವಿರಿ. ಹಣಕಾಸಿನ ಬಗ್ಗೆ ಚಿಂತೆ ಬೇಡ.

ವೃಷಭ: ಮಾನಸಿಕವಾದ ಒತ್ತಡ ಕಡಿಮೆಯಾಗಬೇಕೆಂದರೆ ಜನರ ಜತೆಗೆ ಬೆರೆಯ ಬೇಕಾಗುತ್ತದೆ. ಮಗನ ಪ್ರಬುದ್ಧತೆಯಿಂದ ಹೆಗಲ ಭಾರ ಕಡಿಮೆಯಾಗುತ್ತದೆ. ಒಂದಲ್ಲ ಒಂದು ಕೆಲಸಗಳು ಇಂದು ನಿಮಗಿರುತ್ತದೆ.

ಮಿಥುನ: ಉದ್ಯೋಗದಲ್ಲಿ ಒತ್ತಡ ಹೆಚ್ಚಿರುವ ಕಾರಣ ಮಾನಸಿಕವಾಗಿ ತಯಾರಾಗಿರುವುದು ಸೂಕ್ತ. ನಿಮ್ಮ ಕೋಪವನ್ನು ಸಂಬಂಧಪಡದ ವ್ಯಕ್ತಿಯ ಮೇಲೆ ತೀರಿಸುವುದು ಬೇಡ. ಕುಟುಂಬದಲ್ಲಿ ಸಾಮರಸ್ಯದಿಂದ ಇರುವಿರಿ.

ಕರ್ಕಾಟಕ: ಕೆಲಸಗಳಲ್ಲಿ ಯಾವುದೇ ವಿಘ್ನಗಳು ಎದುರಾದರೂ ಸಹ ಅದು ಕ್ಷಣ ಮಾತ್ರದ್ದಾಗಿರುತ್ತದೆ. ವಿದ್ಯಾರ್ಥಿಗಳು ಏಕಾಗ್ರತೆಯ ಕೊರತೆಯನ್ನು ಅನುಭವಿಸುವಿರಿ. ಹಿರಿಯರ ಆರೋಗ್ಯವನ್ನು ನೋಡಿಕೊಳ್ಳಬೇಕಾಗುವುದು.

ಸಿಂಹ: ಪತ್ನಿಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಜಿಪುಣತನ ತೋರದಿರಿ. ಮೈಬಣ್ಣದ ನೆಪ ಹೇಳಿಕೊಂಡು ಸಂಬಂಧದಲ್ಲಾಗಲಿ ವ್ಯವಹಾರದಲ್ಲಾಗಲಿ ಕಡೆಗಣನೆ ಬೇಡ. ಕ್ಷುಲ್ಲಕ ಕಾರಣಗಳಿಗೆ ಕೋಪಿಸಿಕೊಳ್ಳುವಿರಿ.

ಕನ್ಯಾ: ಎಲ್ಲಾ ಕೆಲಸಗಳಲ್ಲಿಯೂ ವಿಶೇಷ ಆಸಕ್ತಿ ತೋರುವಿರಿ. ದುಡಿಮೆ ಎಷ್ಟು ಮುಖ್ಯವೋ ಅಷ್ಟೇ ವಿಶ್ರಾಂತಿಯೂ ಮುಖ್ಯ ಎಂಬುದನ್ನು ಕಂಡುಕೊಳ್ಳಿರಿ. ಷೇರು ವ್ಯವಹಾರ ಲಾಭದಾಯಕ.

ತುಲಾ: ಆದಾಯ ಎಲ್ಲರ ಕಣ್ಣಿಗೂ ಅಧಿಕವಾಗಿ ಕಂಡರೂ ಅಧಿಕವಾದ ಖರ್ಚೂ ಇರುವುದರಿಂದ ಯಾವುದೇ ರೀತಿಯ ಉಳಿತಾಯ ಸಾಧ್ಯವಾಗುವುದಿಲ್ಲ. ಉನ್ನತ ಅಧಿಕಾರದ ನಿರೀಕ್ಷಕರಿಗೆ ಅದು ದೊರೆಯುತ್ತದೆ.

ವೃಶ್ಚಿಕ: ಯಾವುದಾದರೂ ವಿಷಯದ ಬಗ್ಗೆ ಸಲಹೆಯನ್ನು ಎಷ್ಟು ಜನರಲ್ಲಿ ಕೇಳಿದರೂ ಕೊನೆಯ ತೀರ್ಮಾನ ನಿಮ್ಮ ಸ್ವಂತದ್ದಾಗಿರಲಿ. ಆರೋಗ್ಯದಲ್ಲಾಗುವ ಸಣ್ಣಪುಟ್ಟ ಏರುಪೇರುಗಳ ಬಗ್ಗೆ ಎಚ್ಚರಿಕೆ ಮುಖ್ಯವಾಗಿರುತ್ತದೆ.

ಧನು: ಇಂದು ನಡೆಯುವ ವಿಶೇಷ ಘಟನೆಯಿಂದಾಗಿ ಕಾರ್ಯಾಲಯದ ಎಲ್ಲಾ ವ್ಯಕ್ತಿಗಳು ನಿಮಗೆ ಹತ್ತಿರದವರಾಗುತ್ತಾರೆ. ಸಾಕುಪ್ರಾಣಿಗಳ ಜೊತೆ ಸಂತಸದ ಸಮಯವನ್ನು ಕಳೆಯುವಿರಿ. ತೃಪ್ತಿಯ ಜೀವನ ನಡೆಸುವಿರಿ.

ಮಕರ: ಅನಿವಾರ್ಯ ಕಾರಣದಿಂದ ಬಹು ಮುಖ್ಯವಾದ ಒಂದು ಕೆಲಸವನ್ನು ತಪ್ಪಿಸಿಕೊಳ್ಳಬೇಕಾಗುತ್ತದೆ. ಮಕ್ಕಳ ವಿಷಯವಾಗಿ ಮುಂಗೋಪಿಯಾಗುವಿರಿ. ಸಂತಾನಾಪೇಕ್ಷಿಗಳಿಗೆ ಶುಭಸುದ್ದಿ ಇರಬಹುದು.

ಕುಂಭ: ಮಧ್ಯಮವರ್ಗದ ಕುಟುಂಬದಲ್ಲಿ ಸಂಬಂಧಿಕರ ಎದುರು ಕೆಲವು ಇರಿಸು ಮುರಿಸುಗಳು ಆಗಬಹುದು. ಆದರೆ ಆ ವಿಷಯವಾಗಿ ಬೇಸರ ಪಡುವುದು ಬೇಡ. ಪ್ರೇಯಸಿಯ ವಿಷಯವನ್ನು ಹಿರಿಯರಲ್ಲಿ ತಿಳಿಸುವಿರಿ.

ಮೀನ: ಯುವ ಬರಹಗಾರರಿಗೆ ಹುರುಪು ಹೆಚ್ಚಿಸುವಂಥ ಜನರು ಸುತ್ತಲು ಸಿಗುತ್ತಾರೆ. ನಿಮ್ಮ ತಪ್ಪಿದ್ದಲ್ಲಿ ಅದನ್ನು ಒಪ್ಪಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳಿ. ದುರ್ಗಾ ಆರಾಧನೆಯು ಉತ್ತಮ ಫಲ ನೀಡುತ್ತದೆ.

ಪದಬಂಧ 5397

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಹಾವು ಇಲ್ಲಿಕಾಣುತ್ತಿದೆಯಲ್ಲಾ? (3)
3. ಎಲ್ಲೆಯ ಬಳಿಯಿರುವ ಮಡಿಕೆ (3)
5. ಅಲೆಯುತ್ತಿರುವಾಗ ಕಾಣಿಸಿದ ತರಂಗ (2)
6. ರಾಟೆ ಇಟ್ಟಿದ್ದಕ್ಕೇ ಈ ಆಕ್ಷೇಪಣೆ! (3)
7. ತಿಕ್ಕಲ ಹಿಡಿದಿರುವ ಎಳ್ಳು! (2)
9. ಮನದಲ್ಲಿರುವ ಸೊಕ್ಕು ಕಾಣುತ್ತಿದೆಯೇ? (2)
11. ನೆನಪು ಮಾಡಿಕೊಂಡು ತೋರಿದ ವಯ್ಯಾರ (3)
13. ಅನುಮಾನ ಹೀಗೆ ಬಂದಿದೆಯಲ್ಲಾ? (2)
14. ಸ್ವಂತ ದೇಶದಲ್ಲಿ ಉತ್ಪತ್ತಿಯಾದುದು (3)
15. ಪ್ರವೇಶಿಸಲು ಆಗದುದು ಗರದೊಳಗಿದೆ! (3)

ಮೇಲಿಂದ ಕೆಳಕ್ಕೆ
1. ಹುಯಿಲಿಡುತ್ತಾ ಆಡುತ್ತಿರುವ ಜೋಕಾಲಿ (3)
2. ಗಣಿ ಹತ್ತಿರ ಕಲಿತ ಲೆಕ್ಕಶಾಸ್ತ್ರ (3)
3. ಗದ್ದಲಕ್ಕೊಂದು ಪರ್ಯಾಯ ಪದ (3)
4. ಗೆಳೆಯನೊಂದಿಗಿರುವ ಸ್ನೇಹಿತೆ (3)
5. ಅರ್ಥಪೂರ್ಣವಾದ ಹೆಸರು (5)
8. ಲವನಿಂದ ಪ್ರಾರಂಭವಾದ ಹುರುಪು! (5)
10. ದೈತ್ಯ ಅಥವಾ ರಾಕ್ಷಸ (3)
11. ಸೋಗಲಾಡಿ ಇಲ್ಲಿದ್ದಾಳಲ್ಲಾ? (3)
12. ವ್ಯಾಕರಣದಲ್ಲಿ ಗಂಡುಜಾತಿಯನ್ನು ಸೂಚಿಸುವ ಶಬ್ದ (3)
13. ಆನಂದವನ್ನುಂಟು ಮಾಡುವ ಶಿವ (3)



5396ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಳಸುಮಾತು 4.ವಾಮನ 5.ರಕ್ಕಸ 6.ನೆಗಡಿ 8.ಮರ 9.ಸತಿ 11.ವಾರಸು 14.ದಿಗ್ಗಜ 15.ಸಜ್ಜನ 16.ವಿಮಾನಯಾನ

ಮೇಲಿಂದ ಕೆಳಕ್ಕೆ: 1.ಬಹಿಷ್ಕಾರ 2.ಸುಮನೋಹರ 3.ತುರಗ 4.ವಾಸನೆ 7.ಗರತಿ 8.ಮಲಾರ 9.ಸಮುದ್ರಯಾನ 10.ಅಭಿಮಾನ 12.ಸುದಿನ 13.ಯಜವಿ

ಸುಡೊಕು 5783

				5		2		8
5		4	1		8		3	
	8			7			5	4
	6			3		1		2
2		5		1	7			
	3			8		5		6
		8			6		2	
3		2	7	4				
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5782 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,646
ಇಂದಿನ ಅಂತ್ಯ	19,753
▲	107
ದಿನದ ಗರಿಷ್ಠ	19,772

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹465

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಪ್ರ.ಕಿ)	₹185-480
ದ್ವಿತಳಿ (ಪ್ರ.ಕಿ)	₹222-562

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144.50
ಗುಡ್ ಲಾಟ್	₹127.50

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840 (1870)
ಸೋಯಾ (ರಿಫೈನ್ಡ್)	₹965 (970)
ಸೂರ್ಯಕಾಂತಿ (ರಿಫೈನ್ಡ್)	₹975 (985)
ಪಾಮೋಲಿನ್	₹877 (887)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಂಗಳೂರು	₹11000-12500
ತುಮಕೂರು	₹3650-4180
ಪುತ್ತೂರು	₹4500-7300
ತುರುವೇಕೆರೆ	₹9400-9400

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹13800
ಎಸಿ	₹7000
ಆರ್‌ಪಿ	₹10100
ಆರ್‌ಸಿ	₹6090

ಸೂಪರ್ ಪ್ರೀಮಿಯಂ ಸ್ಮಾರ್ಟ್‌ಫೋನ್: ಶೇ 50ರಷ್ಟು ಪಾಲು ಸ್ಯಾಮ್ಸಂಗ್ ಗುರಿ

ಸೋಲ್ (ಪಿಟಿಐ): ಭಾರತದ ಸೂಪರ್ ಪ್ರೀಮಿಯಂ ಸ್ಮಾರ್ಟ್‌ಫೋನ್ ವಿಭಾಗದಲ್ಲಿ ಶೇಕಡ 50ರಷ್ಟು ಮಾರುಕಟ್ಟೆ ಪಾಲು ಹೊಂದುವ ಗುರಿಯನ್ನು ಸ್ಯಾಮ್ಸಂಗ್ ಎಲೆಕ್ಟ್ರಾನಿಕ್ಸ್ ಹೊಂದಿದೆ. ಫೋಲ್ಡಿಂಗ್ ಸಾಧನಗಳಾದ ಗ್ಯಾಲಕ್ಸಿ ಫೋಲ್ಡ್ 5 ಮತ್ತು ಗ್ಯಾಲಕ್ಸಿ ಫ್ಲಿಪ್ 5 ಈ ಗುರಿ ಸಾಧನೆಗೆ ನೆರವಾಗುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ ಎಂದು ಕಂಪನಿಯ ಅಧ್ಯಕ್ಷ ಟಿ.ಎಂ. ರೋಹ್ ಹೇಳಿದ್ದಾರೆ.

ಭಾರತದ ಸೂಪರ್ ಪ್ರೀಮಿಯಂ ಸ್ಮಾರ್ಟ್‌ಫೋನ್ ವಿಭಾಗದಲ್ಲಿ ಕಂಪನಿಯು ಸದ್ಯ ಶೇ 35ರಷ್ಟು ಪಾಲನ್ನು ಹೊಂದಿದೆ. ಆ್ಯಪಲ್ ಕಂಪನಿಯು ಮೊದಲ ಸ್ಥಾನದಲ್ಲಿದೆ.

ಸೂಪರ್ ಪ್ರೀಮಿಯಂ ಸ್ಮಾರ್ಟ್‌ಫೋನ್ ವಿಭಾಗವು ₹82 ಸಾವಿರಕ್ಕಿಂತಲೂ ಅಧಿಕ ಬೆಲೆಯ ಹ್ಯಾಂಡ್‌ಸೆಟ್‌ಗಳನ್ನು ಒಳಗೊಂಡಿದೆ.

ಕೌಂಟರ್‌ಪಾಯಿಂಟ್ ರಿಸರ್ಚ್‌ನ ಪ್ರಕಾರ, ಭಾರತದ ಮೊಬೈಲ್ ಮಾರುಕಟ್ಟೆಯಲ್ಲಿ ಸ್ಯಾಮ್ಸಂಗ್ ಕಂಪನಿಯು 2023ರ ಮೊದಲ ತ್ರೈಮಾಸಿಕದಲ್ಲಿ ಶೇ 20ರಷ್ಟು ಪಾಲು ಹೊಂದುವ ಮೂಲಕ ಮುಂಚೂಣಿಯಲ್ಲಿದೆ. ₹45 ಸಾವಿರಕ್ಕಿಂತಲೂ ಅಧಿಕ ಬೆಲೆಯ ಅಲ್ಟ್ರಾ ಪ್ರೀಮಿಯಂ ವಿಭಾಗದಲ್ಲಿ ಕಂಪನಿಯ ಪಾಲು ವರ್ಷದಿಂದ ವರ್ಷಕ್ಕೆ ಶೇ 247ರಷ್ಟು ಏರಿಕೆ ಕಂಡಿದೆ.

ಅಲ್ಟ್ರಾ ಪ್ರೀಮಿಯಂ ವಿಭಾಗದಲ್ಲಿ ಶೇ 62ರಷ್ಟು ಪಾಲನ್ನು ಹೊಂದುವ ಮೂಲಕ ಆ್ಯಪಲ್ ಕಂಪನಿಯು ಮೊದಲ ಸ್ಥಾನದಲ್ಲಿದೆ.

ಭಾರತದ ಮಾರುಕಟ್ಟೆಯು ಈಗ ಹೊಸತನದ ಬಗ್ಗೆ ಹೆಚ್ಚು ಸೂಕ್ಷ್ಮವಾಗಿದೆ. ಮೊಬೈಲ್ ಸಾಧನಗಳ ಬಳಕೆಯೂ ಹೆಚ್ಚಾಗುತ್ತಿದೆ. ಪ್ರೀಮಿಯಂ ವಿಭಾಗದ ಹೆಚ್ಚಿನ ಬೆಲೆಯ ಸಾಧನಗಳಿಗೆ ಬೇಡಿಕೆಯು ತ್ವರಿತವಾಗಿ ಹೆಚ್ಚಾಗುತ್ತಿದೆ ಎಂದು ರೋಹ್ ತಿಳಿಸಿದ್ದಾರೆ.

ಜೂನ್ ತಿಂಗಳಲ್ಲಿ ಮೂಲಸೌಕರ್ಯ ವಲಯಗಳ ಬೆಳವಣಿಗೆ ದರದಲ್ಲಿ ಸುಧಾರಣೆ

ಮೂಲಸೌಕರ್ಯ: ಶೇ 8.2 ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ದರವು ಜೂನ್ ತಿಂಗಳಲ್ಲಿ ಶೇಕಡ 8.2ಕ್ಕೆ ಏರಿಕೆ ಕಂಡಿದೆ. ನೈಸರ್ಗಿಕ ಅನಿಲ, ಉಕ್ಕು ಉತ್ಪಾದನಾ ವಲಯಗಳಲ್ಲಿ ದಾಖಲಾದ ಆರೋಗ್ಯಕರ ಬೆಳವಣಿಗೆಯು ಈ ಏರಿಕೆಗೆ ನೆರವಾಗಿದೆ.

ಆದರೆ, ಈ ಎಂಟು ವಲಯಗಳ ಬೆಳವಣಿಗೆ ಪ್ರಮಾಣವು ಹಿಂದಿನ ವರ್ಷದ ಜೂನ್ ತಿಂಗಳ ಬೆಳವಣಿಗೆಗೆ ಹೋಲಿಸಿದರೆ ಈ ಬಾರಿ ಕಡಿಮೆ. ಹಿಂದಿನ ಜೂನ್‌ನಲ್ಲಿ ಎಂಟು ವಲಯಗಳಲ್ಲಿ ಶೇ 13.1ರಷ್ಟು ಬೆಳವಣಿಗೆ ಆಗಿತ್ತು.

ಮುಖ್ಯಾಂಶಗಳು

- ಜನವರಿ ನಂತರದ ಅತ್ಯಂತ ವೇಗದ ಬೆಳವಣಿಗೆ
- ಜೂನ್‌ನಲ್ಲಿ ಉಕ್ಕು ಉತ್ಪಾದನೆ ಶೇ 21.9ರಷ್ಟು ಏರಿಕೆ

ಈ ವರ್ಷದ ಜೂನ್ ತಿಂಗಳ ಬೆಳವಣಿಗೆ ಪ್ರಮಾಣವು ಜನವರಿ ನಂತರದ ಅತ್ಯಂತ ವೇಗದ ಬೆಳವಣಿಗೆ. ಜನವರಿಯಲ್ಲಿ ಈ ವಲಯಗಳಲ್ಲಿ ಶೇ 9.7ರಷ್ಟು ಬೆಳವಣಿಗೆ ಆಗಿತ್ತು. ಮೇ ತಿಂಗಳಲ್ಲಿ ಶೇ 5ರಷ್ಟು ಬೆಳವಣಿಗೆ ದಾಖಲಾಗಿತ್ತು.

ಏಪ್ರಿಲ್–ಜೂನ್ ಅವಧಿಯಲ್ಲಿ ಬೆಳವಣಿಗೆಯು ಶೇ 5.8ಕ್ಕೆ ತಗ್ಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದು ಶೇ 13.9ರಷ್ಟು ಇತ್ತು.

ಜೂನ್ ತಿಂಗಳಲ್ಲಿ ಉಕ್ಕು ಉತ್ಪಾದನೆಯು ಶೇ 21.9ರಷ್ಟು ಏರಿಕೆ ಕಂಡಿದೆ.

ನೈಸರ್ಗಿಕ ಅನಿಲ ಉತ್ಪಾದನೆಯು ಶೇ 3.6ರಷ್ಟು ಹೆಚ್ಚಾಗಿದೆ. ಕಲ್ಲಿದ್ದಲು ಉತ್ಪಾದನೆಯಲ್ಲಿನ ಬೆಳವಣಿಗೆ ಪ್ರಮಾಣವು 2022ರ ಜೂನ್‌ನಲ್ಲಿ ಶೇ 32.1ರಷ್ಟು ಇದ್ದಿದ್ದು ಈ ಜೂನ್‌ನಲ್ಲಿ ಶೇ 9.8ಕ್ಕೆ ಇಳಿಕೆ ಕಂಡಿದೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಈ ಅಂಕಿ-ಅಂಶಗಳ ಕುರಿತು ಪ್ರತಿಕ್ರಿಯೆ ನೀಡಿರುವ ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಅವರು, 'ಮುಂಗಾರು ಮಳೆ ಸರಿಯಾಗಿ ಆರಂಭವಾಗಿದ್ದುದು ವಿದ್ಯುತ್ ಉತ್ಪಾದನೆ ಹೆಚ್ಚಾಗಲು ಕಾರಣವಾಗಿದೆ' ಎಂದು ಹೇಳಿದ್ದಾರೆ.

ಸುದರ್ಶನ್ ಸೌರ್ ಸೋಲಾರ್ ವಾಟರ್ ಹೀಟರ್‌ಗೆ ಐಎಸ್‌ಐ ಮಾನ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದರ್ಶನ್ ಸೌರ್ ಕಂಪನಿಯ ಸೋಲಾರ್ ವಾಟರ್ ಹೀಟರ್‌ಗಳಿಗೆ ಭಾರತೀಯ ಮಾನದಂಡ ಮಂಡಳಿಯು (ಬಿಐಎಸ್) ಐಎಸ್‌ಐ ಪ್ರಮಾಣೀಕರಣ ನೀಡಿದೆ.

ಈ ಮೊದಲು ಕಂಪನಿಯು ಬ್ಯೂರೋ ಆಫ್ ಎನರ್ಜಿ ಎಫಿಶಿಯನ್ಸಿಯಿಂದ (ಬಿಇಇ) ಮೂರು ಸ್ಟಾರ್ ರೇಟಿಂಗ್ ಪಡೆದುಕೊಂಡಿದೆ.

ಹೀಗಾಗಿ, ಐಎಸ್‌ಐ ಮತ್ತು ಸ್ಟಾರ್ ರೇಟಿಂಗ್ ಎರಡನ್ನೂ ಪಡೆದಿರುವ ಭಾರತದ ಮೊದಲ ಮತ್ತು ಏಕೈಕ ಕಂಪನಿ ಸುದರ್ಶನ್ ಸೌರ್ ಆಗಿದೆ ಎಂದು ಪ್ರಕಟಣೆಯಲ್ಲಿ ಹೇಳಿದೆ.

ಸೋಲಾರ್ ವಾಟರ್ ಹೀಟರ್‌ಗಳನ್ನು 'ಸಾವಿತ್ರಿಬಾಯಿ ಪುಲೆ ಪುಣೆ ವಿಶ್ವವಿದ್ಯಾಲಯ'ದ ಪ್ರಾದೇಶಿಕ ಪರೀಕ್ಷಾ ಕೇಂದ್ರದಲ್ಲಿ ಬಿಐಎಸ್ ಮಾನದಂಡಗಳಿಗೆ ಅನುಗುಣವಾಗಿ ಪರೀಕ್ಷೆಗೆ ಒಳಪಡಿಸಿದ ಬಳಿಕ ಐಎಸ್‌ಐ ಪ್ರಮಾಣೀಕರಣ ದೊರೆತಿದೆ ಎಂದು ಕಂಪನಿಯು ತಿಳಿಸಿದೆ.

ಔರಂಗಾಬಾದ್‌ನ ಛತ್ರಪತಿ ಸಂಭಾಜಿನಗರದಲ್ಲಿ ಇರುವ ಕಂಪನಿಯ ಕಚೇರಿಯಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಐಎಸ್‌ಐ ದರ್ಜೆಯ ಉತ್ಪನ್ನವನ್ನು ಔರಂಗಾಬಾದ್‌ನ ರಾಮಕೃಷ್ಣ ಮಿಷನ್ ಆಶ್ರಮದ ಸ್ವಾಮಿ ವಿಷ್ಣುಪಾದಾನಂದ ಮಹಾರಾಜ್ ಬಿಡುಗಡೆ ಮಾಡಿದರು. ಬಿಐಎಸ್ ಮುಂಬೈನ ಪಶ್ಚಿಮ ವಿಭಾಗದ ನಿರ್ದೇಶಕ ಸಂಜಯ್ ಗೋಸ್ವಾಮಿ, ಎಂಎನ್‌ಆರ್‌ಇ ದೆಹಲಿಯ ಅರುಣ್ ಕುಮಾರ್ ಚೌಧರಿ, ಬಿಐಎಸ್ ಪುಣೆಯ ನಿರ್ದೇಶಕ ವಿಶಾಲ್ ತೋಮರ್, ಆರ್‌ಟಿಸಿ ಪುಣೆಯ ಅನಘಾ ಪಾಠಕರ ಉಪಸ್ಥಿತರಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಹಳೆಚಾಲಿ	40000-48000	ಕೆಂಪುಗೋಟು	35469-35609
ಬಂಟ್ವಾಳ		ಹೊಸಚಾಲಿ	30000-44200	ರಾಶಿ	45649-52399
ಕೋಕ	12500-25000	**ಸಾಗರ**		ತಟ್ಟಿಬೆಟ್ಟೆ	46209-48099
ಹೊಸತು	27500-44200	ಬಿಳಿಗೋಟು	28989-36055	**ಶಿರಸಿ**	
ಹಳತು	46000-48000	ಚಾಲಿ	30989-40666	ಬೆಟ್ಟೆ	42599-49699
ಚಿತ್ರದುರ್ಗ		ಕೋಕ	30099-37569	ಬಿಳಿಗೋಟು	27899-37001
ಆಪಿ	53119-53559	ಕೆಂಪುಗೋಟು	30499-42429	ಚಾಲಿ	38101-43221
ಬೆಟ್ಟೆ	42129-42599	ರಾಶಿ	42899-54099	ಕೆಂಪುಗೋಟು	
ಕೆಂಪುಗೋಟು		ಸಿಪ್ಪೆಗೋಟು	16371-23335		34499-38523
	32209-32610	**ಶಿವಮೊಗ್ಗ**		ರಾಶಿ	47598-52599
ರಾಶಿ	52639-53069	ಬೆಟ್ಟೆ	49099-54139	**ಯಲ್ಲಾಪುರ**	
ಕುಮಟಾ		ಗೊರಬಲು	17499-43650	ಬಿಳಿಗೋಟು	28699-37509
ಚಿಪ್ಪು	32999-35509	ರಾಶಿ	42099-56099	ಚಾಲಿ	37819-43169
ಕೋಕ	23509-35209	ಸರಕು	50009-78896	ಕೋಕ	24612-35212
ಫ್ಯಾಕ್ಟರಿ	15019-22969	**ಸಿದ್ದಾಪುರ**		ಕೆಂಪುಗೋಟು	
ಹಳೆಚಾಲಿ	39099-41699	ಬಿಳಿಗೋಟು	32699-35500		32519-36299
ಹೊಸಚಾಲಿ	38699-42009	ಚಾಲಿ	35433-42700	ರಾಶಿ	50119-53199
ಕಾರ್ಕಳ		ಕೋಕ	30100-35409	ತಟ್ಟಿಬೆಟ್ಟೆ	38099-45809

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕ

ಮಾರುತಿ ಲಾಭ 2 ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಎರಡುಪಟ್ಟು ಹೆಚ್ಚಾಗಿ ₹2,525 ಕೋಟಿಗೆ ತಲುಪಿದೆ.

2022–23ನೇ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಯು ₹1,036 ಕೋಟಿ ನಿವ್ವಳ ಲಾಭ ಗಳಿಸಿತ್ತು. ವಾಹನ ಮಾರಾಟ ಹೆಚ್ಚಾಗಿರುವುದು, ವೆಚ್ಚ ಕಡಿತಕ್ಕೆ ತೆಗೆದುಕೊಂಡಿರುವ ಕ್ರಮಗಳು ಹಾಗೂ ಕಾರ್ಯಾಚರಣೇತರ ಆದಾಯ ಹೆಚ್ಚಾಗಿರುವ ಕಾರಣಗಳಿಂದಾಗಿ ಲಾಭದಲ್ಲಿ ಹೆಚ್ಚಳ ಕಂಡುಬಂದಿದೆ.

ಕಾರ್ಯಾಚರಣಾ ವರಮಾನವು ₹26,512 ಕೋಟಿಯಿಂದ ₹32,338 ಕೋಟಿಗೆ ಏರಿಕೆ ಕಂಡಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಜೂನ್ ತ್ರೈಮಾಸಿಕದಲ್ಲಿ 4.98 ಲಕ್ಷ ವಾಹನಗಳನ್ನು ಮಾರಾಟ ಮಾಡಲಾಗಿದೆ. ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇ 6.4ರಷ್ಟು ಹೆಚ್ಚಳ ಆಗಿದೆ.

ಎಲೆಕ್ಟ್ರಾನಿಕ್ ಬಿಡಿಭಾಗಗಳ ಕೊರತೆಯಿಂದಾಗಿ 28 ಸಾವಿರ ವಾಹನಗಳ ತಯಾರಿಕೆ ಸಾಧ್ಯವಾಗಿಲ್ಲ. ಜೂನ್ ತ್ರೈಮಾಸಿಕದಲ್ಲಿ ಗ್ರಾಹಕರಿಗೆ 3.55 ಲಕ್ಷ ವಾಹನಗಳನ್ನು ಹಸ್ತಾಂತರಿಸಲು ಸಾಧ್ಯವಾಗಿಲ್ಲ ಎಂದು ಕಂಪನಿ ತಿಳಿಸಿದೆ.

ಎಲ್‌ಐಸಿ ಜೀವನ್ ಕಿರಣ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಜೀವನ್ ಕಿರಣ್ ಹೆಸರಿನ ಹೊಸ ವಿಮಾ ಪಾಲಿಸಿಯನ್ನು ರೂಪಿಸಿದೆ. ಇದು ಗ್ರಾಹಕರಿಗೆ ಈಗ ಲಭ್ಯವಿದೆ.

ಇದು ಉಳಿತಾಯ, ಜೀವ ವಿಮೆಯ ಪ್ರಯೋಜನವನ್ನು ಗ್ರಾಹಕರಿಗೆ ನೀಡುತ್ತದೆ. ದುಬಾರಿಯಲ್ಲದ ಮೊತ್ತಕ್ಕೆ ಹೆಚ್ಚಿನ ಜೀವ ವಿಮೆ ರಕ್ಷೆ ಬಯಸುವವರಿಗೆ ಇದು ಸೂಕ್ತ ಎಂದು ಕಂಪನಿ ಹೇಳಿದೆ.

10 ವರ್ಷಗಳಿಂದ 40 ವರ್ಷಗಳವರೆಗೆ ಈ ಪಾಲಿಸಿಯ ಅವಧಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಧೂಮಪಾನ ಮಾಡುವವರಿಗೆ ಹಾಗೂ ಧೂಮಪಾನ ಮಾಡದೆ ಇರುವವರಿಗೆ ಪ್ರೀಮಿಯಂ ಮೊತ್ತದಲ್ಲಿ ವ್ಯತ್ಯಾಸ ಇರುತ್ತದೆ.

ಪಾಲಿಸಿಯನ್ನು ಎಲ್‌ಐಸಿ ವೆಬ್‌ಸೈಟ್ ಮೂಲಕವೂ ಖರೀದಿ ಮಾಡಬಹುದು.

ಮುಂಬೈ ಧಾರಣೆ

ಶೇಂಗಾ

31-07-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850 (1880)
ಒಂದು ವಾರದ ಡೆಲಿವರಿ	1845 (1875)
ಸೋಯಾ ಕಚ್ಚಾ	915 (930)
ಪಾಮ್ ವಾರದ ಡೆಲಿವರಿ	875 (885)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,500 (59,350)
ಬೆಳ್ಳಿ ಕೆ.ಜಿ
74,050 (73,500)

ಆವರಣದಲ್ಲಿ ಶನಿವಾರದ ಧಾರಣೆ

ಮುಂಚಿತವಾಗಿ ಸ್ಪೆಕ್ಟ್ರಂ ಬಾಕಿ ಪಾವತಿಸಿದ ಏರ್‌ಟೆಲ್

ನವದೆಹಲಿ (ಪಿಟಿಐ): ಏರ್‌ಟೆಲ್ ಕಂಪನಿಯು ತರಂಗಾಂತರ ಖರೀದಿಗೆ ಸಂಬಂಧಿಸಿದ ಬಾಕಿ ಮೊತ್ತ ₹8,024 ಕೋಟಿಯನ್ನು ಅವಧಿಗೆ ಮೊದಲೇ ದೂರಸಂಪರ್ಕ ಇಲಾಖೆಗೆ ಪಾವತಿ ಮಾಡಿದೆ. 2015ರಲ್ಲಿ ನಡೆದಿದ್ದ ತರಂಗಾಂತರ ಹರಾಜಿಗೆ ಸಂಬಂಧಿಸಿದಂತೆ ಈ ಬಾಕಿ ಮೊತ್ತ ಪಾವತಿಸಿದೆ. ಕಂತನ್ನು ಶೇ 10ರ ಬಡ್ಡಿದರದ ಜೊತೆಗೆ ಪಾವತಿಸಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಉಕ್ರೇನ್: ಕ್ಷಿಪಣಿ ದಾಳಿ, 5 ಸಾವು

ಕಟ್ಟಡದ ಅವಶೇಷಗಳಡಿ ಸಿಲುಕಿರುವ 53 ಮಂದಿ

ಕೀವ್ (ಎ.ಪಿ): ಉಕ್ರೇನ್‌ನ ಕ್ರಿವಿ ರಿಹ್ ನಗರದ ಮೇಲೆ ರಷ್ಯಾದ ಸೇನೆಯು ಸೋಮವಾರ ಕ್ಷಿಪಣಿ ದಾಳಿಯನ್ನು ನಡೆಸಿದೆ. ಕನಿಷ್ಠ ಐವರು ಮೃತಪಟ್ಟಿದ್ದಾರೆ. ಕಟ್ಟಡದ ಅವಶೇಷಗಳಡಿ ಕನಿಷ್ಠ 53 ಮಂದಿ ಸಿಲುಕಿದ್ದಾರೆ ಎಂದು ಒಳಾಡಳಿತ ಸಚಿವರು ತಿಳಿಸಿದ್ದಾರೆ.

ಎರಡು ವಸತಿ ಸಮುಚ್ಚಯ ಕಟ್ಟಡಗಳನ್ನು ಗುರಿಯಾಗಿಸಿ ದಾಳಿ ನಡೆದಿದೆ. ಸಂಕೀರ್ಣವೊಂದರ 4 ಮತ್ತು 9ನೇ ಮಹಡಿ ಭಾಗವು ಭಾಗಶಃ ತೀವ್ರಹಾನಿಯಾಗಿದೆ. ಅಲ್ಲದೇ, ಯೂನಿವರ್ಸಿಟಿ ಕಟ್ಟಡವು ಭಾಗಶಃ ಹಾನಿಗೊಂಡಿದೆ ಎಂದು ವಿವರಿಸಿದ್ದಾರೆ.

ಕ್ರಿವಿ ರಿಹ್ ನಗರ ಅಧ್ಯಕ್ಷ ಝೆಲೆನ್‌ಸ್ಕಿ ಅವರು ಹುಟ್ಟೂರು ಆಗಿದೆ. ಮೃತರಲ್ಲಿ 10 ವರ್ಷದ ಬಾಲಕಿ ಸೇರಿದ್ದಾರೆ. ಯೂನಿವರ್ಸಿಟಿ ಕಟ್ಟಡದಿಂದ ದಟ್ಟ ಕಪ್ಪು ಹೊಗೆ ಹೊಮ್ಮುತ್ತಿರುವುದು ಹಾಗೂ ಕಟ್ಟಡದ ಹೊರಗೆ ನಿಲ್ಲಿಸಿದ್ದ ಕಾರುಗಳು ವಿರೂಪಗೊಂಡಿರುವುದು ದಾಖಲಾಗಿದೆ ಎಂದು ಸಚಿವ ಲಿಮೆಂಕೊ ತಿಳಿಸಿದ್ದಾರೆ.

ನಿಪ್ರೊಪೆಟ್ರೊವಿಸ್ಕ್ ಪ್ರಾಂತ್ಯದ ಗವರ್ನರ್ ಸೆರ್ಹಿಲ್ ಲಿಸಕ್ ಅವರು, 'ಬೆಳಗಿನ ಹೊತ್ತು ಈ ದಾಳಿ ನಡೆದಿದ್ದರು ನಾಲ್ವರು ಮಕ್ಕಳು ಸೇರಿ 31 ಜನರು ಗಾಯಗೊಂಡಿದ್ದಾರೆ' ಎಂದಿದ್ದಾರೆ.

ರಷ್ಯಾದ ಕ್ಷಿಪಣಿ ದಾಳಿಯಿಂದಾಗಿ ಉಕ್ರೇನ್‌ನ ಕ್ರಿವಿ ರಿಹ್ ನಗರದಲ್ಲಿ ಭಾಗಶಃ ತೀವ್ರ ಹಾನಿಗೊಂಡಿರುವ ವಸತಿ ಸಮುಚ್ಚಯದ ನೋಟ –ಎಎಫ್‌ಪಿ ಚಿತ್ರ

ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, 'ಇತ್ತೀಚಿನ ದಿನಗಳಲ್ಲಿ ಶತ್ರುಗಳು ನಗರಗಳನ್ನೇ ಗುರಿಯಾಗಿಸಿ ದಾಳಿ ನಡೆಸುತ್ತಿದ್ದಾರೆ. ವಸತಿ ಪ್ರದೇಶಗಳ ಮೇಲೂ ದಾಳಿ ನಡೆಯುತ್ತಿದೆ. ಆದರೆ, ಇದರಿಂದ ನಾವು ಧೃತಿಗೆಡುವುದಿಲ್ಲ' ಎಂದು ತಿಳಿಸಿದ್ದಾರೆ.

ಇನ್ನೊಂದೆಡೆ, ಉಕ್ರೇನ್‌ನ ಸೇನಾ ಪಡೆಯು ರಷ್ಯಾವು ಭಾಗಶಃ ಅತಿಕ್ರಮಿಸಿಕೊಂಡಿರುವ ಡೊನೆಟ್‌ಸ್ಕ್ ಪ್ರಾಂತ್ಯದ ಮೇಲೆ ದಾಳಿ ನಡೆಸಿದೆ. ಅಲ್ಲಿ ಇಬ್ಬರು ಮೃತಪಟ್ಟಿದ್ದು, 6 ಮಂದಿ ಗಾಯಗೊಂಡಿದ್ದಾರೆ ಎಂದು ರಷ್ಯಾದ ನಾಯಕ ಡೆನಿಸ್ ಪುಷಿಲಿನ್ ತಿಳಿಸಿದ್ದಾರೆ.

ವಿತ್ತೀಯ ಕೊರತೆ ಶೇ 25.3ರಷ್ಟು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಜೂನ್ ತ್ರೈಮಾಸಿಕದ ಅಂತ್ಯಕ್ಕೆ ಇಡೀ ವರ್ಷದ ಗುರಿಯ ಶೇಕಡ 25.3ರಷ್ಟು ಆಗಿದೆ. ಕೇಂದ್ರ ಸರ್ಕಾರವು ಈ ಕುರಿತ ಮಾಹಿತಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಸರ್ಕಾರದ ವರಮಾನ ಹಾಗೂ ವೆಚ್ಚದ ನಡುವಿನ ಅಂತರವಾಗಿರುವ ವಿತ್ತೀಯ ಕೊರತೆಯು ಜೂನ್ ತ್ರೈಮಾಸಿಕದ ಅಂತ್ಯಕ್ಕೆ ₹4.51 ಲಕ್ಷ ಕೋಟಿ ಆಗಿದೆ. ಹಿಂದಿನ ವರ್ಷದ ಜೂನ್ ತ್ರೈಮಾಸಿಕದ ಕೊನೆಯಲ್ಲಿ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 21.2ರಷ್ಟು ಆಗಿತ್ತು.

2023–24ನೆಯ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಜಿಡಿಪಿಯ ಶೇ 5.9ಕ್ಕೆ ತಗ್ಗಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

ಮ್ಯಾನ್ಮಾರ್: ತುರ್ತು ಪರಿಸ್ಥಿತಿ ವಿಸ್ತರಣೆ

ಬ್ಯಾಂಕಾಕ್ (ಎ.ಪಿ): ಮ್ಯಾನ್ಮಾರ್‌ನ ಸೇನಾ ನಿಯಂತ್ರಣದ ಸರ್ಕಾರವು ದೇಶದಲ್ಲಿ ತುರ್ತು ಪರಿಸ್ಥಿತಿ ಅವಧಿಯನ್ನು ವಿಸ್ತರಿಸಿದೆ. ಈ ಮೂಲಕ ಚುನಾವಣೆಯನ್ನು ನಡೆಸಿ ಪ್ರಜಾಪ್ರಭುತ್ವ ಸರ್ಕಾರವನ್ನು ಮರುಸ್ಥಾಪಿಸುವ ಕಾರ್ಯ ವಿಳಂಬವಾಗಲಿದೆ ಎಂಬ ಸೂಚನೆಯನ್ನು ನೀಡಿದೆ.

ಎರಡೂವರೆ ವರ್ಷದ ಹಿಂದೆ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ ಸೇನೆಯು ಅಧಿಕಾರವನ್ನು ಕೈವಶ ಮಾಡಿಕೊಂಡಿತ್ತು. ಸ್ಥಳೀಯ ಸುದ್ದಿವಾಹಿನಿಯ ಪ್ರಕಾರ, ರಾಷ್ಟ್ರೀಯ ರಕ್ಷಣಾ ಮತ್ತು ಭದ್ರತಾ ಮಂಡಳಿಯ (ಎನ್‌ಡಿಎಸ್‌ಸಿ) ಸಭೆಯು ಸೋಮವಾರ ನಡೆದಿದ್ದು, ಆರು ತಿಂಗಳಿಗೆ ಅವಧಿ ವಿಸ್ತರಿಸಲು ತೀರ್ಮಾನಿಸಿದೆ.

ಚುನಾವಣೆಗೆ ಸಜ್ಜುಗೊಳ್ಳಲು ಸಮಯಾವಕಾಶ ಬೇಕಾಗಿರುವ ಕಾರಣ ಅವಧಿ ವಿಸ್ತರಿಸಲಾಗುತ್ತಿದೆ ಎಂದು ಕಾರಣವನ್ನು ನೀಡಿದೆ. ಎನ್‌ಡಿಎಸ್‌ಸಿಯು ಸಾಂವಿಧಾನಿಕವಾದ ಸರ್ಕಾರದ ಅಂಗಸಂಸ್ಥೆಯಾಗಿದ್ದರೂ, ಸೇನಾಡಳಿತವೇ ಇದನ್ನು ನಿಯಂತ್ರಿಸುತ್ತಿದೆ. 2021ರ ಫೆಬ್ರುವರಿ 1ರಂದು ಸೇನಾ ದಂಗೆಯ ಬಳಿಕ ನಾಯಕಿ ಆಂಗ್ ಸಾನ್ ಸೂಕಿ ನೇತೃತ್ವದ ಸರ್ಕಾರವನ್ನು ಪದಚ್ಯುತಗೊಳಿಸಿದ್ದ ಸೇನೆಯು ಸೂಕಿ ಅವರನ್ನು ಸೇರಿದಂತೆ ಸರ್ಕಾರದ ಹಲವರನ್ನು ವಶಕ್ಕೆ ಪಡೆದಿತ್ತು. ಆ ನಂತರ ಭದ್ರತಾ ಪಡೆಗಳ ವಿರುದ್ಧ ಸಾಕಷ್ಟು ಪ್ರತಿಭಟನೆ ನಡೆದಿದೆ. ರಾಜಕೀಯ ಕೈದಿಗಳ ಸ್ವತಂತ್ರ ಸೇವಾ ಸಂಸ್ಥೆಯ ಮಾಹಿತಿ ಅನುಸಾರ, ಸೇನಾ ಪಡೆಗಳಿಂದ ಸೋಮವಾರದವರೆಗೆ (ಜು.31) ಒಟ್ಟು 3,857 ಜನರು ಹತರಾಗಿದ್ದಾರೆ.

ಪಾಕ್‌ನಲ್ಲಿ ಸ್ಫೋಟ: 'ಐಎಸ್' ಪಾತ್ರದ ಶಂಕೆ

ಪೆಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಭಾನುವಾರ ನಡೆದಿದ್ದ ಆತ್ಮಾಹುತಿ ಬಾಂಬ್ ದಾಳಿ ಕೃತ್ಯದಲ್ಲಿ ಮೃತಪಟ್ಟವರ ಸಂಖ್ಯೆ 54ಕ್ಕೆ ಏರಿದೆ. 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟದ ಹಿಂದೆ ನಿಷೇಧಿತ ಐಎಸ್ ಉಗ್ರ ಸಂಘಟನೆಯ ಪಾತ್ರವಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಈ ಹಿಂದೆ ಐಎಸ್ ಸಂಘಟನೆಯವರು ಜೆಯುಐ–ಎಫ್ ಪಕ್ಷದ ನಾಯಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದರು ಎಂದು ತಿಳಿಸಿದ್ದಾರೆ. ಮೂವರು ಶಂಕಿತರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ಅಧಿಕಾರಿ ನಾಜಿರ್ ಖಾನ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

4 ವರ್ಷದ ಬಳಿಕ ಸುನಕ್ ಕೌಟುಂಬಿಕ ಪ್ರವಾಸ

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ನಾಲ್ಕು ವರ್ಷಗಳ ಬಳಿಕ ಪತ್ನಿ ಅಕ್ಷತಾ, ಇಬ್ಬರು ಹೆಣ್ಣು ಮಕ್ಕಳ ಜೊತೆಗೂಡಿ ಪ್ರವಾಸ ತೆರಳಿದ್ದಾರೆ ಎಂದು ಡೌನಿಂಗ್ ಸ್ಟ್ರೀಟ್ ಸೋಮವಾರ ಪ್ರಕಟಿಸಿದೆ.

ಭದ್ರತಾ ಕಾರಣಗಳಿಗಾಗಿ ಯಾವ ಸ್ಥಳಕ್ಕೆ ಪ್ರವಾಸ ತೆರಳಿದ್ದಾರೆ ಎಂದು ಗೋಪ್ಯವಾಗಿ ಇರಿಸಲಾಗಿದೆ. ಒಂದು ವಾರ ಕಾಲ ಆಡಳಿತದ ನಿತ್ಯದ ಉಸ್ತುವಾರಿಯನ್ನು ಉಪ ಪ್ರಧಾನಿ ಒಲಿವರ್ ಡೌಡೆನ್ ನಿರ್ವಹಿಸುವರು ಎಂದು ಹೇಳಿಕೆ ತಿಳಿಸಿದೆ.

ವೃದ್ಧೆ ಮೇಲೆ ಅತ್ಯಾಚಾರ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ರಹೀಂ ಯಾರ್ ಖಾನ್ ಜಿಲ್ಲೆಯಲ್ಲಿ 80 ವರ್ಷದ ವೃದ್ಧೆ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮನೆಯವರು ಮೊಹರಂ ಮೆರವಣಿಗೆಗೆ ತೆರಳಿದ್ದಾಗ ಈ ಕೃತ್ಯ ನಡೆದಿದೆ. 'ಮನೆಗೆ ಹಿಂದಿರುಗಿದಾಗ ನನ್ನನ್ನು ನೋಡಿದ ದುಷ್ಕರ್ಮಿ ಪರಾರಿಯಾದ' ಎಂದು ವೃದ್ಧೆಯ ಪುತ್ರ ದೂರು ನೀಡಿದ್ದಾರೆ. ಈ ಪ್ರಕರಣದಲ್ಲಿ ದುಷ್ಕರ್ಮಿ ಪತ್ತೆಗೆ ಕ್ರಮವಹಿಸಬೇಕು ಎಂದು ಪಂಜಾಬ್‌ನ ಉಸ್ತುವಾರಿ ಮುಖ್ಯಮಂತ್ರಿ ಮೊಹಿಸಿನ್ ನಖ್ವಿ ಪೊಲೀಸರಿಗೆ ಸೂಚಿಸಿದ್ದಾರೆ.

ಶ್ರೀಲಂಕಾ: ಅಧಿಕಾರ ವಿಕೇಂದ್ರೀಕರಣಕ್ಕೆ ಟಿಎನ್‌ಎ ಆಗ್ರಹ

ಕೊಲಂಬೊ (ಪಿಟಿಐ): ದ್ವೀಪರಾಷ್ಟ್ರ ಶ್ರೀಲಂಕಾದಲ್ಲಿ ಸರ್ಕಾರವು ಸಂವಿಧಾನದ 13ಎ ತಿದ್ದುಪಡಿ ಅನುಸಾರ ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಯು ಅರ್ಥಪೂರ್ಣವಾಗಿ ನಡೆಯಲಿದೆ ಎಂದು ಶ್ರೀಲಂಕಾದ ಪ್ರಮುಖ ತಮಿಳಿಗರ ಪಕ್ಷ ಟಿಎನ್‌ಎ ವಿಶ್ವಾಸ ವ್ಯಕ್ತಪಡಿಸಿದೆ.

ಶ್ರೀಲಂಕಾದಲ್ಲಿ ಅಲ್ಪಸಂಖ್ಯಾತ ಸಮುದಾಯವಾಗಿರುವ ತಮಿಳರು, ಅಧಿಕಾರ ವಿಕೇಂದ್ರಿಕರಣಕ್ಕೆ ಅವಕಾಶ ಕಲ್ಪಿಸುವ 13ನೇ ತಿದ್ದುಪಡಿಯ ಆಶಯಗಳನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಭಾರತ –ಶ್ರೀಲಂಕಾ ನಡುವಣ 1987ರ ಒಪ್ಪಂದದ ಭಾಗವಾಗಿ ಸಂವಿಧಾನಕ್ಕೆ 13ನೇ ತಿದ್ದುಪಡಿ ತರಲಾಗಿದೆ. '1956ರಿಂದ ಪ್ರತಿ ಚುನಾವಣೆ ಸಂದರ್ಭದಲ್ಲಿಯೂ ತಮಿಳರು ವ್ಯಕ್ತಪಡಿಸುವ ಆಶಯಗಳಿಗೆ ಸರ್ಕಾರ ಸ್ಪಂದಿಸಲಿದೆ ಎಂದು ಆಶಿಸುತ್ತೇವೆ' ಎಂದು ತಮಿಳ್ ನ್ಯಾಷನಲ್ ಅಲೈಯನ್ಸ್ (ಟಿಎನ್‌ಎ) ಪಕ್ಷದ ಹೇಳಿಕೆ ತಿಳಿಸಿದೆ.

ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಕಳೆದ ವಾರ ಸರ್ವಪಕ್ಷಗಳ ಸಭೆ ಕರೆದಿದ್ದರು. ಅದರ, ಹಿಂದೆಯೇ ಈ ಹೇಳಿಕೆ ಹೊರಬಿದ್ದಿದೆ. ಆದರೆ, ಪ್ರಸ್ತುತ ತಡೆಹಿಡಿದಿರುವ ಪ್ರಾಂತ್ಯವಾರು ಚುನಾವಣೆಗಳನ್ನು ನಡೆಸಬೇಕು ಎಂದು ವಿರೋಧಪಕ್ಷಗಳು ಪಟ್ಟುಹಿಡಿದಿವೆ.

ನೌಕಾಪಡೆ ಮುಖ್ಯಸ್ಥರಿಂದ ಒಮಾನ್ ಪ್ರವಾಸ

ನವದೆಹಲಿ (ಪಿಟಿಐ): ದ್ವಿಪಕ್ಷೀಯ ಸೇನಾ ಸಹಕಾರ ವೃದ್ಧಿಸುವ ನಿಟ್ಟಿನಲ್ಲಿ ಭಾರತೀಯ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಅವರು ಒಮಾನ್‌ಗೆ ತೆರಳಿದ್ದಾರೆ.

3 ದಿನಗಳ ಪ್ರವಾಸ ಇದಾಗಿದ್ದು, ಭಾನುವಾರ ಅವರು ಮಸ್ಕತ್‌ನ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಒಮಾನ್ ರಾಯಲ್ ನೇವಿಯ ರೇರ್ ಅಡ್ಮಿರಲ್ ಸೈಫ್ ಬಿನ್ ನಾಸಿರ್ ಬಿನ್ ಮೊಹ್ಸಿನ್ ಅಲ್– ರಾಹ್ಬಿ ಅವರು ಹರಿಕುಮಾರ್ ಅವರನ್ನು ಬರಮಾಡಿಕೊಂಡರು.

'ಹರಿಕುಮಾರ್ ಅವರು ಒಮಾನ್‌ನ ಸೇನಾ ಅಧಿಕಾರಿಗಳನ್ನು ಭೇಟಿಯಾಗಲಿದ್ದಾರೆ. ಜೊತೆಗೆ, ಅಲ್ಲಿಯ ಸೇನಾ ತರಬೇತಿ ಸಂಸ್ಥೆಗಳಲ್ಲಿ ನಡೆಯಲಿರುವ ಚರ್ಚೆಗಳಲ್ಲಿ ಭಾಗಿಯಾಗಲಿದ್ದಾರೆ' ಎಂದು ಭಾರತೀಯ ನೌಕಾಪಡೆ ಟ್ವೀಟ್ ಮಾಡಿದೆ.

ಹರಿಕುಮಾರ್ ಅವರು ಒಮಾನ್‌ಗೆ ತೆರಳಿರುವ ವೇಳೆಯೇ, ದೇಶಿ ನಿರ್ಮಾಣದ 'ಐಎನ್‌ಎಸ್ ವಿಶಾಖಪಟ್ಟಣ' ಯುದ್ಧ ನೌಕೆಯು ಒಮಾನ್‌ನ ಪೋರ್ಟ್ ಸುಲ್ತಾನ್ ಖಬೂಸ್‌ಗೆ ಭಾನುವಾರ ತಲುಪಿತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ನಾವು ಆಟೋ ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಫುಲ್ ಟೈಮ್ ಮತ್ತು ಪಾರ್ಟ್ ಟೈಮ್ ಗಳ ಸಂಬಳ ರೂ. 25000/-. ರೆಫರಲ್ ಬೋನಸ್ ರೂ. 10000/-. ಸೇರುವ ಬೋನಸ್ ರೂ.6000/-. ಆಸಕ್ತಿಯುಳ್ಳವರು ನಮ್ಮನ್ನು ಸಂಪರ್ಕಿಸಿ: 080-68960971

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಮನೆಕೆಲಸ(13,000–15,000)/ ಹೋಂನರ್ಸ್ (15,000–20,000), ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ–ವಸತಿ ಉಚಿತ. ಉಡುಪಿ: 9845276452

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

(1) ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಹೆಗ್ಗಡದೇವನಪುರ ಗ್ರಾಮದ ಸರ್ವೆ ನಂಬರ್ 71ರಲ್ಲಿ 2–03 ಗುಂಟೆ ಜಮೀನನ್ನು ಎಸ್.ಸೀತಾರಾಮಯ್ಯ ಮತ್ತು ಅವರ ಕುಟುಂಬದವರಿಂದ ನಾನು 29.05.1997ರಂದು ಶುದ್ಧಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರವು ಬೆಂಗಳೂರು ಉತ್ತರ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 2111/97–98ನೇ ನಂಬರಾಗಿ ನೋಂದಣಿಯಾಗಿರುತ್ತದೆ.

(2) ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಹೆಗ್ಗಡದೇವನಪುರ ಗ್ರಾಮದ ಹಳೇ ಸರ್ವೆ ನಂ. 72, ಹೊಸ ಸರ್ವೆ ನಂ. 75/2ರಲ್ಲಿ 0–37 ಗುಂಟೆ ಜಮೀನನ್ನು ಪಾಪಣ್ಣ ಮತ್ತು ಅವರ ಕುಟುಂಬದವರಿಂದ ನಾನು 22.10.1997ರಂದು ಶುದ್ಧಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರವು ಬೆಂಗಳೂರು ಉತ್ತರ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 8484/1997–98ನೇ ನಂಬರಾಗಿ ನೋಂದಣಿಯಾಗಿರುತ್ತದೆ.

(3) ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಹೆಗ್ಗಡದೇವನಪುರ ಗ್ರಾಮದ ಸರ್ವೆ ನಂಬರ್ 72/2ರಲ್ಲಿ 1–05 ಗುಂಟೆ ಮತ್ತು ಸರ್ವೆ ನಂ. 64ರಲ್ಲಿ 1–03 ಗುಂಟೆ ಜಮೀನುಗಳನ್ನು ವಿ.ವೆಂಕಟೇಶ್ ಮತ್ತು ಅವರ ಕುಟುಂಬದವರಿಂದ ನಾನು 10.08.1998ರಂದು ಶುದ್ಧಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರವು ಬೆಂಗಳೂರು ಉತ್ತರ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 4363/98–99ನೇ ನಂಬರಾಗಿ ನೋಂದಣಿಯಾಗಿರುತ್ತದೆ.

(4) ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಹೆಗ್ಗಡದೇವನಪುರ ಗ್ರಾಮದ ಸರ್ವೆ ನಂಬರ್ 72/3ರಲ್ಲಿ 0–13 ಗುಂಟೆ ಜಮೀನನ್ನು ದೇವಕಮ್ಮ ಮತ್ತು ಅವರ ಕುಟುಂಬದವರಿಂದ ನಾನು 10.08.1998ರಂದು ಶುದ್ಧಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರವು ಬೆಂಗಳೂರು ಉತ್ತರ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 4362/98–99ನೇ ನಂಬರಾಗಿ ನೋಂದಣಿಯಾಗಿರುತ್ತದೆ.

(5) ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಹೆಗ್ಗಡದೇವನಪುರ ಗ್ರಾಮದ ಸರ್ವೆ ನಂಬರ್ 75/2ರಲ್ಲಿ 1–00 ಎಕರೆ ಜಮೀನನ್ನು ನಳಿನಿ ಆರ್.ಶೆಟ್ಟಿ ಮತ್ತು ಅವರ ಕುಟುಂಬದವರಿಂದ ನಾನು 30.05.1997ರಂದು ಶುದ್ಧಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರವು ಬೆಂಗಳೂರು ಉತ್ತರ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 2154/97–98ನೇ ನಂಬರಾಗಿ ನೋಂದಣಿಯಾಗಿರುತ್ತದೆ.

(6) ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಹೆಗ್ಗಡದೇವನಪುರ ಗ್ರಾಮದ ಸರ್ವೆ ನಂಬರ್ 70ರಲ್ಲಿ 1–23 ಗುಂಟೆ ಪೈಕಿ 0–23 ಗುಂಟೆ ಜಮೀನನ್ನು ಚಿಕ್ಕವೀರಪ್ಪ ಮತ್ತು ಅವರ ಕುಟುಂಬದವರಿಂದ ನಾನು 14.08.2002ರಂದು ಶುದ್ಧಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಕ್ರಯಪತ್ರವು ಬೆಂಗಳೂರು ಉತ್ತರ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 9441/2002–03ನೇ ನಂಬರಾಗಿ ನೋಂದಣಿಯಾಗಿರುತ್ತದೆ.

ದಿನಾಂಕ: 13.07.2023ರಂದು ತುಮಕೂರಿನ ಎಸ್.ಎಸ್.ಪುರಂನಲ್ಲಿ ನನ್ನ ಕ್ರಯಪತ್ರಗಳ ದಾಖಲೆಗಳನ್ನು ಜೆರಾಕ್ಸ್ ಮಾಡಿಸಿಕೊಂಡು ನಮ್ಮ ಮನೆಗೆ ಬರುತ್ತಿರುವಾಗ ಎಸ್.ಎಸ್.ಪುರಂ ಮುಖ್ಯರಸ್ತೆಯಲ್ಲಿ ಮೇಲ್ಕಂಡ ಕ್ರಯಪತ್ರಗಳು ಕಳೆದುಹೋಗಿರುತ್ತದೆ. ಮೇಲ್ಕಂಡ ಈ ಮೂಲ ಕ್ರಯಪತ್ರಗಳು ಯಾರಿಗಾದರೂ ಸಿಕ್ಕಿದರೆ ದಯವಿಟ್ಟು ಕೆಳಕಂಡ ವಿಳಾಸ ನನಗೆ ತಲುಪಿಸುವುದು.

ಸಹಿ/– ಟಿ.ಎಂ.ಚಂದ್ರಶೇಖರನಾಯ್ಕ ಬಿನ್ ಎಂ.ಎನ್. ನರಸಿಂಹಮೂರ್ತಿನಾಯ್ಕ, ಗಾಯತ್ರಿ ನಿವಾಸ್, ಮುನಿಸಿಪಲ್ ಪಾರ್ಕ್ ಎದುರು, ಮುನಿಸಿಪಲ್ ಲೇಔಟ್, ಸಿದ್ಧಗಂಗಾ ಬಡಾವಣೆ, ತುಮಕೂರು ನಗರ. ಮೊಬೈಲ್: 9606039666

ಪ್ರವಾಸ

Travel Agencies

ವಿಮಾನದಲ್ಲಿ 27/8/23ರಿಂದ ನೇಪಾಳ ಕಾಶಿ ಅಯೋಧ್ಯೆ ಎಲ್ಲಾಸೇರಿ 45000/ ಮತ್ತು 20/10/23ರಿಂದ ಗುಜರಾತ್ ಪ್ರವಾಸ 34000/ ಶ್ರೀರಾಮ್ ಟೂರ್ 9108933383

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.08.2023 ರಿಂದ 13 ದಿನಗಳ ಯುರೋಪ್ ಪ್ರವಾಸ. 24.09.2023 19.10 2023 ರಿಂದ 5 ದಿನಗಳ ದುಬೈ,ಅಬುದಾಬಿ,ಶಾರ್ಜಾ. 29.09.2023 25.10.2023 ರಿಂದ 7/11 ದಿನಗಳ ಸಿಂಗಾಪುರ,ಮಲೇಶಿಯಾ ಥೈಲ್ಯಾಂಡ್. 01.10.2023 16.10.2023 ರಿಂದ 11 ದಿನಗಳ ಮುಕ್ತಿನಾಥ ಕಾಶಿ,ನೇಪಾಳ. 06.10.2023 18.10.2023 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆಗಳು. 01.10.2023 16.10.2023 ರಿಂದ 7/12 ದಿನಗಳ ಶಿಮ್ಲಾ,ಮನಾಲಿ ವೈಷ್ಣೋದೇವಿ,ಕಾಶ್ಮೀರ್. 21.09.2023 01.10 2023 ರಿಂದ 8 /12 ದಿನಗಳ ಕಾಶಿ,ಗಯಾ,ಅಲಹಾಬಾದ್. 25.10.2023 29.10.2023 20.11.2023 ರಿಂದ 7/11/17 ದಿನಗಳ ರಾಜಸ್ಥಾನ್/ಗುಜರಾತ್ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 080-23385837 8088887677

9 ದಿನಗಳ ಕಾಶಿ,ಗಯಾ ಅಲಹಾಬಾದ್. 8 ದಿನಗಳ ನೇಪಾಳ,ಮುಕ್ತಿನಾಥ ವಿಶೇಷ. 8 ದಿನಗಳ ಸಿಂಗಾಪುರ್ ಮಲೇಶಿಯಾ. 5 ದಿನಗಳ ಬಾಲಿ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080796

ವೈಯಕ್ತಿಕ

Change of Name

ನಾನು ಹೇರಾಮ ರೆಡ್ಡಿ s/o ಗೋವಿಂದ ರೆಡ್ಡಿ , ಸಪ್ತಗಿರಿ #12, 10ನೇ ಕ್ರಾಸ್, ಗೋಕುಲ 1ನೇ ಸ್ಟೇಜ್, 1ನೇ ಫೇಸ್, ಮತ್ತಿಕೆರೆ ಲೇಔಟ್, ಯಶವಂತಪುರ, ಬೆಂಗಳೂರು 54, ಇಲ್ಲಿ ವಾಸವಿದ್ದು, ನನ್ನ ಹೆಸರನ್ನು ಹೇರಾಮ ರೆಡ್ಡಿ ಜಿ ಎಂದು ಬದಲಾಯಿಸಿಕೊಂಡಿರುತ್ತೇನೆ

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
*conditions apply
For more information Contact:
9845114560 : 9731810277
9901641752 : 9886213331
080 - 45557163 / 164

ಪ್ರಧಾನ ಮಂತ್ರಿ ನರೇಂದ್ರ ಮೋದಿಯನ್ನು ಕುಟುಕಿದ 'ಇಂಡಿಯಾ' ಸದಸ್ಯರು

'ಮಣಿಪುರ ದ್ರೌಪದಿಯರ ಸಂಕಟ ಆಲಿಸಿ'

ನವದೆಹಲಿ (ಪಿಟಿಐ): 'ಕೌರವರು ದ್ರೌಪದಿಯ ಅವಮಾನಿಸಿದ್ದರಿಂದ 'ಮಹಾಭಾರತ' ನಡೆಯಿತು. ಮಣಿಪುರದಲ್ಲಿ ಇಂತಹ ನೂರಾರು ದ್ರೌಪದಿಯರ ಕಣ್ಣೀರಿನ ಕಥೆಗಳಿವೆ. ಕಾರ್ಗಿಲ್ ಯುದ್ಧದಲ್ಲಿ ಹೋರಾಡಿದ ಯೋಧರೊಬ್ಬರ ಪತ್ನಿಯನ್ನು ಬೆತ್ತಲೆ ಮೆರವಣಿಗೆ ಮಾಡಲಾಗಿದೆ. ಅವರ ಸಂಕಟ ಕೇಳಿಸಿಕೊಳ್ಳಲಿರುವ ನಿಮ್ಮದು ಕಲ್ಲು ಹೃದಯವೇ...'

–ಸಂಸತ್‌ನಲ್ಲಿ ಹೇಳಿಕೆ ನೀಡಲು ಹಿಂಜರಿಕೆ ತೋರಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಇಂಡಿಯಾ' ಸಂಸದರು ತರಾಟೆಗೆ ತೆಗೆದುಕೊಂಡಿದ್ದು ಹೀಗೆ.

'ಮುಂಗಾರು ಅಧಿವೇಶನ ಶುರುವಾಗಿ ಎಂಟು ದಿನಗಳಾಗಿವೆ. ಆದರೆ, ಪ್ರಧಾನಿ ಅವರು ಕಲಾಪದಿಂದ ದೂರ ಉಳಿದಿದ್ದಾರೆ. ಆ ಮೂಲಕ ಸಂಸತ್‌ನ ತೇಜೋವಧೆಗೆ ಇಳಿದಿದ್ದಾರೆ' ಎಂದೂ ಸದನದಲ್ಲಿ ಟೀಕಿಸಿದರು.

'ಸಂವಿಧಾನದ 75ನೇ ವಿಧಿ ಅನ್ವಯ ಸಂಸತ್‌ಗೆ ಉತ್ತರ ನೀಡುವುದು ಪ್ರಧಾನಿಯ ಜವಾಬ್ದಾರಿ. ಹಾಗಾಗಿ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಬೇಕಿದೆ. ಬಳಿಕ ಉಭಯ ಸದನಗಳಲ್ಲಿ ವಿಸ್ತೃತ ಚರ್ಚೆ ನಡೆಯಬೇಕಿದೆ' ಎಂದು ಒತ್ತಾಯ ಮಾಡಿದರು.

ಮಣಿಪುರಕ್ಕೆ ಭೇಟಿ ನೀಡಿದ್ದ 'ಇಂಡಿಯಾ'ದ ನಿಯೋಗವು ನವದೆಹಲಿಯಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿತು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕಿ ಸೋನಿಯಾ ಗಾಂಧಿ, ಡಿಎಂಕೆಯ ಟಿ.ಆರ್ ಬಾಲು ಹಾಗೂ ಟಿಎಂಸಿಯ ಸುದೀಪ್ ಬಂಡೋಪಾಧ್ಯಾಯ ಇದ್ದಾರೆ –ಪಿಟಿಐ ಚಿತ್ರ

'ನಿಯಮ 176ರ ಅಡಿ ಕೇವಲ ಒಂದೂವರೆ ಗಂಟೆ ಅಥವಾ ಎರಡು ಗಂಟೆಯ ಚರ್ಚೆಗೆ ನಾವು ಸಿದ್ಧವಿಲ್ಲ. ನಮಗೆ ಬ್ರೆಡ್ ಟೋಸ್ಟ್ ಬೇಡ; ಭೂರಿ ಭೋಜನ ಬೇಕು. ಹಾಗಾಗಿ, ಕಲಾಪದಲ್ಲಿನ ಎಲ್ಲಾ ವಿಷಯಗಳನ್ನು ಬದಿಗಿಟ್ಟು ನಿಯಮ 267ರ ಅಡಿ ಸುದೀರ್ಘ ಚರ್ಚೆಗೆ ಅವಕಾಶ ನೀಡಬೇಕು' ಎಂದು ಆಗ್ರಹಿಸಿದರು.

'ಕಣಿವೆ ರಾಜ್ಯದಲ್ಲಿ ಎಷ್ಟು ಮಹಿಳೆಯರು ಅತ್ಯಾಚಾರಕ್ಕೆ ತುತ್ತಾಗಿದ್ದಾರೆ ಎಂಬುದು ತಿಳಿದಿಲ್ಲ. ಜನರ ಸಾವಿನ ಬಗ್ಗೆ ಸತ್ಯ ತಿಳಿಯಬೇಕಿದೆ. ಸಂಸತ್‌ಗೆ ಅವಮಾನ ಮಾಡುವುದು ದೇಶದ 130 ಕೋಟಿ ಜನರನ್ನು ಅವಮಾನಿಸಿದಂತೆ. ಆದರೆ, ಮೋದಿ ಅವರು ಏನನ್ನು ಮುಚ್ಚಿಡಲು ಯತ್ನಿಸುತ್ತಿದ್ದಾರೆ ಎಂಬುದೇ ಗೊತ್ತಿಲ್ಲ' ಎಂದು ರಾಜ್ಯಸಭೆಯಲ್ಲಿನ ಕಾಂಗ್ರೆಸ್ ಉಪ ನಾಯಕ ಪ್ರಮೋದ್ ತಿವಾರಿ ದೂರಿದರು.

ಟಿಎಂಸಿ ನಾಯಕ ಡೆರೆಕ್ ಒಬ್ರಯಾನ್, 'ಮೋದಿ ಅವರು ಕನಿಷ್ಠ 20 ಸೆಕೆಂಡ್ ಸಹ ಸಂಸತ್‌ಗೆ ಭೇಟಿ ನೀಡಿಲ್ಲ. ನಾವು ಚರ್ಚೆಗೆ ಸಿದ್ಧರಿದ್ದೇವೆ. ಆದರೆ, ಪ್ರಧಾನಿ ಏಕೆ ಸದನಕ್ಕೆ ಬರುತ್ತಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ' ಎಂದು ಟೀಕಿಸಿದರು.

'ಪ್ರಧಾನಿಗಳಾಗಿದ್ದ ನೆಹರೂ, ಅಟಲ್ ಬಿಹಾರಿ ವಾಜಪೇಯಿ, ಡಾ.ಮನಮೋಹನ ಸಿಂಗ್ ಅವರು ರಾಜ್ಯಸಭೆಯ ಚರ್ಚೆಗಳಲ್ಲಿ ಪಾಲ್ಗೊಂಡಿದ್ದಾರೆ. ಬೋಫೋರ್ಸ್ ಹಗರಣದಲ್ಲಿ ತಮ್ಮ ಮೇಲೆ ಆರೋಪ ಕೇಳಿಬಂದಾಗ ರಾಜೀವ್ ಗಾಂಧಿ ಧೈರ್ಯವಾಗಿ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಆದರೆ, ಮೋದಿ ಅವರು ಧಾರ್ಷ್ಟ್ಯತನ ತೋರುತ್ತಿರುವುದು ಏಕೆ' ಎಂದು ಪ್ರಶ್ನಿಸಿದರು.

ಕೇಂದ್ರದ ವಿರುದ್ಧ ಖಂಡನಾ ನಿರ್ಣಯ

ಕೋಲ್ಕತ್ತ (ಪಿಟಿಐ): ಮಣಿಪುರದಲ್ಲಿ ಹಿಂಸಾಚಾರ ನಿಯಂತ್ರಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ ಎಂದು ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಸೋಮವಾರ ಖಂಡನಾ ನಿರ್ಣಯ ಅಂಗೀಕರಿಸಲಾಗಿದೆ.

ಸಂಸದೀಯ ವ್ಯವಹಾರಗಳ ಸಚಿವ ಸೋವನ್‌ದೇವ್ ಚಟ್ಟೋಪಾಧ್ಯಾಯ, ಈ ನಿರ್ಣಯ ಮಂಡಿಸಿದರು. ಇದಕ್ಕೆ ಆಕ್ಷೇಪಿಸಿದ ಬಿಜೆಪಿ ಶಾಸಕರು ಸಭಾತ್ಯಾಗ ಮಾಡಿದರು.

ನಿರ್ಣಯ ಕುರಿತು ಮಾತನಾಡಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಮಣಿಪುರ ಸಂಘರ್ಷ ಖಂಡನೀಯ. ವಿದೇಶಕ್ಕೆ ಹೋಗಲು ಮೋದಿ ಅವರಿಗೆ ಸಮಯವಿದೆ. ಆದರೆ, ದೇಶದ ಭಾಗವಾಗಿರುವ ಕಣಿವೆ ರಾಜ್ಯಕ್ಕೆ ತೆರಳಲು ಅವರಿಗೆ ಪುರಸೊತ್ತಿಲ್ಲ. ಪ್ರಧಾನಿ ಅವರು ಸಂಸತ್‌ನಲ್ಲಿ ಹೇಳಿಕೆ ನೀಡಬೇಕು. ಶಾಂತಿ ಪುನರ್ ಸ್ಥಾಪಿಸಲು ಅವರಿಗೆ ಸಾಧ್ಯವಾಗದಿದ್ದರೆ ಅದರ ಹೊಣೆಯನ್ನು 'ಇಂಡಿಯಾ'ಗೆ ನೀಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿರುವ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ, 'ಈ ನಿರ್ಣಯವು ಸಂಸದೀಯ ವ್ಯವಸ್ಥೆಗೆ ವಿರುದ್ಧವಾದುದು. ಇದರ ವಿರುದ್ಧ ನ್ಯಾಯಾಲಯದ ಮೊರೆ ಹೋಗಲಾಗುವುದು' ಎಂದು ತಿಳಿಸಿದರು.

ರಕ್ಷಣಾ ಪಡೆಗಳ ತೆರವಿಗೆ ಪಟ್ಟು

ಇಂಫಾಲ್ (ಪಿಟಿಐ): ಮಣಿಪುರ–ಮ್ಯಾನ್ಮರ್ ಗಡಿ ಭಾಗದ ಮೊರೆಹ್ ಪಟ್ಟಣದಲ್ಲಿ ರಕ್ಷಣಾ ಪಡೆಗಳನ್ನು ನಿಯೋಜಿಸಿರುವುದಕ್ಕೆ ಕುಕಿ ಸಮುದಾಯ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಮೊರೆಹ್‌ಗೆ ನಿಯೋಜಿಸಿರುವ ರಕ್ಷಣಾ ಪಡೆಗಳನ್ನು ಕೂಡಲೇ ತೆರವುಗೊಳಿಸುವಂತೆ ಆಗ್ರಹಿಸಿ ಮಣಿಪುರದ ಚುರಚಂದಪುರದಲ್ಲಿ ಸೋಮವಾರ ನೂರಾರು ಮಹಿಳೆಯರು ಪ್ರತಿಭಟನೆ ನಡೆಸಿದರು.

ಎರಡು ದಿನಗಳ ಹಿಂದೆಯೂ ಈ ಪಟ್ಟಣಕ್ಕೆ ತೆರಳುತ್ತಿದ್ದ ಇಂಡಿಯನ್ ರಿಸರ್ವ್ ಬೆಟಾಲಿಯನ್, ಮಣಿಪುರ ರೈಫಲ್ಸ್ ಮತ್ತು ಕಮಾಂಡೊ ಪಡೆಗೆ ಸೇರಿದ 10 ವಾಹನಗಳಿಗೆ ಅಡ್ಡಿಪಡಿಸಿದರು.

ಶೀಘ್ರವೇ, ರಕ್ಷಣಾ ಪಡೆಗಳನ್ನು ವಾಪಸ್ ಕರೆಯಿಸಿಕೊಳ್ಳಬೇಕು. ಇಲ್ಲವಾದರೆ ಕಣಿವೆ ಜಿಲ್ಲೆಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ವಿದ್ಯಾರ್ಥಿನಿಗೆ ಕಿರುಕುಳ ಆರೋಪ– ಘರ್ಷಣೆ

ಜೈಪುರ (ಪಿಟಿಐ): ರಾಜಸ್ಥಾನದ ಬಿಲ್ವಾರ್‌ನ ಮಂಡಲ್ ಪ್ರದೇಶದ ಸರ್ಕಾರಿ ಶಾಲೆಯೊಂದರ 13 ವರ್ಷದ ವಿದ್ಯಾರ್ಥಿನಿಯೊಬ್ಬಳು ತನಗೆ ನಾಲ್ವರು ವಿದ್ಯಾರ್ಥಿಗಳು ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿರುವ ವಿಚಾರವಾಗಿ ಎರಡು ಸಮುದಾಯಗಳ ನಡುವೆ ಸೋಮವಾರ ಘರ್ಷಣೆ ನಡೆದಿದೆ.

'ತನ್ನ ನೀರಿನ ಬಾಟಲಿಯಿಂದ ಮೂತ್ರದಂತಹ ವಾಸನೆ ಬರುತ್ತಿದೆ ಮತ್ತು 'ಐ ಲವ್ ಯೂ' ಎಂದು ಬರೆದಿರುವ ಪತ್ರ ಬ್ಯಾಗ್‌ನಲ್ಲಿ ಲಭಿಸಿದೆ' ಎಂದು ಎಂಟನೇ ತರಗತಿ ವಿದ್ಯಾರ್ಥಿನಿ ಪೊಲೀಸರಿಗೆ ದೂರು ನೀಡಿದ್ದಾಳೆ.

'ಈ ಪ್ರಕರಣಕ್ಕೆ ಸಂಬಂಧಿಸಿ ನಾವು ಶಾಲೆಗೆ ತೆರಳಿ ಪರಿಶೀಲನೆ ನಡೆಸಿದ್ದೇವೆ. ಈ ವೇಳೆ ಗ್ರಾಮದ ಕೆಲವರು ಅಲ್ಲಿಗೆ ಬಂದು ಗಲಾಟೆ ಮಾಡಿದ್ದಾರೆ. ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿರುವ ವಿದ್ಯಾರ್ಥಿಗಳ ಸಮುದಾಯಕ್ಕೆ ಸೇರಿದವರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು ಮತ್ತು ಕಲ್ಲು ತೂರಾಟ ನಡೆಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಶಾಲೆಯ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಿದ್ದು, ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ. ಘರ್ಷಣೆ ಸಂಬಂಧ ಒಂಬತ್ತು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ ಎಂದಿದ್ದಾರೆ.

ಘಟನೆಯನ್ನು ಖಂಡಿಸಿರುವ ವಿರೋಧ ಪಕ್ಷದ ನಾಯಕ ರಾಜೇಂದ್ರ ರಾಥೋಡ್, 'ಈ ಘಟನೆಯು ಕಾಂಗ್ರೆಸ್ ಸರ್ಕಾರದ ಓಲೈಕೆಯ ರಾಜಕಾರಣವನ್ನು ಬಹಿರಂಗಪಡಿಸಿದೆ' ಎಂದು ಹೇಳಿದ್ದಾರೆ.

ಕಳ್ಳಬೇಟೆ: 126 ಹುಲಿ ಸಾವು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ ಕಳ್ಳಬೇಟೆಯಿಂದ 126 ಹುಲಿಗಳು ಸತ್ತಿವೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆಯ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಅವರು ಅಸಾದುದ್ದೀನ್ ಒವೈಸಿ ಸೋಮವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿ, 'ಐದು ವರ್ಷಗಳಲ್ಲಿ ನೈಸರ್ಗಿಕ ಹಾಗೂ ಇತರ ಕಾರಣಗಳಿಂದ 516 ಹುಲಿಗಳು ಮೃತಪಟ್ಟಿವೆ. ಕಳ್ಳಬೇಟೆಯಿಂದ 126 ಹುಲಿಗಳು ಸತ್ತಿರುವುದು ಖಚಿತವಾಗಿದೆ. ಜತೆಗೆ, ಅಸಹಜವಾಗಿ 19 ಹುಲಿಗಳು ಮೃತಪಟ್ಟಿವೆ' ಎಂದು ಮಾಹಿತಿ ನೀಡಿದ್ದಾರೆ.

ಹುಲಿಗಳ ಸಾವು

ವರ್ಷ	ಸಹಜ	ಕಳ್ಳಬೇಟೆ	ಅಸಹಜ
2018	53	44	4
2019	66	27	3
2020	90	15	1
2021	101	18	8
2022	108	10	3
2023 (ಜುಲೈ 22ರ ವರೆಗೆ)	98	12	0

ರಾಜ್ಯದಲ್ಲಿ 8 ಇಎಸ್‌ಐ ಆಸ್ಪತ್ರೆಗೆ ಒಪ್ಪಿಗೆ

ಕರ್ನಾಟಕದ ಎಂಟು ಕಡೆಗಳಲ್ಲಿ ಇಎಸ್‌ಐ ಆಸ್ಪತ್ರೆಗಳನ್ನು ಆರಂಭಿಸಲು ಉದ್ಯೋಗಿಗಳ ರಾಜ್ಯ ವಿಮಾ ನಿಗಮ ತಾತ್ವಿಕ ಅನುಮೋದನೆ ನೀಡಿದೆ ಎಂದು ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಖಾತೆಯ ರಾಜ್ಯ ಸಚಿವ ರಾಮೇಶ್ವರ ತೇಲಿ ತಿಳಿಸಿದರು.

ಲೋಕಸಭೆಯಲ್ಲಿ ಸಂಸದರಾದ ಡಿ.ಕೆ. ಸುರೇಶ್ ಹಾಗೂ ನಳಿನ್ ಕುಮಾರ್ ಕಟೀಲು ಸೋಮವಾರ ಕೇಳಿರುವ ಪ್ರಶ್ನೆಗೆ ಅವರು ಈ ಉತ್ತರ ನೀಡಿದರು.

ಬೆಂಗಳೂರಿನ ಬೊಮ್ಮಸಂದ್ರದಲ್ಲಿ 200 ಬೆಡ್, ದೊಡ್ಡಬಳ್ಳಾಪುರ, ಶಿವಮೊಗ್ಗ, ನರಸಾಪುರ, ಹಾರೋಹಳ್ಳಿ, ಬಳ್ಳಾರಿ, ತುಮಕೂರು ಹಾಗೂ ಉಡುಪಿಯಲ್ಲಿ ತಲಾ 100 ಬೆಡ್ ಸಾಮರ್ಥ್ಯದ ಆಸ್ಪತ್ರೆಗಳ ನಿರ್ಮಾಣಕ್ಕೆ ಒಪ್ಪಿಗೆ ಸಿಕ್ಕಿದೆ ಎಂದು ತಿಳಿಸಿದರು.

ಶೇ 44 ಎಸ್‌ಟಿ ಕುಟುಂಬಕ್ಕೆ ನಲ್ಲಿ ನೀರಿನ ಸಂಪರ್ಕವೇ ಇಲ್ಲ!

ನವದೆಹಲಿ (ಪಿಟಿಐ): ದೇಶದ ಗ್ರಾಮೀಣ ಭಾಗಗಳಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಶೇಕಡ 44ರಷ್ಟು ಕುಟುಂಬಗಳಿಗೆ ಇನ್ನೂ ನಲ್ಲಿ ನೀರಿನ ಸಂಪರ್ಕವೇ ದೊರೆತಿಲ್ಲ ಎಂದು ಕೇಂದ್ರ ಸರ್ಕಾರದ ಅಂಕಿ–ಅಂಶಗಳು ತಿಳಿಸಿವೆ.

ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಕೇಂದ್ರ ಜಲಶಕ್ತಿ ಖಾತೆಯ ರಾಜ್ಯ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್ ಅವರು, ದೇಶದ ಗ್ರಾಮೀಣ ಪ್ರದೇಶದಲ್ಲಿರುವ ಒಟ್ಟು 2.17 ಕೋಟಿ ಪರಿಶಿಷ್ಟ ಪಂಗಡಗಳ ಕುಟುಂಬಗಳ ಪೈಕಿ 1.2 ಕೋಟಿ ಕುಟುಂಬಗಳು ಮಾತ್ರ ನಲ್ಲಿ ನೀರಿನ ಸಂಪರ್ಕ ಹೊಂದಿವೆ ಎಂದು ಮಾಹಿತಿ ನೀಡಿದ್ದಾರೆ.

ಅಂಕಿ–ಅಂಶಗಳ ಪ್ರಕಾರ, ಜಾರ್ಖಂಡ್, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಪಶ್ಚಿಮ ಬಂಗಾಳದಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಅರ್ಧಕ್ಕಿಂತ ಹೆಚ್ಚಿನ ಕುಟುಂಬಗಳಿಗೆ ಇನ್ನೂ ನಲ್ಲಿನ ನೀರಿನ ಸಂಪರ್ಕವೇ ದೊರೆತಿಲ್ಲ ಎಂದಿದ್ದಾರೆ.

ಬುಡಕಟ್ಟು ಕುಟುಂಬಗಳನ್ನು ಒಳಗೊಂಡಂತೆ ದೇಶದ ಗ್ರಾಮೀಣ ಭಾಗಗಳಲ್ಲಿರುವ ಎಲ್ಲ ಕುಟುಂಬಗಳಿಗೆ 2024ರ ವೇಳೆಗೆ ಕುಡಿಯುವ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲು ಕೇಂದ್ರ ಸರ್ಕಾರವು ರಾಜ್ಯಗಳ ಸಹಭಾಗಿತ್ವದಲ್ಲಿ ಜಲಜೀವನ್ ಮಿಷನ್ (ಜೆಜೆಎಂ) ಅಡಿ ಪ್ರತಿಮನೆಗೂ ನಲ್ಲಿ ನೀರು (ಹರ್ ಘರ್ ಜಲ್) ಯೋಜನೆಯನ್ನು ಜಾರಿಗೊಳಿಸಿದೆ.

ಕೇಂದ್ರ ಜಲ ಆಯೋಗವು ದೇಶದ 146 ಪ್ರಮುಖ ಜಲಾಶಯಗಳ ಸಂಗ್ರಹ ಸ್ಥಿತಿಯನ್ನು ವಾರಕ್ಕೊಮ್ಮೆ ಪರಿಶೀಲನೆ ಮಾಡುತ್ತದೆ ಹಾಗೂ ಪ್ರತಿ ಗುರುವಾರ ವಾರದ ಬುಲೆಟಿನ್ ಅನ್ನು ಪ್ರಕಟಿಸುತ್ತದೆ ಎಂದು ಕೇಂದ್ರ ಜಲಶಕ್ತಿ ಖಾತೆಯ ಮತ್ತೊಬ್ಬ ರಾಜ್ಯ ಸಚಿವ ವಿಶ್ವೇಶ್ವರ ತುಡು ಅವರು ವಿವರಿಸಿದ್ದಾರೆ.

ಸಾಹಸ ಯಾತ್ರೆ

'ಆಪರೇಷನ್ ವಿಜಯ್' ಯಶಸ್ವಿ ಕಾರ್ಯಾಚರಣೆ ಸ್ಮರಣಾರ್ಥ ಕಾರ್ಗಿಲ್‌ನ ಡ್ರಾಸ್‌ನಲ್ಲಿರುವ 'ಪಾಯಿಂಟ್ 5140'ಅನ್ನು 'ಗನ್ ಹಿಲ್' ಎಂದು ಮರುನಾಮಕರಣ ಮಾಡಿದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಭಾರತೀಯ ಯೋಧರು ಸೋಮವಾರ ಸಾಹಸ ಯಾತ್ರೆ ಕೈಗೊಂಡರು –ಪಿಟಿಐ ಚಿತ್ರ

ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ತಡೆ

ಮಧ್ಯಪ್ರವೇಶಕ್ಕೆ 'ಸುಪ್ರೀಂ' ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ತನಿಖೆಗೆ ಮಧ್ಯಂತರ ತಡೆಯಾಜ್ಞೆ ನೀಡಿದ ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಸಿ.ಟಿ.ರವಿಕುಮಾರ್ ಹಾಗೂ ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠವು, ಹೈಕೋರ್ಟ್ ಫೆಬ್ರುವರಿ 10ರಂದು ಪ್ರಕರಣಕ್ಕೆ

ಸಂಬಂಧಿಸಿ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿತು.

ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, 'ಸಿಬಿಐ ಪರವಾಗಿ ಆದೇಶವಿದ್ದರೂ ಹೈಕೋರ್ಟ್ ವಿಭಾಗೀಯ ಪೀಠವು ವಿಚಾರಣೆಗೆ ಮಧ್ಯಂತರ ತಡೆ ನೀಡಿದೆ' ಎಂದು ಗಮನ ಸೆಳೆದರು. ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ಹೈಕೋರ್ಟ್‌ನ ಮಧ್ಯಂತರ ಆದೇಶದ ವಿರುದ್ಧ ಸಿಬಿಐ ಮೇಲ್ಮನವಿ ಸಲ್ಲಿಸಿದೆ. ಆದರೆ, ಹೈಕೋರ್ಟ್‌ನ ವಿಭಾಗೀಯ ಪೀಠವು ನಂತರ ನೀಡಿರುವ ಮಧ್ಯಂತರ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಲು ನಿರಾಕರಿಸಿದೆ' ಎಂದರು.

ಆಗ ಪೀಠವು ತಾನು ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ಹೋಗುವುದಿಲ್ಲ ಎಂದು ಹೇಳಿತು. ಈ ಪ್ರಕರಣವನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಹೈಕೋರ್ಟ್‌ಗೆ ಮನವಿ ಸಲ್ಲಿಸಲು ಸಿಬಿಐಗೆ ಸೂಚಿಸಿತು.

ಶಿವಕುಮಾರ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ವಿವಿಧ ಕಲಂಗಳ ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿತ್ತು. ಇದನ್ನು ಪ್ರಶ್ನಿಸಿದ್ದ ಶಿವಕುಮಾರ್, 'ಸಿಬಿಐ ದಾಖಲಿಸಿರುವ ಎಫ್‌ಐಆರ್ ಕಾನೂನುಬಾಹಿರವಾಗಿದ್ದು, ತನಿಖೆ ರದ್ದುಪಡಿಸಬೇಕು' ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿಯ ಭಾಗಶಃ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸಿಬಿಐ ತನಿಖೆಗೆ 2023ರ ಫೆಬ್ರುವರಿ 10ರಂದು ತಡೆ ನೀಡಿತ್ತು. ಬಳಿಕ ವಿಭಾಗೀಯ ಪೀಠವು ವಿಚಾರಣೆಗೆ ತಡೆಯಾಜ್ಞೆ ನೀಡಿತ್ತು.

'ಐತಿಹಾಸಿಕ ತಪ್ಪು ಸರಿಪಡಿಸಿ'

ಜ್ಞಾನವಾಪಿ: ಮುಸ್ಲಿಮರಿಗೆ ಸಿ.ಎಂ ಯೋಗಿ ಸಲಹೆ

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿಗೆ ಸಂಬಂಧಿಸಿದಂತೆ ಆಗಿರುವ ಐತಿಹಾಸಿಕ ತಪ್ಪುಗಳನ್ನು ಸರಿಪಡಿಸುವಂತೆ ಮುಸ್ಲಿಂ ಸಮುದಾಯಕ್ಕೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸಲಹೆ ನೀಡಿದ್ದಾರೆ.

ಖಾಸಗಿ ಟಿ.ವಿ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಯೋಗಿ, ಮುಸ್ಲಿಂ ಧರ್ಮಗುರುಗಳು ಮತ್ತು ಮುಖಂಡರು ವಿರೋಧಿಸುತ್ತಿರುವ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಪ್ರಸ್ತಾವ ಉಲ್ಲೇಖಿಸಿದ ಅವರು, ದೇಶವು ಸಂವಿಧಾನದ ಮೂಲಕ ಆಡಳಿತ

ನಡೆಸುತ್ತದೆ, ಯಾವುದೇ ಧರ್ಮದಿಂದ ಅಲ್ಲ ಎಂದಿದ್ದಾರೆ.

'ನಾನು ಜ್ಞಾನವಾಪಿಯನ್ನು ಮಸೀದಿ ಎಂದು ಕರೆದರೆ ವಿವಾದ ಉಂಟಾಗುತ್ತದೆ. ಮಸೀದಿಯೊಳಗೆ ತ್ರಿಶೂಲ ಏನು ಮಾಡುತ್ತಿದೆ?. ನಾವು ಅದನ್ನು ಅಲ್ಲಿ ಇಟ್ಟಿಲ್ಲ, ಅಲ್ಲಿ ಜ್ಯೋತಿರ್ಲಿಂಗವಿದೆ, ಅನೇಕ ವಿಗ್ರಹಗಳಿವೆ' ಎಂದು ಸಿ.ಎಂ ಹೇಳಿದರು.

ಜ್ಞಾನವಾಪಿ ಮಸೀದಿ ಮೇಲಿನ ತಮ್ಮ ಹಕ್ಕನ್ನು ಮುಸ್ಲಿಮರು ಕೈಬಿಡಬೇಕು ಎಂದು ಸಲಹೆ ನೀಡಿದ ಯೋಗಿ, ಐತಿಹಾಸಿಕ ತಪ್ಪು ನಡೆದಿದೆ ಮತ್ತು ಅದನ್ನು ಸರಿಪಡಿಸುವಂತೆ ಮುಸ್ಲಿಂ ಸಮುದಾಯ ಪ್ರಸ್ತಾವ ಸಲ್ಲಿಸಬೇಕು ಎಂದು ಹೇಳಿದರು.

ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಅವರು, ನಾನು ದೇವರ ಶಿಷ್ಯ. ಬೂಟಾಟಿಕೆ ನಂಬುವುದಿಲ್ಲ. ನಿಮ್ಮ ಧರ್ಮ ನಿಮ್ಮ ಮನೆಯೊಳಗೆ ಇದೆ. ಬೀದಿಗಳಲ್ಲಿ ಪ್ರದರ್ಶನ ನೀಡಲು ಅಲ್ಲ. ಇತರರ ಮೇಲೆ ಹೇರಲು ಅಲ್ಲ ಎಂದರು.

ಜ್ಞಾನವಾಪಿ ಮಸೀದಿ ಆವರಣದ ವಿಸ್ತೃತ ವೈಜ್ಞಾನಿಕ ಸಮೀಕ್ಷೆಗೆ ತಡೆಯಾಜ್ಞೆ ಕೋರಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಆ.3ರಂದು ನೀಡಲಿದೆ.

ಕೇಂದ್ರಕ್ಕೆ 'ಸುಪ್ರೀಂ' ಚಾಟಿ

ಒಂದನೇ ಪುಟದಿಂದ...

'ಗಲಭೆನಿರತ ಗುಂಪಿಗೆ ಪೊಲೀಸರೆ ಸಂತ್ರಸ್ತೆಯರನ್ನು ಒಪ್ಪಿಸಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಪ್ರಕರಣದ ತನಿಖೆಯ ಹೊಣೆಯನ್ನು ಮಣಿಪುರ ಪೊಲೀಸರಿಗೆ ವಹಿಸುವುದಿಲ್ಲ' ಎಂದು ಸ್ಪಷ್ಟಪಡಿಸಿತು.

ಅಟಾರ್ನಿ ಜನರಲ್ ಆರ್. ವೆಂಕಟರಮಣಿ, 'ಪೀಠವು ಎಸ್‌ಐಟಿ ತನಿಖೆಗೆ ಆದೇಶಿಸಿದರೆ ಕೇಂದ್ರ ಸರ್ಕಾರದ ಅಭ್ಯಂತರವಿಲ್ಲ. ಸರ್ಕಾರಕ್ಕೆ ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಲು ಸಮಯಾವಕಾಶ ನೀಡಬೇಕು' ಎಂದು ಕೋರಿದರು.

ವಿಳಂಬ ಒಪ್ಪಿಕೊಂಡ ಸರ್ಕಾರ: ಮಣಿಪುರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಎಫ್‌ಐಆರ್ ದಾಖಲಿಸಲು ವಿಳಂಬವಾಗಿರುವುದನ್ನು ಒಪ್ಪಿಕೊಂಡರು. 'ವಿಡಿಯೊ ಬಹಿರಂಗವಾದ 24 ಗಂಟೆಯೊಳಗೆ ಆರೋಪಿಗಳನ್ನು ಪತ್ತೆ ಹಚ್ಚಲಾಗಿದೆ. ಇಲ್ಲಿಯವರೆಗೆ 7 ಮಂದಿಯನ್ನು ಬಂಧಿಸಲಾಗಿದೆ' ಎಂದರು.

'ಕೃತ್ಯ ನಡೆದರೂ ತಪ್ಪಿತಸ್ಥರ ಬಂಧನಕ್ಕೆ ಯಾಕಿಷ್ಟು ಸಮಯ ಕಾಯಬೇಕು. ಪೊಲೀಸರಿಗೆ ಇದರ ಬಗ್ಗೆ ಅರಿವು ಇರಲಿಲ್ಲವೇ? ಮೇ 4ರಿಂದ 18ರ ವರೆಗೆ ಅವರೇನು ಮಾಡುತ್ತಿದ್ದರು. ಮಹಿಳೆಯರನ್ನು ಅಮಾನವೀಯವಾಗಿ ನಡೆಸಿಕೊಂಡರೂ ಕ್ರಮ ಕೈಗೊಳ್ಳಲು ನಿರ್ಲಕ್ಷ್ಯ ತೋರಿದ್ದು ಏಕೆ' ಎಂದು ಪೀಠವು ತೀಕ್ಷ್ಣವಾಗಿ ಪ್ರಶ್ನಿಸಿತು.

ಪ್ರಕರಣದ ಬಗ್ಗೆ ಜೂನ್ 21ರಂದು ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿದೆ. ಒಂದು ತಿಂಗಳ ವಿಳಂಬ ಏಕೆ? ಇನ್ನೂ 20 ಎಫ್‌ಐಆರ್‌ಗಳಲ್ಲಿ ಇಂತಹ ವಿಳಂಬ ಧೋರಣೆ ತಳೆಯಲಾಗಿದೆ. ಇವುಗಳ ಬಗ್ಗೆ ಪೊಲೀಸರು ಯಾವ ಕ್ರಮ ಕೈಗೊಂಡಿದ್ದಾರೆ ಎಂದು ಕೇಳಿತು.

'ಜುಲೈ 19ರಂದು ವಿಡಿಯೊ ಬಹಿರಂಗೊಂಡಿದೆ. ಸಂತ್ರಸ್ತೆಯರಿಗೆ ಸಿಬಿಐ ತನಿಖೆ ಮೇಲೆ ನಂಬಿಕೆ ಇಲ್ಲ' ಎಂದು ಸಂತ್ರಸ್ತೆಯರ ಪರ ಹಾಜರಿದ್ದ ವಕೀಲ ಕಪಿಲ್ ಸಿಬಲ್ ಹೇಳಿದರು.

ರಾಗಿ, ಜೋಳ ಬೆಂಬಲ ಬೆಲೆ ಹೆಚ್ಚಿಸಿ: ಕೇಂದ್ರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಗಿ ಹಾಗೂ ಜೋಳಕ್ಕೆ 2023–24ನೇ ಸಾಲಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಆಗ್ರಹಿಸಿದರು.

ಕೇಂದ್ರ ವಾಣಿಜ್ಯ ಹಾಗೂ ಆಹಾರ ಸಚಿವ ಪೀಯೂಷ್ ಗೋಯಲ್ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆಗೆ ಅವರು ಮಾತನಾಡಿದರು.

2023-24ನೇ ಸಾಲಿಗೆ ರಾಗಿ ಎಂಎಸ್‌ಪಿಯನ್ನು ಈಗಿನ ದರ ₹3846ರಿಂದ ₹5 ಸಾವಿರಕ್ಕೆ ಹೆಚ್ಚಿಸಬೇಕು. ಜೋಳದ (ಮಾಲ್ದಂಡಿ) ಬೆಂಬಲ ಬೆಲೆಯನ್ನು ₹3,225ರಿಂದ ₹4,500ಕ್ಕೆ ಜೋಳದ (ಹೈಬ್ರಿಡ್) ಬೆಲೆಯನ್ನು ₹3,180ರಿಂದ ₹4,500ಕ್ಕೆ ಜಾಸ್ತಿ ಮಾಡಬೇಕು ಎಂದರು.

ಕಳೆದ 10 ವರ್ಷಗಳಲ್ಲಿ ರಸಗೊಬ್ಬರ ಹಾಗೂ ಕ್ರಿಮಿನಾಶಕಗಳ ಬೆಲೆ ಮೂರು ಸಲ ಹೆಚ್ಚಾಗಿದೆ. ಇದರಿಂದ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚಿಸಿದರೆ ರೈತರಿಗೆ ಅನುಕೂಲವಾಗಲಿದೆ ಎಂದರು. ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಗ್ರಾಹಕರಿಗೆ ವಿತರಿಸಲು 8 ಲಕ್ಷ ಟನ್ ರಾಗಿ ಮತ್ತು 3 ಲಕ್ಷ ಟನ್ ಜೋಳ ಖರೀದಿಸಲು ಗೋಯಲ್ ಒಪ್ಪಿದ್ದಾರೆ ಎಂದರು.

ಅನ್ನಭಾಗ್ಯ ಯೋಜನೆಗೆ ತಿಂಗಳಿಗೆ 2.28 ಲಕ್ಷ ಟನ್ ಅಕ್ಕಿ ನೀಡಲು ಕೇಂದ್ರ ಒಪ್ಪಿಲ್ಲ. ಬೇರೆ ರಾಜ್ಯಗಳಿಂದ ಅಕ್ಕಿ ಖರೀದಿಸಲು ಯೋಜಿಸಲಾಗಿದೆ. ಬೆಲೆ ಬಗ್ಗೆ ಮಾತುಕತೆ ನಡೆಯುತ್ತಿದೆ. ಈಗ ಪಡಿತರ ಚೀಟಿದಾರರಿಗೆ ₹5 ಕೆ.ಜಿ. ಅಕ್ಕಿ ಬದಲು ಹಣ ನೀಡಲಾಗುತ್ತಿದೆ. ಶೀಘ್ರದಲ್ಲಿ ಅಕ್ಕಿ ನೀಡಲಾಗುವುದು ಎಂದರು.

ತಿರುಪತಿ ಸೇರಿದಂತೆ ಪ್ರಮುಖ ಖರೀದಿದಾರರಿಗೆ ನಂದಿನಿ ತುಪ್ಪ ಒದಗಿಸುವ ಬಗ್ಗೆ ಮಾತುಕತೆ ನಡೆಸಲು ಹಾಗೂ ತುಪ್ಪ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಹಕಾರ ಸಚಿವರಿಗೆ ಸಲಹೆ ನೀಡುವುದಾಗಿ ತಿಳಿಸಿದರು.

ತಿರುಪತಿಗೆ ತುಪ್ಪ ಪೂರೈಕೆ ಮುಂದುವರಿಸುವಂತೆ ಸಚಿವರಿಗೆ ತಿಳಿಸುತ್ತೇನೆ ಎಂದರು.

ಗೋಹತ್ಯೆ ಸಂಪೂರ್ಣ ನಿಷೇಧಿಸುವಂತೆ ಅರ್ಜಿ

ಕೇಂದ್ರಕ್ಕೆ ನಿರ್ದೇಶನ: ಹೈಕೋರ್ಟ್ ತಿರಸ್ಕಾರ

ನವದೆಹಲಿ (ಪಿಟಿಐ): ಗೋವು ಮತ್ತು ಅದರ ಸಂತತಿಯ ಹತ್ಯೆಯನ್ನು ಸಂಪೂರ್ಣ ನಿಷೇಧಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದ್ದು, ಈ ವಿಚಾರದಲ್ಲಿ ಸಂಬಂಧಿತ ರಾಜ್ಯ ಸರ್ಕಾರವನ್ನು ಸಂಪರ್ಕಿಸಬಹುದು ಎಂದು ಹೇಳಿದೆ.

ಬೃಷ್ಬನ್ ವರ್ಮಾ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಅವರ ನೇತೃತ್ವದ ನ್ಯಾಯಪೀಠವು, ರಾಷ್ಟ್ರ ರಾಜಧಾನಿಯಲ್ಲಿ ಗೋಹತ್ಯೆಗೆ ನಿಷೇಧ ಹೇರಿರುವ ಕಾನೂನು ಅನ್ನು ಇಲ್ಲಿನ ಸರ್ಕಾರವು ಜಾರಿಗೆ ತಂದಿದೆ ಎಂಬುದರತ್ತ ಗಮನ ಸೆಳೆಯಿತು.

ಇತರ ರಾಜ್ಯಗಳಿಗೆ ಸಂಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಲು ಅರ್ಜಿದಾರರಿಗೆ ಸ್ವಾತಂತ್ರ್ಯ ಇದೆ. ನಿರ್ದಿಷ್ಟ ಕಾನೂನು ಜಾರಿಗೆ ತರುವಂತೆ ಶಾಸಕಾಂಗಕ್ಕೆ ಒತ್ತಾಯಿಸಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಸಂಜೀವ್ ನರುಲಾ ಅವರೂ ಇದ್ದ ನ್ಯಾಯಪೀಠ ಹೇಳಿದೆ.

'ಇಂಥ ತೀರ್ಮಾನಗಳನ್ನು ಶಾಸಕಾಂಗ ಮಾತ್ರ ತೆಗೆದುಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸುಪ್ರೀಂ ಕೋರ್ಟ್, ನಿರ್ದಿಷ್ಟ ಕಾನೂನು ರೂಪಿಸಲು ಶಾಸಕಾಂಗವನ್ನು ಒತ್ತಾಯಿಸಲು ಸಾಧ್ಯವಿಲ್ಲವೆಂದು ಹೇಳಿದೆ. ಅಂತಿಮವಾಗಿ ಶಾಸಕಾಂಗವನ್ನು ಸಂಪರ್ಕಿಸಲು ಪ್ರಕರಣದ ಮೇಲ್ಮನವಿದಾರರಿಗೆ ನ್ಯಾಯಾಲಯ ಅವಕಾಶ ಕಲ್ಪಿಸಿದೆ' ಎಂದು ಪೀಠವು ಕಳೆದ ವಾರ ಹೊರಡಿಸಿದ ಆದೇಶದಲ್ಲಿ ಹೇಳಿದೆ.

ಅರುಣಾಚಲ ಪ್ರದೇಶ, ಕೇರಳ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಈ ಐದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಲಕ್ಷದ್ವೀಪ ಹೊರತುಪಡಿಸಿ, ಉಳಿದೆಡೆ ಗೋವು ಮತ್ತು ಅದರ ಸಂತತಿಯ ಹತ್ಯೆ ನಿರ್ಬಂಧಿಸಲು/ನಿಷೇಧಿಸಲು ಕಾನೂನುಗಳು ಜಾರಿಯಲ್ಲಿವೆ ಎಂಬುದನ್ನು ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ವಕೀಲೆ ಮೋನಿಕಾ ಅರೋರಾ ಅವರು ನ್ಯಾಯಪೀಠದ ಗಮನಕ್ಕೆ ತಂದರು.

ದೆಹಲಿ ಸರ್ಕಾರದ ಪರವಾಗಿ ಹಾಜರಾಗಿದ್ದ ವಕೀಲ ಸಂತೋಷ್ ಕುಮಾರ್ ತ್ರಿಪಾಠಿ ಅವರು, ರಾಷ್ಟ್ರ ರಾಜಧಾನಿಯಲ್ಲಿ ಗೋಹತ್ಯೆ ಸಂಪೂರ್ಣ ನಿಷೇಧ ಕಾನೂನು ಈಗಾಗಲೇ ಜಾರಿಯಲ್ಲಿ ಇದೆ ಎಂದು ಸ್ಪಷ್ಟಪಡಿಸಿದರು.

ದೆಹಲಿ ಮೆಟ್ರೊ: ಮದ್ಯದ ಬಾಟಲಿಗೆ ಅನುಮತಿ– ವಿರೋಧ

ನವದೆಹಲಿ (ಪಿಟಿಐ): ದೆಹಲಿಯ ಮೆಟ್ರೊ ರೈಲುಗಳಲ್ಲಿ ಸೀಲ್ ಆಗಿರುವ ಎರಡು ಮದ್ಯದ ಬಾಟಲಿಗಳನ್ನು ಒಯ್ಯಲು ನೀಡಿರುವ ಅನುಮತಿಯನ್ನು ಹಿಂಪಡೆಯಬೇಕೆಂದು ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟವು ಸೋಮವಾರ ದೆಹಲಿ ಮೆಟ್ರೊ ರೈಲು ನಿಗಮಕ್ಕೆ (ಡಿಎಂಆರ್‌ಸಿ) ಮನವಿ ಮಾಡಿದೆ.

'ಮೆಟ್ರೊ ರೈಲುಗಳಲ್ಲಿ ಮದ್ಯದ ಬಾಟಲಿಗಳನ್ನು ಒಯ್ಯಲು ಅನುಮತಿ ನೀಡಿದರೆ ಸಮಾಜಘಾತುಕ ಚಟುವಟಿಕೆಗಳು ಹೆಚ್ಚಾಗಲಿವೆ' ಎಂದು ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟವು (ಸಿಟಿಐ) ಡಿಎಂಆರ್‌ಸಿಗೆ ಬರೆದಿರುವ ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದೆ.

'ಈ ಕುರಿತು ಒಕ್ಕೂಟದ ಪದಾಧಿಕಾರಿಗಳ ನಿಯೋಗವು ಡಿಎಂಆರ್‌ಸಿಯ ಮುಖ್ಯಸ್ಥ ವಿಕಾಸ್ ಕುಮಾರ್ ಅವರನ್ನು ಭೇಟಿ ಮಾಡಿ ಚರ್ಚಿಸಲಿದೆ' ಎಂದೂ ಒಕ್ಕೂಟವು ಹೇಳಿದೆ. 'ಡಿಎಂಆರ್‌ಸಿಯು ಈ ಅನುಮತಿಯನ್ನು ವಾಪಸ್ ಪಡೆಯಬೇಕು. ಯಾರಾದರೂ ಮದ್ಯದ ಬಾಟಲಿಗಳನ್ನು ಮೆಟ್ರೊ ರೈಲಿನೊಳಗೆ ಒಯ್ದು ಅಲ್ಲಿ ಮದ್ಯ ಸೇವಿಸಲು ಆರಂಭಿಸಿದರೆ ಅದನ್ನು ತಡೆಯುವುದು ಹೇಗೆ' ಎಂದು ಸಿಟಿಐ ಮುಖ್ಯಸ್ಥ ಬ್ರಿಜೇಶ್ ಗೋಯಲ್ ಅವರು ಪ್ರಶ್ನಿಸಿದ್ದಾರೆ.

ಸಿಟಿಐನ ಮಹಿಳಾ ಘಟಕದ ಅಧ್ಯಕ್ಷೆ ಮಾಳವಿಕಾ ಸಾಹ್ನಿ ತಮಗೆ ಅನೇಕ ಮಹಿಳೆಯರು ಮೆಟ್ರೊದೊಳಗೆ ಮದ್ಯದ ಬಾಟಲಿಗಳನ್ನು ಒಯ್ಯಲು ಅನುಮತಿ ನೀಡಬಾರದು ಎಂದು ಮನವಿ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

'ಮೆಟ್ರೊ ರೈಲಿನ ಜಾಲವು ದೆಹಲಿ, ಹರಿಯಾಣ ಮತ್ತು ಉತ್ತರ ಪ್ರದೇಶವನ್ನು ವ್ಯಾಪಿಸಿದೆ. ಈ ರಾಜ್ಯಗಳು ತಮ್ಮದೇ ಆದ ಅಬಕಾರಿ ನೀತಿಯನ್ನು ಹೊಂದಿವೆ. ಈ ನಿರ್ಧಾರವನ್ನು ಹಿಂಪಡೆಯಬೇಕು' ಎಂದೂ ಸಿಟಿಐ ಪ್ರಕಟಣೆಯಲ್ಲಿ ತಿಳಿಸಿದೆ.

'ಮೋದಿ ಜತೆ ವೇದಿಕೆ ಹಂಚಿಕೊಳ್ಳುವ ನಿರ್ಧಾರ ಶರದ್ ಮರುಪರಿಶೀಲಿಸಲಿ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಲೋಕಮಾನ್ಯ ತಿಲಕ್ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಗುವ ಕಾರ್ಯಕ್ರಮದಲ್ಲಿ ಭಾಗವಹಿಸುವ ತಮ್ಮ ನಿರ್ಧಾರವನ್ನು ಎನ್‌ಸಿಪಿ ನಾಯಕ ಶರದ್ ಪವಾರ್ ಮರುಪರಿಶೀಲಿಸಲಿ ಎಂದು ಶಿವಸೇನಾ (ಯುಟಿ) ಸಂಸದ ಅರವಿಂದ್ ಸಾವಂತ್ ಸೋಮವಾರ ಹೇಳಿದ್ದಾರೆ.

ಆಗಸ್ಟ್ 1 ರಂದು ಪುಣೆಯಲ್ಲಿ ಲೋಕಮಾನ್ಯ ತಿಲಕ್ ಸ್ಮಾರಕ ಮಂದಿರ ಟ್ರಸ್ಟ್ ಆಯೋಜಿಸಿರುವ ಕಾರ್ಯಕ್ರಮಕ್ಕೆ ಪವಾರ್ ಮುಖ್ಯ ಅತಿಥಿಯಾಗಿದ್ದು, ಅಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ವೇದಿಕೆ ಹಂಚಿಕೊಳ್ಳಲಿದ್ದಾರೆ.

'ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು' ಎಂಬ ಘೋಷಣೆಯನ್ನು ತಿಲಕ್ ನೀಡಿದ್ದರು. ಆದರೆ, ಇಂದು ಸ್ವರಾಜ್ಯವಿದೆಯೇ? ಬದಲಿಗೆ 'ಸ್ವರಾಜ್ಯ' ಎನ್ನುವುದು ಒಬ್ಬ ವ್ಯಕ್ತಿಯ ಆಡಳಿತವಾಗಿಬಿಟ್ಟಿದೆ. ಬಿಜೆಪಿ ನಾಯಕರು ದೇಶದ ಸಂವಿಧಾನ ನಾಶಪಡಿಸುತ್ತಿದ್ದಾರೆ. ಇಂದಿನ ಪರಿಸ್ಥಿತಿಯ ಬಗ್ಗೆ ಪವಾರ್ ಯೋಚಿಸಬೇಕು. ಮೋದಿಯವರಿಗೆ ಪ್ರಶಸ್ತಿ ಪ್ರದಾನ ಮಾಡುವ ಕಾರ್ಯಕ್ರಮಕ್ಕೆ ಹೋಗಬಾರದು ಎಂದು ಅವರು ಹೇಳಿದ್ದಾರೆ.

ಪವಾರ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಟ್ರಸ್ಟ್‌ನ ಉಪಾಧ್ಯಕ್ಷ ರೋಹಿತ್ ತಿಲಕ್ ಸೋಮವಾರ ಖಚಿತಪಡಿಸಿದ್ದಾರೆ.

ಈ ಮಧ್ಯೆ, ಪುಣೆಯ ಕಾಂಗ್ರೆಸ್ ಯುವ ಘಟಕವು ನಗರದ ಕೆಲವು ಭಾಗಗಳಲ್ಲಿ 'ಮೋದಿ ವಾಪಸ್ ಹೋಗಿ' ಎಂಬ ಸಂದೇಶದ ಪೋಸ್ಟರ್‌ಗಳನ್ನು ಅಂಟಿಸಿದೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತೀರ್ಮಾನ

ಮೇಕೆದಾಟು: ಏಕರೂಪ ನಿಲುವು

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡು ಸರ್ಕಾರ ಸಲ್ಲಿಸಿರುವ ತಕರಾರು ಅರ್ಜಿಯ ಕುರಿತು ಸುಪ್ರೀಂ ಕೋರ್ಟ್ ಆದೇಶ ನೀಡುವವರೆಗೆ ಮೇಕೆದಾಟು ಹಾಗೂ ಕಾವೇರಿ ಜಲಾನಯನ ಪ್ರದೇಶದ ಇತರ ಯೋಜನೆಗಳ ಚರ್ಚೆ ಕುರಿತು ಏಕರೂಪ ನಿಲುವು ತಾಳಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತೀರ್ಮಾನಿಸಿದೆ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ತಿಳಿಸಿದೆ.

ರಾಜ್ಯಸಭೆಯಲ್ಲಿ ಸದಸ್ಯ ಪಿ.ವಿಲ್ಸನ್ ಕೇಳಿರುವ ಪ್ರಶ್ನೆಗೆ ಸಚಿವಾಲಯದ ರಾಜ್ಯ ಸಚಿವ ಬಿಶ್ವೇಶ್ವರ ತುಡು ಉತ್ತರ ನೀಡಿ, '2022ರ ಡಿಸೆಂಬರ್ 2ರಂದು ನಡೆದ ಪ್ರಾಧಿಕಾರದ 18ನೇ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ' ಎಂದರು.

ಮೇಕೆದಾಟು ಯೋಜನೆಯ ಕಾರ್ಯಸಾಧ್ಯತಾ ವರದಿಯನ್ನು ಕರ್ನಾಟಕ ಸರ್ಕಾರವು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿತ್ತು. ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಕೆಲವು ಷರತ್ತುಗಳನ್ನು ವಿಧಿಸಿ ಜಲ ಆಯೋಗವು 2018ರ ಅಕ್ಟೋಬರ್ 24ರಂದು ಒಪ್ಪಿಗೆ ನೀಡಿತ್ತು. ಕರ್ನಾಟಕ ಸರ್ಕಾರವು 2019ರ ಜನವರಿಯಲ್ಲಿ ಡಿಪಿಆರ್ ಸಲ್ಲಿಸಿತ್ತು. ಆ ಬಳಿಕ ಪ್ರಾಧಿಕಾರದ ಕಾರ್ಯಸೂಚಿಯಲ್ಲಿ ಮೇಕೆದಾಟು ಯೋಜನೆಯ ವಿಚಾರ ಸೇರ್ಪಡೆಯಾಗಿತ್ತು ಎಂದು ಅವರು ತಿಳಿಸಿದರು.

ತಮಿಳುನಾಡಿಗೆ 1,160 ಟಿಎಂಸಿ ಅಡಿ ನೀರು

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಕರ್ನಾಟಕ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ತಮಿಳುನಾಡಿಗೆ 1,160 ಟಿಎಂಸಿ ಅಡಿ ಕಾವೇರಿ ನೀರನ್ನು ಹರಿಸಿದೆ ಎಂದು ಸಚಿವ ಬಿಶ್ವೇಶ್ವರ ತುಡು ತಿಳಿಸಿದರು.

ರಾಜ್ಯಸಭೆಯಲ್ಲಿ ಸದಸ್ಯ ಸಿ.ವಿ.ಷಣ್ಮುಗಂ ಸೋಮವಾರ ಕೇಳಿರುವ ಪ್ರಶ್ನೆಗೆ ಉತ್ತರ ನೀಡಿದ ಅವರು, 'ತಮಿಳುನಾಡಿಗೆ ಪ್ರತಿವರ್ಷ 177.25 ಟಿಎಂಸಿ ಅಡಿ ನೀರು ಹರಿಸಬೇಕು ಎಂದು ಆದೇಶಿಸಿತ್ತು. ಕರ್ನಾಟಕವು 2020–21ರಲ್ಲಿ 211 ಟಿಎಂಸಿ ಅಡಿ, 2021–22ರಲ್ಲಿ 281 ಟಿಎಂಸಿ ಅಡಿ ಹಾಗೂ 2022–23ರಲ್ಲಿ 668 ಟಿಎಂಸಿ ಅಡಿ ನೀರು ಬಿಟ್ಟಿದೆ' ಎಂದರು.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಈ ವರ್ಷವೂ ನಿಗದಿಪಡಿಸಿದಷ್ಟು ಕಾವೇರಿ ನೀರು ಬಿಡುಗಡೆ ಮಾಡುವಂತೆ ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಪತ್ರ ಬರೆದು ವಿನಂತಿಸಿದೆ ಎಂದು ಅವರು ಮಾಹಿತಿ ನೀಡಿದರು.

ನೈರುತ್ಯ ರೈಲ್ವೆ: ಮಂಗಳೂರು ವಿಭಾಗ ವಿಲೀನ ಇಲ್ಲ

ನವದೆಹಲಿ: ತೋಕೂರು ನಿಲ್ದಾಣ ಸೇರಿದಂತೆ ಮಂಗಳೂರು ವಿಭಾಗವನ್ನು ನೈರುತ್ಯ ರೈಲ್ವೆ ಜತೆಗೆ ವಿಲೀನ ಮಾಡುವ ಪ್ರಸ್ತಾವ ಇಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸ್ಪಷ್ಟಪಡಿಸಿದರು.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ನಾರಾಯಣ ಕೊರಗಪ್ಪ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಅವರು, 'ತೋಕೂರು ನಿಲ್ದಾಣವನ್ನು ಕೊಂಕಣ ರೈಲ್ವೆಯಿಂದ ನೈರುತ್ಯ ರೈಲ್ವೆಗೆ ವರ್ಗಾಯಿಸಲು ಕೆಲವು ಷರತ್ತುಗಳಿಗೆ ಒಳಪಟ್ಟು ರೈಲ್ವೆ ಮಂಡಳಿಯು ಆರಂಭದಲ್ಲಿ ಒಪ್ಪಿಗೆ ನೀಡಿತ್ತು. ಆ ಬಳಿಕ, ವಿವರವಾದ ಚರ್ಚೆಯ ನಂತರ ಹಾಗೂ ಕಾರ್ಯಾಚರಣೆಯ ಅಗತ್ಯಗಳನ್ನು ಸರಿಯಾಗಿ ಪರಿಗಣಿಸಿದ ಬಳಿಕ, ಈ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ತೀರ್ಮಾನಿಸಲಾಯಿತು' ಎಂದರು.

ಮಂಗಳೂರು–ಬೆಂಗಳೂರು ನಡುವೆ ವಂದೆ ಭಾರತ್ ರೈಲುಗಳ ಸಂಚಾರ ಯಾವಾಗ ಆರಂಭವಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಮಂಗಳೂರು–ಬೆಂಗಳೂರು ಮಾರ್ಗದಲ್ಲಿ ಆರು ಜೋಡಿ ರೈಲುಗಳು ಈಗ ಕಾರ್ಯಾಚರಣೆ ನಡೆಸುತ್ತಿವೆ. ದೇಶದ ವಿವಿಧ ಕಡೆಗಳಲ್ಲಿ 50 ವಂದೆ ಭಾರತ್ ರೈಲುಗಳು ಕಾರ್ಯಾಚರಿಸುತ್ತಿವೆ. ಹೊಸ ವಂದೆ ಭಾರತ್ ರೈಲುಗಳ ಆರಂಭವು ನಿರಂತರ ಪ್ರಕ್ರಿಯೆ. ಕಾರ್ಯಾಚರಣೆಯ ಸಾಧ್ಯತೆ, ಪ್ರಯಾಣಿಕರ ದಟ್ಟಣೆ ಮತ್ತಿತರ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಂಡು ನಿರ್ಧಾರ ತೆಗೆದುಕೊಳ್ಳಲಾಗುತ್ತದೆ' ಎಂದು ತಿಳಿಸಿದರು.

ಭಾರತ–ವಿಂಡೀಸ್ 3ನೇ ಪಂದ್ಯ ಇಂದು: ಸೂರ್ಯ, ಸಂಜು ಮೇಲೆ ಕಣ್ಣು

ಸರಣಿ ಕಿರೀಟಕ್ಕೆ ಹಣಾಹಣಿ

ಟರೌಬಾ(ಪಿಟಿಐ): ಸಂಜು ಸ್ಯಾಮ್ಸನ್ ಮತ್ತು ಸೂರ್ಯಕುಮಾರ್ ಯಾದವ್ ಅವರನ್ನು ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿಸುವ ಪ್ರಯೋಗ ಮಂಗಳವಾರ ನಡೆಯಲಿರುವ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಮೂರನೇ ಏಕದಿನ ಪಂದ್ಯದಲ್ಲಿಯೂ ಮುಂದುವರಿಯುವುದು ಬಹುತೇಕ ಖಚಿತ.

ಸರಣಿ ಗೆಲ್ಲಬೇಕಾದರೆ ಉಭಯ ತಂಡಗಳಿಗೂ ಈ ಪಂದ್ಯದಲ್ಲಿ ಜಯ ಸಾಧಿಸುವ ಸವಾಲು ಇದೆ. 2006ರಿಂದ ಇಲ್ಲಿಯವರೆಗೆ ಭಾರತ ತಂಡವು ವಿಂಡೀಸ್ ಎದುರು ಫಿಫ್ಟಿ–50 ಕ್ರಿಕೆಟ್‌ನಲ್ಲಿ ಸರಣಿ ಸೋತಿಲ್ಲ. ಆದರೆ ಈ ಸರಣಿಯ ಎರಡನೇ ಪಂದ್ಯದಲ್ಲಿ ಗೆದ್ದಿರುವ ಅತಿಥೇಯ ತಂಡವು ಭರ್ತಿ ಆತ್ಮವಿಶ್ವಾಸದಲ್ಲಿದೆ. ಸರಣಿ ಸೋಲಿನ ಸರಪಣಿ ಕಳಚುವ ಛಲದಲ್ಲಿ ಶಾಯ್ ಹೋಪ್ ನಾಯಕತ್ವದ ವಿಂಡೀಸ್ ತಂಡ ಇದೆ.

ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ನಿರಾಯಾಸ ಗೆಲುವು ಸಾಧಿಸಿತ್ತು. ಆದರೆ ಎರಡನೇ ಪಂದ್ಯದಲ್ಲಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ವಿಶ್ರಾಂತಿ ಪಡೆದಿದ್ದರು. ಯುವಪಡೆಯನ್ನು ಕಣಕ್ಕಿಳಿಸಿ ಪ್ರಯೋಗ ನಡೆಸಲಾಗಿತ್ತು. ಆದರೆ, ಬ್ಯಾಟಿಂಗ್ ವಿಭಾಗದಲ್ಲಿ ವೈಫಲ್ಯ ಕಾಡಿತ್ತು. ಅದು ಸೋಲಿಗೂ ಕಾರಣವಾಗಿತ್ತು.

‘ಏಷ್ಯಾ ಕಪ್ ಮತ್ತು ವಿಶ್ವಕಪ್ ಟೂರ್ನಿಗಳಿಗಾಗಿ ಸಿದ್ಧತೆ ನಡೆಸುತ್ತಿರುವ ಈ ಸಂದರ್ಭದಲ್ಲಿ ಪ್ರಯೋಗಶೀಲತೆಯೂ ಮುಖ್ಯವಾಗುತ್ತದೆ. ಅಲ್ಲದೇ ಅನುಭವಿ ಆಟಗಾರರನ್ನು ಗಾಯಗೊಳ್ಳುವ ಅಪಾಯ ಮತ್ತು ಕಾರ್ಯ ಬಾಹುಳ್ಯ ಕಡಿತಕ್ಕೂ ಒತ್ತು ಕೊಡುವುದು ಮುಖ್ಯ’ ಎಂದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಸಮರ್ಥಿಸಿಕೊಂಡಿದ್ದರು.

ಭಾರತ ತಂಡದ ಆಟಗಾರರಾದ ಕುಲದೀಪ್ ಯಾದವ್ ಮತ್ತು ಸೂರ್ಯಕುಮಾರ್ ಯಾದವ್ –ಪಿಟಿಐ ಚಿತ್ರ

ಆದರೆ ಸೂರ್ಯಕುಮಾರ್ ಸೀಮಿತ ಓವರ್‌ಗಳ ಕ್ರಿಕೆಟ್ ಪರಿಣತ ಬ್ಯಾಟರ್ ಆಗಿದ್ದಾರೆ. ಆದರೆ ಕಳೆದ ಕೆಲವು ದಿನಗಳಿಂದ ಸತತ ವೈಫಲ್ಯ ಅನುಭವಿಸುತ್ತಿದ್ದಾರೆ. ಆದ್ದರಿಂದ ಅವರು ಪಂದ್ಯ ಗೆಲ್ಲಿಸುವ ಬ್ಯಾಟಿಂಗ್ ಲಯಕ್ಕೆ ಮರಳುವ ನಿರೀಕ್ಷೆಯಲ್ಲಿ ತಂಡದ ವ್ಯವಸ್ಥಾಪಕ ಮಂಡಳಿಯಿದೆ.

ಸಂಜು ಸ್ಯಾಮ್ಸನ್ ಅವರಿಗೂ ತಮ್ಮ ಸಾಮರ್ಥ್ಯ ನಿರೂಪಿಸಲು ಮತ್ತೊಂದು ಅವಕಾಶ ಇದಾಗಲಿದೆ. ಆರಂಭಿಕ ಜೋಡಿ ಇಶಾನ್ ಕಿಶನ್ ಮತ್ತು ಶುಭಮನ್ ಗಿಲ್ ಅವರು ಉತ್ತಮ ಲಯದಲ್ಲಿರುವುದು ಸಮಾಧಾನಕರ.

ರೋಹಿತ್ ಅನುಪಸ್ಥಿತಿಯಲ್ಲಿ ನಾಯಕತ್ವ ವಹಿಸಿರುವ ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಲಯ ಕಂಡುಕೊಳ್ಳಬೇಕಿದೆ. ಮೊಹಮ್ಮದ್ ಸಿರಾಜ್ ಇಲ್ಲದಿರುವ ಕಾರಣ ಉಮ್ರಾನ್ ಮಲಿಕ್ ಮತ್ತು ಮುಕೇಶ್ ಕುಮಾರ್ ಅವರಿಗೆ ಉತ್ತಮ ಅವಕಾಶವಿದೆ. ಕಳೆದ ಪಂದ್ಯದಲ್ಲಿ ಶಾರ್ದೂಲ್ ಠಾಕೂರ್ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಉಳಿದವರು ಗುರಿ ತಪ್ಪಿದ್ದರು.

ವಿಂಡೀಸ್ ಬಳಗದಲ್ಲಿ ಆರಂಭಿಕ ಕೈಲ್ ಮೇಯರ್ಸ್, ಬ್ರೆಂಡನ್ ಕಿಂಗ್ ಮತ್ತು ಮಧ್ಯಮ ಕ್ರಮಾಂಕದಲ್ಲಿ ಕೀಸಿ ಕಾರ್ಟಿ ಅಮೋಘ ಲಯದಲ್ಲಿದ್ದಾರೆ. ಕಳೆದ ಪಂದ್ಯದ ಮಾದರಿಯಲ್ಲಿಯೇ ವಿಂಡೀಸ್ ಬೌಲರ್‌ಗಳು ಭಾರತದ ಬ್ಯಾಟರ್‌ಗಳನ್ನು ಕಟ್ಟಿ ಹಾಕಿದರೆ, ದೀರ್ಘಕಾಲದ ನಂತರ ಸರಣಿ ಗೆಲುವಿನ ಸಿಹಿ ಸವಿಯಬಹುದು.

ಪಂದ್ಯ ಆರಂಭ: ರಾತ್ರಿ 7ರಿಂದ
ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಫ್ಯಾನ್‌ಕೋಡ್

ಯೂನಿವರ್ಸಿಟಿ ಗೇಮ್ಸ್: 6 ಪದಕ

ನವದೆಹಲಿ (ಪಿಟಿಐ): ಭಾರತದ ಶೂಟರ್‌ಗಳು ಮತ್ತು ಆರ್ಚರಿ ಸ್ಪರ್ಧಿಗಳು ಚೀನಾದ ಚೆಂಗ್ದುವಿನಲ್ಲಿ ನಡೆಯುತ್ತಿರುವ ವಿಶ್ವ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಸೋಮವಾರ ನಾಲ್ಕು ಚಿನ್ನ ಸೇರಿದಂತೆ ಆರು ಪದಕಗಳನ್ನು ತಂದಿತ್ತರು.

ಐಶ್ವರ್ಯ ಪ್ರತಾಪ್ ಸಿಂಗ್, ದಿವ್ಯಾಂಶ್ ಸಿಂಗ್ ಪನ್ವರ್ ಮತ್ತು ಅರ್ಜುನ್ ಬಬೂತ ಅವರನ್ನೊಳಗೊಂಡ ತಂಡ ಪುರುಷರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡಿತು. ಭಾರತ ತಂಡ (1,894.1) ಫೈನಲ್‌ನಲ್ಲಿ ಚೀನಾ (1881.9) ವಿರುದ್ಧ ಜಯಿಸಿತು. 10 ಮೀ. ಏರ್ ರೈಫಲ್ ವೈಯಕ್ತಿಕ ವಿಭಾಗದಲ್ಲಿ ಐಶ್ವರ್ಯ ಪ್ರತಾಪ್ ಚಿನ್ನ ಗೆದ್ದರೆ, ದಿವ್ಯಾಂಶ್ ಬೆಳ್ಳಿ ಪಡೆದುಕೊಂಡರು.

ಕಾಂಪೌಂಡ್ ಆರ್ಚರಿ ಸ್ಪರ್ಧೆಗಳು ಎರಡು ಚಿನ್ನ ಮತ್ತು ಒಂದು ಕಂಚು ಜಯಿಸಿದರು. ಮಹಿಳೆಯರ ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ ಅವನೀತ್ ಕೌರ್ ಅಮೆರಿಕದ ಅಲಿಸಾ ಗ್ರೇಸ್ ಸ್ಟರ್ಗಿಲ್ ಅವರನ್ನು ಮಣಿಸಿ ಅಗ್ರಸ್ಥಾನ ಪಡೆದುಕೊಂಡರು.

ಚಿನ್ನಕ್ಕಾಗಿ ನಡೆದ ಪೈಪೋಟಿಯು 144–144 ರಿಂದ ಸಮಬಲದಲ್ಲಿ ಕೊನೆಗೊಂಡ ಕಾರಣ ‘ಶೂಟ್ ಆಫ್’ ಮೊರೆ ಹೋಗಲಾಯಿತು. ‘ಶೂಟ್‌ಆಫ್’ನಲ್ಲಿ ಅಲಿಸಾ 8 ಪಾಯಿಂಟ್ಸ್ ಗಳಿಸಿದರೆ, ಅವನೀತ್ 10 ಪಾಯಿಂಟ್ಸ್ ಕಲೆಹಾಕಿ ಚಿನ್ನ ತಮ್ಮದಾಗಿಸಿಕೊಂಡರು.

ಪುರುಷರ ವೈಯಕ್ತಿಕ ವಿಭಾಗದಲ್ಲಿ ಸಂಗಮ್‌ಪ್ರೀತ್ ಬಿಸ್ಲಾ ಮತ್ತು ಅಮನ್ ಸೈನಿ ಅವರು ಕ್ರಮವಾಗಿ ಚಿನ್ನ ಹಾಗೂ ಕಂಚು ಪಡೆದುಕೊಂಡರು.

ಭಾರತ ತಂಡಕ್ಕೆ ಬೂಮ್ರಾ ನಾಯಕ

ಐರ್ಲೆಂಡ್ ವಿರುದ್ಧದ ಟಿ20 ಸರಣಿ: ಮರಳಿದ ಪ್ರಸಿದ್ಧಕೃಷ್ಣ

ನವದೆಹಲಿ (ಪಿಟಿಐ): ಗಾಯದ ಸಮಸ್ಯೆಯಿಂದಾಗಿ ದೀರ್ಘಕಾಲ ಕ್ರಿಕೆಟ್‌ನಿಂದ ದೂರವುಳಿದಿದ್ದ ವೇಗಿ ಜಸ್‌ಪ್ರೀತ್ ಬೂಮ್ರಾ ಇದೀಗ ಭಾರತ ತಂಡದ ನಾಯಕರಾಗಿ ಮರಳುತ್ತಿದ್ದಾರೆ.

ಆಗಸ್ಟ್ 18 ರಿಂದ 23ರವರೆಗೆ ಐರ್ಲೆಂಡ್‌ನಲ್ಲಿ ನಡೆಯಲಿರುವ ಟಿ20 ಕ್ರಿಕೆಟ್ ಸರಣಿಯಲ್ಲಿ ಅವರು ತಂಡವನ್ನು ಮುನ್ನಡೆಸುವರು. ಅವರ ಜೊತೆಗೆ ಕನ್ನಡಿಗ ಪ್ರಸಿದ್ಧ ಕೃಷ್ಣ ಕೂಡ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ಈ ಸರಣಿಯಲ್ಲಿ ಮೂರು ಪಂದ್ಯಗಳು ನಡೆಯಲಿವೆ.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ವೇಗಿ ಮೊಹಮ್ಮದ್ ಸಿರಾಜ್ ಅವರು ಈ ತಂಡದಲ್ಲಿ ಇಲ್ಲ. ಅವರು ವಿಶ್ರಾಂತಿ ಪಡೆದಿದ್ದಾರೆ.

ಋತುರಾಜ್ ಗಾಯಕವಾಡ ಅವರು ಐರ್ಲೆಂಡ್ ಪ್ರವಾಸದಲ್ಲಿ ಉಪನಾಯಕರಾಗಿದ್ದಾರೆ. ಇತ್ತೀಚೆಗೆ ಟೆಸ್ಟ್ ಪದಾರ್ಪಣೆ ಮಾಡಿದ್ದ ಯಶಸ್ವಿ ಜೈಸ್ವಾಲ್, ಐಪಿಎಲ್ ಟೂರ್ನಿಯಲ್ಲಿ ಮಿಂಚಿದ್ದ ರಿಂಕು ಸಿಂಗ್, ಶಿವಂ ದುಬೆ ಹಾಗೂ ಅನುಭವಿ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರಿಗೆ ಅವಕಾಶ ನೀಡಲಾಗಿದೆ.

ಬೆನ್ನುನೋವಿನ ಸಮಸ್ಯೆಗೆ ನ್ಯೂಜಿಲೆಂಡ್‌ನಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದ ಬೂಮ್ರಾ ಸುಮಾರು ಆರು ತಿಂಗಳಿಗೂ ಹೆಚ್ಚು ಸಮಯದಿಂದ ವಿಶ್ರಾಂತಿ ಮತ್ತು ಎನ್‌ಸಿಎ ಪುನಶ್ಚೇತನ ಆರೈಕೆಯಲ್ಲಿದ್ದರು. ಇತ್ತೀಚೆಗೆ ಅವರು ಅಭ್ಯಾಸ ಆರಂಭಿಸಿದ್ದರು. ಆಲೂರು ಕ್ರೀಡಾಂಗಣದಲ್ಲಿ ಈಚೆಗೆ ಆಗಮಿಸಿದ್ದ ಮುಂಬೈ ಕ್ರಿಕೆಟ್ ತಂಡದ ಎದುರಿನ ಪಂದ್ಯದಲ್ಲಿ 10 ಓವರ್‌ಗಳ ಬೌಲಿಂಗ್ ಮಾಡಿದ್ದರು.



ಜಸ್‌ಪ್ರೀತ್ ಬೂಮ್ರಾ

ಪ್ರಸಿದ್ಧ ಕೃಷ್ಣ

ಅದರಿಂದಾಗಿ ಅವರನ್ನು ಫಿಟ್ ಎಂದು ಘೋಷಿಸಲಾಗಿತ್ತು. ಬಲಗೈ ಮಧ್ಯಮವೇಗಿ ಪ್ರಸಿದ್ಧಕೃಷ್ಣ ಕೂಡ ಹೋದ ವರ್ಷದ ಆಗಸ್ಟ್‌ನಲ್ಲಿ ಜಿಂಬಾಬ್ವೆ ವಿರುದ್ಧದ ಏಕದಿನ ಪಂದ್ಯ ಆಡಿದ ನಂತರ ಕಣಕ್ಕಿಳಿದಿರಲಿಲ್ಲ. ಅವರು ಮೂಳೆಮುರಿತಕ್ಕೆ ಶಸ್ತ್ರಚಿಕಿತ್ಸೆ ಪಡೆದು ಎನ್‌ಸಿಎ ಪುನಶ್ಚೇತನ ಶಿಬಿರದಲ್ಲಿ ಇದ್ದರು.

ತಂಡ ಇಂತಿದೆ: ಜಸ್‌ಪ್ರೀತ್ ಬೂಮ್ರಾ (ನಾಯಕ), ಋತುರಾಜ್ ಗಾಯಕವಾಡ (ಉಪನಾಯಕ), ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ರಿಂಕು ಸಿಂಗ್, ಸಂಜು ಸ್ಯಾಮ್ಸನ್, ಜಿತೇಶ್ ಶರ್ಮಾ (ಇಬ್ಬರೂ ವಿಕೆಟ್‌ಕೀಪರ್), ಶಿವಂ ದುಬೆ, ವಾಷಿಂಗ್ಟನ್ ಸುಂದರ್, ಶಹಬಾಜ್ ಅಹಮದ್, ರವಿ ಬಿಷ್ಣೋಯಿ, ಪ್ರಸಿದ್ಧಕೃಷ್ಣ, ಅರ್ಷದೀಪ್ ಸಿಂಗ್, ಮುಕೇಶ್ ಕುಮಾರ್, ಆವೇಶ್ ಖಾನ್.

ಆ್ಯಷಸ್ ಟೆಸ್ಟ್: ಸ್ಟುವರ್ಟ್ ಬ್ರಾಡ್‌ಗೆ ‘ಕೊನೆ’ ವಿಕೆಟ್

ಇಂಗ್ಲೆಂಡ್‌ಗೆ ರೋಚಕ ಗೆಲುವು

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡದ ವೇಗಿ ಸ್ಟುವರ್ಟ್ ಬ್ರಾಡ್ ತಮ್ಮ ವೃತ್ತಿಜೀವನದ ಕೊನೆಯ ಟೆಸ್ಟ್ ಪಂದ್ಯದಲ್ಲಿ ‘ಫಿನಿಷರ್’ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು.

ಇಲ್ಲಿ ನಡೆದ ಆ್ಯಷಸ್ ಟೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಕ್ರಿಸ್ ವೋಕ್ಸ್ (50ಕ್ಕೆ4) ಮತ್ತು ಮೊಯಿನ್ ಅಲಿ (76ಕ್ಕೆ3) ಅವರು ಆಸ್ಟ್ರೇಲಿಯಾ ತಂಡದ ಪ್ರಮುಖ ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಕಳಿಸಿದರು. ಕೊನೆಯ ಹಂತದಲ್ಲಿ ಬೌಲರ್‌ಗಳಿಗೆ ಸವಾಲೊಡ್ಡಿದ್ದ ಟಾಡ್ ಮರ್ಫಿ ಮತ್ತು ಅಲೆಕ್ಸ್ ಕ್ಯಾರಿ ಅವರ ವಿಕೆಟ್ ಪಡೆಯುವ ಮೂಲಕ ಸ್ಟುವರ್ಟ್ ಬ್ರಾಡ್ ಪಂದ್ಯಕ್ಕೆ ತೆರೆಯೆಳೆದರು. ಅದರೊಂದಿಗೆ ತಮ್ಮ ವೃತ್ತಿಜೀವನಕ್ಕೆ ವಿದಾಯ ಕೂಡ ಹೇಳಿದರು.

ಇಂಗ್ಲೆಂಡ್ ತಂಡವು 49 ರನ್‌ಗಳಿಂದ ಗೆದ್ದಿತು. ಐದು ಪಂದ್ಯಗಳ ಸರಣಿಯಲ್ಲಿ 2–2ರಲ್ಲಿ ಸಮಬಲ ಸಾಧಿಸಿತು. ಆದರೆ ಕಳೆದ ಬಾರಿಯ ಸರಣಿ ಗೆದ್ದಿರುವ ಆಸ್ಟ್ರೇಲಿಯಾ ತಂಡ, ಆ್ಯಷಸ್ ಟ್ರೋಫಿಯನ್ನು ತನ್ನಲ್ಲೇ ಉಳಿಸಿಕೊಂಡಿತು.

ದಿ ಓವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 384 ರನ್‌ಗಳ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಅಂತಿಮ ದಿನವಾದ ಸೋಮವಾರ 94.4 ಓವರ್‌ಗಳಲ್ಲಿ 334 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ವಿಕೆಟ್ ನಷ್ಟವಿಲ್ಲದೇ 135 ರನ್‌ಗಳಿಂದ ಆಟ ಆರಂಭಿಸಿದ್ದ ಆಸ್ಟ್ರೇಲಿಯಾ, ಇಬ್ಬರೂ ಆರಂಭಿಕ ಬ್ಯಾಟರ್‌ಗಳನ್ನು ಬೇಗನೇ ಕಳೆದುಕೊಂಡಿತು. ಡೇವಿಡ್ ವಾರ್ನರ್ 60 ರನ್ ಗಳಿಸಿ ಔಟಾದರು. ಉಸ್ಮಾನ್ ಖ್ವಾಜಾ 72 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಇಬ್ಬರನ್ನೂ ಕ್ರಿಸ್ ವೋಕ್ಸ್ ಪೆವಿಲಿಯನ್‌ಗೆ ಕಳುಹಿಸಿದರು. ಮಾರ್ನಸ್ ಲಾಬುಶೇನ್ (13) ಕೂಡಾ ಹೆಚ್ಚುಹೊತ್ತು ನಿಲ್ಲಲಿಲ್ಲ.

ಸ್ಟೀವ್ ಸ್ಮಿತ್ (54) ಮತ್ತು ಟ್ರಾವಿಸ್ ಹೆಡ್ (43) ಅವರು ನಾಲ್ಕನೇ ವಿಕೆಟ್‌ಗೆ 95 ರನ್ ಸೇರಿಸಿ ಆಸ್ಟ್ರೇಲಿಯಾದ ಗೆಲುವಿನ ಕನಸನ್ನು ಜೀವಂತವಾಗಿರಿಸಿಕೊಂಡರು. ಆದರೆ ಹೆಡ್ ವಿಕೆಟ್ ಪಡೆದು ಈ ಜತೆಯಾಟ ಮುರಿದ ಮೊಯೀನ್,



ಪಂದ್ಯ ಗೆದ್ದ ಸಂಭ್ರಮದಲ್ಲಿ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಮತ್ತು ಸ್ಟುವರ್ಟ್ ಬ್ರಾಡ್ –ಎಪಿ ಚಿತ್ರ

ಇಂಗ್ಲೆಂಡ್‌ಗೆ ಮೇಲುಗೈ ತಂದಿತ್ತರು. 11 ರನ್‌ಗಳ ಅಂತರದಲ್ಲಿ ಮೂರು ವಿಕೆಟ್‌ಗಳು ಬಿದ್ದ ಕಾರಣ ಆಸ್ಟ್ರೇಲಿಯಾ ಒತ್ತಡಕ್ಕೆ ಸಿಲುಕಿತು. ಮಳೆಯ ಕಾರಣ ಅಂತಿಮ ದಿನದಾಟ ತಡವಾಗಿ ಆರಂಭವಾಯಿತು. ಭೋಜನ ಮತ್ತು ಚಹಾ ವಿರಾಮದ ನಡುವಿನ ಅವಧಿಯ ಆಟ ಮಳೆಯಿಂದ ನಡೆಯಲಿಲ್ಲ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್ 283. ಆಸ್ಟ್ರೇಲಿಯಾ 295. ಎರಡನೇ ಇನಿಂಗ್ಸ್: ಇಂಗ್ಲೆಂಡ್ 395. ಆಸ್ಟ್ರೇಲಿಯಾ 94.4 ಓವರ್‌ಗಳಲ್ಲಿ 334 (ಡೇವಿಡ್ ವಾರ್ನರ್ 60, ಉಸ್ಮಾನ್ ಖ್ವಾಜಾ 72, ಸ್ಟೀವ್ ಸ್ಮಿತ್ 54, ಟ್ರಾವಿಸ್ ಹೆಡ್ 43, ಅಲೆಕ್ಸ್ ಕ್ಯಾರಿ 28; ಕ್ರಿಸ್ ವೋಕ್ಸ್ 50ಕ್ಕೆ 4, ಮೊಯೀನ್ ಅಲಿ 76ಕ್ಕೆ 3, ಸ್ಟುವರ್ಟ್ ಬ್ರಾಡ್ 62ಕ್ಕೆ 2)
ಫಲಿತಾಂಶ: ಇಂಗ್ಲೆಂಡ್‌ಗೆ 49 ರನ್ ಜಯ

ಮಹಿಳಾ ವಿಶ್ವಕಪ್ ಫುಟ್‌ಬಾಲ್: ಜಪಾನ್‌ಗೆ ಗೆಲುವು

ನಾಕೌಟ್ ಹಂತಕ್ಕೆ ಆಸ್ಟ್ರೇಲಿಯಾ

ಮೆಲ್ಬರ್ನ್ (ಎಎಫ್‌ಪಿ): ಆತಿಥೇಯ ಆಸ್ಟ್ರೇಲಿಯಾ ತಂಡ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ 16ರ ಘಟ್ಟ ಪ್ರವೇಶಿಸಿತು. ಜಪಾನ್, ಸ್ಪೇನ್ ಮತ್ತು ನೈಜೀರಿಯಾ ತಂಡಗಳೂ ನಾಕೌಟ್‌ನಲ್ಲಿ ಸ್ಥಾನ ಗಳಿಸಿದವು.

ಸೋಮವಾರ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ 4–0 ಗೋಲುಗಳಿಂದ ಕೆನಡಾ ತಂಡವನ್ನು ಮಣಿಸಿತು. ಭರ್ಜರಿ ಗೆಲುವಿನೊಂದಿಗೆ ಆರು ಪಾಯಿಂಟ್ಸ್ ಸಂಗ್ರಹಿಸಿ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು.

ಇನ್ನೊಂದು ಪಂದ್ಯದಲ್ಲಿ ಐರ್ಲೆಂಡ್ ಜತೆ ಗೋಲುರಹಿತ ಡ್ರಾ ಸಾಧಿಸಿದ ನೈಜೀರಿಯಾ, ಐದು ಪಾಯಿಂಟ್ಸ್‌ಗಳೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ಮುಂದಿನ ಹಂತಕ್ಕೆ ಲಗ್ಗೆಯಿಟ್ಟಿತು. ಕೆನಡಾ (4 ಪಾಯಿಂಟ್ಸ್) ಮತ್ತು ಐರ್ಲೆಂಡ್ (1 ಪಾಯಿಂಟ್) ತಂಡಗಳು ಹೊರಬಿದ್ದವು.

ಹಿಂದಿನ ಪಂದ್ಯದಲ್ಲಿ ನೈಜೀರಿಯಾ ಕೈಯಲ್ಲಿ 2–3 ರಿಂದ ಆಘಾತ ಅನುಭವಿಸಿದ್ದ ಆಸ್ಟ್ರೇಲಿಯಾ, ಲೀಗ್ ಹಂತದಲ್ಲೇ ಹೊರಬೀಳುವ ಅಪಾಯಕ್ಕೆ ಸಿಲುಕಿತ್ತು. ಆದರೆ ಕೆನಡಾ ವಿರುದ್ಧ ಅಮೋಘ ಆಟವಾಡಿ ಅಭಿಮಾನಿಗಳ ಮನಗೆದ್ದಿತು.

ಹೇಯ್ಲಿ ರಾಸೊ (9 ಮತ್ತು 39ನೇ ನಿ.), ಮೇರಿ ಫೌಲೆರ್ (58) ಮತ್ತು ಸ್ಟೆಫಾನಿ ಕ್ಯಾಟ್ಲಿ (90+4) ಅವರು ಆತಿಥೇಯ ತಂಡದ ಪರ ಗೋಲು ಗಳಿಸಿದರು.

ಕೆನಡಾ ವಿರುದ್ಧ ಗೋಲು ಗಳಿಸಿದ ಆಸ್ಟ್ರೇಲಿಯಾದ ಹೇಯ್ಲಿ ರಾಸೊ (16) ಅವರನ್ನು ಸಹ ಆಟಗಾರ್ತಿಯರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಜಪಾನ್‌ಗೆ ಗೆಲುವು: ವೆಲಿಂಗ್ಟನ್‌ನಲ್ಲಿ ನಡೆದ ‘ಸಿ’ ಗುಂಪಿನ ಪಂದ್ಯದಲ್ಲಿ ಜಪಾನ್ 4–0 ಗೋಲುಗಳಿಂದ ಸ್ಪೇನ್ ತಂಡವನ್ನು ಮಣಿಸಿ ತನ್ನ ಶಕ್ತಿ ಪ್ರದರ್ಶಿಸಿತು. ಈ ಮೂಲಕ ಅಜೇಯ ಸಾಧನೆಯೊಂದಿಗೆ (9 ಪಾಯಿಂಟ್ಸ್) ನಾಕೌಟ್ ಹಂತ ಪ್ರವೇಶಿಸಿದರೆ, ಆರು ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನ ಪಡೆದ ಸ್ಪೇನ್ ಕೂಡ ಮುಂದಿನ ಹಂತದಲ್ಲಿ ಸ್ಥಾನ ಗಳಿಸಿತು.

ಹಿನಾಟ ಮಿಯಜಾವ (12 ಮತ್ತು 40ನೇ ನಿ.), ರಿಕೊ ಉಯೆಕಿ (29) ಹಾಗೂ ಮಿನ ಟನಾಕ (82) ಅವರು ಜಪಾನ್ ಪರ ಚೆಂಡನ್ನು ಗುರಿ ಸೇರಿಸಿದರು. ಸ್ಪೇನ್ ವಿರುದ್ಧದ ಐದು ಪಂದ್ಯಗಳಲ್ಲಿ ಜಪಾನ್‌ಗೆ ದೊರೆತ ಮೊದಲ ಗೆಲುವು ಇದು.

‘ಸಿ’ ಗುಂಪಿನ ಇನ್ನೊಂದು ಪಂದ್ಯದಲ್ಲಿ ಜಾಂಬಿಯಾ 3–1 ಗೋಲುಗಳಿಂದ ಕೋಸ್ಟರಿಕಾ ತಂಡವನ್ನು ಮಣಿಸಿ, ವಿಶ್ವಕಪ್ ಟೂರ್ನಿಯಲ್ಲಿ ಚೊಚ್ಚಲ ಗೆಲುವಿನ ಸಂಭ್ರಮ ಆಚರಿಸಿತು.

ಡೇವಿಸ್ ಕಪ್: ಭಾರತ ತಂಡದಲ್ಲಿ ದಿಗ್ವಿಜಯ್, ರೋಹನ್ ಬೋಪಣ್ಣ

ನವದೆಹಲಿ (ಪಿಟಿಐ): ಮುಂಬರಲಿರುವ ಡೇವಿಸ್ ಕಪ್ ಟೆನಿಸ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ಯುವಪ್ರತಿಭೆ ದಿಗ್ವಿಜಯ್ ಪ್ರತಾಪ್ ಸಿಂಗ್ ಅವರಿಗೆ ಸ್ಥಾನ ನೀಡಲಾಗಿದೆ.

ಸೆಪ್ಟೆಂಬರ್ 16 ಮತ್ತು 17ರಂದು ಲಖನೌನಲ್ಲಿ ಡೇವಿಸ್ ಕಪ್ ವಿಶ್ವ ಗುಂಪು –2ರ ಪಂದ್ಯದಲ್ಲಿ ಭಾರತ ತಂಡವು ಮೊರಾಕ್ಕೊ ವಿರುದ್ಧ ಆಡಲಿದೆ. ಇದಕ್ಕಾಗಿ ಸೋಮವಾರ ಆರು ಆಟಗಾರರ ತಂಡವನ್ನು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಪ್ರಕಟಿಸಿದೆ.

ತಂಡದಲ್ಲಿ ಕನ್ನಡಿಗ ರೋಹನ್ ಬೋಪಣ್ಣ, ಸುಮಿತ್ ನಗಾಲ್, ಶಶಿಕುಮಾರ್ ಮುಕುಂದ್, ಯೂಕಿ ಬಾಂಭ್ರಿ, ರಾಮಕುಮಾರ್ ರಾಮನಾಥನ್ ಹಾಗೂ ದಿಗ್ವಿಜಯ್ ಪ್ರತಾಪ್ ಸಿಂಗ್ ಇದ್ದಾರೆ.

ದೇಶದ ಅಗ್ರಮಾನ್ಯ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಅವರಿಗೆ ಇದು ವಿದಾಯದ ಪಂದ್ಯವಾಗಲಿದೆ. ಈಚೆಗೆ ರೋಹನ್ ಅವರೇ ಈ ಕುರಿತು ಪ್ರಕಟಿಸಿದ್ದರು. ಈ ತಂಡದ ಆಟವಾಡದ ನಾಯಕನಾಗಿ ರೋಹಿತ್ ರಾಜಪಾಲ್ ಮುಂದುವರಿಯುವರು.

ರೋಹನ್ ಬೋಪಣ್ಣ

‘ಐವರು ಆಟಗಾರರಾದ ಸಾಕೇತ್ ಮೈನೆನಿ, ಮನಾದ್ ದೇಹಮಾನೆ, ಮನೀಷ್ ಸುರೇಶ್ ಕುಮಾರ್, ಕರಣ್ ಸಿಂಗ್ ಮತ್ತು ಯುವಾನ್ ನಂದಾಲ್ ಅವರೂ ಭಾರತ ತಂಡದೊಂದಿಗೆ ಅಭ್ಯಾಸದಲ್ಲಿ ಭಾಗವಹಿಸುವರು’ ಎಂದು ಎಐಟಿಎ ತಿಳಿಸಿದೆ.

ಗಾಲ್ಫ್ ಟೂರ್ನಿ: ಮಿಂಚಿದ ಮಿಹಿರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಹಿರ್ ಜಯರಾಮನ್, ವೈಭವ್ ಗುಪ್ತಾ, ಬಿಪಿನ್ ಬೂಬ್ ಮತ್ತು ಬಿ.ಕೆ.ನಿಹಾಲ್ ಅವರನ್ನೊಳಗೊಂಡ ತಂಡವು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ನಡೆದ ಜಸ್ಟಿಸ್ ಸಿ.ಸುಬ್ರಮಣ್ಯ ಅಯ್ಯರ್ ಕಪ್ ಗಾಲ್ಫ್ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ಶನಿವಾರ ಮತ್ತು ಭಾನುವಾರ ನಡೆದ ಟೂರ್ನಿಯಲ್ಲಿ ವಿಜೇತ ತಂಡ ಒಟ್ಟು 393 ಸ್ಕೋರ್ ಮಾಡಿತು. ಮಿಹಿರ್ ಎರಡು ಸುತ್ತುಗಳ ಸ್ಪರ್ಧೆಯನ್ನು 128 ಸ್ಟ್ರೋಕ್‌ಗಳೊಂದಿಗೆ ಕೊನೆಗೊಳಿಸಿದರು.

ಪಂಕಜ್ ಮಿತ್ತಲ್, ನವೀನ್ ಬಜಾಜ್, ರೋಹನ್ ಮಿತ್ತಲ್ ಮತ್ತು ರೋನಕ್ ಮಿತ್ತಲ್ ಅವರನ್ನೊಳಗೊಂಡ ತಂಡ ‘ರನ್ನರ್ ಅಪ್’ ಆಯಿತು.

ಟಿಟಿ: ರಕ್ಷಿತ್, ಅನರ್ಘ್ಯಾ ಚಾಂಪಿಯನ್

ಬೆಂಗಳೂರು: ರಕ್ಷಿತ್ ಆರ್. ಬಾರಿಗಿಡದ ಮತ್ತು ಅನರ್ಘ್ಯಾ ಮಂಜುನಾಥ್ ಅವರು ಮಲ್ಲೇಶ್ವರದ ಕೆನರಾ ಯೂನಿಯನ್ ಆಶ್ರಯದಲ್ಲಿ ನಡೆದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಟೂರ್ನಿಯ ಅಂತಿಮ ದಿನವಾದ ಸೋಮವಾರ ನಡೆದ ಪುರುಷರ ಫೈನಲ್ ಪಂದ್ಯದಲ್ಲಿ ರಕ್ಷಿತ್ ಅವರು ಶ್ರೇಯಲ್ ತೆಲಂಗ್ ಅವರನ್ನು 11-9, 11-3, 12-10, 11-4 ರಿಂದ ಮಣಿಸಿದರು. ಸೆಮಿಫೈನಲ್‌ನಲ್ಲಿ ರಕ್ಷಿತ್ ಅವರು ಅನಿರ್ಬನ್ ರಾಯ್ ಚೌಧರಿ ಅವರನ್ನು ಮತ್ತು ಶ್ರೇಯಲ್ ಅವರು ಕೆ.ಜೆ. ಆಕಾಶ್ ಅವರನ್ನು ಸೋಲಿಸಿದ್ದರು.

ಮಹಿಳೆಯರ ಫೈನಲ್ ಪಂದ್ಯದಲ್ಲಿ ಅನರ್ಘ್ಯಾ ಮಂಜುನಾಥ್ ಅವರು ದೇಶ್ನಾ ಎಂ. ವಂಶಿಕಾ ಅವರನ್ನು 10-12, 11-8, 10-12, 9-11, 12-10, 13-11, 11-3 ರಿಂದ ಸೋಲಿಸಿದರು. ಅನರ್ಘ್ಯಾ ಅವರು ಸೆಮಿಫೈನಲ್‌ನಲ್ಲಿ ತೃಪ್ತಿ ಪುರೋಹಿತ್ ಅವರನ್ನು ಮತ್ತು ದೇಶ್ನಾ ಅವರು ವಿ. ಖುಷಿ ಅವರನ್ನು ಪರಾಭವಗೊಳಿಸಿದ್ದರು.

19 ವರ್ಷದೊಳಗಿನವರ ವಿಭಾಗ: ಬಾಲಕರ ಫೈನಲ್ ಪಂದ್ಯದಲ್ಲಿ ರೋಹಿತ್ ಶಂಕರ್ ಅವರು ಸಮ್ಯಕ್ ಕಶ್ಯಪ್ ಅವರನ್ನು 11-8, 13-11, 15-13, 13-11ರಿಂದ ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಪ್ರಶಸ್ತಿಯೊಂದಿಗೆ ರಕ್ಷಿತ್ ಆರ್. ಬಾರಿಗಿಡದ, ಅಭಿನವ್ ಕೆ. ಮೂರ್ತಿ, ನೀತಿ ಅಗರವಾಲ್, ಎನ್. ಅರ್ಣವ್, ಅನರ್ಘ್ಯಾ ಮಂಜುನಾಥ್, ದೇಶ್ನಾ ಎಂ. ವಂಶಿಕಾ ಮತ್ತು ರೋಹಿತ್ ಶಂಕರ್

ಸೆಮಿಫೈನಲ್‌ನಲ್ಲಿ ರೋಹಿತ್ ಅವರು ಕೆ. ಆಕಾಶ್ ಅವರನ್ನು ಮತ್ತು ಸಮ್ಯಕ್ ಅವರು ಪಿ.ವಿ. ಶ್ರೀಕಾಂತ್ ಕಶ್ಯಪ್ ಅವರನ್ನು ಸೋಲಿಸಿದ್ದರು.

ಬಾಲಕಿಯರ ಫೈನಲ್ ಪಂದ್ಯದಲ್ಲಿ ದೇಶ್ನಾ ಎಂ. ವಂಶಿಕಾ ಅವರು ತೃಪ್ತಿ ಪುರೋಹಿತ್ ಅವರನ್ನು 11-9, 11-5, 11-3, 11-4ರಿಂದ ಪರಾಭವಗೊಳಿಸಿ ಪ್ರಶಸ್ತಿ ಗೆದ್ದರು. ಸೆಮಿಫೈನಲ್‌ನಲ್ಲಿ ದೇಶ್ನಾ ಅವರು ಸಹನಾ ಎಚ್. ಮೂರ್ತಿ ಅವರನ್ನು ಮತ್ತು ತೃಪ್ತಿ ಅವರು ಜಿ. ಕರುಣಾ ಅವರನ್ನು ಮಣಿಸಿದ್ದರು.

17 ವರ್ಷದೊಳಗಿನವರ ವಿಭಾಗ: ಬಾಲಕರ ಫೈನಲ್ ಪಂದ್ಯದಲ್ಲಿ ಅಭಿನವ್ ಕೆ. ಮೂರ್ತಿ ಅವರು ವಿ.ಜಿ. ವಿಭಾಸ್ ಅವರನ್ನು 7-11, 11-7, 11-9, 11-7ರಿಂದ ಮಣಿಸಿ ಪ್ರಶಸ್ತಿ ಗೆದ್ದರು. ಸೆಮಿಫೈನಲ್‌ನಲ್ಲಿ ಅಭಿನವ್ ಅವರು ಆರ್ಯ ಎ. ಜೈನ್ ಅವರನ್ನು ಮತ್ತು ವಿಭಾಸ್ ಅವರು ಬಿ.ಆರ್. ಗೌರವ್ ಅವರನ್ನು ಸೋಲಿಸಿದ್ದರು.

ಬಾಲಕಿಯರ ಫೈನಲ್ ಪಂದ್ಯದಲ್ಲಿ ನೀತಿ ಅಗರವಾಲ್ ಅವರು ಹಿಮಾಂಶಿ ಚೌಧರಿ ಅವರನ್ನು 11- 5, 11- 6, 11-4ರಿಂದ ಮಣಿಸಿ ಚಾಂಪಿಯನ್ ಆದರು. ಸೆಮಿಫೈನಲ್‌ನಲ್ಲಿ ನೀತಿ ಅವರು ಪ್ರೇಕ್ಷಾ ಟಿ. ತಿಲಾವತ್ ಅವರನ್ನು ಮತ್ತು ಹಿಮಾಂಶಿ ಅವರು ಪ್ರಣವಿ ಅವರನ್ನು ಪರಾಭವಗೊಳಿಸಿದ್ದರು.

ನಾನ್ ಮೆಡಲಿಸ್ಟ್ ಸಿಂಗಲ್ಸ್ ವಿಭಾಗದಲ್ಲಿ ಎನ್. ಅರ್ಣವ್ ಅವರು ಅಭಿಷೇಕ್ ಹೊಸಮಠ್ ಅವರನ್ನು ಫೈನಲ್‌ನಲ್ಲಿ 11-7, 6-11, 11-9, 11-3ರಿಂದ ಮಣಿಸಿ ಪ್ರಶಸ್ತಿ ಗೆದ್ದರು.

ಕ್ರಿಕೆಟಿಗರ ಧೋರಣೆ ಟೀಕಿಸಿದ ಕಪಿಲ್

ಬೆಂಗಳೂರು: ‘ಈ ಕಾಲದ ಕ್ರಿಕೆಟಿಗರಲ್ಲಿ ಅಪಾರ ಆತ್ಮವಿಶ್ವಾಸವಿದೆ. ಅದು ಉತ್ತಮವಾದ ಗುಣ. ಆದರೆ ತಮಗೆಲ್ಲವೂ ತಿಳಿದಿದೆ ಎಂಬ ನಕಾರಾತ್ಮಕ ಧೋರಣೆ ಇದೆ’ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಹೇಳಿದ್ದಾರೆ.

‘ಐಪಿಎಲ್ ಆರಂಭವಾದಾಗಿನಿಂದ ಅಪಾರ ಹಣ, ಹೆಸರು ಗಳಿಸುತ್ತಿರುವ ಕ್ರಿಕೆಟಿಗರಲ್ಲಿ ದುರಹಂಕಾರ ಬೆಳೆಯುತ್ತಿದೆ. ತಾವೇ ಎಲ್ಲ ಬಲ್ಲವರು ಎಂಬ ಧೋರಣೆ ಹೊಂದಿದ್ದಾರೆ. ತಾವು ಇನ್ನೂ ಕಲಿಯುವುದಿದೆ ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ಸುನಿಲ್ ಗಾವಸ್ಕರ್ ಅವರಂತಹ ದಿಗ್ಗಜರು ಲಭ್ಯರಿದ್ದರೂ ಅವರಿಂದ ಸಲಹೆ ಪಡೆಯುವ ಸೌಜನ್ಯವೂ ಕೆಲವರಿಗೆ ಇಲ್ಲ. ಗಾವಸ್ಕರ್ 50 ಕ್ರಿಕೆಟ್ ಋತುಗಳನ್ನು ಕಂಡಿರುವ ಅನುಭವಿ. ಅವರ ಸಲಹೆಯು ಅಮೂಲ್ಯವಾದದ್ದು’ ಎಂದು ಕಪಿಲ್ ‘ದ ವೀಕ್’ ಸಂದರ್ಶನದಲ್ಲಿ ಹೇಳಿದ್ದಾರೆ.

ಕಪಿಲ್ ದೇವ್

ಈ ಸಂದರ್ಶನವು ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಸಂಖ್ಯೆಯ ಜನರ ಗಮನ ಸೆಳೆದಿದೆ.

ವಿವಿಎಸ್ ಲಕ್ಷ್ಮಣ್, ರಾಹುಲ್ ದ್ರಾವಿಡ್, ಸೌರವ್ ಗಂಗೂಲಿ ಅವರು ಹಲವಾರು ಬಾರಿ ತಮ್ಮ ಬ್ಯಾಟಿಂಗ್ ಸುಧಾರಣೆಗೆ ತಮ್ಮ ಬಳಿ ಸಲಹೆ ಪಡೆಯುತ್ತಿದ್ದರು. ಆದರೆ, ಈಗಿನವರು ಆ ರೀತಿಯಲ್ಲ ಎಂದು ಇತ್ತೀಚೆಗೆ ಗಾವಸ್ಕರ್ ಹೇಳಿದ್ದರು.

ಆಸ್ಟ್ರೇಲಿಯಾ ಓಪನ್: ಸಿಂಧು ಮೇಲೆ ಚಿತ್ತ

ಸಿಡ್ನಿ (ಪಿಟಿಐ): ಪ್ರಶಸ್ತಿ ಬರ ಎದುರಿಸುತ್ತಿರುವ ಪಿ.ವಿ.ಸಿಂಧು ಮತ್ತು ಕೆ.ಶ್ರೀಕಾಂತ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಫಾರ್ಮ್ ಕಂಡುಕೊಳ್ಳಲು ಪ್ರಯತ್ನಿಸಲಿದ್ದಾರೆ.

ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ನಡೆಯ ಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಮುನ್ನ ಹಳೆಯ ಲಯಕ್ಕೆ ಮರಳಲು ಸಿಂಧು ಮತ್ತು ಶ್ರೀಕಾಂತ್ ಅವರಿಗೆ ಲಭಿಸುವ ಕೊನೆಯ ಅವಕಾಶ ಇದು. 2019 ರಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದ ಸಿಂಧು, ಮೊದಲ ಸುತ್ತಿನಲ್ಲಿ ಭಾರತದವರೇ ಆದ ಅಶ್ಮಿತಾ ಚಲಿಹಾ ಅವರನ್ನು ಎದುರಿಸುವರು.

ಸಿಂಧು ಅವರಂತೆ ಶ್ರೀಕಾಂತ್ ಕೂಡಾ ಈ ಋತುವಿನಲ್ಲಿ ನಿರೀಕ್ಷಿತ ಪ್ರದರ್ಶನ ನೀಡಿಲ್ಲ. ಜಪಾನ್ ಓಪನ್ ಟೂರ್ನಿಯಲ್ಲಿ ಚೀನಾ ತೈಪೆಯ ಚೌ ತಿಯೆನ್ ಚೆನ್ ಅವರನ್ನು ಮಣಿಸಿ ಭರವಸೆ ಮೂಡಿಸಿದ್ದರೂ, ಮುಂದಿನ ಸುತ್ತಿನಲ್ಲಿ ಎಚ್.ಎಸ್.ಪ್ರಣಯ್ ಕೈಯಲ್ಲಿ ಸೋತಿದ್ದರು. ವಿಶ್ವದ ಮಾಜಿ ಅಗ್ರ ರ‍್ಯಾಂಕ್‌ನ ಆಟಗಾರ ಮೊದಲ ಸುತ್ತಿನಲ್ಲಿ ಜಪಾನ್‌ನ ಕೆಂಟ ನಿಶಿಮೊಟೊ ವಿರುದ್ಧ ಹಣಾಹಣಿ ನಡೆಸುವರು.

ಎಚ್.ಎಸ್.ಪ್ರಣಯ್ ಮತ್ತು ಲಕ್ಷ್ಯ ಸೇನ್ ಅವರು ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದು, ಇಲ್ಲಿ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ 10ನೇ ಸ್ಥಾನದಲ್ಲಿರುವ ಪ್ರಣಯ್, ಜಪಾನ್ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಸೋಲುವ ಮುನ್ನ ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ವಿಕ್ಟರ್ ಅಕ್ಸೆಲ್ಸನ್ ಅವರಿಗೆ ಪ್ರಬಲ ಪೈಪೋಟಿ ಒಡ್ಡಿದ್ದರು. ಪ್ರಣಯ್, ಮೊದಲ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಲೀ ಚೆಯುಕ್ ಯಿಯು ಅವರ ಸವಾಲು ಎದುರಿಸಲಿದ್ದಾರೆ.

ಸೇನ್ ಅವರು ಚೀನಾದ ಲು ಗುವಾಂಗ್ ಜು ವಿರುದ್ಧದ ಪಂದ್ಯದೊಂದಿಗೆ ಅಭಿಯಾನ ಆರಂಭಿಸಲಿದ್ದಾರೆ.

ಪುರುಷರ ಡಬಲ್ಸ್ ವಿಭಾಗದಲ್ಲಿ ಈ ಋತುವಿನಲ್ಲಿ ನಾಲ್ಕು ಪ್ರಶಸ್ತಿ ಜಯಿಸಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಇಲ್ಲಿ ಆಡುತ್ತಿಲ್ಲ. ವಿಶ್ವ ಚಾಂಪಿಯನ್‌ಷಿಪ್‌ಗೆ (ಆ.21 ರಿಂದ 27) ಸಿದ್ಧತೆ ನಡೆಸುವ ಉದ್ದೇಶದಿಂದ ಅವರು ಆಡದಿರುವ ತೀರ್ಮಾನ ತೆಗೆದುಕೊಂಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ವೇಟ್‌ಲಿಫ್ಟಿಂಗ್: ಭಾರತಕ್ಕೆ ಎರಡನೇ ಚಿನ್ನದ ಪದಕ

ಗ್ರೇಟರ್ ನೊಯ್ಡಾ (ಪಿಟಿಐ): ಭಾರತದ ವೇದವ್ರತ್ ಭಾರಲಿ ಸೋಮವಾರ ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 67 ಕೆ.ಜಿ ಪುರುಷರ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ಭಾರಲಿ ಅವರು 273 ಕೆಜಿ (124 + 149 ಕೆಜಿ) ಭಾರವನ್ನು ಎತ್ತುವ ಮೂಲಕ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಎರಡನೇ ಚಿನ್ನವನ್ನು ಗೆದ್ದುಕೊಟ್ಟರು. ಉಜ್ಬೇಕಿಸ್ತಾನದ ನೂರಿಲ್ಲೊ ದಾವ್ಲಾಟೊವ್ (272 ಕೆಜಿ), ವಿಯೆಟ್ನಾಂನ ಎ. ಟಾನ್ (257 ಕೆಜಿ) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ರೇಸ್: ಆಫ್‌ಕೋರ್ಸ್ ಬೆಟ್ಟಿಂಗ್ ರದ್ದು

ಬೆಂಗಳೂರು: ಮಂಗಳವಾರ ಏರ್ಪಡಿಸಲಾಗಿದ್ದ ಹೈದರಾಬಾದ್ ರೇಸ್‌ಗಳ ಮೇಲಿನ ಆಫ್‌ಕೋರ್ಸ್ ಬೆಟ್ಟಿಂಗ್ ಅನ್ನು ಆಡಳಿತಾತ್ಮಕ ಕಾರಣದಿಂದ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆಸುತ್ತಿಲ್ಲವೆಂದು ಬಿ.ಟಿ.ಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಡಬ್ಲ್ಯುಎಫ್‌ಐ ಚುನಾವಣೆ: ಬ್ರಿಜ್‌ಭೂಷಣ್ ಬಣದ ಬಲ ಪ್ರದರ್ಶನ

ಅಧ್ಯಕ್ಷ ಸ್ಥಾನಕ್ಕೆ ನಾಲ್ವರ ನಾಮಪತ್ರ

ನವದೆಹಲಿ (ಪಿಟಿಐ): ಸಾಕಷ್ಟು ಕುತೂಹಲ ಕೆರಳಿಸಿರುವ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಆಪ್ತರಾಗಿರುವ ಸಂಜಯ್ ಕುಮಾರ್ ಸಿಂಗ್ (ಉತ್ತರ ಪ್ರದೇಶ) ಅವರು ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದಾರೆ. ಬ್ರಿಜ್‌ಭೂಷಣ್ ಬಣದಿಂದ ಚಂಡೀಗಢ ಕುಸ್ತಿ ಸಂಸ್ಥೆಯ ದರ್ಶನ್ ಲಾಲ್ ಅವರು ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮತ್ತು ಉತ್ತರಾಖಂಡದ ಎಸ್.ಪಿ.ದೇಸ್ವಾಲ್ ಅವರು ಖಜಾಂಚಿ ಸ್ಥಾನಕ್ಕೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಡಬ್ಲ್ಯುಎಫ್‌ಐ ಮಾನ್ಯತೆ ಪಡೆದಿರುವ 25 ರಾಜ್ಯ ಕುಸ್ತಿ ಸಂಸ್ಥೆಗಳಲ್ಲಿ 22 ರಾಜ್ಯ ಸಂಸ್ಥೆಗಳ ಬೆಂಬಲ ನಮಗೆ ಇದೆ ಎಂದು ಬ್ರಿಜ್‌ಭೂಷಣ್ ಬಣ ಹೇಳಿಕೊಂಡಿದೆ. ಆ.12 ರಂದು ನಡೆಯಲಿರುವ ಚುನಾವಣೆಯಲ್ಲಿ ಎಲ್ಲ 15 ಸ್ಥಾನಗಳನ್ನು ಗೆಲ್ಲುವ ‘ವಿಶ್ವಾಸ’ವನ್ನೂ ವ್ಯಕ್ತಪಡಿಸಿದೆ.

ಬಲ ಪ್ರದರ್ಶನ: ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಸೋಮವಾರ ಇಲ್ಲಿನ ಒಲಿಂಪಿಕ್ ಭವನದಲ್ಲಿ ಬಿರುಸಿನ ಚಟುವಟಿಕೆಗಳು ಕಂಡುಬಂದವು.

ಡಬ್ಲ್ಯುಎಫ್‌ಐ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ತಮ್ಮ ಬಣದ ಅಭ್ಯರ್ಥಿಗಳ ಜತೆ ಬ್ರಿಜ್‌ಭೂಷಣ್ ಸಿಂಗ್ ಅವರು ಸೋಮವಾರ ಕಾಣಿಸಿಕೊಂಡರು –ಪಿಟಿಐ ಚಿತ್ರ

ಬ್ರಿಜ್‌ಭೂಷಣ್ ಬೆಂಬಲಿಗರು ಮತ್ತು ಅವರ ನಿಷ್ಠ ಗುಂಪಿನ ಅಭ್ಯರ್ಥಿಗಳ ‘ಬಲ ಪ್ರದರ್ಶನ’ಕ್ಕೆ ಒಲಿಂಪಿಕ್ ಭವನ ವೇದಿಕೆಯಾಯಿತು. ಬ್ರಿಜ್‌ಭೂಷಣ್ ಅವರು ಒಲಿಂಪಿಕ್ ಭವನಕ್ಕೆ ಬರಲಿಲ್ಲ. ಅವರ ಅನುಪಸ್ಥಿತಿಯಲ್ಲಿ ಅಳಿಯ ವಿಶಾಲ್ ಸಿಂಗ್, ನಾಮಪತ್ರ ಸಲ್ಲಿಸಲು ಬಂದ ಅಭ್ಯರ್ಥಿಗಳಿಗೆ ಸಾಥ್ ನೀಡಿದರು.

‘ನಮ್ಮ ಬಣದಿಂದ ವಿವಿಧ ಹುದ್ದೆಗಳಿಗೆ ಒಟ್ಟು 18 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಸಂಜಯ್ ಕುಮಾರ್ ಅವರು ನಮ್ಮ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿದ್ದಾರೆ. ಮೂರು ಉಪಾಧ್ಯಕ್ಷ ಸ್ಥಾನಗಳಿಗೂ ನಮ್ಮ ಬಣದಿಂದ ನಾಮಪತ್ರ ಸಲ್ಲಿಸಿದ್ದೇವೆ’ ಎಂದು ವಿಶಾಲ್ ಸಿಂಗ್ ತಿಳಿಸಿದರು.

‘ಅಧ್ಯಕ್ಷ ಸ್ಥಾನಕ್ಕೆ ನಾಲ್ವರು, ಹಿರಿಯ ಉಪಾಧ್ಯಕ್ಷ ಸ್ಥಾನಕ್ಕೆ ಮೂವರು, ಉಪಾಧ್ಯಕ್ಷ ಸ್ಥಾನಕ್ಕೆ ಆರು ಮಂದಿ, ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮೂವರು, ಖಜಾಂಚಿ ಸ್ಥಾನಕ್ಕೆ ಇಬ್ಬರು, ಜಂಟಿ ಕಾರ್ಯದರ್ಶಿ ಹುದ್ದೆಗೆ ಮೂವರು, ಕಾರ್ಯಕಾರಿ ಸಮಿತಿಗೆ ಒಂಬತ್ತು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. 15 ಹುದ್ದೆಗಳಿಗೆ ಒಟ್ಟು 30 ಮಂದಿ ಉಮೇದುವಾರಿಕೆ ಸಲ್ಲಿಸಿದ್ದಾರೆ’ ಎಂದು ಚುನಾವಣಾಧಿಕಾರಿ ಆಗಿರುವ ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಹೇಶ್ ಮಿತ್ತಲ್ ಕುಮಾರ್ ಹೇಳಿದರು.

‘ಎಲ್ಲ ಅಭ್ಯರ್ಥಿಗಳ ಪಟ್ಟಿಯನ್ನು ಡಬ್ಲ್ಯುಎಫ್‌ಐ ವೆಬ್‌ಸೈಟ್‌ನಲ್ಲಿ ಮಂಗಳವಾರ ಪ್ರಕಟಿಸಲಾಗುವುದು’ ಎಂದು ಅವರು ತಿಳಿಸಿದರು.

ನಾಮಪತ್ರ ವಾಪಸ್ ಪಡೆಯಲು ಆ.7 ಕೊನೆಯ ದಿನವಾಗಿದೆ.

ನನ್ನ ಕುಟುಂಬದ ಯಾರೂ ಸ್ಪರ್ಧಿಸುವುದಿಲ್ಲ: ‘ಈ ಚುನಾವಣೆಯಲ್ಲಿ ನನ್ನ ಕುಟುಂಬದ ಯಾರೂ ಸ್ಪರ್ಧಿಸುವುದಿಲ್ಲ. ಮೊದಲು ಚುನಾವಣೆ ನಡೆಯಲಿ. ಗೆದ್ದವರು ಆ ಬಳಿಕ ತಮ್ಮ ಕರ್ತವ್ಯ ನಿರ್ವಹಿಸುವರು’ ಎಂದು ಬ್ರಿಜ್‌ಭೂಷಣ್ ಅವರು ಸೋಮವಾರ ಬೆಳಿಗ್ಗೆ ಹೇಳಿದ್ದರು.